ರೆಯಲಾಗದ

ಮುಂಬಯಿ ಕರ್ನಾಟಕ

ಐತಿಹಾಸಿಕ ಒಳ ನೋಟಗಳು



ಡಾ. ಶ್ರೀನಿವಾಸ ಹಾವನೂರ

ಮರೆಯಲಾಗದ ಮುಂಬಯಿ ಕರ್ನಾಟಕ

ಐತಿಹಾಸಿಕ ಒಳನೋಟಗಳು

ಡಾ. ಶ್ರೀನಿವಾಸ ಹಾವನೂರ

" Mareyalagada Mumbai Karnataka " written & published by
Dr. Shrinivas HAVANUR, No. 36, Vinayaka Layout, Vijaya Nagar
3rd Stage, Bangalore - 560 040. Ph : 080-23384529

Year of Publication - 2006, PP. 8+172

Price : Rs. 72/-

ಪ್ರತಿಗಳ ಲಭ್ಯತೆ
ಡಾ. ಶ್ರೀನಿವಾಸ ಹಾವನೂರು
ನಂ. 36, ವಿನಾಯಕ ಲೇಔಟ್,
ವಿಜಯ ನಗರ 3ನೇ ಹಂತ, ಬೆಂಗಳೂರು - 40.
ಫೋ : 23384529

ಅಕ್ಷರ ಸಂಯೋಜನೆ :
ಪ್ರಸಾದನ್ ಕಂಪ್ಯೂಟರ್ಸ್
ಬಿಜಯ್, ಮಂಗಳೂರು.

ಮುದ್ರಣ :
ವರ್ತಮಾನ ಪ್ರಿಂಟರ್ಸ್,
ಶಿವಾನಂದ ನಗರ, ಮೂಡಲಪಾಳ್ಯ,
ಬೆಂಗಳೂರು - 560 072. ದೂ : 080-23305298

"Published with financial assistance from Central Institute of Indian Languages (Ministry of Human Resource Development Dept. of Education, Govt. of India) Manasagangothri, Mysore. Vide Sanction Letter No. F51-4(17)2004-05/KAN/GRNT.Dt. 12-12-05. under the scheme of Grant in Aid.

ಮುಡಿಪು

ನನಗೆ ಗುರು ಸಮಾನರಾಗಿ

ಇತಿಹಾಸದ ಅನೇಕ ಪದರುಗಳ

ಬಿಡಿಸಿ ತೋರಿಸುತ್ತಿದ್ದ

ದಿ|| ಜಿ. ಎಸ್. ದೀಕ್ಷಿತ

ಅವರಿಗೆ

ಪೀಠಿಕೆ

ಇಲ್ಲಿಯ ಲೇಖನಗಳು ಇತಿಹಾಸ ಸಂಶೋಧನೆಗೆ ಸಂಬಂಧಿಸಿವೆಯಾದರೂ ಸಂಶೋಧನ ಪ್ರಬಂಧದ ರೀತಿಯಲ್ಲಿ ವಿಷಯವನ್ನು ಮಂಡಿಸದೇ, ಸಾಮಾನ್ಯ ವಾಚಕರಿಗೆ ಆಸಕ್ತಿ ಹುಟ್ಟಲೆಂದು ಕಥನಾತ್ಮಕವಾಗಿ ನಿರೂಪಣೆ ಮಾಡಲಾಗಿದೆ. ಮತ್ತು ಈ ಲೇಖನಗಳಿಗಾಗಿ ಉಪಯೋಗಿಸಿಕೊಂಡ ಆಕರ ಸಾಮಗ್ರಿಯ ಪಟ್ಟಿಯನ್ನು ಕೊನೆಯಲ್ಲಿ ಕೊಟ್ಟಿದೆ.

ಕರ್ನಾಟಕ ಇತಿಹಾಸ ಅಕಾಡೆಮಿಯು ಪ್ರತಿವರ್ಷ ಅಧಿವೇಶನಗಳನ್ನು ನಡೆಸುತ್ತಿದೆಯಷ್ಟೆ. ಆ ಕಾಲಕ್ಕೆ ಏನಾದರೂ ಒಂದು ಹೊಸ ವಿಷಯದ ಕುರಿತು ಅಭ್ಯಾಸ ಮಾಡಿ ಪ್ರಬಂಧ ಮಂಡಿಸಬೇಕು ಎನ್ನುವ ಪ್ರೇರಣೆ ಇಲ್ಲಿಯ ಬಹುತರ ಎಲ್ಲ ಲೇಖಗಳಿಗೆ ಒದಗಿ ಬಂದಿದೆ. ಅಂತೂ ಗತ ಇತಿಹಾಸವನ್ನು ಜೀವಂತವಾಗಿ ಇಡುವ ಅಕಾಡೆಮಿಯ ಈ ಉಪಕ್ರಮವು ಸ್ತುತ್ಯರ್ಹವಾಗಿದೆ.

ಅರ್ಥಪೂರ್ಣ ಮುಖ ಪುಟ ವಿನ್ಯಾಸಗೊಳಿಸಿದ ಜಾನ್ ಚಂದ್ರನ್‌ರವರಿಗೆ ಹಾಗೂ ಮುದ್ರಕರಾದ ವರ್ತಮಾನ ಪ್ರಿಂಟರ್ಸ್‌ರವರಿಗೆ ವಂದನೆಗಳು

ಆಗಸ್ಟ್ ೨೦೦೬

ಶ್ರೀನಿವಾಸ ಹಾವನೂರ
ಕರ್ನಾಟಕ ತಿಯಾಲಾಜಿಕಲ್ ಕಾಲೇಜ್, ಮಂಗಳೂರು ೧

Ph.: (0824) 2411978
E-mail: Shrihavanoor@gmail.com

ಅನುಕ್ರಮಣಿಕೆ

ಅನುಬಂಧಗಳು


೧. 'ಮುಂಬಯಿ ಕರ್ನಾಟಕ' ಎಂಬ ಪರಿಕಲ್ಪನೆ

ಮುಂಬಯಿ ಕರ್ನಾಟಕ! ಎಂದರೆ ಮುನ್ನಿನ ಮುಂಬಯಿ ಪ್ರಾಂತಕ್ಕೆ ಸೇರಿದ ಕನ್ನಡ ಪ್ರದೇಶ. ಎಲ್‌ಫಿನ್‌ಸ್ಟನ್ ಗವರ್ನರನಾಗಿದ್ದ ಮುಂಬಯಿ ಪ್ರಾಂತಕ್ಕೆ, ೧೮೧೮ರಲ್ಲಿ ಪೇಶ್ವೆಯರ ಸೀಮೆಯೆಲ್ಲ ಬ್ರಿಟಿಶರ ವಶವಾದಾಗ ಈ ಕನ್ನಡ ಪ್ರದೇಶವೂ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿತು. ಅದಕ್ಕೂ ಮುಂಚೆ ಎಂದರೆ ಪೇಶ್ವೆಯರ ಕಾಲದಲ್ಲಿ, ವಿಜಯನಗರದ ಲಾಗಾಯ್ತು ಬಳಕೆಯಲ್ಲಿದ್ದ 'ಕರ್ನಾಟಕ' ಎಂದೇ ದಾಖಲೆಗಳಲ್ಲಿ ಕಾಣಿಸಿಕೊಂಡಿದೆಯಾದರೂ ಅದು ಮದ್ರಾಸದ ಭಾಗಗಳು ಮತ್ತು ಮೈಸೂರು ಸೇರಿದ ಸಮಗ್ರ ಕರ್ನಾಟಕವೇನೂ ಅಲ್ಲ.

ಆದರೆ ಆ ಕೂಡಲೇ ಈ ಪ್ರದೇಶವನ್ನು ಹಾಗೆಂದು ಕರೆಯದೇ 'ಸದರ್ನ್ ಮರಾಠಾ ಕಂಟ್ರಿ' ಎಂಬುದನ್ನು ಬ್ರಿಟಿಶರು ಬಳಕೆಯಲ್ಲಿ ತಂದರು. ಈ S.M.C.ಯ ಗಡಿರೇಖೆಗಳನ್ನು ಆಗಿನ ಓರ್ವ ಬ್ರಿಟಿಶ್ ಸೇನಾನಿ ಹೀಗೆ ಹೇಳಿದ್ದಾನೆ: ಉತ್ತರಕ್ಕೆ ಸಾತಾರಾ, ದಕ್ಷಿಣಕ್ಕೆ ಮದ್ರಾಸದ ಗಡಿ, ಪೂರ್ವಕ್ಕೆ ನಿಜಾಮನ ಸೀಮೆ. ಪಶ್ಚಿಮಕ್ಕಂತೂ ಸಹ್ಯಾದ್ರಿಯ ಪರ್ವತ. ಈ ಸೀಮಾರೇಖೆಯ ಒಳಗಿರುವ ಪ್ರದೇಶಗಳೆಂದರೆ – ಈಗಿನ ಧಾರವಾಡ, ಬೆಳಗಾಂವಿ 'ಕಲೆಕ್ಟರೇಟ್'ಗಳು (ಕಲಾದಗಿ ಉರ್ಫ್ ಬಿಜಾಪುರ ಕಲೆಕ್ಟರೇಟ್ ಆಗ ಬೆಳಗಾಂವಿಯಲ್ಲೇ ಇದ್ದಿತು). ಇದರೊಳಗಿನ ಕಿತ್ತೂರ, ರಾಮದುರ್ಗ, ಡಂಬಳ, ನರಗುಂದ ಮೊದಲಾದ ಸಂಸ್ಥಾನಗಳೂ ಇವುಗಳ ಜೊತೆಗೆ ಮರಾಠೀ ಪ್ರದೇಶಗಳಾದ ಮಿರಜ, ಕೊಲ್ಹಾಪುರ, ಕುರಂದವಾಡ ಇವೂ ಸೇರಿದ್ದುವು.

ಕ್ರಿ.ಶ. ೧೮೧೭ರಲ್ಲಿ ಈ ಪ್ರದೇಶವನ್ನು ಬ್ರಿಟಿಶ್ ಸತ್ತೆಗೆ ಒಳಪಡಿಸಿದ ಮನ್ರೋ ಇದನ್ನು ಸುರುವಿಗೆ ಕೃಷ್ಣಾ–ತುಂಗಭದ್ರಾ ನಡುವಿನ 'ದೋಆಬ್' ಎಂದು ತನ್ನ ದಾಖಲೆಗಳಲ್ಲಿ ಉಲ್ಲೇಖಿಸಿದ್ದನಾದರೂ ಆ ಉಪಾಧಿ ವಿಶೇಷ ಪ್ರಚುರವಾಗಲಿಲ್ಲ. ಈ 'ಸದರ್ನ್ ಮರಾಠಾ' ಎನ್ನುವುದು ಎಷ್ಟರ ಮಟ್ಟಿಗೆ ರೂಢವಾಗಿತ್ತು ಎಂದರೆ, ಮದ್ರಾಸದಲ್ಲಿದ್ದ ರೇಲ್ವೆ ಕಂಪೆನಿಯು ಪಶ್ಚಿಮದತ್ತ ವಿಸ್ತಾರಗೊಂಡಾಗ, ತನ್ನ ಕಂಪನಿಯ ಹೆಸರನ್ನು 'ಮದ್ರಾಸ್ ಎಂಡ್ ಸದರ್ನ್ ಮರಾಠಾ ರೇಲ್ವೆ' ಎಂದು ಕರೆದುಕೊಂಡಿತಲ್ಲದೆ, ಆ ಹೆಸರು ಇಪ್ಪತ್ತನೆಯ ಶತಮಾನದಲ್ಲಿ ಸ್ವಾತಂತ್ರ್ಯ ಬರುವ ವರೆಗೂ ಹಾಗೇ ಉಳಿಯಿತಲ್ಲವೆ.

ಈ ಗ್ರಂಥದಲ್ಲಿ ಉಲ್ಲೇಖಿಸಲಾದ ಮುಂಬಯಿ ಕರ್ನಾಟಕದ ಊರುಗಳು



ಯಾವುದೊಂದು ಪ್ರದೇಶಕ್ಕೆ ಹೆಸರು ಬರುವುದು ಅಲ್ಲಿಯ ಪ್ರಮುಖವಾದೊಂದು ಊರಿನಲ್ಲಿ ರಾಜ್ಯವನ್ನು ಕಟ್ಟಿದ್ದ ಇಲ್ಲವೆ ನೆಲೆಗೊಂಡಪ್ಪರ ಕಾರಣದಿಂದ : ಕೊಲ್ಹಾಪುರ ಸಂಸ್ಥಾನ, ಮೈಸೂರು ಸಂಸ್ಥಾನ, ಸವಣೂರು ಸಂಸ್ಥಾನ, ಕಿತ್ತೂರು ದೇಸಗತಿ ಇತ್ಯಾದಿ.

ಆದರೆ ಇಡೀ 'ಮುಂಬಯಿ ಕರ್ನಾಟಕಕ್ಕೆ ಅನ್ವಯಿಸುವಂತೆ ಯಾವುದೊಂದು ಊರು ಆಗಲಿ ಅಥವಾ ಸಂಸ್ಥಾನಿಕನಾಗಲಿ ಹೆಸರುವಾಸಿಯಾಗಿರಲಿಲ್ಲ - ಆಗಿನ ದಿನಗಳಲ್ಲಿ. ಆದ್ದರಿಂದ ಸದರ್ನ್ ಮರಾಠಾ ಕಂಟ್ರಿ ಎನ್ನುವುದು ೧೮೧೮ರಿಂದ ಬಹುಕಾಲ ಮುಂದುವರಿಯಿತು. ಮುಂದೆ ಅದರ ಮಹತ್ವವನ್ನು ಕಡಿಮೆ ಮಾಡುವುದಕ್ಕೆ ಎರಡು ಘಟನೆಗಳು ಕಾರಣವಾದವು. ಒಂದನೆಯದು, ೧೮೬೨ರಲ್ಲಿ 'ಕೆನರಾ' ಎಂಬುದು ಇಬ್ಭಾಗವಾಗಿ ಉತ್ತರ ಕನ್ನಡ ಜಿಲ್ಲೆ ಮುಂಬಯಿ ಪ್ರಾಂತಕ್ಕೆ ಸೇರಿತು. ಎರಡನೆಯದು, ಈ ಭಾಗದ ಜನರಲ್ಲಿ ಕನ್ನಡ ಜಾಗೃತಿಯುಂಟಾದದ್ದು. ಆರಂಭಕ್ಕೆ ಮರಾಠೀ ಶಾಲೆಗಳೇ ಇದ್ದು ಕನ್ನಡ ಕಲಿಸುವ, ಕಲಿಯುವ ಅಗತ್ಯವಿಲ್ಲ ಎಂಬ ಸ್ಥಿತಿ ಕ್ರಮೇಣ ಹಿಂತೆಗೆಯಿತು. ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಕನ್ನಡದಲ್ಲಿ ಪತ್ರಿಕೆ, ಪುಸ್ತಕಗಳು ಪ್ರಕಟವಾಗತೊಡಗಿದ್ದಲ್ಲದೆ, ೧೮೯೦ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವು ಸ್ಥಾಪಿತವಾದದ್ದು, ಕನ್ನಡಪರ ಜಾಗೃತಿಗೆ ಸ್ಪಷ್ಟ ನಿದರ್ಶನವಾಯಿತು. ಈ ಮುಂಚೆ ಎಂದರೆ ೧೯ನೆಯ ಶತಮಾನದ ಆರಂಭದಲ್ಲಿ ಮೈಸೂರಿಗರಿಗೆ ಇದೊಂದು ತುಂಗಭದ್ರಾ ನದಿಯ ಆಚೆಗಿರುವ ಮುಂಬಯಿ ಪ್ರಾಂತಕ್ಕೆ ಸಂಬಂಧಿಸಿದ ಒಂದು ಕನ್ನಡ ಪ್ರದೇಶ ಎಂಬ ಭಾವನೆ ಇದ್ದಿತಲ್ಲದೆ ಬೇರಾವ ರೀತಿಯ ನಂಟೂ ಇರಲಿಲ್ಲ - ೧೮೯೦ರ ದಶಕದವರೆಗೂ. ಹೀಗಾಗಿ ಮೈಸೂರಿಗರ ಒಡನಾಟದಲ್ಲಿಯೂ 'ಮುಂಬಯಿ ಕರ್ನಾಟಕ' ಎಂಬುದು ಸ್ಥಿರೀಕರಣಗೊಂಡಿತು.

'ಸದರ್ನ್ ಮರಾಠಾ' ಎಂಬುದನ್ನು ಕಳಚಬೇಕಾದರೆ, ಈ ಮುನ್ನ ಸೇರಿಸಿದ್ದ ಕೊಲ್ಹಾಪುರ, ಕುರಂದವಾಡ ಮುಂತಾದ ಅಪ್ಪಟ ಮರಾಠೀ ಪ್ರದೇಶಗಳನ್ನು ಕೈಬಿಡಬೇಕಲ್ಲವೆ. ಹಾಗೂ ಆಯಿತು. ೧೮೮೦ರ ದಶಕದಲ್ಲಿ ಮುಂಬಯಿ ಸರಕಾರವು ಈ ಕರ್ನಾಟಕದ ಎಂದರೆ ಮಹಾರಾಷ್ಟ್ರದ ದಕ್ಷಿಣ ಭಾಗದ ಗಜೆಟಿಯರ್ ಇಂಗ್ಲಿಷಿನಲ್ಲಿ ಪ್ರತ್ಯೇಕವಾಗಿ ಸಿದ್ಧಪಡಿಸಿತು. ಅದನ್ನು ವೆಂಕಟ ರಂಗೋ ಕಟ್ಟಿಯವರು ಕನ್ನಡದಲ್ಲಿ ಅನುವಾದಿಸಿ ೧೮೯೩ರಲ್ಲಿ ಹೊರತಂದರು. ಅದಕ್ಕೆ ಕೊಟ್ಟ ಶೀರ್ಷಿಕೆ ಇಂತಿದೆ:

'ಗ್ಯಾಝೆಟಿಯರು
ಮುಂಬಯಿ ಇಲಾಖೆಗೆ ಶೇರಿದ ಕರ್ನಾಟಕ ಭಾಗದ್ದು'

ಅಲ್ಲದೆ 'ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳ ಸಹಿತ' ಎಂಬ ಉಪಶೀರ್ಷಿಕೆಯನ್ನು ಸೇರಿಸಿದ್ದಾರೆ. ಹೀಗೆ ಅವನ್ನು ಕರ್ನಾಟಕ ಭಾಗದಿಂದ ಬೇರೆಯಾಗಿ ಉಲ್ಲೇಖಿಸಿದ್ದರ ಮೂಲಕ ನಮ್ಮ ಭಾಗದ ಪ್ರತ್ಯೇಕ ಅಸ್ತಿತ್ವವನ್ನು ಒಪ್ಪಿಕೊಂಡಂತಾಯಿತು!

ಮುಂದೆ ದೇಶದ ಸ್ವಾತಂತ್ರ್ಯ ಚಳುವಳಿ, ಅದರಂತೆ ಕರ್ನಾಟಕ ಏಕೀಕರಣದ ಆಂದೋಲನದ ಉದ್ದಕ್ಕೂ 'ಮುಂಬಯಿ ಕರ್ನಾಟಕ' ಎಂದೇ ಅಧಿಕೃತವಾಗಿ ಪರಿಗಣಿಸಲಾಯಿತು

– ೧೯೫೬ರ ವರೆಗೂ. ಆದಾಗ್ಯೂ ಅನಧಿಕೃತವಾಗಿ 'ತುಂಗಭದ್ರೆಯ ಆಚೆಗಿರುವ ಮುಂಬಯಿ ಕರ್ನಾಟಕ' ಎಂಬುದು ಕೆಲಕಾಲ ಮಾತ್ರ ಮುಂದುವರೆಯಿತು. ಕರ್ನಾಟಕ ರಾಜ್ಯವಾದದ್ದರ ಜೊತೆಗೇ ಮುಂಬಯಿ ಪ್ರಾಂತವೇ ಕಣ್ಮರೆಯಾಗಿ ಮಹಾರಾಷ್ಟ್ರ ರಾಜ್ಯವಾದ ಕಾರಣದಿಂದ 'ಮುಂಬಯಿ ಕರ್ನಾಟಕ' ವೆಂಬುದರ ಅಸ್ತಿತ್ವ ಇಲ್ಲವಾಗಿದೆ. ಪ್ರಸಕ್ತ ಶತಮಾನದಲ್ಲಿಯಂತೂ ಲುಪ್ತವೇ ಆಗಿದೆ. ಆದರೆ ಹೈದರಾಬಾದ್ ಕರ್ನಾಟಕವೂ ಸೇರಿಕೊಂಡು 'ಉತ್ತರ ಕರ್ನಾಟಕ' ವೆನಿಸಿದೆ. ಮಾತ್ರವಲ್ಲ ಮೈಸೂರು (ಮಡಿಕೇರಿ) ಜಿಲ್ಲೆಗಳಿಗೆ 'ದಕ್ಷಿಣ ಕರ್ನಾಟಕ' ಎಂಬ ಹೆಸರು ಬರಲು ಪ್ರೇರಕವಾಯಿತು. ಹೀಗೆ ಒಂದು ಕಾಲದಲ್ಲಿ ಎದ್ದು ಕಾಣುವಂತೆ ತನ್ನ ಅಸ್ತಿತ್ವವನ್ನು ಕಾಯ್ದುಕೊಂಡಿದ್ದ ಈ ಮುಂಬಯಿ ಕರ್ನಾಟಕವು ನಿಜಕ್ಕೂ ಮರೆಯಲಾಗದ್ದು.

●

೨. ಮುಂಬಯಿ ಕರ್ನಾಟಕದ ಪೂರ್ವೇತಿಹಾಸ

ದಕ್ಷಿಣ ಭಾರತದ ಬಹುಭಾಗವನ್ನು ಆಕ್ರಮಿಸಿಕೊಂಡಿದ್ದ ಔರಂಗಜೇಬನು ಸತ್ತ ಮೇಲೆ (೧೭೦೩) ಮೊಗಲರ ಸತ್ತೆಯು ನಾಮಮಾತ್ರಕ್ಕೆ ಮುಂದುವರಿಯಿತು. ಪೇಶ್ವೆಯರು ಈ ಭಾಗದಲ್ಲಿ ಚೌತ, ಸರದೇಶಮುಖಿಗಳನ್ನು ಎತ್ತಲು ಮೊಗಲ ಬಾದಶಹನಿಂದ ಸನದನ್ನು ದೊರಕಿಸಿಕೊಂಡಿದ್ದರು. ಚೌತ ವಸೂಲಿಯ ನೆಪದಿಂದ ಪೇಶ್ವೆ ಮತ್ತು ಅವರ ಕೈಕೆಳಗಿನ ಅಧಿಕಾರಿಗಳು ದೊಡ್ಡ ಸೈನ್ಯದೊಂದಿಗೆ ಮುಂಬಯಿ ಕರ್ನಾಟಕದಲ್ಲಿ ಒಳನುಗ್ಗುತ್ತಿದ್ದರು. ಬಂದಾಗಲೆಲ್ಲ ಸೈನ್ಯಕ್ಕೆ ದವಸ ಧಾನ್ಯ, ಹಾಲು-ಹೈನುಗಳ ಸರಬರಾಜು ಆಗಬೇಕು. ಪೇಶ್ವೆಯವರೇ ಸ್ವಯಂ ಬಂದರಂತೂ ಈ ಸರಬರಾಜು ಮಿತಿಮೀರಿದ್ದಿತ್ತು. ಮೊದಲನೇ ಬಾಳಾಜಿ ಬಾಜೀರಾಯನ ಕಾಲದಿಂದ ಎಂದರೆ ೧೭೨೧ರಿಂದ ಮುಂದಿನ ನಾಲ್ವತ್ತು ವರುಷಗಳಲ್ಲಿ ಇಂಥ ದಾಳಿಗಳು ಲೆಕ್ಕವಿಲ್ಲದಷ್ಟು ಬಾರಿ, ನಾಡಿನ ತುಂಬೆಲ್ಲ ನಡೆದವು.

ಇದ್ದುದರಲ್ಲಿ ಸವಣೂರ ನವಾಬನಾದ ಅಬ್ದುಲ್ ಮಜೀದಖಾನನ ಪ್ರದೇಶವು ವಿಸ್ತಾರವಾಗಿದ್ದು ದಾಳಿಗಳನ್ನು ಆತನು ಎದುರಿಸುವ ಸಾಮರ್ಥ್ಯ ಹೊಂದಿದ್ದನು. ಆದರೆ ೧೭೪೫ರ ಸುಮಾರಿಗೆ ಅವನ ಬಹುಪಾಲಿನ ಸೀಮೆಗಳನ್ನು, ಮರಾಠರು ಅವನನ್ನು ಯುದ್ಧದಲ್ಲಿ ಸಂಪೂರ್ಣ ಸೋಲಿಸಿ ವಶಪಡಿಸಿಕೊಂಡರು.

ಈ ಮಧ್ಯೆ ಇನ್ನೊಬ್ಬ ಬಲಿಷ್ಠ - ಹೈದರನ ಪ್ರವೇಶ. ಮೈಸೂರಿನ ಅಧಿಕಾರವನ್ನು ವಹಿಸಿಕೊಂಡ ಮರುವರ್ಷವೆ ಹರಿಹರದ ಬಳಿಯ ತುಂಗಭದ್ರೆಯನ್ನು ದಾಟಿ ಸವಣೂರವರನ್ನು ಮಣಿಸಿದುದಲ್ಲದೆ ಧಾರವಾಡದ ತನಕ ಮುಂದುವರಿದನು. ಪರಿಣಾಮವಾಗಿ ಮರಾಠರು ನೇರವಾಗಿ ಅವನೊಡನೆ ಸೆಣಸುವಂತಾಯ್ತು. ಕ್ರಿ.ಶ. ೧೬೬೭, ೧೭೭೩ ಮತ್ತು ೧೭೭೬ರಿಂದ ೧೭೭೮ರ ವರೆಗೆ ನಡೆದ ಯುದ್ದಗಳು ಇತಿಹಾಸದ ಪುಟಗಳಲ್ಲಿ ಮನ ಮುಟ್ಟುವಂತೆ ವಿವರಿಸಲ್ಪಟ್ಟಿವೆ. ಅವರೀ ಸೆಣಸಾಟದಲ್ಲಿ ಒಮ್ಮೆ ಹೈದರ್ ಸೋಲುವುದು, ಇನ್ನೊಮ್ಮೆ ಪೇಶ್ವೆಯವರು ಹಿಮ್ಮೆಟ್ಟಿ ಮತ್ತೊಮ್ಮೆ ಕಳೆದುಕೊಂಡ ಕೋಟೆಗಳನ್ನು ಪುನಃ ವಶಪಡಿಸಿಕೊಳ್ಳುವುದು ನಡೆದೇ ಇದ್ದಿತು.

ಹೈದರನ ಅನಂತರ ಬಂದ ಟೀಪು ಸುಲ್ತಾನನ ಕಾಲಕ್ಕೆ (೧೭೮೨) ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿತು. ಈ ಹಿಂದೆ ತಂದೆಯ ಜೊತೆಗೇ ಈ ಭಾಗದಲ್ಲಿ ಓಡಾಡಿದ್ದ ಅವನಿಗೆ ಮುಂಬಯಿ ಕರ್ನಾಟಕದ ಒಳಪರಿಚಯವಾಗಿದ್ದಿತು. ೧೭೯೧ರ ವರೆಗೂ ಮರಾಠರೊಂದಿಗೆ ಅವನ ಘರ್ಷಣೆ ಪ್ರಬಲವಾಗಿ ಕಾಣಿಸಿಕೊಂಡು, ಮುಂಬಯಿ ಕರ್ನಾಟಕದ ಸ್ಥಳಗಳೇ ಯುದ್ಧರಂಗಗಳಾದುವು. ಈ ದಿಸೆಯಲ್ಲಿ ಮರಾಠರು ಟೀಪೂ ಸುಲ್ತಾನನ ವಶದಲ್ಲಿದ್ದ ಧಾರವಾಡದ ಕೋಟೆಗೆ ಮುತ್ತಿಗೆ ಹಾಕಿ ವಶಪಡಿಸಿಕೊಂಡ. ೧೭೯೧ರ ಇಲ್ಲಿಯ ಯುದ್ಧವೇ ಕೊನೆಯದು.

ಮುಂದೆ ೧೭೯೨ರ ಯುದ್ಧದಲ್ಲಿ ಟೀಪು ಸುಲ್ತಾನನು ಬ್ರಿಟಿಶರಿಗೆ ಹೀನಾಯವಾಗಿ ಸೋತ ಮೇಲೆ ಮುಂಬಯಿ ಕರ್ನಾಟಕವು ಅವನ ಹಿಡಿತದಿಂದ ಪಾರಾದರೂ ಮರಾಠರ ದಬ್ಬಾಳಿಕೆ ಇದ್ದೇ ಇತ್ತು. ಕಾರಣವೆಂದರೆ ಪೇಶ್ವೆಯು ವಿವಿಧ ಸುಭೇದಾರಿಕೆಯನ್ನು ತನಗೆ ಬೇಕಿದ್ದ ಸೇನಾನಾಯಕರಿಗೆ ಒಪ್ಪಿಸಿಕೊಟ್ಟದ್ದು, ಅವರು ತಮ್ಮ ತಮ್ಮೊಳಗೆ ಕಚ್ಚಾಡುತ್ತಿದ್ದರು. ಕೊಲ್ಹಾಪುರ, ಮಿರಜ, ಸಾತಾರಾ ಈ ಸಂಸ್ಥಾನಿಕರ ನಡುವೆಯೂ ಆಗಾಗ ಠಿಕ್ಕಾಟ ಇರುತ್ತಿತ್ತು. ಅವರೆಲ್ಲ ಈ ಭಾಗದ ಚೌತ ವಸೂಲಿಗಾಗಿ ಪರಸ್ಪರ ಸೀಮೆಗಳ ಮೇಲೆ ಆಕ್ರಮಣ ಮಾಡುತ್ತಿದ್ದರು. ಗಣಪತರಾವ ಪೇಂಡ್ಸೆ ಎಂಬ ಬಿಜಾಪುರದ ಕೆಳಗಿನ ಸುಭೇದಾರನು ತನಗೆ ಏನೂ ಸಂಬಂಧವಿರದ ರಾಣಿಬೆನ್ನೂರಿಗೆ ಮುತ್ತಿಗೆ ಹಾಕಿದ್ದುದು ಒಂದು ನಿದರ್ಶನ. ಇಂಥ ಮನಸ್ಥಿತಿಯನ್ನು ಮನಗಂಡು ಇ. ಡಬ್ಲ್ಯೂ. ವೆಸ್ಟ್, 'During the fifty years the various parts of the Southern Mahratta, seldom or ever remained 10 years continuously in the hands of one Master' ಎಂದು ಉದ್ಗಾರವೆತ್ತಿದ್ದಾನೆ.

ಈ ಭಾಗದಲ್ಲಿ ತುಂಡರಸರಂತೆ ಮೆರೆಯುತ್ತಿದ್ದ ಪರಶುರಾಮ ಪಟವರ್ಧನ, ಬಾಪೂ ಗೋಖಲೆ ಕಚ್ಚಾಡುತ್ತಿದ್ದರು; ಅದು ಸರಿ. ಅಪ್ರತ್ಯಕ್ಷ ಪರಿಣಾಮ ಇಲ್ಲಿಯ ವಿವಿಧ ಪ್ರದೇಶಗಳ ಮೇಲೆ ಅವರ ಪದಾಘಾತ; ಆ ಮೂಲಕ ಜನತೆಗೆ ಕಷ್ಟ-ನಷ್ಟ. ಈ ಘರ್ಷಣೆಗಳಲ್ಲಿ ನಮ್ಮವರು ಸ್ವಮತದವರು ಎಂಬ ಭೇದಭಾವ ಇರಲಿಲ್ಲ. ಸವಣೂರ ನವಾಬ ಖೈರಖಾನನ್ನು ಟೀಪೂ ಸುಲ್ತಾನನು ಗೋಳು ಹುಯಿದುಕೊಂಡದ್ದು ಅಷ್ಟಿಷ್ಟಲ್ಲ. ಈ ಹಿಂದೆ ಬೀಗತನ ಮಾಡಿದ್ದು ಪ್ರಯೋಜನವಾಗಲಿಲ್ಲ. ಪರಿಣಾಮವಾಗಿ ಅವನು ಬ್ರಿಟಿಷರ ಸಹಾಯವನ್ನು ಕೋರಿದನು. ಈ ಭಾಗದಲ್ಲಿ ೧೭೮೦ರ ದಶಕದಿಂದ ಬ್ರಿಟಿಷರ ಚಂಚು ಪ್ರವೇಶಕ್ಕೆ ಇದುವೆ ನಾಂದಿಯಾಯಿತು.

ಈ ಮಧ್ಯೆ ಧೋಂಡಿಯಾ ವಾಘ ಎಂಬ ಇನ್ನೊಬ್ಬ ಮರಾಠಾ ಸುಲಿಗೆಗಾರನು, ಟೀಪೂ ಸುಲ್ತಾನನ ಸೇವೆಯಲ್ಲಿ, ಅನಂತರ ಕೆಲವು ಕಾಲ ಕೊಲ್ಹಾಪುರದ ಸಂಸ್ಥಾನಿಕರಲ್ಲಿ ಇದ್ದವ, ತನ್ನದೇ ಆದ ಚಿಕ್ಕ ದಂಡನ್ನು ಕಟ್ಟಿ, ಅದನ್ನು ಬೆಳೆಸಿಕೊಳ್ಳುತ್ತ ಧಾರವಾಡ ಪರಿಸರದ ಹಳ್ಳಿಗಳನ್ನು ಸುಲಿದನು. ಧೋಂಡೋಪಂತ (ಗೋಖಲೆ) ಎಂಬ ಸರದಾರನು ಅವನನ್ನು ಅಲ್ಲಿಂದ ಓಡಿಸಿದನಾದರೂ ಈ ಭಾಗದ ಬೇರೆ ಪ್ರದೇಶಗಳಲ್ಲಿ ಕಾಣಿಸಿಕೊಂಡನು. ಆ ಮುಂದೆ ವೆಲ್ಲೆಸ್ಲಿಯು (ಮರಾಠರ ಪರವಾಗಿ) ಧೋಂಡಿಯಾ ವಾಘನನ್ನು ಬೆನ್ನಟ್ಟಿ ಸೆರೆಹಿಡಿದನು. ಅವನನ್ನು ನೇಣು ಹಾಕಲಾಯಿತು.

(ಈ ವಾಘನ ಬಗ್ಗೆ ವೆಲ್ಲೆಸ್ಲಿಯು ಮನ್ರೊ ಎಂಬ ಸ್ನೇಹಿತ ಅಧಿಕಾರಿಗೆ ವಿವರಗಳನ್ನು ಒವಗಿಸಿದ್ದು, Life of Sir Thomas Munro - Cleig ವಿರಚಿತ ಗ್ರಂಥದಲ್ಲಿ ಬಂದ ಆ ಪತ್ರದಲ್ಲಿ ಕೊಡಲಾಗಿದೆ. ಅದರಿಂದ ಹೆಚ್ಚಿನ ವಿವರಗಳನ್ನು ಧೊಂಡೋ ವಾಘನ ಬಗ್ಗೆ ತಿಳಿಯಬಹುದು)

Looted, Devastated, Ransacked, Plundered, Ravaged! ಇವು ನಮ್ಮ ಜಿಲ್ಲೆಗಳ ಗಜೆಟಿಯರ್‌ಗಳಲ್ಲಿ ಮೇಲಿಂದ ಮೇಲೆ ಬಂದ ಶಬ್ದಗಳು. ಮರಾಠರು ಮತ್ತು ಹೈದರ್ - ಟೀಪೂ ಸುಲ್ತಾನರು ಈ ಭಾಗದ ಮೇಲೆ ದಾಳಿ ಮಾಡಿದ್ದನ್ನು ವಿವರಿಸುವ ರೀತಿ - ಇದು. ಇವು ಒಂದೆರಡು ಉದಾಹರಣೆಗಳು:

ಮರಾಠರ ಸೇನಾನಿಯಾದ ಪರಶುರಾಮಪಂತ ಪಟವರ್ಧನನು ಧಾರವಾಡ ಕೋಟೆಗೆ ಮುತ್ತಿಗೆ ಹಾಕಿದ ಸಂದರ್ಭವು ದಾಖಲಾದ ಬಗೆಯನ್ನು ಗಮನಿಸುವುದು:

The Peshva cantoned for the rains at Narindra about five miles north of Dharwar, billeting (ಎಂದರೆ ಸರಬರಾಜಿಗಾಗಿ) his horsemen among all the villages within a radius of twenty miles. As soon as the season allowed (ಅಂದರೆ ನವೆಂಬರದಲ್ಲಿ) the Peshwa laid siege to Dharwar (1791).

ಇದರ ಅರ್ಥ: ಧಾರವಾಡದ ೨೦ ಮೈಲುಗಳ ಸುತ್ತಲಿನ ಹಳ್ಳಿಗಳನ್ನು ೫-೬ ತಿಂಗಳವರೆಗೆ ಏಕಪ್ರಕಾರವಾಗಿ ಧ್ವಂಸಗೊಳಿಸಿದರೆಂದಂತಾಯಿತು.

ಇದಕ್ಕೂ ಕೆಲವು ವರ್ಷಗಳ ಹಿಂದೆ ಹರಿಪಂತ ಎಂಬ ಸೇನಾಧಿಪತಿಯು ಸವಣೂರಿಗೆ ಮುತ್ತಿಗೆ ಹಾಕಿದನು. ಅಯಶಸ್ವಿಯಾದ. ಎಂದರೆ ಕೋಟೆಯನ್ನು ಒಡೆಯಲಾಗಲಿಲ್ಲ. ಇನ್ನೇನು ಮಾಡುವುದು? ಹತ್ತಿರದ ಶಿರಹಟ್ಟಿಗೆ ಮುತ್ತಿಗೆ ಹಾಕಿ ಸಾಕಷ್ಟು ಹಾನಿ ಮಾಡಿ, ಕಪ್ಪ-ಕಾಣಿಕೆಯನ್ನು ವಸೂಲು ಮಾಡಿಕೊಂಡು ಹೋದ!

ಆಗಿನ ಮರಾಠರ ಈ ಭಂಡತನವನ್ನು ನೋಡಿದ್ದ ವೆಲ್ಲಸ್ಲಿಯು ಮೇಲಿನವರಿಗೆ ವರದಿ ಮಾಡುವಾಗ 'Peshwa's Robber Government' ಎಂದು ತುಚ್ಛತೆಯಿಂದ ಕಾಣಿಸಿದ್ದಾನೆ.

ಈ ಬಗೆಯ ಆಕಸ್ಮಿಕ ದಾಳಿ, ದಬ್ಬಾಳಿಕೆಗಳಿಂದ ಹಳ್ಳಿಗರು ತುಸುವಾದರೂ ಪಾರಾಗಲು ಊರ ಹೊರಗೆ ತುಸು ಎತ್ತರದ ಮೇಲೆ ಚಪ್ಪರವನ್ನು ಕಟ್ಟಿಕೊಂಡು ದೂರದಿಂದ ಕಾಯುತ್ತಿರುವ ಉಪಾಯವನ್ನು ಯೋಚಿಸಿದ್ದರು. ಇತ್ತ ದೊಡ್ಡ ಊರುಗಳು ಎಂದರೆ ದೇಸಾಯಿ, ಇಲ್ಲವೆ ಸಂಸ್ಥಾನಿಕರಿರುವಲ್ಲಿ ಭದ್ರವಾದ ಕೋಟೆ - ಬುರುಜು ಗೋಪುರ - ಕೊತ್ತಳಗಳಿರುವಂಥವನ್ನು ಕಟ್ಟಲಾಗಿದ್ದಿತು. ಅವು ಕಲ್ಲು, ಮಣ್ಣು ಎರಡೂ ಕೂಡಿರುವಂತಹವು. ೧೭ನೆಯ ಶತಮಾನದಲ್ಲಿ ಬೆಳವಡಿಯ ಕೋಟೆಯನ್ನು ಕೆಡವಲು ಬಲಾಢ್ಯ ಶಿವಾಜಿಯ ಸೈನಿಕರಿಗೆ ಅಖಂಡ ೨೧ ದಿನಗಳವರೆಗೂ ಸಾಧ್ಯವಾಗದೇ ಹೋಯಿತೆಂದು ಓರ್ವ ವಿದೇಶೀ ಪ್ರವಾಸಿಯು ದಾಖಲಿಸಿದ್ದಾನೆ.

ಇಂಥ ಕೋಟೆಗಳು ಮುಂಬೈ ಕರ್ನಾಟಕದಲ್ಲಿ ಅವೆಷ್ಟೋ. ಅವುಗಳು ಇದ್ದುವೆಂದು ಜನರಿಗೆ ಅದೆಷ್ಟೋ ಧೈರ್ಯ ಇರುತ್ತಿದ್ದಿತು. ಹಲಗಲಿಯ ಬೇಡರು, ಬ್ರಿಟಿಶರಿಂದ ಆಜ್ಞೆ ಹೊರಡಿಸಲಾದ (೧೮೪೦ನೆಯ ದಶಕ) ನಿಶ್ಶಸ್ತ್ರೀಕರಣದ ವಿರುದ್ಧ ಬಂಡೆದ್ದರು. ಹಾಗೆ ಎದುರು ಬೀಳಲು ಅವರಿಗಿದ್ದ ಧೈರ್ಯವೆಂದರೆ ತಮ್ಮಲ್ಲಿಯ ಕೋಟೆ - ಎಂಬುದಾಗಿ ಲೆ-ಗ್ರಾಂಡ್ ಜೇಕಬ್ ಎಂಬವ ತನ್ನ 'Western India' ಪುಸ್ತಕದಲ್ಲಿ ಹೇಳಿದ್ದಾನೆ. ಕುಸುಗಲ್ಲ ಕೋಟೆಯೂ ಹಾಗೆ ಭದ್ರವಾದ ಆಶ್ರಯವನ್ನು ಒದಗಿಸಿತು. ಧಾರವಾಡ ಕೋಟೆಯ ಮುತ್ತಿಗೆಯನ್ನು ಮೇಲೆ ಕಾಣಿಸಿದೆಯಷ್ಟೆ. ಬಲವಾದ ತೋಪುಗಳಿಂದ ಅಲ್ಲಲ್ಲಿ ಕೋಟೆಯ ಗೋಡೆಯನ್ನು ಒಡೆಯುತ್ತಿದ್ದರು. ಆದರೆ ಮರುದಿನ ಬೆಳಗಾಗುವುದರೊಳಗಾಗಿ ರಿಪೇರಿಯಾಗಿಬಿಡುತ್ತಿತ್ತಂತೆ.

ಮುಂದಿನದನ್ನು ಕೇಳಿರಿ. ಈ ಕೋಟೆಗಳು ಬಂಡುಗಾರರಿಗೆ (ಬ್ರಿಟಿಶರ ದೃಷ್ಟಿಯಲ್ಲಿ) ಆಶ್ರಯ ಕೊಡುತ್ತವೆಂಬ ಕಾರಣದಿಂದ, ೧೮೫೭ರ ಬಂಡಾಯ ಮುಗಿದೊಡನೆ ಅನೇಕ ಕೋಟೆಗಳನ್ನು ಹಾಳುಗೆಡವಿದರು - ವಿಶಿಷ್ಟ ರೀತಿಯಲ್ಲಿ, ಎಂದರೆ ಒಂದು ದಿಕ್ಕಿನ ಗೋಡೆಯನ್ನೆ ನೆಲಸಮ ಮಾಡೋದು. ಅದರಿಂದ ಯಾರೂ ನಿರಾತಂಕವಾಗಿ ಓಡಾಡಬಹುದು, ಬಂಡುಕೋರರು ಅಡಗಿಕೊಳ್ಳುವ ಸಮಸ್ಯೆಯೇ ಬರದು! ಧಾರವಾಡ, ಕುಸುಗಲ್ಲ ಮುಂತಾದ ಕೋಟೆಗಳು ನಿರುಪಯೋಗಿ ಆದದ್ದು ಹೀಗೆ.

ಅದೇನಿದ್ದರೂ ೧೮ನೆಯ ಶತಮಾನವಿಡೀ ಹೊರಗಿನವರ, ವಿಶೇಷತಃ ಮರಾಠಿಗರ ದಬ್ಬಾಳಿಕೆಗಳಿಂದ ಮುಂಬಯಿ ಕರ್ನಾಟಕದವರ ನಿತ್ಯಜೀವನ ಅಸ್ತವ್ಯಸ್ತಗೊಂಡಿದ್ದಿತು. ಊರೊಳಗೋ ಊರ ಹೊರಗೋ ನೆಲೆಯೂರಿದ ಆ ಸೈನಿಕ ಪಡೆಗೆ ವಾರಗಟ್ಟಲೆ ದವಸ-ಧಾನ್ಯ, ಹಾಲು-ಹೈನು, ಮಾಂಸಗಳ ಪೂರೈಕೆಯಾಗಬೇಕು. ಪ್ರಸಂಗ ಬಂದರೆ ಆರ್ಥಿಕ ಸುಲಿಗೆಯನ್ನೂ ಅನುಭವಿಸಬೇಕು. ಜೊತೆಗೆ ಯಾವಾಗ ಯಾರು ಬಂದು ಎರಗುತ್ತಾರೊ ಎಂಬ ಕಳವಳ. ಒಟ್ಟಿನ ಪರಿಣಾಮವೆಂದರೆ ಮುಂಬಯಿ ಕರ್ನಾಟಕವು ತನ್ನ ಪ್ರಾಕೃತಿಕ ಸಂಪನ್ಮೂಲಗಳನ್ನು ಕಳೆದುಕೊಂಡಿತು. ವ್ಯಾಪಾರ ವಹಿವಾಟಿಗೆ ಮತ್ತು ಬೇಸಾಯಕ್ಕೆ ಪೆಟ್ಟು ಬಿದ್ದು, ನೆರೆಯ ಪ್ರದೇಶಗಳಿಗಿಂತ ಹಿಂದುಳಿಯಿತು. ಅಂತೂ ಜನತೆ ಮರಾಠರ ಈ ದಾಳಿ ದಬ್ಬಾಳಿಕೆ ಅದೆಂದು ಕೊನೆಗೊಂಡೀತೊ ಎಂಬ ಹತಾಶ ಸ್ಥಿತಿಯಲ್ಲಿದ್ದರು.

ಇಂಥ ಪರಿಸ್ಥಿತಿಯಲ್ಲಿ ಇದ್ದಾಗ ಥಾಮಸ್ ಮನ್ರೋ ಕ್ರಿ.ಶ. ಜೂನ್ ೧೮೧೭ರಲ್ಲಿ ಮಿಲಿಟರಿ ಅಧಿಕಾರಿಯಾಗಿ ಬಂದನು. ಕಾರಣವೆಂದರೆ ಧಾರವಾಡ ಮತ್ತು ಸುತ್ತಲಿನ ಕೆಲವು ಹಳ್ಳಿಗಳನ್ನು ಪೇಶ್ವೆಯು ಬ್ರಿಟಿಶರಿಗೆ ಬಳುವಳಿಯಾಗಿ ಒಪ್ಪಿಸಿದ್ದ. ಮನ್ರೋ ಧಾರವಾಡವನ್ನು ತನ್ನ ಠಾಣೆಯನ್ನಾಗಿ ಮಾಡಿಕೊಂಡನು. ಆ ಕೂಡಲೇ ಮುಂಬಯಿ ಕರ್ನಾಟಕದ ಒಂದೊಂದೇ ಊರುಗಳ ಜೈತ್ರಯಾತ್ರೆಯನ್ನು ಕೈಕೊಂಡನು. ಬ್ರಿಟಿಶ್ ದಾಖಲೆಗಳಲ್ಲಿ ನೋಂದಾಯಿಸಿದ ಪ್ರಕಾರ ಈ ರೀತಿ ವಿವರಗಳು ಲಭ್ಯ.

ದಿ. ೧೦-೧೨ - ೧೮೧೭	ನವಲಗುಂದ
ದಿ. ೫ -೧-೧೮೧೮	ಗದಗ
ದಿ. ೭-೧-೧೮೧೮	ಡಂಬಳ
ದಿ. ೧೩ -೧-೧೮೧೮	ಹುಬ್ಬಳ್ಳಿ
ದಿ. ೧೫-೧-೧೮೧೮	ಮಿಶ್ರಕೋಟೆ
ದಿ ೭-೧-೧೮೧೮	ಬೆಳಗಾಂವಿ

ಹೀಗೆಯೇ ಮುಂದುವರಿದು ಬಿಜಾಪುರದ ಕಡೆಗೂ ಹೋದ. ಅಲ್ಲಲ್ಲಿ ಚಕಮಕಿಗಳೇನೋ ಆದುವು. ಆಗೆಲ್ಲ ಮನ್ರೋ "ನಾವು ನಿಮಗೆ ಭದ್ರತೆಯನ್ನು ಒದಗಿಸಲು ಬಂದಿದ್ದೇವೆ. ಲೂಟಿ, ಸುಲಿಗೆ ಸರ್ವಥಾ ಅಲ್ಲ" ಎಂಬ ಅವನ ಶಾಂತಿಯ ಸಂದೇಶದಿಂದಾಗಿ ಯುದ್ಧ ಎಂಬುದು ನಡೆಯಲಿಲ್ಲ. ಈ ಹಿಂದೆ ಹೇಳಿದಂತೆ ಜನಕ್ಕೆ ಭದ್ರತೆ ಮತ್ತು ಶಾಂತಿ ಬೇಕಾಗಿದ್ದಿತು. ಜೊತೆಗೆ ಮನ್ರೋನ ಪ್ರಾಮಾಣಿಕ ಸಹಾನುಭೂತಿ. ಜನಕ್ಕೆ ವೇದ್ಯವಾಯಿತು. ಅವನು ಹೋದಹೋದಲ್ಲೆಲ್ಲ ಶರಣಾಗತರಾದರು.

ಮನ್ರೋ ತಾನು ಗೆದ್ದುಕೊಂಡ ಕೋಟೆಗಳಿಗೆ ಅಲ್ಲಲ್ಲಿಯ ಕೊತವಾಲರನ್ನೇ ನಿಯಮಿಸಿದ. ದೇಸಾಯಿ, ಇನಾಂದಾರ ಜನರ ಅಧಿಕಾರವನ್ನು ಉಳಿಸಿಕೊಟ್ಟ. ಏನಾದರೂ ವಾದ-ವಿವಾದ ಎದ್ದರೆ 'ಇದು ಮನ್ರೋ ಸಾಹೇಬರ ಹುಕ್ಕುಮು" ಎಂದು ಹೇಳುತ್ತಿದ್ದರಂತೆ. ಹಿಂದುಸ್ತಾನದ ಜನರ ಬಗ್ಗೆ ಅವನಿಗೆ ನಿಜವಾದ ಸಹಾನುಭೂತಿ ಇದ್ದಿತು. (ಮಂತ್ರಾಲಯಕ್ಕೆ ಹೋಗಿ ಶ್ರೀ ರಾಘವೇಂದ್ರರ ವೃಂದಾವನಕ್ಕೆ ನಮಿಸಿ ಬಂದ ಥಾಮಸ್ ಮನ್ರೋ ಈತನೇ.)

೧೮೧೮ರ ಮೇ ತಿಂಗಳು. ಆ ವೇಳೆಗೆ ಮನ್ರೋ ಸೊಲ್ಲಾಪುರದವರೆಗೂ 'ದಂಡಯಾತ್ರೆ'ಯನ್ನು ಕೈಕೊಂಡು ಧಾರವಾಡಕ್ಕೆ ಮರಳಿದನೋ ಇಲ್ಲವೊ, ಖಡಕಿಯ ಯುದ್ಧದಲ್ಲಿ ಮರಾಠರು ಸಂಪೂರ್ಣವಾಗಿ ಸೋತದ್ದರಿಂದ ನಮ್ಮ ಉತ್ತರ ಕರ್ನಾಟಕ ಸಹಿತವಾಗಿ ಇಡೀ ಮರಾಠಾ ಸಾಮ್ರಾಜ್ಯವು ಬ್ರಿಟಿಶರ ಕೈವಶವಾಯಿತು.

ಥಾಮಸ್ ಮನ್ರೋ ಯಾವ ಸದ್ದು ಗದ್ದಲವಿಲ್ಲದೆ ಇಡೀ ಮುಂಬಯಿ ಕರ್ನಾಟಕವನ್ನು ಹೀಗೆ ಗೆದ್ದುಕೊಂಡದ್ದು ಅಭೂತಪೂರ್ವ ಘಟನೆ ಎನಿಸಿತು. ಅವನ ಈ ಸಾಧನೆ ಮೂರು ಕಾರಣದಿಂದ ಗಣನೀಯವಾಗಿದ್ದಿತು. ಒಂದನೆಯದು ಅವನಲ್ಲಿ ಸೈನ 'ಬಲ' ಎಂಬುದೇ ಇರಲಿಲ್ಲ. ಮತ್ತು ಆ ತುಕಡಿ ಸೈನ್ಯವು ದೊಡ್ಡ ಯುದ್ಧದಲ್ಲಿ ತೊಡಗಲೇ ಇಲ್ಲ. ಎರಡನೆಯದಾಗಿ ಕೇವಲ ೫-೬ ತಿಂಗಳಲ್ಲಿ ಇಡೀ ಮುಂಬಯಿ ಕರ್ನಾಟಕವು ಅವನ ವಶವರ್ತಿಯಾದದ್ದು. ಮೂರನೆಯದು, ಅವನು ಮಿಲಿಟರಿ ಆಚರಣೆಗೆ ಬಂದಿದ್ದನಾದರೂ ಸಾಮಾನ್ಯ ಜನರಿಂದ ಮೊದಲುಗೊಂಡು ಪಟೇಲರವರೆಗೂ ಅವರುಗಳ ಅಹವಾಲುಗಳನ್ನು ಕೇಳಿಕೊಂಡು ವ್ಯಾಜ್ಯ ಇದ್ದಲ್ಲಿ ಬಗೆಹರಿಸಲು ಯತ್ನಿಸಿದನು. ಅಂತೂ ಸ್ವ-ಇಚ್ಛೆಯಿಂದ ಅವನಿಗೆ ತಲೆವಾಗಿದರೆನ್ನುವುದು ಅಚ್ಚರಿಯ ಸಂಗತಿಯಾದರೂ ಒಟ್ಟಿನಲ್ಲಿ ನಿಜವೇ ಅದು.

ಮನ್ರೋನ ಈ ಯಶಸ್ಸನ್ನು ಅವನ ಸಹೋದ್ಯೋಗಿ ಮಾಲ್ಕಮ್ ಕಾವ್ಯಮಯವಾಗಿ ಈ ರೀತಿ ವರ್ಣಿಸಿದ್ದಾನೆ.

We shall recede as this extraordinary man comes forward; we use common vulgar means and go on zealously and courageously enough; but how different is his part in the drama! Insulated in an enemy's country with no military means whatever (five disposable companys of Sepoys were nothing), he forms the plan of subduing the country. "this plan which is at once simple and great is successful in a degree that a mind like his could alone have anticipated.

ಬ್ರಿಟಿಶ್ ಪಾರ್ಲಿಮೆಂಟಿನಲ್ಲಿಯೂ ಮನ್ರೋನ ಯಶಸ್ಸಿನ ಬಗ್ಗೆ ಮರುದನಿ ಕೇಳಿಬಂದಿತು:

Europe never produced a more accomplished statesman. The population which he subjugated, he managed with such equity and wisdom, that he established an empire over their hearts and feelings. (*ಸೂಚನೆ :* 'ಕರ್ನಾಟಕದಲ್ಲಿ ಏಕೀಕರಣದ ಪ್ರಥಮ ಪ್ರಯತ್ನ' ಲೇಖದಲ್ಲಿ ಮನ್ರೋನ ಬಗ್ಗೆ ಇನ್ನಷ್ಟು ವಿವರಗಳಿವೆ.)

ಸಮಗ್ರ ಮುಂಬಯಿ ಕರ್ನಾಟಕವೇನೋ ೧೮೧೮ರಲ್ಲಿ ತಮ್ಮ ವಶಕ್ಕೆ ಬಂದಿತು. ಆದರೆ ಕಮಿಶನರ್ ಚಾಪ್ಲಿನ್ನನಿಗೆ ಇದನ್ನು ತೂಗಿಸಿಕೊಂಡು ಹೋಗುವುದು ಕಠಿಣವೆನಿಸಿತು. ಒಂದನೆಯ ಕಾರಣ: ಆದಾಯದ ದೃಷ್ಟಿಯಿಂದ ಇದು ಕೊರತೆಯ ಪ್ರದೇಶವಾಗಿ ಕಂಡಿತು. ಎರಡನೆಯದು: ಅಲ್ಲಲ್ಲಿಯ ಸಣ್ಣ ಪ್ರಮಾಣದ ಬಂಡೇಳುವಿಕೆ ಹಾಗೂ ಅದರ ಹಿಂದಿನ ಅಸಂತೋಷ. ಆದ್ದರಿಂದ ಈ ಪ್ರದೇಶವನ್ನು ಸುವ್ಯವಸ್ಥಿತವಾದ ಮದ್ರಾಸ ಪ್ರಾಂತಕ್ಕೇನೆ ಸೇರಿಸಬೇಕು ಎಂಬ ಯೋಚನೆ ಮಾಡಿದನು. ಈ ಬಗ್ಗೆ ಮುಂಬಯಿ ಮದ್ರಾಸ್ ಗವರ್ನರರು ಮತ್ತು ಕಲಕತ್ತೆಯ ಗವರ್ನರ್ ಜನರಲ್ ಇವರ ನಡುವೆ ಪ್ರಾಥಮಿಕ ಪತ್ರ ವ್ಯವಹಾರ ಸರಿದಾಡಿ, ಕೊನೆಗೆ ೧೮೨೬ರಲ್ಲಿ ಈ ಭಾಗವು ಮುಂಬಯಿ ಪ್ರಾಂತದಲ್ಲಿಯೇ ಉಳಿಯಬೇಕೆನ್ನುವ ನಿರ್ಧಾರ ಕೈಗೊಳ್ಳಲಾಯಿತು.

ಆಡಳಿತದ ದೃಷ್ಟಿಯಿಂದ ಬ್ರಿಟಿಶರಿಗೆ ಬಂದ ತಲೆನೋವೆಂದರೆ, ನಾಡಿನಲ್ಲಿದ್ದ ಅನೇಕ ಸರದಾರ, ಜಾಗೀರದಾರ ಮತ್ತು ಸಂಸ್ಥಾನಿಕರಿಗೆ ಸಲ್ಲಬೇಕಾದ ವರ್ಷಾಶನದ ಸಮಸ್ಯೆ. ಪೇಶ್ವೆಯವರ ಕಾಲದಿಂದ ನಡೆದು ಬಂದ ಬಳವಳಿ ಅದು. ಇದಕ್ಕಾಗಿ ಈ ಮೇಲ್ವರ್ಗದವರಲ್ಲಿ ಮೂರು ವರ್ಗಗಳನ್ನಾಗಿ ಮಾಡಿಕೊಂಡರು.

(ಅ) ಪೇಶ್ವೆಯವರಿಂದ ನೇರವಾಗಿ ಮರ್ಯಾದಿತರು (ಉದಾ.ಗೆ ಮುಧೋಳ ಸಂಸ್ಥಾನಿಕ)
(ಆ) ಹಾಗೆ ಅಲ್ಲದಿದ್ದರೂ ಬಹುಮಟ್ಟಿಗೆ ಪ್ರತಿಷ್ಠಿತರು (ಉದಾ: ಸವಣೂರಿನ ದಿಲೇರಖಾನ)
(ಇ) ಉಳಿದವರು; ತಕ್ಕಮಟ್ಟಿಗೆ ಮಾನ್ಯತೆ ಪಡೆದವರು (ವಿಶೇಷತಃ ಮೇಲಿನ ಎರಡು ವರ್ಗಗಳಲ್ಲಿ ಬರುವಂಥವರ ವಿಧವೆಯರು).

ಇನ್ನು ವಿವಿಧ ರೀತಿಯಲ್ಲಿ ಹೆಚ್ಚಿನ ಆಸ್ತಿಯನ್ನು ಹೊಂದಿದ್ದ ಇನಾಂದಾರ, ದೇಸಾಯಿ ಮುಂತಾದವರು ತಮ್ಮ ಆಸ್ತಿಯನ್ನು ಅಧಿಕೃತಗೊಳಿಸಲು ಮತ್ತು ಈ ಕುರಿತು ಅಣ್ಣ ತಮ್ಮಂದಿರಲ್ಲಿ ವ್ಯಾಜ್ಯವಿದ್ದರೆ ಬಗೆಹರಿಸಲೆಂದು ೧೮೪೦ರ ಸುಮಾರಿಗೆ 'ಇನಾಮ್ ಕಮೀಶನ್' ಅಸ್ತಿತ್ವದಲ್ಲಿ ಬಂದಿತು. ತಮ್ಮ ಹಕ್ಕನ್ನು ಪ್ರತಿಪಾದಿಸಲು ಅವರುಗಳು ಕಾಗದಪತ್ರ ಇಲ್ಲವೆ ಹಿಂದಿನ ತಾಮ್ರಶಾಸನಾದಿಗಳನ್ನು ಹಾಜರುಪಡಿಸಬೇಕಾಗಿದ್ದಿತು. ಒಮ್ಮೆ ಇನಾಮ್ ಕಮೀಶನ್ ನಿರ್ಣಯ ಕೊಟ್ಟಿತೆಂದರೆ ಅದರ ವಿರುದ್ಧ ತಕರಾರನ್ನು ಯಾವ ಕೋರ್ಟಿಗೂ ಕೊಡುವುದಿರಲಿಲ್ಲ. ಅಂಥ ತಕರಾರನ್ನು ಸರಕಾರದ ಮೇಲಧಿಕಾರಿಗಳು ಮಾತ್ರ ಕೈಗೆತ್ತಿಕೊಳ್ಳಬಹುದಾಗಿತ್ತು. ಇನಾಮ್ ಕಮೀಶನ್ನಿನ ಈ ರೀತಿಯ ಹಸ್ತಕ್ಷೇಪ ಅಸಂತೋಷದ ಹೊಗೆ ಏಳುವುದಕ್ಕೆ ಕಾರಣವಾಯಿತು. ಇದರ ಜೊತೆಗೆ ಅಧಿಕಾರಿಗಳು ಶೇತ್ಸನದಿಗಳ ಮತ್ತು ಪರಂಪರಾಗತ ಆಸ್ತಿಯನ್ನು ಹೊಂದಿದ್ದವರ ಅಧಿಕಾರಗಳನ್ನು ಕಸಿದುಕೊಳ್ಳುವ ಎತ್ತುಗಡೆಯನ್ನು ಕೈಕೊಂಡರು. ಸಂಗೊಳ್ಳಿ ರಾಯಣ್ಣ ಸಿಡಿದೇಳುವುದಕ್ಕೆ ಇಂಥ ಎತ್ತುಗಡೆಯೇ ಕಾರಣ.

ಮತ್ತೂ ಒಂದು ಅಧಿಕಾರಾಪಹರಣವೆಂದರೆ ನಿಶ್ಶಸ್ತ್ರೀಕರಣ, ಸಾಮಾನ್ಯ ಜನರ ಬಳಿಯಲ್ಲಿಯೂ ಖಡ್ಗ ಮುಂತಾದ ಶಸ್ತ್ರಗಳು ಇರುತ್ತಿದ್ದದ್ದು, ಅವನ್ನು ಕಸಿದುಕೊಳ್ಳುವ ಇಲ್ಲವೆ ಸರಕಾರಕ್ಕೆ ಒಪ್ಪಿಸುವ ಕಾಯದೆಯನ್ನು ಮಾಲ್ಕಮ್ ಮೊದಲು ಮುಂಬಯಿ ಕರ್ನಾಟಕದಲ್ಲಿ ಅಮಲಿಗೆ ತಂದನು. ಹಲಗಲಿಯು ವಿಜಾಪುರ ಜಿಲ್ಲೆಯ ಸಣ್ಣ ಊರು. ಬೇಡ ಜನಾಂಗದವರ ನೆಲೆಯೆನಿಸಿದ್ದಿತು. ಅವರು ಈ ನಿಶ್ಶಸ್ತ್ರೀಕರಣದ ವಿರುದ್ಧ ದಂಗೆ ಎದ್ದರು. ಆಗ ಮಾಲ್ಕಮ್ (ಕಿತ್ತೂರಿನ ಅಂತಿಮ ಯುದ್ಧದಲ್ಲಿ ಇವನೇ ಮುಖ್ಯ ಸೇನಾನಿಯಿದ್ದ), ಹಲಗಲಿಯ ಕೋಟೆಯನ್ನು ಮುತ್ತಿದಾಗ ಅನೇಕರು ಜೀವ ತೆತ್ತರೆಂದು ಬ್ರಿಟಿಶ್ ದಾಖಲೆ ಗಳಲ್ಲಿಯೇ ಹೇಳಿದ್ದಿದೆ (ಈ ಕುರಿತ ಒಂದು ಲಾವಣಿಯನ್ನೂ ಶಾಸನತಜ್ಞ ಫ್ಲೀಟ್ ಸಂಗ್ರಹಿಸಿದ್ದು, ಈಚೆಗೆ ಪ್ರಕಟವಾಗಿದೆ).

ಹೀಗೆ ೧೮೪೦ರ ದಶಕದಲ್ಲಿ ಆಚರಣೆಗೆ ಬಂದ ಇನಾಮ್ ಕಮೀಶನ್ ಹಾಗೂ ನಿಶ್ಶಸ್ತ್ರೀಕರಣದ ಕ್ರಮಗಳಿಂದಾಗಿ ಮುಂ. ಕ. ಜನತೆಯಲ್ಲಿ ಅಸಮಾಧಾನ ಹೊಗೆಯಾಡುತ್ತಲೇ ಇತ್ತು. ಅದರಲ್ಲಿಯೂ ಇನಾಮ್ ಕಮೀಶನ್ನಿನ ಅವಾಂತರ ಹೆಚ್ಚಿನದೆಂದು ಬ್ರಿಟಿಶ್ ದಾಖಲೆಗಳೇ ಹೇಳುತ್ತವೆ (No single one was as weighty as this policy). ಮುಂಬಯಿ ಕರ್ನಾಟಕದಲ್ಲಿ ಉಳಿದಿದ್ದ ಮರಾಠಾಭಿಮಾನಿಗಳು ತಮ್ಮ ಸತ್ತಾಧಿಕಾರ ಹೋಯಿತೆಂಬ ಕಾರಣದಿಂದ ಅವರೂ ಒಳಗೊಳಗೆ ಕುದಿಯುತ್ತಿದ್ದರು. ೧೮೫೭ರ ದೊಡ್ಡ ದಂಗೆಯಲ್ಲಿ ಇಲ್ಲಿಯವರು ಭಾಗವಹಿಸಿದ್ದರ ಮುಖ್ಯ ಕಾರಣಗಳಿವು. ಬೆಳಗಾಂವಿಯಲ್ಲಿದ್ದ ಓರ್ವ ಸೈನಿಕ ಬಂಡೇಳಬಯಸಿದ್ದವರೊಡನೆ ಪತ್ರವ್ಯವಹಾರ ಮಾಡುತ್ತಿದ್ದರ ಸುಳಿವು ಬ್ರಿಟಿಶರಿಗೆ ಹತ್ತಿತಾದರೂ ತೀರ ಗುಪ್ತವಾಗಿ ನಡೆಯುತ್ತಿದ್ದ ಇಂಥ ಚಟುವಟಿಕೆಗಳ ಮೂಲವನ್ನು ಕಂಡುಹಿಡಿಯುವುದು ಕಷ್ಟಕರವಾಗಿತ್ತು.

ಆ ಮಹಾವಿಪ್ಲವದಲ್ಲಿ ಕರ್ನಾಟಕದ ಪಾತ್ರ ಏನಿದ್ದಿತು; ಯಾವ ಯಾವ ಸಂಸ್ಥಾನಿಕರು ಪಾಲ್ಗೊಂಡಿದ್ದರೆಂಬ ವಿವರಗಳು ಜನರ ಗಮನಕ್ಕೆ ಈಗಾಗಲೇ ಬಂದಿವೆ. ಮೊದಲು ಕಾಣಿಸಿಕೊಂಡದ್ದು ನರಗುಂದದಲ್ಲಿ ಎಂದು ಕಾಣುತ್ತದೆ. ಅಲ್ಲಿಯ ಬಾಬಾಸಾಹೇಬನು ಸುಸಂಸ್ಕೃತ ವಿದ್ವಾಂಸನಿದ್ದುದು

ಹೆಚ್ಚು ಜನಕ್ಕೆ ಗೊತ್ತಿಲ್ಲ. ಅವನೊಬ್ಬ ಶಾಸ್ತ್ರ ಪಂಡಿತನಿದ್ದ ಹಾಗೂ ಅವನ ವಾಡೆಯಲ್ಲಿ ೩-೪ ಸಾವಿರ ಸಂಸ್ಕೃತ ಹಸ್ತಪ್ರತಿಗಳಿದ್ದದ್ದು ಅವೆಲ್ಲ ದಂಗೆಯ ಕಾಲಕ್ಕೆ ಸುಟ್ಟುಹೋದವು.

ದುರ್ದೈವವೆಂದರೆ ನಮ್ಮ ನಮ್ಮವರೇ ಪಿತೂರಿಯಾಗಿ ಬ್ರಿಟಿಶರಿಗೆ ಒಳಗೊಳಗೇನೆ ಸಹಾಯ ಮಾಡುತ್ತಿದ್ದದ್ದು. ಹೀಗೆ ಒಡೆದುಕೊಂಡು ಗೆದೆಯುವ ನೀತಿ, ಬ್ರಿಟಿಶರಿಗೆ ಸಾಧಿಸಿದಷ್ಟು ಇನ್ನಾವ ಹೊರಗಿನ ದಾಳಿಕಾರರಿಗೆ ಸಾಧಿಸಲಿಲ್ಲವೇನೊ. ನರಗುಂದ, ರಾಮದುರ್ಗದ ಸಂಸ್ಥಾನಿಕರು ತೀರ ಹತ್ತುಗಡೆಯವರು, ಮಲಬಂಧುಗಳು. ನರಗುಂದದ ಬಾಬಾ ಸಾಹೇಬನು ದಂಗೆ ಏಳಬಯಸಿ ಜೊತೆಗೂಡಬೇಕೆಂದು ರಾಮದುರ್ಗಕಾರನಿಗೆ ಪತ್ರ ಬರೆದಾಗ ಅವನು ಆ ಪತ್ರವನ್ನು ಬ್ರಿಟಿಶ್ ಸೈನ್ಯಾಧಿಕಾರಿ ಲೆಗ್ರ್ಯಾಂಡ್ ಜೇಕಬ್‌ನಿಗೆ ತೋರಿಸಿಬಿಡುವುದೆ? ಮುಂದೆ ಬಾಬಾಸಾಹೇಬನನ್ನು ನಿಗ್ರಹಿಸಲೆಂದು ಬಂದ ಮ್ಯಾನ್‌ಸನ್, ಎಣಿಕೆ ತಪ್ಪಿ ಕೊಲೆಯಾದದ್ದು ಮುಂತಾದ ವಿವರಗಳನ್ನೂ ಬಲ್ಲೆವು. ಏನಿದ್ದರೂ ಮುಂಬಯಿ ಕರ್ನಾಟಕದಲ್ಲಿಯಂತೂ ನಿರೀಕ್ಷಿಸಿದಷ್ಟು ದಂಗೆ ವ್ಯಾಪಕವಾಗಲಿಲ್ಲ, ಪ್ರಖರಗೊಳ್ಳಲಿಲ್ಲ.

ಮುಂದೆ ೧೮೫೮ರ ಕೊನೆಗೆ ವಿಕ್ಟೋರಿಯಾ ಮಹಾರಾಣಿ ಏನೆಲ್ಲ ಸವಲತ್ತುಗಳನ್ನು ಸಾರಿದಳಲ್ಲ! ಬಂಡೆದ್ದವರಿಗೆ ಕ್ಷಮಾಪಣೆ, ನಿಸ್ಸಂತಾನಿ ಸಂಸ್ಥಾನಿಕರು, ಜಾಗೀರುದಾರರು ದತ್ತಕ ತೆಗೆದುಕೊಳ್ಳುವ ಅನುಕೂಲತೆ, ಧಾರ್ಮಿಕ ಸ್ವಾತಂತ್ರ್ಯ ಮುಂತಾಗಿ ತಾತ್ಪೂರ್ತಿಕ ಸಮಾಧಾನದ, ಕಣ್ಣೊರೆಸುವ ಎತ್ತಗಡೆಗಳನ್ನು ಅದರಲ್ಲಿ ಸಾರಲಾಗಿದ್ದಿತು. ಆ ಜಾಹೀರನಾಮೆಯನ್ನು ಜಾಹೀರಪಡಿಸಲೆಂದು ಮುಂಬಯಿಯ ಟೌನ್‌ಹಾಲ್‌ನಿಂದ ಹಿಡಿದು ಹಳ್ಳಿಗಳಲ್ಲಿಯ ಚಾವಡಿಗಳಲ್ಲಿಯೂ ಓದಿ ಹೇಳಲಾಯಿತು. ಅದನ್ನು ಕೇಳಲೆಂದು ನೆರೆದ ಜನಸಮ್ಮರ್ದ ಕೇಳಿಯಾದ ಮೇಲಿನ ಜಯಜಯಕಾರಗಳನ್ನು ನೆನೆಯಬೇಕು. ಆಮೇಲಿನ ಬ್ರಿಟಿಶ್ ಆಡಳಿತದ ಏರು ಪೇರುಗಳು, ಆರ್ಥಿಕ ಶೋಷಣೆ ಅಂತಿರಲಿ, ಜನಸಾಮಾನ್ಯರಲ್ಲಿ ನೆಮ್ಮದಿ, ನಿಶ್ಚಿಂತತೆಗಳು ನೆಲೆಗೊಂಡದ್ದು ನಿಜ. ಜಾಹೀರನಾಮೆ ಹೊರಬಂದ ಮೇಲೆ ಶಹಾಪುರದ ಬಾಪೂಸಾಹೇಬನು ತನ್ನ ವಿಶೇಷ ಪರಿಚಯದ ಒಬ್ಬ ಬ್ರಿಟಿಶ್ ಅಧಿಕಾರಿಗೆ ಹೇಳಿದನಂತೆ: "What do you want these soldiers for now? Only act on the Queen's proclamation. Then you may send them back to your country".

ಇದನ್ನು ನೇರ ಹೇಳಿಕೆ ಎಂದೂ ತಿಳಿಯಬಹುದು; ವ್ಯಂಗ್ಯವಾಗಿಯೂ ಗ್ರಹಿಸಬಹುದು.

ಇದಿಷ್ಟು ಮುಂಬಯಿ ಕರ್ನಾಟಕದ ಪೂರ್ವದ ಇತಿಹಾಸ. ಅದರ ಸ್ಥೂಲ ಕಲ್ಪನೆ ಬರುವಷ್ಟರ ಮಟ್ಟಿಗೆ ಮಾತ್ರ ಇಲ್ಲಿ ವಿವರಗಳನ್ನು ಕೊಟ್ಟಿದೆ. ಈ ಹಿಂದೆ ಹೇಳಿದಂತೆ ಮುಂಬಯಿ ಕರ್ನಾಟಕವೆಂಬ ಪ್ರಕಲ್ಪವು ರಾಜಕೀಯವಾಗಿಯೂ ಸಾಮಾಜಿಕವಾಗಿಯೂ ೧೮೬೨ರಿಂದ ಗಟ್ಟಿಯಾಯಿತು. ೧೯೫೬ರಲ್ಲಿ ಏಕೀಕರಣವಾದ ಮೇಲೆ 'ಮುಂಬೈ' ಪದ ಅನವಶ್ಯಕವಾದರೂ ಬಳಕೆಯಲ್ಲಿ ಕೆಲ ಕಾಲ ಮಾತ್ರ ಇದ್ದಿತು. ಹೈದರಾಬಾದ ಸಂಸ್ಥಾನಗಳೂ ಸೇರಿಯಾದ ಮೇಲೆ 'ಉತ್ತರ ಕರ್ನಾಟಕ' ವೆಂದು ವಿಶಾಲ ವ್ಯಾಪ್ತಿಯನ್ನು ಪಡೆಯಿತಷ್ಟೆ. ಈ ೨೧ನೆಯ ಶತಮಾನದಲ್ಲಿ ಮಾತ್ರ 'ಮುಂಬಯಿ ಕರ್ನಾಟಕ'ವು ಮರೆವಿಗೆ ಬಿದ್ದಂತೆಯೇ ಆಗಿದೆ. ಆದರೂ ಮರೆಯಲಾಗದ್ದು.

೩. ಪುಣೆಯಲ್ಲಿ ಪೇಶ್ವೆ ಮತ್ತು ಬ್ರಿಟಿಶರು

ಮುಂಬಯಿ ಕರ್ನಾಟಕಕ್ಕೆ ಪರೋಕ್ಷವಾಗಿ ರಾಜಧಾನಿಯಾಗಿದ್ದ ಪುಣೆ ನಗರವು ಎರಡು ಶತಮಾನಗಳ ಹಿಂದೆ ಯಾವ ಸ್ಥಿತಿಯಲ್ಲಿದ್ದಿತು? ರಾಜವೈಭವದ ದೃಷ್ಟಿಯಿಂದ ಅವನತಿಯ ಹಾದಿ ಹಿಡಿದಿತ್ತು. ಸಾಮಾಜಿಕವಾಗಿ ಬ್ರಾಹ್ಮಣರ ಮೇಲುಗೈಯಿದ್ದರೂ, ಬ್ರಿಟಿಶರು ಪ್ರವೇಶಿಸಿದ್ದರಿಂದ ಪಾಶ್ಚಿಮಾತ್ಯೀಕರಣ ಆರಂಭವಾಗಿದ್ದಿತು. 'ಪೂನಾ' ಎಂಬ ಅದರ ರೂಪಾಂತರ ಜನಗಳಲ್ಲಿ ರೂಢವಾಗಿದ್ದಿತು.

ಆಗಿನ ಪುಣೆಯ ಜನವಸತಿ ೧ ಲಕ್ಷ ೨೦ ಸಾವಿರ ಮಾತ್ರ. (ಈಗಿನದು ೨೦ ಲಕ್ಷ). 'ಗಾಂವಠಾಣ' ಎಂದು ರೂಢಿಗತವಾದ ಪ್ರದೇಶವು ಕಸಬಾ ಪೇಟ, ರಾಸ್ತಾ ಪೇಟ ಎಂಬುದಾಗಿಯೂ, ರವಿವಾರ, ಬುಧವಾರ ಮುಂತಾದ ಹೆಸರಿನ ಪೇಟಗಳೂ ವ್ಯಾಪಾರ - ವಹಿವಾಟಿನಿಂದ ಜನನಿಬಿಡವಾಗಿದ್ದವು. ರವಿವಾರ ಪೇಟ ಬೆಳ್ಳಿ-ಬಂಗಾರ-ಮುತ್ತು-ರತ್ನಗಳ ವ್ಯಾಪಾರಕ್ಕೆ ಹೆಸರಾಗಿದ್ದಿತು. ಸ್ವತಃ ಪೇಶ್ವೆಯವರು ಅದರ ಖರೀದಿಗೆಂದು ಹೋಗುತ್ತಿದ್ದರು. ಊರೊಳಗೇ ಹರಿಯುವ ಮೂಲಾ, ಮೂಠಾ ನದಿಗಳ ಸಂಗಮದ ಸ್ಥಳವು ರಾಜಕೀಯ ಹಾಗೂ ಸೈನಿಕ ಚಟುವಟಿಕೆಗಳಿಗೆ ಕೇಂದ್ರವಾಗಿದ್ದಿತು.

ಆದರೇನು ರಸ್ತೆಗಳು, ಮನೆಗಳು ಯಾವುದೇ ನಗರ ಯೋಜನೆಯಿಲ್ಲದೆ ಬೆಳೆದಿದ್ದುವು. ಎಲ್ಲೆಲ್ಲಿಯೂ ನಿರರ್ಥಕವಾದ ಕೊಂಪೆಗಳು, ಗಿಡಗಳು ಅಡ್ಡಾದಿಡ್ಡಿಯಾಗಿ ಬೆಳೆದಿದ್ದುವು. ಮಾವಿನ ಗಿಡಗಳನ್ನು ಮಾತ್ರ ಕೊನೆಯ ಪೇಶ್ವೆಯಾದ ಎರಡನೆಯ ಬಾಜೀರಾಯನು (೧೭೯೪ -೧೮೧೮) ಸಾವಿರಗಟ್ಟಲೆ ನೆಡಿಸಿದನಂತೆ. ಪರಿಸರ ಪ್ರೇಮದಿಂದಲ್ಲ. ಈ ಹಿಂದೆ ನಾರಾಯಣರಾವ ಪೇಶ್ವೆಯನ್ನು ಅರಮನೆಯ ವಾಡಾದಲ್ಲಿ ಹಾಡೇ ಹಗಲು ಕೊಲ್ಲಿಸಿದ್ದರ ಪಾತಕದ ಶಮನಾರ್ಥವಾಗಿ!

ಆಗಿನ ದಿನಗಳಲ್ಲಿ (೧೭೭೨-೯೪) ಮಾಧವರಾಯ ಎಂಬ ಹದಿವಯದವ ಪೇಶ್ವೆ ಗದ್ದುಗೆಯನ್ನು ಏರಿದ್ದ. ಅವನ ಯೋಗಕ್ಷೇಮವನ್ನು ಸುಪ್ರಸಿದ್ಧ ನಾನಾ ಫಡಣವೀಸ

ನೋಡಿಕೊಳ್ಳುತ್ತಿದ್ದ. ೧೭೯೨ರಲ್ಲಿ ಬ್ರಿಟಿಶರು ಟೀಪೂವನ್ನು ಹೀನಾಯವಾದ ಒಪ್ಪಂದಕ್ಕೆ ಕಟ್ಟಿಹಾಕಿದ್ದರಿಂದ ಯಾವುದೇ ಸೈನಿಕ ಚಟುವಟಿಕೆ ಇರಲಿಲ್ಲ. ಜನ ಒಟ್ಟಿನಲ್ಲಿ ಸುಖಿ ಸಂತೃಪ್ತವಾಗಿದ್ದಿತು. ಅದಕ್ಕೊಂದು ನಿದರ್ಶನವನ್ನು ೧೭೯೩ರ 'ರಂಗಪಂಚಮಿ' ಉತ್ಸವದ ಮೂಲಕ ಕೊಡಬಹುದು. ಬಣ್ಣ ಆಡುವ ಆ ದಿವಸ, ನಗರದ ಶ್ರೀಮಂತರು, ಮರಾಠಾ ನಾಯಕರು, ಸ್ವತಹ ಮಾಧವರಾವ ಪೇಶ್ವೆ ಎಲ್ಲರೂ ಓಕುಳಿಯಾಡಿದ್ದೇ ಆಡಿದ್ದು. ಪ್ರಭಾಕರ ಎಂಬವನು ಆ ಕುರಿತು ಪೊವಾಡಾ (ಲಾವಣಿ) ರಚಿಸಿದ್ದು, ವಿವಿಧ ಬಣ್ಣಗಳ ನೀರು ಹಳ್ಳ ಹರಿದಂತೆ ರಸ್ತೆಗಳಲ್ಲೆಲ್ಲ ಪ್ರವಹಿಸಿತು - ಎಂದಿದ್ದಾನೆ.

ಆಗ ಪುಣೆಯಲ್ಲಿ ಕ್ಯಾಂಪ್ ಹಾಕಿದ್ದ ಮರಾಠಾ ನಾಯಕರೆಂದರೆ ಟೀಪೂ ಸುಲ್ತಾನನನ್ನು ಸೋಲಿಸಿದ ಹರಿಪಂತ ಫಡಕೆ, ದಿಲ್ಲಿಯ ಮೊಗಲ ಬಾದಶಹನನ್ನು ನಿಸ್ಸತ್ವಗೊಳಿಸಿದ್ದ ಮಹದಾಜಿ ಸಿಂಧೆ, ಮತ್ತು ಬಾಲಾಜಿ ಜನಾರ್ದನ ಮುಂತಾದವರು. ಕುಪ್ರಸಿದ್ಧ ಘಾಶಿರಾಮ ಕೊತವಾಲನನ್ನು ಹಿಂದಿನ ವರ್ಷವೆ ಕೊಲೆ ಮಾಡಲಾಗಿದ್ದಿತು. ಅಂತೂ ೧೮ನೆಯ ಶತ.ದ ಕೊನೆಯಲ್ಲಿ ಪುಣೆಯ ವಾತಾವರಣ ಶಾಂತವಾಗಿದ್ದಿತು.

ಹಾಗಿದ್ದರೂ ಒಳಗೊಳಗೆ ರಾಜಕೀಯ ಕುತಂತ್ರಗಳು ನಡೆದೇ ಇದ್ದುವು. ಈಚೆಗೆ ಪ್ರಸಿದ್ಧಿಗೇರಿದ ಮಹದಾಜಿ ಶಿಂಧೆನನ್ನು ನಿಯಂತ್ರಿಸುವುದರ ಬಗ್ಗೆ ಮತ್ತು ಪೇಶ್ವೆಯ ಮೇಲೆ ಅವನ ಪ್ರಭಾವ ಬೀಳದಂತೆ ನಾನಾ ಫಡಣವೀಸ ಚಿಂತಿತನಾಗಿದ್ದ. ಇತ್ತ ಮಹದಾಜಿ ಶಿಂಧೆ ತಾನು ಈಚಿನ ಯುದ್ಧಗಳಲ್ಲಿ ವೆಚ್ಚ ಮಾಡಿದ ಹಣವನ್ನು ಹೇಗೆ ಮರಳಿ ಪಡೆಯಬೇಕೆಂದು ಲೆಕ್ಕ ಹಾಕುತ್ತಿದ್ದ. 'ಅದಕ್ಕಾಗಿ, ಅವನು ಪುಣೆ ತನಕ ಬರಲೇಬಾರದು; ಏನಾದರೊಂದು ನೆಪದಿಂದ ಅವನನ್ನು ಉತ್ತರ ಹಿಂದುಸ್ತಾನದಲ್ಲಿ ಉಳಿಸೋಣ' ಎಂದು ನಾನಾ ಸಾಹೇಬ ಲೆಕ್ಕ ಹಾಕಿದರೂ ಸಾಧ್ಯವಾಗದೇ ಮಹದಾಜಿಯು ತನ್ನ ಸೈನ್ಯದೊಡನೆ ಗೋದಾವರಿಯನ್ನು ದಾಟಿ ನಾಸಿಕದ ಮಾರ್ಗವಾಗಿ ಪುಣೆಗೆ ಬಂದುಬಿಟ್ಟಿದ್ದ. (೧೧ ಜೂನ್ ೧೭೯೩). ಅದಕ್ಕೊಂದು ಅಧಿಕೃತವಾದ ಕಾರಣವೂ ಇದ್ದಿತು. ಮೊಗಲ ಬಾದಶಹನು ಪೇಶ್ವೆಗೆ ದಯಪಾಲಿಸಿದ ಬಿರುದು ಮುಂತಾದ್ದನ್ನು ದರ್ಬಾರಿನಲ್ಲಿ ಸಾದರಪಡಿಸುವುದಿತ್ತು.

ಹಾಗೆ ಬಂದ ಮಹದಾಜಿ ಗಣೇಶಖಿಂಡದಲ್ಲಿ ನೆಲೆ ನಿಂತ. ಅವನ ಸೈನ್ಯ ಮತ್ತಿತರ ಅನುಯಾಯಿಗಳ ಡೇರೆಗಳು ೧೫ ಮೈಲು ದೂರದ ಖಡಕಿಯವರೆಗೂ ಹಬ್ಬಿತ್ತು. ಆ ಗಳಿಗೆಗೆ ಅವನೊಬ್ಬ ಧೀರಾಧಿವೀರ.

ಅವನನ್ನು ಕಾಣಲೆಂದು ಸ್ವತಹ ಮಾಧವರಾವ ಪೇಶ್ವೆಯೇ ಬಂದದ್ದು, ಮಹದಾಜಿಗೂ ಅಚ್ಚರಿಯಾಯಿತು. ಹಸ್ತಲಾಘವವನ್ನಿತ್ತು ಬಗ್ಗಿ ನಮಸ್ಕರಿಸಹೋದರೆ, ಪೇಶ್ವೆಯು ಅವನನ್ನು ತಡೆದನಲ್ಲದೆ, ತನ್ನ ಕೊರಳಲ್ಲಿಯ ವಜ್ರದ ಹಾರವನ್ನು ತೆಗೆದು ಅವನ ಕೊರಳಿಗೆ ಹಾಕಿದನು. ದೊರೆ-ಸೇವಕ ಭಾವನೆ ಅವರಲ್ಲಿ ಅಷ್ಟೊಂದು ಆಳವಾಗಿದ್ದಿತು.

ದಿ. ೨೨-೬-೧೭೯೩ರಂದು ಮಹಾ ದರ್ಬಾರ ಜರುಗಿತು. ಕಿಕ್ಕಿರಿದು ತುಂಬಿದ ಜನಸ್ತೋಮ. (ಅದರಲ್ಲಿ ಯುರೋಪಿಯನ್ನರೂ ಇದ್ದರು). ಮೊಗಲ ಸಿಂಹಾಸನದ ಮಾದರಿಯಲ್ಲಿ ಒಂದು ಸಿಂಹಾಸನವನ್ನು ರಚಿಸಲಾಗಿದ್ದಿತು. ಪೇಶ್ವೆ ಮಾಧವರಾಯನು ಅಲ್ಲಿಗೆ ಬಂದು ಸಿಂಹಾಸನಕ್ಕೆ ನಮಸ್ಕಾರ ಮಾಡಿ ಅದರ ಮೇಲೆ ೧೦೧ ಸುವರ್ಣ ನಾಣ್ಯಗಳನ್ನು ಇರಿಸಿದನು. ಒಳಗೆ ಹೋಗಿ, ರಾಜವೈಭವದ ಪೋಷಾಕು ಧರಿಸಿಕೊಂಡು ಬಂದನು. ಸಿಂಹಾಸನಾಸೀನನಾದನು. ಜನಗಳ ಜಯಜಯಕಾರ, ತೋಪುಗಳ ಗರ್ಜನೆ ವಾತಾವರಣವನ್ನೆಲ್ಲ ನಡುಗಿಸಿಬಿಟ್ಟಿತು. ಆಗ ಮಹದಾಜಿಯು ದಿಲ್ಲಿಯಿಂದ ತಂದಿದ್ದ ಬಿರುದು-ಬಾವಲಿ, ಖಡ್ಗ, ನಜರಾಣೆ, ಪಾಲ್ಕಿ ಮುಂತಾದ ಕಾಣಿಕೆಗಳನ್ನು ವಿನೀತ ಭಕ್ತಿಯಿಂದ ಅರ್ಪಿಸಿದನು. ನಿಜಕ್ಕೂ ಸ್ವಾಮಿನಿಷ್ಠನಾಗಿದ್ದ ಅವನ ಕಣ್ಣಲ್ಲಿ ನೀರು ಸುರಿಯಿತು. ಕಂಠ ಗದ್ಗದಿತವಾಯಿತು.

ಆ ಕೂಡಲೇ ಮಹದಾಜಿ ಪುಣೆಯಿಂದ ಹೊರ ಹೊರಡಬೇಕಾಯಿತು. ಹೋಳಕರರೊಂದಿಗೆ ಯುದ್ಧ ಪ್ರಸಂಗ. ನಾನಾಸಾಹೇಬ ಸಮಾಧಾನದ ಉಸಿರು ಬಿಟ್ಟ, ಎನ್ನುವಷ್ಟರಲ್ಲಿ ಮಹದಾಜಿ ಮರಳಿ ಬರಬೇಕೆ? ಲೆಕ್ಕ ಪತ್ರ ಆಗುವುದಿತ್ತಲ್ಲವೆ! ಅವನ ಅಪೇಕ್ಷೆಯಂತೆಯೇ ಆ ಕೆಲಸ ಮುಗಿಯಿತು. ಆದರೇನು ಅದೇ ವರ್ಷ ಮಹದಾಜಿ ಶಿಂಧೆ ವಿಚಿತ್ರವಾದ ಜ್ವರದಿಂದ ತೀರಿಕೊಂಡ(೧೭೯೪). ಅದರ ಜೊತೆಗೆ ಪೇಶ್ವೆ ವೈಭವದ ಅಂತ್ಯವೂ ಸೂಚಿತವಾಯಿತು. ಅದರ ಮರುವರ್ಷ ಸಿಂಹಾಸನವೇರಿದ ೨ನೇ ಬಾಜಿರಾಯನ ಅಸಮರ್ಥತೆಯಿಂದ ಕೆಲವೇ ವರ್ಷಗಳಲ್ಲಿ ಪೇಶ್ವೆ ರಾಜಸತ್ತೆ ಕೊನೆಗೊಂಡಿತು - ಪುಣೆಯಲ್ಲಿಯೇ ನೆಲೆಗೊಂಡಿದ್ದ ಬ್ರಿಟಿಶರಿಂದಾಗಿ.

ಬ್ರಿಟಿಶರು ಪುಣೆಗೂ ಯಾವಾಗ ಕಾಲಿಟ್ಟರು? ಈಸ್ಟ್ ಇಂಡಿಯಾ ಕಂಪೆನಿಯು ಪೇಶ್ವೆಯವರೊಂದಿಗೆ ಬಹಳ ಸ್ನೇಹದಿಂದ ಇತ್ತು. ಯಾಕೆಂದರೆ ಇಬ್ಬರಿಗೂ ಟೀಪು ಸುಲ್ತಾನನೆಂಬ ವೈರಿಯನ್ನು ಮುಗಿಸಬೇಕಿತ್ತು. ಕಂಪೆನಿಯ ಧೋರಣೆಯಂತೆ, ಈಸ್ಟ್ ಇಂಡಿಯಾ ಕಂಪೆನಿಯು, ರಾಜ್ಯದ ಮುಖ್ಯ ಸಂಸ್ಥಾನಗಳಲ್ಲಿ ಅದರ ಪ್ರತಿನಿಧಿಗಳನ್ನು ಇರಿಸಿತ್ತು. ನಾನಾ ಫಡ್ನವೀಸನ ವಿಶೇಷ ಕೋರಿಕೆಯಂತೆ, ಚಾರ್ಲ್ಸ ಮ್ಯಾಲೆಟ್ ಎಂಬ ರೆಸಿಡೆಂಟನು ೧೭೮೬ರಲ್ಲಿ ನೇಮಿಸಲ್ಪಟ್ಟನು ಮತ್ತು ಅವನು ೧೭೯೩ರ ವರೆಗೆ ಕಾರ್ಯಭಾರ ಮಾಡಿದನು.

ಅವನು ಅಲ್ಲಿ ಸ್ವಾತಂತ್ರ್ಯದ ಪರಮಾವಧಿಯನ್ನು ಅನುಭವಿಸಿದನೆನ್ನಬಹುದು. ಪುಣೆಯಲ್ಲಿಯ 'ಸಂಗಮ' ಸ್ಥಳದ ಪೂರ್ವದಿಕ್ಕಿನ ವಿಸ್ತಾರವಾದ ಪ್ರದೇಶವನ್ನು ಆರಿಸಿಕೊಂಡನು. ೧೨೦೦ ಜನರ ಬಲಶಾಲಿ ಸೈನಿಕ ಪರಿವಾರ ಮತ್ತು ೧೦೦ ಇತರ ಕೆಲಸದ ಜನ ಅವನೊಂದಿಗಿದ್ದರು. ಅಲ್ಲಿ ನೀರಿನ ಕೊಳವೆಗಳು, ದ್ರಾಕ್ಷಿ ಬಳ್ಳಿಗಳು ಮತ್ತು ಹಣ್ಣಿನ ಮರಗಳು ಹಾಗೂ ಅವನ ಸಿಬ್ಬಂದಿಗಳಿಗೆ ವಿಶಾಲವಾದ ಬಂಗಲೆಗಳು ಇದ್ದುವಾದರೂ, ಉಳಿದ ಜನರ ವಾಸದ ಬಗ್ಗೆ ಸೊಲ್ಲಿರಲಿಲ್ಲ. ಇಲ್ಲಿರುವಾಗಲೇ ಅವನು ಸುಸಾನ್ ವೇಲ್ಸ್ ಎಂಬವಳನ್ನು ಮದುವೆಯಾದದ್ದು. ವಿಶೇಷವೆಂದರೆ, ಆ ಮುಂದೆ ೧೮೧೮ರ ನವಂಬರ ೫ರಂದು, ಈ ಬ್ರಿಟಿಶ್ ರೆಸಿಡೆಂಟ್ ಹುದ್ದೆಯು ಮರಾಠರಿಂದ ಕಿತ್ತೊಗೆಯಲ್ಪಟ್ಟಿತು.

ಬ್ರಿಟಿಷರು, ನಿಜಾಮರು ಮತ್ತು ಮರಾಠರ ಮಧ್ಯೆ ತ್ರಿಕೋನ ಒಪ್ಪಂದವೇರ್ಪಡುವಂತೆ ಬಲವಾಗಿ ಮ್ಯಾಲೆಟ್‌ನು ಪ್ರಯತ್ನಿಸಿದನು. ಅದರಿಂದಾಗಿಯೇ ಕೊನೆಗೆ ಟೀಪೂ ಸುಲ್ತಾನನನ್ನು ಸೋಲಿಸುವುದು ಸಾಧ್ಯವಾಯಿತು. ಅವನ ಈ ಮಹತ್ವದ ಸೇವೆಗಾಗಿ ಅವನನ್ನು ೧೭೯೧ರಲ್ಲಿ 'ಬ್ಯಾರೊನೆಟ್' ಆಗಿ ಮಾಡಲಾಯಿತು.

ಆಶ್ಚರ್ಯದ ಸಂಗತಿಯೆಂದರೆ, ಬ್ರಿಟಿಶರಿಗಿದ್ದ ಅತೀ ಸ್ವಾತಂತ್ರ್ಯ. ರೆಸಿಡೆಂಟರುಗಳು ಇದರ ಸಂಪೂರ್ಣ ಲಾಭವನ್ನು ಪಡೆದುಕೊಂಡರು. ಮರಾಠರ ಆಡಳಿತದ ಸಾಮರ್ಥ್ಯವನ್ನು ಮತ್ತು ದುರ್ಬಲತೆಯನ್ನು ಅಧ್ಯಯನ ಮಾಡಿದರು. ಮರಾಠಾ ಸಂಸ್ಥಾನದೊಳಗೆ ಕ್ಷುಲ್ಲಕ ಕಾರಣಗಳಿಗಾಗಿ ಜಗಳವಾಡಿಕೊಳ್ಳುತ್ತಿದ್ದುದನ್ನು ತಿಳಿದುಕೊಂಡರು. ನಿಜ ವಿಷಯವೇನೆಂದರೆ, ರೆಸಿಡೆಂಟರು ಪುಣೆಯ ಪ್ರತಿಯೊಂದು ಪ್ರಮುಖ ಚಟುವಟಿಕೆಗಳ ಬಗ್ಗೆ ವಿಷಯ ಸಂಗ್ರಹಿಸುವ ವ್ಯವಸ್ಥೆ ಮಾಡಿದ್ದರು. ಮೊದಲೇ ತಿಳಿಸಿದಂತೆ ಶಿಂಧೆ, ನಾನಾ ಮತ್ತು ಹರಿಪಂತರ ಮಧ್ಯೆ ನಡೆಯುತ್ತಿದ್ದ ರಹಸ್ಯ ಸಭೆಯ ಬಗ್ಗೆ ಮ್ಯಾಲೆಟ್ಟನ ಉತ್ತರಾಧಿಕಾರಿ ಪಾಮರ್‌ನಿಗೆ ತಿಳಿದಿತ್ತು ಮತ್ತು ಈ ವಿಷಯವು ಕೂಡಲೇ ಕಲ್ಕತ್ತಾದಲ್ಲಿ ಗವರ್ನರ್ ಜನರಲ್‌ನಿಗೆ ವರದಿಯಾಯಿತು.

ಈ ಕುಟಿಲ ಮಾರ್ಗದಿಂದಲೇ ವಸಯಿಯಲ್ಲಿ ತೇಜೋಭಂಗವಾಗುವ ಒಪ್ಪಂದಕ್ಕೆ ಬಾಜಿರಾವ್ ಇವನ ಮೇಲೆ ಒತ್ತಡ ಹಾಕಲು ಬ್ರಿಟಿಶರಿಗೆ ಅನುಕೂಲವಾಯಿತು. (೧೮೦೨) ತದನಂತರ ಖಿಡಕಿಯಲ್ಲಿ ಪೇಶ್ವೆಯವರನ್ನು ಸೋಲಿಸಿ, ಅವರದೇ ಸ್ವಂತ ಊರು ಎಂಬಂತೆ ಪುಣೆಯೊಳಗೆ ಪ್ರವೇಶಿಸಲು ಬ್ರಿಟಿಷರಿಗೆ ಸುಲಭಸಾಧ್ಯವಾಯಿತು.

ತನ್ನ ಅಧಿಕಾರದವಧಿಯಲ್ಲಿ ಮ್ಯಾಲೆಟ್‌ನು ಸಾಧ್ಯವಾದಷ್ಟು ಚತುರತೆಯಿಂದ ಅಪ್ರಾಯಸ್ಥ ಪೇಶ್ವೆಯ ಸ್ನೇಹವನ್ನು ಬಯಸುಪವನಂತೆ, ನಾನಾ ಫಡ್ನವೀಸನ ಪರಿಚಯ ಮಾಡಿಕೊಂಡನು. ಮ್ಯಾಲೆಟನು ಪೇಶ್ವೆಯನ್ನು ಬೇಟೆಗೆ ಮತ್ತು ಸಂಜೆಯ ವಾಯುವಿಹಾರಕ್ಕೆ ಕರೆದೊಯ್ಯಲಾರಂಭಿಸಿದ; ಹಬ್ಬಕ್ಕೆ ಆಮಂತ್ರಿಸುತ್ತಿದ್ದ. ಒಂದಲ್ಲ ಒಂದು ಉತ್ಸವದ ನೆಪದಲ್ಲಿ ಉಡುಗೊರೆಗಳ ವಿನಿಮಯವಾಗುತ್ತಿತ್ತು. 'ಮುಂಬೈ ಮತ್ತು ಪಶ್ಚಿಮ ಭಾರತ' ಎಂಬ ಪುಸ್ತಕದ ಲೇಖಕನಾದ ಜೇಮ್ಸ್ ಡೌಗ್ಲಾಸ್ ಎಂಬವನು ಅಂತಹ ಒಂದು ಸಮಾರಂಭದಲ್ಲಿ ಮ್ಯಾಲೆಟ್‌ನು, ಪೇಶ್ವೆಯ ಶಿರ ಮತ್ತು ಭುಜದ ಮೇಲೆ ಸಾವಿರ ಮೊಹರುಗಳನ್ನು ಸುರಿದನು ಮತ್ತು ಅದನ್ನು ಹೆಕ್ಕಲು ಸೇವಕರು ಸುತ್ತಲೂ ಗುಂಪುಗೂಡಿದ್ದರೆಂದು ಬರೆದಿದ್ದಾನೆ.

ಈ ರೆಸಿಡೆಂಟ್ ಮತ್ತು ಬ್ರಿಟಿಶ್ ಅಧಿಕಾರಿಗಳಲ್ಲದೆ, ಇತರ ಹಲವು ಯೂರೋಪಿಯನರು ಪುಣೆಯನ್ನು ವಾಸ್ತವವಾಗಿ ಆರಿಸಿಕೊಂಡದ್ದು ತಿಳಿದುಬರುತ್ತದೆ. ಮುಂಬಯಿಯಲ್ಲಿ ವ್ಯಾಪಾರದ ಸಂಬಂಧವಿಟ್ಟುಕೊಂಡವರು. ತಮ್ಮ ಸಂಸಾರವನ್ನು ಬೇಕೆಂದೇ ಪುಣೆಯಲ್ಲಿ ಇರಿಸಿ ತಾವು ಓಡಾಡುತ್ತಿದ್ದರು.

ಕ್ರಿ.ಶ. ೧೭೯೦ರಲ್ಲಿ ಶ್ರೀಮತಿ ವಾಲ್ ಎಂಬ ಫ್ಲಾರೆನ್ಸಿನ ಮಹಿಳೆ ಪುಣೆಯಲ್ಲಿ ವಾಸಿಸುತ್ತಿದ್ದಳು. ಅವಳು ಮೊಗಲ ರಾಣಿಯಂತೆ ಉಡುಪು ತೊಟ್ಟು, ಪುಣೆಯವರು ಅಚ್ಚರಿಗೊಳ್ಳುವಂತೆ ರಸ್ತೆಯಲ್ಲಿ ರಾಜಾರೋಷವಾಗಿ ಓಡಾಡುತ್ತಿದ್ದಳು. ಒಂದು ದಿನ ಅವಳ ಸೇವಕನು ಸರಕಾರದ ಹಣವನ್ನು ಕದಿಯುತ್ತಿದ್ದುದು ಅವಳ ಗಮನಕ್ಕೆ ಬಂತು. ಅವಳು ಸಿಟ್ಟಿನಿಂದ ಅವನನ್ನು ಜೀವಂತವಾಗಿ ಚರ್ಮ ಸುಲಿಯುವಂತೆ ಆದೇಶಿಸಿದಳು ಮತ್ತು ಹಾಗೇ ಮಾಡಲಾಯಿತು! ಆದರೆ ಪುಣೇರಿಗಳು ದಂಗೆಯೆದ್ದು, ಆ ಮಹಿಳೆಯನ್ನು ಹರಿದು ಚಿಂದಿ ಚೂರು ಮಾಡಬೇಕೆಂದು ಆಗ್ರಹಿಸಿದರು. ಅದನ್ನು ಜಾರಿಗೊಳಿಸಲಿಲ್ಲವಾದರೂ, ಅದರ ಬದಲು, ಆಕೆಯನ್ನು ಹತ್ತಿರದ ಕೋಟೆಯಲ್ಲಿ ಜೀವಾವಧಿ ಶಿಕ್ಷೆಗೊಳಪಡಿಸಲಾಯಿತು. ಆದಾಗ್ಯೂ ನಿಜಾಮನ ರಾಜ್ಯದಲ್ಲಿಯ ಬ್ರಿಟಿಷ್ ರೆಸಿಡೆಂಟ್ ಕಛೇರಿಯ ಅಧಿಕಾರಿಯೊಬ್ಬ ಕಷ್ಟಪಟ್ಟು ಅವಳ ಬಿಡುಗಡೆ ಮಾಡಿಸಿದ. ಮುಂದೆ ಆ ಮಹಿಳೆ ಮುಂಬಯಿಗೆ ತೆರಳಿ, ೧೭೯೮ರಲ್ಲಿ ಮರಣ ಹೊಂದಿದಳು.

ಪೇಶ್ವೆಯವರ ರಾಜಧಾನಿಯಾದ ಪುಣೆಯಲ್ಲಿ ಬಿಳಿಯರ, ಬ್ರಿಟಿಶರ ಪ್ರಭಾವ ಎಷ್ಟರ ಮಟ್ಟಿಗೆ ಇತ್ತು ಎಂಬುದನ್ನು ಮೇಲಣ ವಿವರಗಳಿಂದ ಅರಿಯಬಹುದಾಗಿದೆ. ಸ್ನೇಹವನ್ನು ನಟಿಸಿ ಒಳಹೊಕ್ಕು ಪೇಶ್ವೆ ರಾಜ್ಯವನ್ನು ಮುಳುಗಿಸಿದರು. ಮರಾಠರ ಅಧೀನವಾಗಿದ್ದ ಕರ್ನಾಟಕ ಪ್ರದೇಶವನ್ನೂ ಒಳಗು ಮಾಡಿಕೊಂಡರು.

•

೪. ಮೊಂಡಗ್ಯೆ ಭೀಮರಾಯ

ಮುಂಬಯಿ ಕರ್ನಾಟಕಕ್ಕೆ ಬ್ರಿಟಿಶರು ಕಾಲಿರಿಸುವ ಪೂರ್ವದಲ್ಲಿ ಈ ಭಾಗ ಪೇಶ್ವೆಯರ ಕೈಯಲ್ಲಿದ್ದಿತಷ್ಟೆ. ಆಗಿನ ಎಂದರೆ ೧೮ನೆಯ ಶತಮಾನದ ಕೊನೆಯಲ್ಲಿ, ಪುಂಡರು, ಬಂಡುಖೋರರು ಈ ಭಾಗದ ಜನರನ್ನು ಅನುವು ದೊರೆತಾಗೆಲ್ಲ ಸುಲಿಯುತ್ತ ಇದ್ದರು. ಧೊಂಡಿಯಾ ವಾಘ, ಬಾಪು ಗೋಖಲೆಯಂತಹವರು, ಅದರಂತೆ ನಿಜಾಮನ, ಟೀಪೂ ಸುಲ್ತಾನನ ಸುಭೇದಾರರು ಅಧಿಕೃತವಾಗಿಯೇ ಇಂಥ ಸುಲಿಗೆಯನ್ನು ಕೈಕೊಂಡು ಜನತೆ ನೆಮ್ಮದಿಯಿಂದ ಬಾಳುವೆ ಮಾಡಲು ಅವಕಾಶವನ್ನೇ ಕೊಡಲಿಲ್ಲ. ಯಾರು ಯಾವ ಕಾಲಕ್ಕೆ ಯಾವ ದಿಕ್ಕಿನಿಂದ, ಬಂದು ತಮ್ಮ ಊರಿನ ಮೇಲೆ ಎರಗಿ, ಬೆಳೆಗಳನ್ನೆಲ್ಲ ನಾಶಮಾಡಿ ಕೋಟೆಯ ಗೋಡೆಗಳನ್ನು ಕೆಡವಿ ಹಾಕಿಯಾರೆಂಬ ಚಿಂತೆಯಿಂದ ಸಾಮಾನ್ಯ ಜನತೆ ರೋಸಿಹೋಗಿದ್ದಿತು. ಈ ಕಾರಣದಿಂದ ರೈತಾಪಿ ಜನರು ಖಡ್ಗವಿದ್ಯೆಯನ್ನು ಬಲ್ಲವರಾಗಿ, ಪ್ರಸಂಗ ಬಂದರೆ ತಿಂಗಳೊಪ್ಪತ್ತು ಯುದ್ಧಕಾರ್ಯಕ್ಕಾಗಿ ಊರು ಬಿಟ್ಟು ಹೋಗುತ್ತಿದ್ದರು.

ಬ್ರಿಟಿಶ್-ಪೂರ್ವದ ಸಣ್ಣ ದೊಡ್ಡ 'ಪುಂಡ'ರ ದಾಳಿಯನ್ನು ತಡೆಯುವುದಕ್ಕೆಂದು ಬಲಶಾಲಿಯಾದವನೊಬ್ಬ, ಸ್ಥಳೀಯ ತರುಣರನ್ನು ಕಲೆ ಹಾಕಿ ಸೈನ್ಯವನ್ನು ಸಜ್ಜುಗೊಳಿಸಿ, ಕೆಲವು ಊರುಗಳನ್ನು ಹಿಡಿದುಕೊಂಡು ಪಾಳೆಯಗಾರನಂತೆ ವರ್ತಿಸುತ್ತಿದ್ದ. ಜನ್ಮಜಾತ ಸಾಹಸವೃತ್ತಿ ಇದ್ದು ಇವರಿಗೆ ದುಡ್ಡಿನ ಬಲ ಒದಗಿಬಂದರೆ ಚಿಕ್ಕ ಸೈನ್ಯವನ್ನು ಕಟ್ಟುವುದು, ಅನಂತರ ಪರಿಸ್ಥಿತಿಯ ಮೇರೆಗೆ ತಮ್ಮ ಪ್ರದೇಶವನ್ನು ವಿಸ್ತರಿಸುವುದು ಕಷ್ಟವಿರಲಿಲ್ಲ.

ಇವರು ತಮ್ಮ ಪ್ರದೇಶದ ಮೇಲೆ ಏರಿ ಬಂದ ತಮಗಿಂತ ಎಷ್ಟೋ ಬಲಶಾಲಿಗಳಾದ ಪೇಶ್ವೆ, ನಿಜಾಮ, ಇಲ್ಲವೆ ಟೀಪೂನ ಸೇನಾಧಿಪರಿಗೆ ಕಪ್ಪಕಾಣಿಕೆ ಕೊಟ್ಟು, ಅವರಿಗೆ ಬೇಕೆಂದರೆ ಸೈನ್ಯ - ಸರಬರಾಜನ್ನು ಒದಗಿಸಿ ತಮ್ಮ ನೆಲೆಯನ್ನು ಉಳಿಸಿಕೊಳ್ಳುತ್ತಿದ್ದರು. ಇಂಥ ಸ್ಥಳೀಯ ವೀರರಲ್ಲಿ ಮೊಂಡಗ್ಯೆ ಭೀಮರಾಯನೂ ಒಬ್ಬ.

ಇನ್ನೊಬ್ಬ ಭೀಮರಾಯನ (ಮುಂಡರಗಿ) ಹೆಸರು, ೧೮೫೭ರ ವಿಪ್ಲವಕ್ಕೆ ಸಂಬಂಧಿಸಿದಂತೆ ನಮಗೆ ಸುಪರಿಚಿತ. ಅವನ ಅಜ್ಜನೇ ಈ ಮೊಂಡಗ್ಯೆ ಭೀಮರಾಯ. ಇವನ ಬಗ್ಗೆ ಲಿಖಿತ

ಚಾರಿತ್ರಿಕ ದಾಖಲೆಗಳಿಲ್ಲ. ಆದರೆ ಜನತೆಯ ಮನದಲ್ಲಿ ದಂತಕತೆಯ ಮೂಲಕ ಉಳಿದುಕೊಂಡು ಬಂದಿದ್ದಾನೆ - ಮೊಂಡಗೈಯವನೆಂದು. ಆ ಕುರಿತ ಕತೆ ಹೀಗಿದೆ. ಆತ ಒಮ್ಮೆ ಕೈ ಚಾಚಿಕೊಂಡು ಕುದುರೆ ಕಟ್ಟುವ ಲಾಯದ ಬಳಿ ಮಲಗಿದ್ದನಂತೆ. ಗಾಢ ನಿದ್ರೆ. ಯಾರೋ ಒಬ್ಬ ಆ ಜಾಗದಲ್ಲಿ ತನ್ನ ಕುದುರೆ ಕಟ್ಟಲೆಂದು ಗೂಟ ಬಡಿಯಲಪೇಕ್ಷಿಸಿದ. ಭೀಮರಾಯ ಮಲಗಿದ್ದುದು ಗೊತ್ತಾಗದೇ ಅವನ ಕೈಯ ಮೇಲೆಯೇ ಹಾರೆಯ ಏಟನ್ನು ಹಾಕಿ ಗೂಟವನ್ನು ನಿಲ್ಲಿಸಿ ಕುದುರೆ ಕಟ್ಟಿದನಂತೆ. ಆಗ ಭೀಮರಾಯ ಎಳ್ಳಷ್ಟೂ ನರಳಲಿಲ್ಲವಂತೆ. ಅಂತೂ ಅರ್ಧ ಕೈ ಹೋಗಿಬಿಟ್ಟಿತಂತೆ.

ಆದರೆ ಇದು ಸಂಪೂರ್ಣ ಕಟ್ಟುಕತೆ. ಇದೇ ಸಂದರ್ಭವನ್ನು ಬೇರೆ ವೀರರ ವಿಷಯದಲ್ಲಿಯೂ ಹೇಳುವುದುಂಟು. ನಿಜ ಸಂಗತಿಯನ್ನು ಧಾರವಾಡ ಜಿಲ್ಲೆಯ ಅಸಿಸ್ಟೆಂಟ್ ಕಲೆಕ್ಟರ್ ಆಗಿದ್ದ ವಾಲ್ಟರ್ ಎಲಿಯೆಟ್* ಮೊಂಡಗೈ ಭೀಮರಾಯನ ಮಗ ರಂಗರಾಯ ನಿಂದಲೇ ಕೇಳಿ ತನ್ನ ಡೈರಿಯಲ್ಲಿ ಬರೆದಿಟ್ಟಿದ್ದಾನೆ. ಇತರ ಕೆಲವು ಸಮಕಾಲೀನರಿಂದ ಸ್ಥಿರೀಕರಿಸಿಕೊಂಡಿದ್ದಾನೆ. (ಈ ರಂಗರಾಯಕನನ್ನು ಥ್ಯಾಕರೇ ಸಾಹೇಬನು ೧೮೨೩ ರ ಸುಮಾರಿಗೆ ಎಲಿಯೆಟ್ಟನ ಮುಖ್ಯ ಕಾರಕೂನನೆಂದು ನೇಮಿಸಿದ್ದನು. ಅಂತೂ ಖಡ್ಗವನ್ನು ಹಿಡಿದು ಯುದ್ಧವೆಸಗುತ್ತಿದ್ದ ಕೈ ಕಾರಕೂನಿಕೆಯಲ್ಲಿ ತೊಡಗಿದ್ದು ಬ್ರಿಟಿಶರ ಕಾಲದ ನಮ್ಮ ಪರಿವರ್ತನೆಗೆ ಸಾಂಕೇತಿಕ ಸ್ವರೂಪದಲ್ಲಿದೆ.)

ಭೀಮರಾಯನ ಮನೆತನದವರು ಮೂಲತಃ ಕಲಕೇರಿ(ಕಕ್ಕೇರಿ?)ಯವರು. ಚಿಕ್ಕ ವಯಸ್ಸಿನಲ್ಲಿ ತಂದೆ-ತಾಯಿಗಳನ್ನು ಕಳೆದುಕೊಂಡಿದ್ದ ಭೀಮನು ಮನೆಯನ್ನು ತೊರೆದು ಪಂಢರಪುರಕ್ಕೆ ಬಂದ. ವಿಠೋಬನಿಗೆ ಪ್ರದಕ್ಷಿಣೆ ಹಾಕುತ್ತಿದ್ದ ೧೨ ವರ್ಷದ ಈ ತರಳನು ಕೃಷ್ಣಪ್ಪನಾಯಕ ಎಂಬವನ ಹೆಂಡತಿಯ ಕಣ್ಣಿಗೆ ಬಿದ್ದ. ಆ ದಂಪತಿಗಳಿಗೆ ಮಕ್ಕಳಿದ್ದಿಲ್ಲವಾದ್ದರಿಂದ ಇವನನ್ನು ಮನೆಗೆ ಕರೆದೊಯ್ದರು. ಹದಿಹರೆಯದಲ್ಲಿಯೇ ಭೀಮನು ತನ್ನ ಅನ್ನದಾತೃವಿನ ಸಾಹುಕಾರಿಕೆಯ ಉದ್ಯೋಗದಲ್ಲಿ ನೆರವಾಗುತ್ತಿದ್ದನು. ಕೆಲವು ವರ್ಷಗಳ ಅನಂತರ ಭೀಮರಾಯನ ಸಂಬಂಧಿಕರಲ್ಲೊಬ್ಬನಾದ ನರಸಿಂಹಾಚಾರ್ಯನು ಪಂಢರಪುರಕ್ಕೆ ಬಂದಾಗ ಇವನನ್ನು ಕಂಡು ಊರಿಗೆ ಮರಳಲು ಮನವೊಲಿಸಿದನು. ಕೃಷ್ಣಪ್ಪನಾಯಕನು ಭೀಮರಾಯನ ಕೈಯಲ್ಲಿ ೪೦೦ ರೂಪಾಯಿ ಇರಿಸಿ ಮದುವೆಯಾಗೆಂದು ಹರಸಿ ಕಳುಹಿಸಿದ.

---

* ಎಲಿಯೆಟ್ ಕಿತ್ತೂರ ದಂಗೆಯ ಕಾಲಕ್ಕೆ ಸಿಕ್ಕಿಬಿದ್ದಿದ್ದ. ಅನಂತರ ಅವನು ಈ ಭಾಗದಲ್ಲಿ ಕನ್ನಡದ ಪ್ರತಿಷ್ಠಾಪನೆಗೆ ತುಂಬಾ ನೆರವಾಗಿದ್ದಾನೆ. ಕನ್ನಡ ಪ್ರಾಥಮಿಕ ಶಾಲೆಯೇ ಇರದಿದ್ದಾಗ ಧಾರವಾಡದಲ್ಲಿ ಅಂಥ ಶಾಲೆಯನ್ನು ಆರಂಭಿಸಿ, ಓರ್ವ ಶಿಕ್ಷಕನನ್ನು ತಾನೇ ಸಂಬಳ ಕೊಟ್ಟು ನೇಮಿಸಿದ್ದನು. (ವಿವರಗಳು ಲೇಖ ೧೨ರಲ್ಲಿ ಇವೆ.) ಈ ಭಾಗದ ಶಾಸನಗಳನ್ನು ಓದಿ ಪ್ರಕಟಿಸಿದವರಲ್ಲಿ ಇವನೇ ಮೊದಲಿಗ. ಅದೇ ಮುಂದೆ ಫ್ಲೀಟರ ಉತ್ತರ ಕರ್ನಾಟಕದ ಇತಿಹಾಸ ನಿರ್ಮಿತಿಗೆ ದೊಡ್ಡ ಆಕರವಾಯಿತು.

ಇದು ನಡೆದದ್ದು ಸು. ೧೭೮೦ರಲ್ಲಿ. ಟೀಪೂಸುಲ್ತಾನನು ಬಳ್ಳಾರಿ ವಿಭಾಗವನ್ನು ವಶಪಡಿಸಿಕೊಂಡು, ಹರಪನಹಳ್ಳಿಯ ಪಾಳೆಯಗಾರನನ್ನು ಉಚ್ಚಾಟನೆ ಮಾಡಿ ಮರಾಠರ ಆಧಿಪತ್ಯವನ್ನೊಪ್ಪಿಕೊಂಡಿದ್ದ ಇತರರನ್ನು ಸದೆಬಡೆಯುತ್ತ ಮುನ್ನುಗ್ಗಿದ ಕಾಲವದು. ಹರಪನ-ಹಳ್ಳಿಯ ಪಾಳೆಯಗಾರನು ತನ್ನ ಸೀಮೆಯನ್ನು ಮರಳಿ ಪಡೆಯಲು ಹೊಂಚುಹಾಕಿ ಡಂಬಳದ ದೇಸಾಯಿ, ಮತ್ತಿತರರ ಸಹಾಯ ಯಾಚಿಸಿದನು. ಈ ಸುದ್ದಿ ತರುಣ ಭೀಮರಾಯನ ಕಿವಿಗೂ ಬಿತ್ತು. ತನ್ನ ಊರು ಹಾಗೂ ಬದಿಯ ಊರುಗಳಿಂದ ಸುಮಾರು ಐನೂರು ಜನರನ್ನು ಕಲೆಹಾಕಿ ಯುದ್ಧದ ತರಬೇತಿಯನ್ನು ಕೊಟ್ಟನು. ತುಂಗಭದ್ರೆಯನ್ನು ದಾಟಿ ಅಲ್ಲಿಯೇ ಇದ್ದ ಕೋಟೆಯನ್ನು ಸೇರಿ, ಅದು ಹರಪನಹಳ್ಳಿಯ ರಾಜನದೆಂದು ಘೋಷಿಸಿಬಿಟ್ಟನು. ಆಗ ಟೀಪೂ ಸುಲ್ತಾನನ ಆಗಿನ ಸೇನಾಧಿಕಾರಿಯು ದೊಡ್ಡ ಸೈನ್ಯದೊಡನೆ ಆ ಕೋಟೆಯನ್ನು ಮುತ್ತಿದನು. ಭೀಮರಾಯ ಯುದ್ಧಕಾರ್ಯದಲ್ಲಿ ಅಮಿತೋತ್ಸಾಹಿ, ಆದರೆ ಅನನುಭವಿ. ಮೂರು ದಿನಗಳ ವರೆಗೆ ಕಾದಿದನು. ಒಳಗಿನ ಮದ್ದು ಗುಂಡಿನ ಸಂಗ್ರಹ ಕರಗಿಹೋಯಿತು. ಹೊರಗಿದ್ದವರು ಕೋಟೆಯ ಗೋಡೆಯನ್ನೊಡೆದು, ಸಿಕ್ಕಿಬಿದ್ದ ಸೈನಿಕರೆಲ್ಲರನ್ನು ಸೆರೆಯಲ್ಲಿ ಹಾಕಿದರು. ಭೀಮರಾಯನನ್ನು ಬೇರೆ ಕೋಣೆಯಲ್ಲಿ ಬಂಧಿಸಿ ಇಡಲಾಯಿತು. ಹಾಗೆ ಸೆರೆಸಿಕ್ಕವರು ಸುಮಾರು ೩೦೦ ಜನ. ಸೆರೆಯಾಳುಗಳ ಆಗಿನ 'ಯೋಗಕ್ಷೇಮದ' ಪದ್ಧತಿಯೆಂದರೆ, ಅವರ ಕೈಗಳನ್ನೆ ಕಡಿದುಹಾಕುವುದು. ಮುಸಲ್ಮಾನ ಸರದಾರನ ಅಪ್ಪಣೆಯಾದೊಡನೆ ಕೈ ಕಡಿಯುವ ಕಾರ್ಯ ಆರಂಭವಾಯಿತು. ಇದನ್ನು ತಿಳಿದ ಭೀಮರಾಯನು, ಸರದಾರನನ್ನು ಕುರಿತು, "ಎಲೈ, ಇವರ ಕೈಗಳನ್ನೇಕೆ ಕತ್ತರಿಸುವೆ? ನಿನ್ನ ವಿರುದ್ಧ ಕೈಯೆತ್ತುವಂತೆ ಮಾಡಿದವ ನಾನು. ನನ್ನದನ್ನ ಬೇಕಾದರೆ ಕಡಿ. ಅವರನ್ನು ಹಾಗೇ ಬಿಟ್ಟರೆ, ನಾಳೆ ನಿನಗೇನೇ ಸೈನಿಕರಾಗಿ ನೆರವಾದಾರು" ಎಂದು ನುಡಿದನು. ಭೀಮರಾಯನ ಮಾತಿನ ಮೋಡಿಗೆ ಮರುಳಾಗಿ ಸರದಾರನು ಒಪ್ಪಿ, ಅವರೆಲ್ಲರ ಬಿಡುಗಡೆ ಮಾಡಿದನು. ಇನ್ನು ಭೀಮರಾಯನ ಯಾವ ಕೈಯನ್ನು ಕಡಿಯಬೇಕು? "ಎಡಗೈಯನ್ನು ಕತ್ತರಿಸು. ಬೇರೆ ಯಾವದಾದರೂ ಉದ್ಯೋಗ ಮಾಡಿಕೊಂಡು ಜೀವಿಸುವೆ" ಎಂಬ ಭೀಮರಾಯನ ಮಾತಿಗೆ ಸರದಾರ ಕೇಳಲಿಲ್ಲ. ಬಲಗೈಯನ್ನೆ ಕತ್ತರಿಸಲಾಯಿತು. ಭೀಮರಾಯನಿಗೆ ಮೊಂಡಗೈ ಎಂಬ ಅಭಿದಾನ ಬಂದದ್ದು ಹೀಗೆ. ಇತರ ಸೈನಿಕರಿಗೆ ತನ್ನ ಸೈನ್ಯವನ್ನು ಸೇರಲು ಆ ಸರದಾರನು, ತಿಳಿಸಿದಾಗ, "ಯಪ್ಪಾ, ನಾವು ಬಡ ರೈತರು, ಹೊಲದಲ್ಲಿ ಹೋರೆ ಮಾಡಲು ಹೋಗಬೇಕು" ಎಂದವರು, ತಮ್ಮ ಒಡೆಯನನ್ನು ಹೊತ್ತುಕೊಂಡು ಮರಳಿದರು. ಆದರೆ ತಮಗಾಗಿ ತನ್ನ ಕೈಯನ್ನೇ ಬಲಿದಾನಗೈದ ಭೀಮರಾಯನಿಗೆ ಅವನ ಮುಂದಿನ ಹೋರಾಟದಲ್ಲಿ ಹೆಗಲೆಣೆಯಾಗಿ ನಿಂತರು.

ಭೀಮರಾಯನ ಮೂಲ ಊರು ಕಲಕೇರಿಯಷ್ಟೇ. ಆ ಊರು ನಿಜಾಮನ ರಾಜ್ಯಕ್ಕೆ ಸೇರಿತ್ತು. ಭೀಮರಾಯನು ಕಾರ್ಯಪ್ರವೃತ್ತನಾದನು. ಸೈನ್ಯ ಕೂಡಿಸಲು ಬೇಕಾದಷ್ಟು ಹಣ? ಊರಲ್ಲಿಯ ಕುರುಬರ ಹಿರಿಯನೊಬ್ಬ ತನ್ನ ಹೊಲದಲ್ಲಿ ಎಲ್ಲಿಯೊ ಹಣದ

ಕೊಪ್ಪರಿಗೆಯನ್ನು ಹೂಳಿಡಲಾಗಿದೆ ಎಂದು ತಿಳಿಸಿದನು. ಹತ್ತಾರು ಕಡೆ ಅಗೆಸಿ ನೋಡಿದಾಗ ಸಿಕ್ಕಿತು, ಆ ಕೊಪ್ಪರಿಗೆ! ಅದೆಲ್ಲವನ್ನೂ ಒಪ್ಪಿಸಹೋದಾಗ ಭೀಮರಾಯನು ಅರ್ಧದಷ್ಟು ಆ ಹಿರಿಯನಿಗೇ ಇರಲೆಂದು ಅಪೇಕ್ಷಿಸಿದನು. ಮುದುಕ ಕೇಳಲಿಲ್ಲ; ಭೀಮರಾಯ ತಗೊಳ್ಳಲಿಲ್ಲ! "ಎಷ್ಟೆಂದರೂ ಆ ಹಣ ನಿನ್ನದು. ಕೊಡುವಂತಿದ್ದರೆ ಅರ್ಧ ಮಾತ್ರ ಕೊಡು. ಇಲ್ಲವಾದರೆ ಏನೂ ಬೇಡ, ನಿನ್ನಿಂದ" ಎಂದುದಕ್ಕೆ ಆ ಹಿರಿಯ ಒಪ್ಪಿದಂತೆ ಮಾಡಿ, ಸದ್ಯಕ್ಕೆ ಭೀಮರಾಯ ಕೇಳಿದಷ್ಟನ್ನೆ ಕೊಟ್ಟು, ಎರಡು ವರ್ಷಗಳ ಅನಂತರ ಉಳಿದದ್ದನ್ನೂ ಒಪ್ಪಿಸಿದನಂತೆ!

ಈ ಸಿದ್ಧತೆ ಮಾಡಿಕೊಂಡು ಭೀಮರಾಯನು ಕೊಪ್ಪಳ ದುರ್ಗವನ್ನು ಮುತ್ತಿದನು. ತನ್ನ ಪ್ರದೇಶವನ್ನು ವಿಸ್ತರಿಸಿದಾಗ ಮುಂಡರಗಿಯೂ ಅದರಲ್ಲಿ ಸೇರುವಂತಾಯ್ತು. ನಿಜಾಮನ ಒಡೆತನವನ್ನು ಒಪ್ಪಿಕೊಂಡು, ಅವನಿಗೆ ಹತ್ತು ಸಾವಿರದ ವಾರ್ಷಿಕ ನಜರಾಣೆಯನ್ನು ಒಪ್ಪಿಸುತ್ತಿದ್ದನು. ಆಗಿನ ಏಳೆಂಟು ವರ್ಷಗಳೆಂದರೆ ಭೀಮರಾಯನ ಉತ್ಕರ್ಷದ ಪರಮಾವಧಿಯ ಕಾಲವೆನ್ನಬೇಕು.

ನೆರೆಯಲ್ಲಿದ್ದ ಡಂಬಳ ದೇಸಾಯರಿಗೂ ಇವನಿಗೂ ಬಹು ಕಾಲದ ಸಂಬಂಧ. ಮುದುಕನಾದ ಅವನಿಗೆ ಪೇಶವೆಯವರು ಪೆನ್ಶನ್ ಕೊಟ್ಟು, ಸಾಕಷ್ಟು ದೊಡ್ಡದಾದ ಆ ಪ್ರದೇಶದ ಉತ್ಪನ್ನವನ್ನು ತಾವೇ ಕಬಳಿಸುತ್ತಿದ್ದರು. ಡಂಬಳ ದೇಸಾಯಿ ಇದನ್ನು ವಿರೋಧಿಸಿ ಭೀಮರಾಯನ ಸಹಾಯ ಪಡೆದು, ಸ್ವಾತಂತ್ರ್ಯವನ್ನು ಸಾರಿದನು. ಆಗ ಮರಾಠರ ಪರವಾಗಿ ವೆಲ್ಲಿಸ್ಲಿಯು ಏರಿಬಂದು, ಯುದ್ಧದಲ್ಲಿ ದೇಸಾಯಿಯನ್ನು ಸೋಲಿಸಿದ್ದುದಲ್ಲದೆ, ಊರಿನ ಅಗಸೆ ಬಾಗಿಲಲ್ಲಿ ದೇಸಾಯಿಯ ರುಂಡವನ್ನು ತುಂಡರಿಸಿ ಹಾಕಿದನಂತೆ. ಆದರೆ ದೇಸಾಯಿಯ ಚಿಕ್ಕ ವಾರಸುದಾರನನ್ನು ಮಾತ್ರ ಹಿಡಿಯಲಾಗಲಿಲ್ಲ.

ಭೀಮರಾಯ ಮರಳಿ ಬಂದಾಗ ಡಂಬಳ ದೇಸಗತಿಯು, ಪೇಶ್ವೆಯ ಪ್ರತಿನಿಧಿಯಾದ ಬಾಪೂಗೋಖಲೆಯ ಕೈ ಸೇರಿತ್ತು. ಭೀಮರಾಯನೀಗ ಗೋಖಲೆಯ ಹಸ್ತಕನಾಗಿ ಡಂಬಳ, ನವಲಗುಂದ, ಮುಂಡರಗಿಗಳನ್ನೊಳಗೊಂಡ ಸೀಮೆಯ ರಾಜ್ಯಭಾರ ನಡೆಸಿದ, ಸುಮಾರು ೧೩ ವರ್ಷಗಳ ಕಾಲ. ಆದರೆ ರೋಣ ಪ್ರದೇಶದಲ್ಲಿದ್ದ ಬಾಳಾಸಾಹೇಬ ಪಾಸ್ತೆ ಎಂಬ ಒಡೆಯನಿಗೂ ಭೀಮರಾಯನಿಗೂ ಬಹು ದಿನದ ವೈರ – ಗಡಿ ರೇಖೆಯ ಬಗ್ಗೆ. ಇತ್ತ ಕಲಕೇರಿಯನ್ನೊಳಗೊಂಡ ಕೃಷ್ಣೆ ತುಂಗಭದ್ರೆಗಳ ನಡುವಿನ ದೊಡ್ಡ ಪ್ರದೇಶ ನಿಜಾಮನ ವಶದಲ್ಲಿದ್ದಿತು. ಅದರ ರಾಜ್ಯಭಾರ ನಾಗನಗೌಡ ಎಂಬವನದು. ತನ್ನ ಊರು ಸೀಮೆ ತನಗೇ ಬರಬೇಕು ಎಂಬ ಛಲದಿಂದ ಭೀಮರಾಯ ಕಲಕೇರಿ ಮೊದಲಾದವುಗಳನ್ನು ವಶಪಡಿಸಿ ಕೊಂಡನು. ನಾಗನಗೌಡ – ಭೀಮರಾಯರ ಸೆಣಸಾಟ ಹೀಗೆ ಮುಂದುವರಿದಿದ್ದರ ಪರಿಣಾಮವಾಗಿ ಈ ಭಾಗದ ಜನರ ಜೀವನಕ್ರಮ ತುಂಬಾ ಅಸ್ತವ್ಯಸ್ತಗೊಂಡಿತು.

ಈ ಕಾಲಕ್ಕೇನೆ ಭೀಮರಾಯನ ಜೀವನದಲ್ಲಿ ದೊಡ್ಡ ಆಘಾತವೊದಗಿತು. ನಾಗಸಗೌಡನ ವತಿಯಿಂದ ಮೂವರು ಪಠಾಣ ಸೈನಿಕರು ಭೀಮರಾಯನಲ್ಲಿಗೆ ಬಂದು ಕಾಲು ಕೆದರಿ ಜಗಳ ತೆಗೆದರು. ಮತ್ತು ಸಮಯ ಸಾಧಿಸಿ ಭೀಮರಾಯನ ಮಗ ರಂಗನನ್ನು (ಆಗ ಆತ ಚಿಕ್ಕವ) ಅಪಹರಿಸಿ ಒಂದು ಮನೆಯಲ್ಲಿ ಅಡಗಿ ಕುಳಿತರು. "ದೊಡ್ಡ ಮೊತ್ತದ ಹಣವನ್ನು ನಮಗೆ ಕೊಟ್ಟು, ಸುರಕ್ಷಿತವಾಗಿ ಹೋಗಲು ಬಿಡಬೇಕು. ಅದಕ್ಕಾಗಿ ಮೂರು ಕುದುರೆಗಳನ್ನು ಈ ಮನೆಯ ಮುಂದೆ ಇರಿಸಬೇಕು. ಅಂದರೆ ಮಾತ್ರ ನಿಮ್ಮ ಹುಡುಗನನ್ನು ಬಿಟ್ಟುಕೊಡುವೆವು. ಇಲ್ಲವಾದರೆ ಇವನೊಂದಿಗೆ ಈ ಮನೆಯನ್ನು ಸುಟ್ಟುಹಾಕುವುದಲ್ಲದೆ ತಾವೂ ಸಾಯಲು ಸಿದ್ಧ" ಎಂದು ತಮ್ಮ ಬೇಡಿಕೆ ಬೆದರಿಕೆಗಳನ್ನು ಮುಂದೊಡ್ಡಿದರು.

ರಂಗ ಭೀಮರಾಯನ ಏಕಮೇವ ಪುತ್ರ. ಹಲವು ಹತ್ತು ಹರಕೆಗಳನ್ನು ಹೊತ್ತ ಮೇಲೆ ಹುಟ್ಟಿ ಬಂದವ. ಆದರೂ ಉಕ್ಕಿನ ಹೃದಯದ, ಛಲಗಾರ ಭೀಮರಾಯ ತೋಪುಗಳನ್ನು ತರಿಸಿ ಆ ಮನೆಯ ಮುಂದೆ ನಿಲ್ಲಿಸಿ ತಾನೇ ಅದನ್ನು ಉಧ್ವಸ್ತಗೊಳಿಸಲಣಿಯಾದ! ಊರವರೆಲ್ಲ ಅದನ್ನು ನಿಷೇಧಿಸಿದರು - ಅವನ ವಂಶದ ಕುಡಿಯನ್ನು ಉಳಿಸಲು! ಅಂತೂ ಹಣ ತೆತ್ತು, ಆ ಪಠಾಣರಿಗೆ ಓಡಿಹೋಗುವುದಕ್ಕೂ ಅನುವು ಮಾಡಿ ಕೊಟ್ಟು ರಂಗನನ್ನು ಬಿಡಿಸಿಕೊಂಡರು. ಭೀಮರಾಯನ ಬ್ರಹ್ಮಾಂಡ ಕೋಪ ಆರಿರಲಿಲ್ಲ. ಆಯ್ದ ಖಡ್ಗಧಾರಿ ಗಳೊಂದಿಗೆ ಅವರನ್ನು ಬೆನ್ನಟ್ಟಿ ಹೋಗಿ ಡಂಬಳದಿಂದ ಕೆಲವೇ ಮೈಲುಗಳ ಅಂತರದಲ್ಲಿ ಅವರನ್ನು ತುಂಡರಿಸಿದ!

ಈ ಕುರಿತು ಮುಂದೆ, ರಂಗರಾಯನ ಅಭಿಪ್ರಾಯವೇನೆಂಬುದು ಗೊತ್ತೆ? "ನಮ್ಮ ತಂದೆಯ ಇಂಥ ವಚನಭ್ರಷ್ಟತೆಯ, ವಂಚನೆಯ ನಡತೆಯಿಂದಲೇ ನಮ್ಮ ಮನೆತನ, ಆಸ್ತಿಪಾಸ್ತಿ ಹಾಳಾದದ್ದು"! (ವಾಲ್ಟರ್ ಎಲಿಯೆಟ್ ಟಿಪ್ಪಣಿಗಳಲ್ಲಿ ಉಲ್ಲೇಖಿತ). ಇಂದಿನ 'ಹೈಜಾಕ್'ಗಳಿಗೆ ಸಮಾನವಾದ ರೀತಿಯಲ್ಲಿ ಭಂಡತನದಿಂದ ನಡೆದುಕೊಂಡ ಆ ಪಠಾಣರೊಡನೆ ಸತ್ಯಸಂಧತೆ, ವಚನಪಾಲನೆಗಳ ಅಗತ್ಯ ಇತ್ತೆಲ್ಲಿ? ಅಂತೂ ಈ ರಂಗರಾಯ ತಂದೆಯ ಯಾವ ಕೆಚ್ಚೂ ಇಲ್ಲದ ಸಾಮಾನ್ಯ ಕಾರಕೂನನಾಗಲಿಕ್ಕೆ ಸುಯೋಗ್ಯ ಎನ್ನಬೇಕು!

ಬಾಪೂ ಗೋಖಲೆಯ 'ಸದರ್ನ್ ಮರಾಠಾ' ಸುಭೇದಾರಿಕೆಯಲ್ಲಿ ಭೀಮರಾಯನ ರಾಜ್ಯಭಾರ ಸಾಗಿತ್ತಷ್ಟೆ. ಭೀಮರಾಯನ ವರ್ಚಸ್ಸು ದಿನ ದಿನಕ್ಕೆ ವರ್ಧಿಸುತ್ತ ನಡೆದದ್ದನ್ನು ಕಂಡು ಗೋಖಲೆ ಕರುಬಿದ. ಈ ಮಧ್ಯೆ ಬಾಜೀರಾವ್ ಪೇಶ್ವೆ ಸೊಂಡರಿನ ಕಾರ್ತಿಕಸ್ವಾಮಿಯ ದರ್ಶನಕ್ಕೆ ಯಾತ್ರೆ ಬೆಳೆಸಿದಾಗ ಭೀಮರಾಯನು ಅದ್ದೂರಿಯಿಂದ ವ್ಯವಸ್ಥೆ ಮಾಡಿದ. ಅದರಿಂದ ಪ್ರೀತನಾದ ಪೇಶ್ವೆ ಭೀಮರಾಯನನ್ನು ಪುಣೆಯ ದರ್ಬಾರಿಗೆ ಆಮಂತ್ರಿಸಿ ದಾಗಲಂತೂ (೧೮೮೯) ಬಾಪೂ ಗೋಖಲೆ ಇನ್ನಷ್ಟು ಕುದಿದ. ಅವರಿಬ್ಬರಲ್ಲಿ ಒಳಗೊಳಗೇ ಈರ್ಷ್ಯೆ ಬೆಳೆಯಿತು. ಭೀಮರಾಯನಂಥ ಧೂರ್ತ ಹಾಗೂ ರಾಜತಂತ್ರ ನಿಪುಣನನ್ನು

ಅಡಗಿಸುವುದು ಅಷ್ಟು ಸುಲಭದ ಕೆಲಸವಲ್ಲವೆಂದು ಬಾಪೂಗೆ ಮನವರಿಕೆಯಾಗಿತ್ತು. ಒಂದು ನಿಮಿತ್ತ ಮಾಡಿಕೊಂಡು ತನ್ನಲ್ಲಿಗೆ ಬರಲು ಭೀಮರಾಯನಿಗೆ ಹೇಳಿ ಕಳುಹಿಸಿದ. ಅವನ ಸುರಕ್ಷಿತತೆಯ ಬಗ್ಗೆ ಭರವಸೆಯನ್ನೂ ಕೊಟ್ಟ. ಹಾಗಿದ್ದರೂ ಭೀಮರಾಯನ ಹಿತೈಷಿಗಳು ಅಲ್ಲಿಗೆ ಹೋಗುವುದು ಬೇಡವೆಂದು ಸೂಚಿಸಿದರು. ಭೀಮರಾಯ ಅದನ್ನು ಗಣನೆಗೆ ತಾರದೇ ಗೋಖಲೆಯಲ್ಲಿಗೆ ಹೋದ. ಆ ಕ್ಷಣವೇ ಬಂಧಿಸಲ್ಪಟ್ಟ! ಸವದತ್ತಿ ಕೋಟೆಯಲ್ಲಿ ಅವನನ್ನು ಇರಿಸಿ, ವಿಷವಿಕ್ಕಿ ಕೊಲ್ಲಲಾಯಿತು (೧೮೧೧)*. ಭೀಮರಾಯನ ಅಂತ್ಯವಾದದ್ದು ಈ ರೀತಿಯ ದುರ್ದೈವೀ ದುರ್ಘಟನೆಯಿಂದಾಗಿ.

ತರುಣ ವಯಸ್ಸಿನಲ್ಲಿಯೇ ಅರ್ಧ ಬಲಗೈಯನ್ನು ಕಳೆದುಕೊಂಡ ಭೀಮರಾಯನು ಅದೆಂತು ಯುದ್ಧವೀರನಾಗಿ ಸಾವಿರಾರು ಸೈನ್ಯದ ಅಧಿಪತಿಯಾಗಿ ಮೆರೆದನೊ! ಅದಕ್ಕೆ ಅವನ ಮನದಾಳದ ಮಹತ್ವಾಕಾಂಕ್ಷೆ, ಸಾಹಸ ಹಾಗೂ ಛಲಗಾರಿಕೆಗಳೇ ಕಾರಣ. ಅವನ ಕ್ಷಾತ್ರವೃತ್ತಿ ಮಗನಾದ ರಂಗರಾಯನಲ್ಲಿ ಏನೂ ಕಂಡುಬರಲಿಲ್ಲ. ಆತ ಬ್ರಿಟಿಶರ ಕಣ್ಣರಿಕೆಯಲ್ಲಿ ಕರಣಿಕನಾಗಿ ಬಾಳಿದನಷ್ಟೇ. ಆದರೆ ಅವನ ಮಗನಾದ (ಮುಂಡರಗಿ) ಭೀಮರಾಯನಲ್ಲಿ ಕ್ಷಾತ್ರಗುಣ ತದ್ವತ್ತಾಗಿ ಮೂಡಿತು. ಗತಿಸಿದ ಅಜ್ಜನ ಹೆಸರನ್ನು ವಾಡಿಕೆಯಂತೆ ಇಟ್ಟಿದ್ದರೂ ಆ ಹೆಸರನ್ನು ಸಾರ್ಥಕಗೊಳಿಸುವಂತೆ ೧೮೫೭ರ ವಿಪ್ಲವದಲ್ಲಿ ಭಾಗವಹಿಸಿ ನಮ್ಮ ಚರಿತ್ರೆಯಲ್ಲಿ ಶಾಶ್ವತ ಸ್ಥಾನವನ್ನು ಪಡೆದ.

●

* ಕಿತ್ತೂರ ಮಲ್ಲಸರ್ಜ ದೊರೆಗೆ ಇದೇ ಹಾಡಾಯಿತು. ಅವನೂ ಪೇಶ್ವೆಯ ಧಾರ್ಮಿಕ ಯಾತ್ರೆಯಲ್ಲಿ ನೆರವಾದವ. ಪೇಶ್ವೆಯ ಆಮಂತ್ರಣದ ಮೇರೆಗೆ ಪುಣೆಗೆ ಹೋಗಿದ್ದ ಅವನನ್ನು ಮೂರು ವರ್ಷ ಕಾರಾಗೃಹದಲ್ಲಿಡಲಾಯಿತು. ಅವನ ಆರೋಗ್ಯಹದಗೆಟ್ಟಿತೆಂದು ಬಿಡುಗಡೆ ಮಾಡಿದರು. ಅದಾಗಿ ಕೆಲವೇ ತಿಂಗಳಲ್ಲಿ ಮಲ್ಲಸರ್ಜ ದೊರೆ ಪ್ರಾಣ ನೀಗಿದನು (೧೮೧೬).

೫. ತಳ್ಳಿ – ನ್ಯಾಯ ಸಾಧನೆಯ ವಿಚಿತ್ರ ಪದ್ಧತಿ

ತಳ್ಳಿ ಎಂದರೆ ತಂಟೆ, ಜಗಳ ಎಂದರ್ಥ. ಈಗ ೩೦೦ ವರ್ಷಗಳ ಹಿಂದೆ ಉತ್ತರ ಕರ್ನಾಟಕದಲ್ಲಿ 'ತಳ್ಳಿಕೋರರು' ಎಂಬೊಂದು ವರ್ಗ ಆಗಾಗ ಹಳ್ಳಿಗಳಲ್ಲಿ ಕಾಣಿಸಿಕೊಳ್ಳುತ್ತಿತ್ತು. ತಳ್ಳಿ, ತಳ್ಳಿಕೋರರು ಎಂಬ ಪದಗಳು ನಮ್ಮ ನಡುಗನ್ನಡ ಕಾವ್ಯಗಳಲ್ಲಿಯೂ ಕಂಡು ಬರುತ್ತವೆ. 'ಹಳ್ಳಿ ಪಟ್ಟಣವಾಗಿ ಡಿಲ್ಲಿಯಲಿ ಕೊಲೆಯಾಗಿ ತಳ್ಳಿಕೋರರು ಪೆಚ್ಚುತ್ತ ಜಗದೊಳಗೆ ಒಳ್ಳೆತನವಿಲ್ಲ' ಎಂಬ ಮಾತು ಕಾಲಜ್ಞಾನ ವಚನದಲ್ಲಿ ಬಂದಿದೆ. ಸರ್ವಜ್ಞನು ಒಂದು ಕಡೆ 'ಎಲ್ಲಿ ನೋಡಿದೊಡಲ್ಲಿ ಟೊಳ್ಳು ಜಾಲಿಯ ಮುಳ್ಳು..... ಬಡಗಲ ತಳ್ಳಿ ಬೇಡೆಂದ ಸರ್ವಜ್ಞ' ಎಂದು ಸಾರಿದ್ದಾನೆ. ೧೮ನೆಯ ಶತಮಾನದ ಹಿರಿಯ ಕಾವ್ಯ 'ತುರಂಗಭಾರತ'ದ ಕವಿಯ ಗಮನಕ್ಕೂ ತಳ್ಳಿಕೋರರು ಬಂದಿದ್ದಾರೆ. ಹರಿದಾಸರ ಕೆಲವು ಹಾಡುಗಳಲ್ಲಿ 'ತಳ್ಳಿ' ಎಂಬ ಪದಪ್ರಯೋಗವಿದೆ.

ತಳ್ಳಿ ಅರ್ಥಾತ್ ತಂಟೆ ಮಾಡುವುದರ ನಿಮಿತ್ತದ ಮತ್ತು ಅದರ ವಿಧಾನಗಳ ಪರಿಚಯ ನಮಗಿಲ್ಲ. ಸುದೈವಕ್ಕೆ ವಾಲ್ಟರ್ ಎಲಿಯೆಟ್ ಎಂಬ ಬ್ರಿಟಿಶ್ ಅಧಿಕಾರಿ ತನ್ನ ಸ್ಮೃತಿ ಗ್ರಂಥದಲ್ಲಿ ಈ ಕುರಿತು ಒಂದಿಷ್ಟು ವಿವರಗಳನ್ನು ಕೊಟ್ಟಿದ್ದಾನೆ.

ವಾಲ್ಟರ್ ಎಲಿಯೆಟ್ ಕಲೆಕ್ಟರ್ ಥ್ಯಾಕರೆಯ ಅಸಿಸ್ಟಂಟ್ ಎಂದು ಧಾರವಾಡಕ್ಕೆ ಬಂದನು (೧೮೨೨). ಕಿತ್ತೂರ ಘರ್ಷಣೆಯಲ್ಲಿ ಅವನ ಪಾಲೂ ಇದ್ದಿತು. ಕಿತ್ತೂರಲ್ಲಿ ಅವನು ಒಂದು ಬಗೆಯ 'ಸ್ಥಾನಬದ್ಧತೆ'ಯಲ್ಲಿ ೩-೪ ತಿಂಗಳು ಕಳೆಯಬೇಕಾಗಿ ಬಂದಿತು. ಅವನಿಗೆ ನಮ್ಮ ನಾಡಿನ ಬಗ್ಗೆ, ಇಲ್ಲಿಯ ಜನರ ಬಗ್ಗೆ ಸಹಜವಾದ ಸಹೃದಯತೆ. ವಿಶೇಷವೆಂದರೆ ನಮ್ಮಲ್ಲಿಯ ಶಿಲಾಶಾಸನಗಳ ಬಗ್ಗೆ ಅವು ಏನು? ಯಾಕಿವೆ? ಎಂಬುದು ತಿಳಿಯದಿದ್ದಾಗ ಕ್ರಮೇಣ ಅಭ್ಯಾಸ ಮಾಡಿ, ಮೊದಲ ಬಾರಿಗೆ ಕರ್ನಾಟಕದ ಇತಿಹಾಸವನ್ನು ರೂಪಿಸಿದವನೀತ. (ರೈಸ್, ಫ್ಲೀಟರ ಕೆಲಸ ಆಮೇಲಿನದು.)

ಎಲಿಯೆಟ್ ತನ್ನ Reminiscencesನಲ್ಲಿ ತಾನು ಕಣ್ಣಾರೆ ಕಂಡಿದ್ದ ಆ ಕಾಲದ ಕೆಲವು ವ್ಯಕ್ತಿಗಳ ಸ್ವಾಮಿನಿಷ್ಠೆ, ಧಾರ್ಮಿಕ ಶ್ರದ್ಧೆ, ಪ್ರಾಮಾಣಿಕತೆಗಳ ಬಗ್ಗೆ ಘಟನೆಗಳನ್ನು ಕೊಟ್ಟಿದ್ದಾನೆ. ಅವುಗಳಲ್ಲಿ ಈ ತಳ್ಳಿಕೋರರ ಬಗೆಗಿನ ವಿವರಗಳು ವಿಶಿಷ್ಟವಾದವುಗಳು.

ಅದಿನ್ನೂ ಪೇಶ್ವೆಯರು ಈ ಭಾಗವನ್ನು ಆಳುತ್ತಿದ್ದ ಕಾಲ (೧೭೪೧-೧೮೧೭). ಊರಲ್ಲಿಯ ಇಬ್ಬರು ವ್ಯಕ್ತಿಗಳ ನಡುವಣ ತಿಕ್ಕಾಟದಲ್ಲಿ ಒಬ್ಬನದು ಮೇಲುಗೈಯಾಗಿ ಇನ್ನೊಬ್ಬ ತಾನು ಅನ್ಯಾಯಕ್ಕೆ ಗುರಿಯಾದೆನೆಂಬ ಅಸಹಾಯ ಸಿಟ್ಟು; ಸುಳ್ಳು-ಕಳವುಗಳ ಅಪವಾದಕ್ಕೆ ಗುರಿಯಾದ ಪ್ರಸಂಗ; ಇಲ್ಲವೆ ಓರ್ವ ಅನೀತಿಯ ಹೆಣ್ಣಿನೊಡನೆ ತನ್ನ ಹೆಸರನ್ನು ಜೋಡಿಸಿ ನಿಂದಾಸ್ಪದ ಮಾತುಗಳನ್ನು ಕೇಳಿಸಿಕೊಂಡ ಅವಮಾನ - ಇವೇ ಮುಂತಾದ ಕಾರಣಗಳಿಂದ ತನಗೆ ಅನ್ಯಾಯವಾಗಿದೆ ಎಂದೆನಿಸಿದರೆ, ತಳ್ಳಿಕೋರನಾಗುತ್ತಿದ್ದ.

ತಳ್ಳಿಗೆ ಸಂಬಂಧಿಸಿದ ಇನ್ನೂ ಹಲವು ಪ್ರಸಂಗಗಳಿವೆ. ಈಗಿನ ಕಾಲದ 'ಸೋಡಚಿಟಿ' ಪತ್ರಿಕೆಗಳಲ್ಲಿ ಪ್ರಕಟವಾಗುತ್ತದಷ್ಟೆ. 'ವಸ್ತ್ರ-ವಡವೆ', ಮದುವೆಯ ವೆಚ್ಚ ಇತ್ಯಾದಿ ಕೇಳುವುದಿದ್ದಾಗಲೂ ತಳ್ಳಿಯ ಮೂಲಕ ನೋಟೀಸ್ ಕೊಡಲಾಗುತ್ತಿತ್ತು. ಆ ರೀತಿ ಹೆದರಿಸಿ ವಸೂಲು ಮಾಡುತ್ತಿದ್ದರು.

ಆಗಿನ ದಿನಗಳಲ್ಲಿ 'ಕಟ್ಟೀಮನಿ' ಎಂಬ ನಾಮಧೇಯದ ಪ್ರಭಾವಶಾಲೀ ವ್ಯಕ್ತಿಗಳು ಊರೂರಲ್ಲಿ ಕಾಣಸಿಗುತ್ತಿದ್ದರು. ಅನ್ಯಾಯಗಳನ್ನು ಸರಿಪಡಿಸುವವರು ಎಂಬ ಪ್ರತಿಷ್ಠೆಯಿಂದ ಬೀಗುತ್ತಿದ್ದರು. ಅಂಥ ಪ್ರಸಂಗಗಳಲ್ಲಿ ಈ ಪ್ರತಿಷ್ಠಿತನು ದಂಡ ಇತ್ಯಾದಿ ವಿಧಿಸಿ, ತಳ್ಳಿಕೋರನಿಗೆ ಒಂದಷ್ಟು ಮುಟ್ಟಿಸಿ ತಾನು ಅಷ್ಟಿಷ್ಟು ಉಳಿಸಿಕೊಳ್ಳುತ್ತಿದ್ದ (The Kutteemunee-wallas exercise a sort of censorship over the morals of the community and levy fines for breaches of decorum or morality, which they apply to their own use).

ಈ ಪುಢಾರಿಗಳ ಬಗ್ಗೆ ಇನ್ನಷ್ಟು ಹೇಳಬೇಕು. ಅನ್ಯಾಯವೆಸಗಿದ ತಮ್ಮವನಲ್ಲದ ತಳ್ಳಿಕೋರನನ್ನು ಅವರು ಹಿಡಿದು ಅಧಿಕಾರಿಗಳಿಗೆ ಒಪ್ಪಿಸಿದ ಉದಾಹರಣೆಗಳೂ ಇವೆ. ಕೆಲವು ತಳ್ಳಿಕೋರರು ನೆರೆಯೂರಿನ ಜಮೀನುದಾರರ ಆಶ್ರಯವನ್ನು ಕೋರುತ್ತಿದ್ದರು. ಆ ಶ್ರೀಮಂತರು ತಮ್ಮ ಯಾವುದೇ ಸ್ವಾರ್ಥದ, ಮೋಸದ ಕಾಯಕಗಳಿಗೆ ಅವರನ್ನು ಬಳಸಿಕೊಳ್ಳುತ್ತಿದ್ದರು.

ತಳ್ಳಿಗೆ ಪ್ರತಿಯಾಗಿ 'ಎದುರು ತಳ್ಳಿ'! ಒಬ್ಬ ತಳ್ಳಿಕೋರ ಬೇರೆಯವರ ಆಸ್ತಿ-ಪಾಸ್ತಿಗೆ ಧಕ್ಕೆಯನ್ನುಂಟು ಮಾಡಿದನೆನ್ನುವ. ಆ ಬೇರೊಬ್ಬನು ತಳ್ಳಿಕೋರನಾಗಿ ಮೊದಲಿನವರ ಜಮೀನು, ಬೆಳೆ, ಇಲ್ಲವೆ ಅವನ ಮನೆ ಜನರಿಗೆ ತೊಂದರೆ ಕೊಡುವ ಮೂಲಕ ಮಾಡುವ ಚಟುವಟಿಕೆ 'ಎದುರು ತಳ್ಳಿ' ಎನಿಸಿಕೊಳ್ಳುತ್ತಿತ್ತು. ಅದರಿಂದ ಊರವರಿಗೆ ಇನ್ನಷ್ಟು ತೊಂದರೆ.

ಆಗಿನ ಕಾಲದಲ್ಲಿ ಗಣಾಚಾರಿ ಎಂಬ ವ್ಯಕ್ತಿ ಇರುತ್ತಿದ್ದ (ಆ ಅಡ್ಡ ಹೆಸರಿನವರು ಈಗಲೂ ಇದ್ದಾರಲ್ಲವೆ). ತಳ್ಳಿಕೋರನೊಂದಿಗೆ ನೇರ ಸಂಧಾನ ಮಾಡುವುದು ಇವನ ಕೆಲಸ. ಅವನ ಮಧ್ಯಸ್ಥಿಕೆಯಲ್ಲಿ ಪರಿಹಾರ ದೊರಕಿಸುವ ಎತ್ತುಗಡೆ ನಡೆಯುತ್ತಿತ್ತು. ಅದು ಫಲಕಾರಿಯಾಗದಿದ್ದರೆ ತಳ್ಳಿಕೋರನು ಊರ ಹೊರಗೆ ಅಡವಿಗಳಲ್ಲಿ ವಾಸಿಸುತ್ತಿದ್ದ. ಅವನ ವಿಧ್ವಂಸಕ ಕೃತ್ಯಕ್ಕೆ ಅದು ಅನುಕೂಲವಲ್ಲವೆ?

ಲಕಮಾಪುರದ (ಧಾರವಾಡ ಜಿಲ್ಲೆ) ಕೆಂಚನೆಂಬವನು ಕಳವು ಮಾಡುತ್ತಾನೆಂದು ಊರವರೇ ಅವನನ್ನು ಹೊರದಬ್ಬಿದರು. ಪರಿಣಾಮ? ಅವನು ತಳ್ಳಿಕೋರನಾದ. ತನ್ನೀ ಕಾಯಕವನ್ನು ಮುಂದುವರಿಸಿದ. ಆದರೇನು, ಪೇಶ್ವೆಯ ಅಧಿಕಾರಿಯೊಬ್ಬನ ಕೈಗೆ ಸಿಕ್ಕಿಬಿದ್ದ. ಅವನನ್ನು ಗುಂಡಿಕ್ಕಿ ಕೊಲ್ಲಲಾಯಿತು.

'ತಳ್ಳಿಕೋರ ದೀಕ್ಷೆ'ಯನ್ನು ಹೊಂದುವ ಕ್ರಮ ಮೋಜಿನದಾಗಿದೆ. ಆತ ಮೊದಲು ಓರ್ವ ಕಟ್ಟೀಮನಿಯನ್ನು ಸಂಪರ್ಕಿಸುತ್ತಿದ್ದ. ಕಟ್ಟೀಮನಿಯು ಗಣಾಚಾರಿಯನ್ನು ಅನ್ಯಾಯ ಬಗೆದವನಲ್ಲಿಗೆ ಕಳಿಸಬೇಕು. ಅವನ ಸಂಧಾನ ಯಶಸ್ವಿಯಾಗದಿದ್ದರೆ ಕಟ್ಟೀಮನಿಯು ತಳ್ಳಿಕೋರನ ಪರವಾಗಿ ಈ ರೀತಿ ಒಕ್ಕಣಿಕೆ ಬರೆದು, ರಾತ್ರಿಯ ವೇಳೆಯಲ್ಲಿ ಚಾವಡಿ, ಇಲ್ಲವೆ ದೇವಸ್ಥಾನದ ಕಂಬಕ್ಕೆ ಅಂಟಿಸುವ ವ್ಯವಸ್ಥೆ ಮಾಡುತ್ತಿದ್ದ.

"ಎಲೈ ಗ್ರಾಮಸ್ಥರೇ ಕೇಳಿರಿ! ನನ್ನ ಖಡುಗ ಸದಾ ಹಿರಿದದ್ದೇ ಇರುತ್ತದೆ. ಅದು ಇಡೀ ಜಗತ್ತನ್ನೇ ನಾಶಮಾಡುವ ಸಾಮರ್ಥ್ಯವುಳ್ಳದ್ದು. ದೆವ್ವಗಳ ಕೂಡ ನನ್ನ ಸವ್ಯಾಸ, ಬೇಕೆಂದರೆ ನಾನು ಮೋಡಾ ಏರಬಲ್ಲೆ, ಹಾಳುಬಿದ್ದ ಭಾವಿಗಳಲ್ಲಿ ಮುಳುಗಿರಬಲ್ಲೆ, ಪರ್ವತದ ಮೇಲೆ ಜಿಗಿಯಬಲ್ಲೆ, ಕಂಟಿಗಳ ಹಿಂದೆ ಅಡಗಿರಬಲ್ಲೆ, ನನಗಾದ ಅನ್ಯಾಯವನ್ನು ಮೂರು ದಿನಗಳಲ್ಲಿ ಪರಿಹರಿಸದಿದ್ದರೆ, ಅವರ ಹೆಣ್ಣು ಗಂಡುಗಳ ರುಂಡವನ್ನು ಚಂಡಾಡಬಲ್ಲೆ, ಅವರ ಮುಂಡಗಳನ್ನು ಬುಟ್ಟಿಯಲ್ಲಿ ತುಂಬಿ ಪೇಟೆಯಲ್ಲಿ ಚೆಲ್ಲಾಡುವೆ, ತಿಳಿಯಿರಿ!!"

ತಳ್ಳಿಕೋರನು ತನ್ನ ಮುಂದಿನ ಹೆಜ್ಜೆಯ ಗುರುತೆಂಬಂತೆ ರಾತ್ರಿಯ ವೇಳೆಯಲ್ಲಿ ಒಣಹುಲ್ಲಿನ ರಾಶಿಗೆ ಬೆಂಕಿ ಹಚ್ಚುತ್ತಿದ್ದ. ಇಲ್ಲವೆ ಹತ್ತಿರದ ಗಿಡವೊಂದರ ಟೊಂಗೆಗಳನ್ನು ಕತ್ತರಿಸಿಹಾಕುತ್ತಿದ್ದ. ಅದರಿಂದ ಊರವರಿಗೆ ಆತನ ಮುಂದಿನ ಹಿಂಸಾತ್ಮಕ ಧೋರಣೆಯ ಅರಿವಾಗುತ್ತಿತ್ತು. ಇತ್ತ ಗಣಾಚಾರಿಯು ಆ ತಳ್ಳಿಕೋರನಿಗೆ ಏನು ಬೇಕು ಎಂದು ಸಂಬಂಧ ಪಟ್ಟವರಿಗೆ ತಿಳಿಸಿಕೊಡುತ್ತಿದ್ದ ಹಾಗೆ ಪರಿಹಾರ ದೊರೆಯದಿದ್ದರೆ ಸುರುವು! ಅವರ ವಿಧ್ವಂಸಕ ಕಾರ್ಯ ವರ್ಷಗಟ್ಟಲೆ ನಡೆದದ್ದೂ ಇದೆ.

ವಾಲ್ಟರ್ ಎಲಿಯೆಟ್ ತನ್ನ ಸ್ಮೃತಿ-ಚಿತ್ರಗಳಲ್ಲಿ ಕೆಲವು ತಳ್ಳಿಕೋರರ ಬಗ್ಗೆ ವಿವರಗಳನ್ನು ಒದಗಿಸಿದ್ದಾನೆ. ಅವರಲ್ಲಿ ಒಬ್ಬನ ಚರಿತ್ರೆಯನ್ನು ಕೊಡುತ್ತಿದ್ದೇನೆ.

ಹೆಸರು ಬಸ್ಯಾ. ಮಾಗಿ ಊರಿನವ (ಜಿಲ್ಲೆ?) ಅಪ್ರತಿಮ ಧೈರ್ಯಶಾಲಿ. ಅತೀವ ಸಾಹಸ ಪ್ರವೃತ್ತಿಯವ. ಮನೆತನದಿಂದ ಸ್ಥಿತಿವಂತನೇ. ಆದರೆ ಅವನ ಅಣ್ಣ ಏನೇನೊ ನೆಪ ಹೇಳಿ ಆಸ್ತಿಯಲ್ಲಿ ಪಾಲು ಕೊಡಲಿಲ್ಲ. ಆ ಅನ್ಯಾಯದ ಪರಿಹಾರಕ್ಕಾಗಿ ಮಾಗಿ ಬಸ್ಯಾ ತಳ್ಳಿಕೋರನಾದ. ಕೆಲ ತಿಂಗಳು ಕಳೆದರೂ ನ್ಯಾಯ ಬಗೆಹರಿಯಲಿಲ್ಲ. ಬಸ್ಯಾನ ಸಾಹಸಪೂರ್ಣ ಚಟುವಟಿಕೆಗಳು ಮುಂದುವರಿದುವು.

ಅಂದು ಶೀಗೀ ಹುಣ್ಣಿಮೆ. ಕೆಲವು ರೈತರು ಚರಗ ಚೆಲ್ಲುವುದಕ್ಕೆಂದು ಹೆಂಡತಿ ಮಕ್ಕಳೊಡನೆ ಚಕ್ಕಡಿ ಕಟ್ಟಿಕೊಂಡು ಹೊರಟು ನಿಂತರು. ಆಗ ಎಲ್ಲೆಲ್ಲಿಯೂ ಹಚ್ಚ ಹಸುರಿನ ಎಲೆಯ ಪೈರು ಕಂಗೊಳಿಸುತ್ತಿತ್ತು. ರೈತರು ತಂತಮ್ಮ' ಹೊಲಗಳಿಗೆ ಹೋಗಿ ಫಸಲು ಸಮೃದ್ಧಿಯಾಗಿ ಬರಲೆಂದು ಚರಗವನ್ನು ಚೆಲ್ಲುತ್ತಾರೆ. ಆಮೇಲೆ ಎಲ್ಲರೂ ಸೇರಿ, ತಂತಮ್ಮ ಮನೆಗಳಿಂದ ತಂದಿದ್ದ ಗೋಧಿಹುಗ್ಗಿ, ಸಜ್ಜೆರೊಟ್ಟಿ, ಗುಗ್ಗರಿ, ಶೇಂಗಾದ ಹೋಳಿಗೆ - ಏನೆಲ್ಲ ತಿನ್ನಲು ಸಿದ್ಧರಾಗುವರು.

ಆ ದಿನ ಮಾಗಿ ಬಸ್ಯಾ ಅಲ್ಲಿಗೆ ಬಂದುಬಿಟ್ಟ. ಅವನು ಬಂದರೂ ಬರಬಹುದು ಎಂದು ಮುಂಚೆಯೇ ಯೋಚಿಸಿ, ಮನೆಗಳಲ್ಲಿಯ ಅದು, ಇದು ಆಯುಧಗಳನ್ನೇನೊ ಹಿಡಿದುಕೊಂಡು ಬಂದಿದ್ದರು. ಆದರೇನು, ಖಡ್ಗಧಾರಿಯಾದ ಅವನ ಉಗ್ರಮೂರ್ತಿಯನ್ನು ನೋಡಿದೊಡನೆ ಅವರೆಲ್ಲ ಪಲಾಯನ ಹೇಳಿದರು. ಹೆಂಡಿರು ಮಕ್ಕಳನ್ನು ಅಲ್ಲಿಯೇ ಬಿಟ್ಟು! ಬಸ್ಯಾ ಹೆಂಗಸರನ್ನುದ್ದೇಶಿಸಿ, "ನಿಮ್ಮೆಲ್ಲರ ಆಭರಣಗಳನ್ನು ಬಿಚ್ಚಿ ಕೊಡಿರಿ. ಹೂಂ! ಬೇಗ" ಎಂದನು. ಹಾಗೆ ಕಸಿದುಕೊಂಡದ್ದನ್ನು ವಸ್ತ್ರದಲ್ಲಿ ಕಟ್ಟಿ ಹೆಗಲಿಗೇರಿಸಿದ. ಅಡಿಗೆಯ ಪದಾರ್ಥಗಳು ಕಂಡವು. ಹೊಟ್ಟೆ ತುಂಬಾ ಉಂಡ, ಹೆಣ್ಣು ಮಕ್ಕಳೆಲ್ಲ ಊರ ಕಡೆಗೆ ಧಡಪಡಿಸುತ್ತ ಸಾಗಿದರು.

ಇತ್ತ ಬಸ್ಯಾ ಚಕ್ಕಡಿಯೊಂದನ್ನು ಹೊಡೆದುಕೊಂಡು ತಾನೂ ಊರನ್ನು ತಲುಪಿದ. ನಡುಬೀದಿಯಲ್ಲಿ ಊರವರೆಲ್ಲ ನೆರೆದಿದ್ದರು. ಅಷ್ಟು ಜನ ಅಲ್ಲಿ ಇದ್ದರೂ ಅವನನ್ನು ಯಾವ ರೀತಿಯಿಂದಲೂ ಎದುರಿಸಲಾಗದೇ ಸುಮ್ಮನುಳಿದರು. ಆಗ ಬಸ್ಯಾ ಹೊಲಕ್ಕೆ ಬಂದಿದ್ದ ಹೆಂಗಸರನ್ನು ಕರೆದು, ಅವರ ಮುಂದೆ ಆಭರಣಗಳನ್ನು ಸುರಿದು, "ನಿಮ್ಮ ನಿಮ್ಮದನ್ನು ಆಯ್ದುಕೊಳ್ಳಿರಿ" ಎಂದು ಹೇಳಿದವನೇ ಹೊರಟುಹೋದ!

ಮತ್ತೊಂದು ಪ್ರಸಂಗ. ಬಾವಿಯ ಕಟ್ಟೆಯ ಬಳಿ ಹೆಣ್ಣುಮಕ್ಕಳು ನೀರು ಸೇದುವುದಕ್ಕೆಂದು ಕಲೆತಿದ್ದರು. ಅವರಲ್ಲಿ ಒಬ್ಬಳು ಬಸ್ಯಾನನ್ನು ಮನಸಾರೆ ನಿಂದಿಸಿದಳು. ಅದಕ್ಕೆ ಉತ್ತರವಾಗಿ ಎಂಬಂತೆ ಇನ್ನೊಬ್ಬಳು "ಅವನದಾದರೂ ಏನು ತಪ್ಪು? ತುಂಬಾ ಅನ್ಯಾಯಕ್ಕೆ ಗುರಿಯಾಗಿದ್ದಾನಲ್ಲ" ಎಂದಳು. ಹತ್ತಿರದಲ್ಲಿಯೇ ಅಡಗಿಕೊಂಡಿದ್ದ ಬಸ್ಯಾ ಧುತ್ತೆಂದು ಅವರ ಮುಂದೆ ನಿಂತ. ತನ್ನನ್ನು ನಿಂದಿಸಿದ ಆ ಹೆಣ್ಣು ಮಗಳನ್ನು ಜಗ್ಗಿಕೊಂಡು

ಅವರ ಮನೆಗೆ ಬಂದನು. ಆ ಮನೆಯಲ್ಲಿ ಅತ್ತಿತ್ತ ನೋಡಿದಾಗ ಹೈನದ ಎಮ್ಮೆ ಕಂಡಿತು. ಕರುವಿನೊಂದಿಗೆ ಅದನ್ನು, ತನಗೆ ಸಹಾನುಭೂತಿ ತೋರಿದ್ದ ಆ ಇನ್ನೊಬ್ಬಳ ಮನೆಗೆ ತಂದನು. ಮತ್ತು ಅಲ್ಲಿ ನೆರೆದಿದ್ದವರಿಗೆ ಹೇಳಿದ "ಇನ್ನು ಮೇಲೆ ಈ ಎಮ್ಮೆ ಇವಳದು. ಯಾರಾದರೂ ಅದನ್ನು ಕಸಿದುಕೊಂಡರೆ, ಹುಶಾರ್!" ಆ ಎಮ್ಮೆ ಕೊನೆವರೆಗೆ ಅವಳಲ್ಲೇ ಉಳಿಯಿತಂತೆ.

ಅವನ ಉರವಣಿಗೆಯ ವಿಷಯವು ಮುಂಬಯಿ ಕರ್ನಾಟಕದಲ್ಲಿ ಪೇಶ್ವೆ ಅಧಿಕಾರಿ ಯಾಗಿದ್ದ ರಾಸ್ತೆ ಎಂಬವನ ತನಕ ಹೋಯಿತು. ಅವನನ್ನು ಹಿಡಿದು ತರಲು ಸಿಪಾಯಿಗಳು ಅಡವಿಗಳಲ್ಲಿ ಸುತ್ತಾಡತೊಡಗಿದರು. ಒಂದು ರಾತ್ರಿ ಕೆಲವು ಸಿಪಾಯಿಗಳು ಚುಟ್ಟಾ ಸೇದುತ್ತ ವಿಶ್ರಾಂತಿ ತಗೊಳ್ಳುತ್ತಿದ್ದಾಗ, ಒಬ್ಬ ಹೇಳಿದ :

"ಈಗ ಬಸ್ಯಾ ಬಂದುಬಿಟ್ಟರೆ?"

"ಬಂದರೆ ಏನಂತೆ? ಅವನನ್ನು ಹಗ್ಗದಿಂದ ಕಟ್ಟಿಹಾಕಿ ರಾಸ್ತೆಯವರಿಗೆ ಒಪ್ಪಿಸೋದು!"

ಹೀಗೆನ್ನುತ್ತಿರುವಾಗಲೇ ಬಸ್ಯಾ ಅವರ ಮುಂದೆ ಪ್ರತ್ಯಕ್ಷನಾಗಬೇಕೆ! ಆ ಕ್ಷಣವೇ ಆ ಸಿಪಾಯಿಗಳು ಅಲ್ಲಿಂದ ಕಾಲ್ಕಿತ್ತರು. ಮುಂದೆ ಕೆಲವೇ ದಿನಗಳಲ್ಲಿ ಇಂಥ ಸಿಪಾಯಿಗಳ ಸಂಖ್ಯೆ ಹೆಚ್ಚಾಗಿ, ಅವನನ್ನು ಚಳಗೇರಿ ಎಂಬಲ್ಲಿ ಸೆರೆಹಿಡಿಯಲಾಯಿತು. ಬಾಗಲಕೋಟೆಗೆ ಕರೆತಂದು ಅಲ್ಲಿಯ ಜೇಲಿನಲ್ಲಿ ಬಸ್ಯಾನನ್ನು ಇಡಲಾಯಿತು. ಅಲ್ಲಿಯ ಅಧಿಕಾರಿ ಅವನಿಗೆ ಯಾವ ರೀತಿಯ ಶಿಕ್ಷೆ ವಿಧಿಸಬೇಕೆಂದು ರಾಸ್ತೇನ ಹುಕುಮಿಗಾಗಿ ಕಾಯುತ್ತಿದ್ದಾಗ, ಬಸ್ಯಾ ಇನ್ನೊಬ್ಬ ಬಂದಿಯ ಸಹಾಯ ಪಡೆದು ಜೇಲಿನಿಂದ ಪಾರಾಗಿ ಹೋದ. ಹೇಗೆ? ಜೇಲಿನ ಎತ್ತರದ ಗೋಡೆಯಿಂದ ಹೊರಗಿನ ಕಂದಕಕ್ಕೆ ಹಾರಿ!

ಅವನ ಚಲನವಲನಗಳ ಮೇಲೆ ಬಲವಾಗಿ ಕಣ್ಣಿಟ್ಟಿದ್ದ ಸೈನಿಕರು ಅವನ್ನು ಮತ್ತೆ ಸೆರೆಹಿಡಿದರು. ಗುಂಡಿಕ್ಕಿ ಕೊಲ್ಲಬೇಕೆಂದು ರಾಸ್ತೆ ಯೋಚಿಸುತ್ತಿದ್ದಾಗ ಅವನ ಪತ್ನೀಮಣಿ ಅಂಥ ಶೂರ, ಧೀರನನ್ನು ಕೊಲ್ಲುವುದೇಕೆ?' ಎಂದು ಕಾಂತಾಸಮ್ಮಿತತಯಾ ಉಪದೇಶಿಸಿದಳು. ಹೀಗಾಗಿ ಬಸ್ಯಾ ಬದುಕಿ ಉಳಿದ. ಈ ಕ್ಷಮಾಪಣೆಯ ಜೊತೆಗೆ ಅವನಿಂದ, ಇನ್ನು ಮುಂದೆ ಯಾವುದೇ ದುಷ್ಕೃತ್ಯ ಕೈಕೊಳ್ಳುವುದಿಲ್ಲವೆಂಬ ವಚನವನ್ನು ಪಡೆದರು. ಇತ್ತ ಅವನಿಗೆ ಮನೆತನದ ಆಸ್ತಿಯಲ್ಲಿ ಪಾಲು ಸಿಕ್ಕಿತೆಂದು ಬೇರೆ ಹೇಳಬೇಕಿಲ್ಲ. ಆ ಮುಂದೆ ಅವನು ತನ್ನ ಊರಾದ ಮಾಗಿಯಲ್ಲಿ ನೆಮ್ಮದಿಯಿಂದ ಕೆಲವು ವರ್ಷ ಬಾಳಿ ೧೮೨೦ರ ಸುಮಾರಿಗೆ ತೀರಿಕೊಂಡ.

ಬ್ರಿಟಿಶರು ಮುಂಬಯಿ ಕರ್ನಾಟಕವನ್ನು ವಶಪಡಿಸಿಕೊಂಡ ಕೆಲವೇ ವರ್ಷಗಳಲ್ಲಿ ತಳ್ಳಿಕೋರತನವನ್ನು ಸಂಪೂರ್ಣವಾಗಿ ಉಚ್ಚಾಟನೆ ಮಾಡಿದರು. ನಮಗೆ ತಿಳಿದು ಬಂದ ತಳ್ಳಿಕೋರರಲ್ಲಿ ಮಾಗಿ ಬಸ್ಯಾನೇ ಕೊನೆಯವನೆಂದು ಕಾಣುತ್ತದೆ.

■

೬. ಕಿತ್ತೂರಿನ ಇತಿಹಾಸ – ಬೆಳಕಿಗೆ ಬಂದಿರದ ಕೆಲ ಅಂಶಗಳು

ಟೀಪು ಸುಲ್ತಾನನು ಈ ಭಾಗದಲ್ಲಿ ಗೆದ್ದಿದ್ದ ಪ್ರದೇಶಗಳನ್ನು ಮರಾಠರು ಮತ್ತು ಬ್ರಿಟಿಶರು ಹಂಚಿಕೊಂಡರಷ್ಟೆ. ಕಿತ್ತೂರು ಮರಾಠರ ಪಾಲಿಗೆ ಬಂದಿದ್ದಿತು. ೧೯ನೆಯ ಶತಮಾನದ ಆರಂಭದಲ್ಲಿ ಮಲ್ಲಸರ್ಜ ದೊರೆ ಆಳುತ್ತಿದ್ದ ಕಾಲದಿಂದ ಬ್ರಿಟಿಶರಿಗೆ ಅದರ ಮೇಲೆ ಕಣ್ಣಿದ್ದಿತು. ಉಳಿದ ಮರಾಠಾ ಸಂಸ್ಥಾನಗಳಿಗಿಂತ ಅದು ಸಂಪನ್ಮೂಲ ಹಾಗೂ ಉತ್ಪನ್ನದ ದೃಷ್ಟಿಯಿಂದ ಸಮೃದ್ಧವಾದದ್ದೆಂದು ಅವರಿಗೆ ಅನಿಸಿತು.

ಆಗಿನ ದಿನಗಳಲ್ಲಿ ಬ್ರಿಟಿಶರು ಪ್ರಸಂಗ ಬಂದಾಗ ಪೇಶ್ವೆಗೆ ಸಹಾಯ ಮಾಡಬೇಕೆಂದಿತ್ತು. ವೆಲ್ಲೆಸ್ಲಿಯು ಧೋಂಡೋ ವಾಘನನ್ನು ಬೆನ್ನಟ್ಟಿದ್ದುದು ಆ ಹಿನ್ನೆಲೆಯಲ್ಲಿ. ಇಂಥ ಸಣ್ಣ ದೊಡ್ಡ ದಂಗೆಗಳನ್ನು ಅಡಗಿಸಲು ವೆಲ್ಲೆಸ್ಲಿಯು ಕಿತ್ತೂರಿನ ದೊರೆಯ ಸಹಾಯ ಕೇಳಿದ್ದನು. (೧೮೦೩). ಹಾಗೆ ಸಹಾಯ ಅವನಿಂದ ದೊರಕಬೇಕಾದಷ್ಟು ದೊರೆಯಲಿಲ್ಲವಂತೆ. ಆಗಿನಿಂದ ಬ್ರಿಟಿಶರ ವಕ್ರದೃಷ್ಟಿ ಕಿತ್ತೂರಿನ ಮೇಲೆ. ಹಾಗೆಂದು ತಾವಾಗಿ ಮುಂದುವರಿಯಲಿಲ್ಲ. ಅದರ ಒಂದು ಕಾರಣ ಮುಂಬಯಿ ಕರ್ನಾಟಕದ ಬಹು ದೊಡ್ಡ ಸಮಾಜವೆನಿಸಿದ ಲಿಂಗಾಯತರ ಏಕಮೇವ ರಾಜ್ಯ ಅದಾಗಿದ್ದಿತು.

ಇತ್ತ ಕಿತ್ತೂರವರಿಗೆ ಮರಾಠರ ಸಂಪರ್ಕ ಸಾಕಾಗಿಹೋಗಿತ್ತು. ಪ್ರತಿ ವರ್ಷ ಅವರಿಗೆ ೧ ಲಕ್ಷ ೭೫ ಸಾವಿರ ಪಗೋಡಾದ ಕಪ್ಪವನ್ನು ಕೊಡಬೇಕಿದ್ದಿತು. ಕೊಡುವುದು ತಡವಾಯಿತೆಂದೊ, ಕಡಿಮೆ ಕೊಟ್ಟರೆಂದೊ ಮರಾಠರು ಮೇಲಿಂದ ಮೇಲೆ ಕಿರುಕುಳ ಕೊಡುತ್ತಿದ್ದರು. ಒಮ್ಮೆಯಂತೂ ಹಿಂದಿನ ಕಿತ್ತೂರ ದೊರೆಯನ್ನು ಪುಣೆಯಲ್ಲಿ ಗೃಹಬಂಧನದಲ್ಲಿರಿಸಿದ್ದರು. ಬೇನೆ ಬಂದಿತ್ತೆಂಬ ಕಾರಣದಿಂದ ಮರಳಿ ಕಿತ್ತೂರಿಗೆ ಕಳಿಸಿದರಲ್ಲವೆ. ಹೀಗಿರುತ್ತ ಬ್ರಿಟಿಶರು ಏನಾದರೂ ಮಾಡಿ ಕಿತ್ತೂರನ್ನು ತಮ್ಮ ಆಶ್ರಯದಲ್ಲಿ ತೆಗೆದುಕೊಳ್ಳಬೇಕೆಂಬ ಆಶಯದಿಂದ ಕಿತ್ತೂರ ದೊರೆ ಓರ್ವ ಬ್ರಿಟಿಶ ಸೇನಾನಿಗೆ ೧೦ ಸಾವಿರ ಪಗೋಡಾ ಹಣವನ್ನು ಗುಟ್ಟಾಗಿ ಕೊಟ್ಟಿದ್ದನಂತೆ! (ಹಾಗೆಂದು ಇ. ಡಬ್ಲ್ಯೂ. ವೆಸ್ಟ್ ತನ್ನ Memoir of the S.M.C., ಗ್ರಂಥದ ಅಡಿಟಿಪ್ಪಣಿಯಲ್ಲಿ ಕಾಣಿಸಿದ್ದಾನೆ.)

ಮುಂದೆ ೧೮೧೮ರಿಂದ ಹೇಗೂ ಮರಾಠರ ಒಡೆತನ ತಪ್ಪಿ ಮುಂಬಯಿ ಕರ್ನಾಟಕವು ಅದರಲ್ಲಿಯ ಸಂಸ್ಥಾನ - ದೇಸಗತಿಗಳ ಸಹಿತವಾಗಿ ಬ್ರಿಟಿಶರ ಒಡೆತನಕ್ಕೆ ಸಂದಿತಷ್ಟೆ. ಕ್ರಿ.ಶ. ೧೮೨೨ರಲ್ಲಿ ಕಿತ್ತೂರವರು ಬ್ರಿಟಿಶರಿಗೆ ವಿಶೇಷವಾಗಿ ಬೇಕಾಗಿದ್ದ ತೇರದಾಳದ ಮೇಲೆ ಅದೇಕೊ ದಾಳಿ ಮಾಡಿದರಂತೆ. ಆ ಬೇಸರವೂ ಬ್ರಿಟಿಶ್ ಅಧಿಕಾರಿಗಳಲ್ಲಿ ಮನೆ ಮಾಡಿದ್ದಿತು. ಕಿತ್ತೂರಿನ ಕಡೆಯ ಅರಸು ಶಿವಲಿಂಗರುದ್ರನು ಸಾಯುವಾಗ ಮಾಸ್ತಮರಡಿಯ ಹುಡುಗನನ್ನು ದತ್ತು ತೆಗೆದುಕೊಂಡನಷ್ಟೆ. ಯಾರೇ ಆಗಲಿ ದತ್ತಕ ತೆಗೆದುಕೊಳ್ಳುವಾಗ ತಮ್ಮ ಪೂರ್ವಾನುಮತಿ ಪಡೆದಿರಬೇಕೆಂಬ ಆಜ್ಞೆಯನ್ನು ಕಲೆಕ್ಟರ್ ಥ್ಯಾಕರೆ ಹೊರಡಿಸಿ, ಮೇಲಧಿಕಾರಿಗಳ ಸಮ್ಮತಿಗೆ ಕಳಿಸಿಕೊಟ್ಟಿದ್ದ. ಆ ಸಮ್ಮತಿ ಇನ್ನೂ ಕೈ ಸೇರಿರಲಿಲ್ಲ. ಏನಿದ್ದರೂ ತನ್ನ ಅನುಮತಿ ಪಡೆಯಲಿಲ್ಲ; ಇಷ್ಟು ಮಾತ್ರವಲ್ಲ ಪ್ರಾಣ ಹೋದ ಮೇಲೆ ಖೊಟ್ಟಿ ಸಹಿ ಮಾಡಿಸಿ ದತ್ತಕ ಮಾಡಿದ್ದಾರೆ ಎಂಬ ಸಿಟ್ಟೊ ಥ್ಯಾಕರೇನಲ್ಲಿ ಮನೆ ಮಾಡಿದ್ದಿತು.

ಯಾವುದೊಂದು ಯುದ್ಧ ಪರಿಸ್ಥಿತಿ - ನಿರ್ಮಾಣವಾಗುವುದಕ್ಕೆ ಹಲವಾರು ಒಳಗುದಿ ಗಳಿರುತ್ತವೆಂಬುದನ್ನು ಇದು ನಿದರ್ಶಿಸುವಂತಿದೆ. ಇದರ ಅಂತಿಮ 'ಘರ್ಷಣೆ' ಎಂದರೆ ಚೆನ್ನಮ್ಮ ತನ್ನ ಆಭರಣಾದಿಗಳನ್ನು ತೆಗೆದುಕೊಂಡು ಹೊರ ಹೋಗಬೇಕೆಂದು ನಿರ್ಧರಿಸಿದುದು. ಧಾರವಾಡ -ಕಿತ್ತೂರುಗಳ ನಡುವೆ ಹೊಕ್ಕು ಬಳಕೆ ಬಹುವಾಗಿ ಇದ್ದಿತಾದ್ದರಿಂದ ಕ್ಷಣಾರ್ಧದಲ್ಲಿ ಥ್ಯಾಕರೆಗೆ ಈ ವಿಷಯವು ತಿಳಿಯಿತು. ಟ್ರೆಜರಿಯ ಹಣವನ್ನೆಲ್ಲ ಸಾಗಿಸುವ ವಿಚಾರದಲ್ಲಿದ್ದಾಳೆಂದೇ ಪೂರ್ವಾಗ್ರಹದಿಂದ ತಿಳಿದು, 'ಇಬ್ಬರು ಆಡಳಿತಗಾರರನ್ನು ನೇಮಿಸಿದ್ದುದು; ಅವರು ಲೆಕ್ಕ ಕೊಡಬೇಕು ಎಂದು ವಿಧಿಸಿದ್ದುದು' ಈಗಾಗಲೇ ತಿಳಿದುಬಂದ ವಿಷಯ.

ಇಷ್ಟೇ ಅಲ್ಲ. ಆಡಳಿತ ಪ್ರಮುಖರು ಟ್ರೆಜರಿಯ ಸುರಕ್ಷಿತತೆಯ ಬಗ್ಗೆ ಲೇಖೀ ಬರೆದುಕೊಡಬೇಕು ಎಂದು ಹಟ ಹಿಡಿದ. ಅವರೋ 'ರಾಣಿ ಚೆನ್ನಮ್ಮನ ಅನುಮತಿ ಇಲ್ಲದೆ ಹಾಗೆ ಮಾಡಲಾರೆವು" ಎಂದು ಸ್ಪಷ್ಟವಾಗಿ ಹೇಳಿದರಂತೆ. ಆಗ ಥ್ಯಾಕರೆ "ಚೆನ್ನಮ್ಮ ಮತ್ತು ಸೊಸೆ ವೀರಮ್ಮ ತನಗೆ ಬಂದು ಭೆಟ್ಟಿಯಾಗಬೇಕು" ಎಂದು ಆಜ್ಞಾಪಿಸಿದ. ಚೆನ್ನಮ್ಮ ಹೋದಳೆ? ಸರ್ವಥಾ ಇಲ್ಲ. ಬದಲಾಗಿ ಹೋದುದು ಅವಳ ನಂಬಿಗಸ್ಥ ಸರದಾರ ಗುರುಸಿದ್ಧಪ್ಪ. ಆತ ಥ್ಯಾಕರೇನ ಡೇರೆಗೆ ಹೋದಾಗ, ಅವನಿಗೆ ಕುಳಿತುಕೊಳ್ಳಲು ಆಸನವನ್ನೂ ಕೊಡಲಿಲ್ಲವಂತೆ. ಈ ಚಿಕ್ಕ ಅಂಶವೂ ಕಿತ್ತೂರವರ ಅಭಿಮಾನ ಕೆರಳಿಸಲಿಕ್ಕೆ ಕಾರಣ. ದಿ. ೨೪ ರಂದು ಯುದ್ಧ ಸುರುವಾಗುವ ಮುಂಚೆ ಎಂದರೆ ೧೦-೧೨- ದಿನಗಳಲ್ಲಿ ಚೆನ್ನಮ್ಮ ಮುಂಬಯಿ ಅಧಿಕಾರಿಗಳಿಗೆ ಪತ್ರ ಬರೆದಿದ್ದು ಅವುಗಳ ಆಂಗ್ಲ ಭಾಷಾಂತರ ಪ್ರತಿಗಳು ಮಹಾರಾಷ್ಟ್ರ ಆರ್ಕೈವ್ಸ್‌ನಲ್ಲಿ ಲಭ್ಯವಿವೆ. ಆಕೆ ಕೊಲ್ಹಾಪುರದ ಸಂಸ್ಥಾನಿಕನಿಗೂ ಬರೆದದ್ದರ ದಾಖಲೆ ಇದೆ. ಅವಳದು ಒಂದೇ ಮನವಿ; ದತ್ತಕವನ್ನು ಮಾನ್ಯ ಮಾಡಬೇಕು ಎಂಬುದು. ಇತ್ತ ಥ್ಯಾಕರೇ ತನ್ನ ನಿರ್ಬಂಧಗಳನ್ನು ಒಂದರ ಮೇಲೊಂದು ಹೇರತೊಡಗಿದ. ಚೆನ್ನಮ್ಮ ಮಾತ್ರವಲ್ಲ, ಯಾರೂ ತನ್ನ ಪರವಾನಿಗೆ ಇಲ್ಲದೆ ಕೋಟೆ ಬಿಟ್ಟು ಹೋಗತಕ್ಕದ್ದಲ್ಲ!

ಆದರೆ ಕೋಟೆಯ ಒಳಗೆ ಬರಲಿಕ್ಕೆ ನಿರ್ಬಂಧವಿದ್ದಿಲ್ಲ! ಪರಿಣಾಮವಾಗಿ ದಿ. ೧೫ ರಿಂದ ದಿ. ೨೪ರ ಹೊತ್ತಿಗೆ ಐದು ಸಾವಿರ ಜನ ಹೆಚ್ಚಾಗಿ ಯುದ್ಧಾಸಕ್ತರು ಜಮಾಯಿಸಿದ್ದರು. ಥ್ಯಾಕರೆಗೆ ಪ್ರತಿಕೂಲವಾದ ಒಂದು ಸನ್ನಿವೇಶವೆಂದರೆ ಕೋಟೆಯ ಮೂರು ಭಾಗಗಳಲ್ಲಿ ಒಳಗಿನದರಲ್ಲಿ ಬ್ರಿಟಿಶ್‌ಪರ ಸೈನ್ಯವಿದ್ದಿತು. (ಚಿಕ್ಕ ಪಡೆ) ಇನ್ನೆರಡರಲ್ಲಿ ಕಿತ್ತೂರಿನ ಸೈನಿಕರು, ಮತ್ತು ಅರೆ ಸೈನಿಕರು. ಆಶ್ಚರ್ಯವೆಂದರೆ ಅಷ್ಟು ಜನ ನೆರೆದಿದ್ದರೂ ಥ್ಯಾಕರೇಗೆ ಅತಿಯಾದ ಆತ್ಮವಿಶ್ವಾಸ; "All quiet here" ಎಂದೇ ಮೇಲಿನವರಿಗೆ ಸಂದೇಶ ಕಳಿಸಿದ್ದ.

ಕಿತ್ತೂರಿನ ಈ ಜನರ ಬಗ್ಗೆ ವರದಿ ಮಾಡುತ್ತ ಓರ್ವ ಬ್ರಿಟಿಶ್ ಇತಿಹಾಸಕಾರ ಹೀಗೆ ಹೇಳಿದ್ದಾನೆ (ಲೆಗ್ರ್ಯಾಂಡ್ ಜೇಕಬ್):

"They belonged to a race not generally given to wanton bloodshed, however unsparing they might be in actual warfare.

ಎಂದರೆ ಈ ಹಿಂದೆ ಪ್ರಾಚೀನ ಶಾಸನವೊಂದರಲ್ಲಿ ಬಂದ "ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯನ್ ಬಾಧಿಪ್ಪ ಕಲಿಗೆ ವಿಪರೀತನ್" ಎಂಬುದಕ್ಕೆ ಈ ಹೇಳಿಕೆ ಎಷ್ಟೊಂದು ಅನುಗುಣವಾಗಿದೆ! (ಇಂಥದೇ ಅಭಿಪ್ರಾಯವನ್ನು ಹ್ಯುಯೆನ್ ತ್ಸಾಂಗ್ ಕನ್ನಡ ಜನತೆಯ ಬಗ್ಗೆ ಹೇಳಿದ್ದಾನೆ).

ಯುದ್ಧ ಮುಗಿದ ಮೇಲೆ ತಿಳಿದು ಬಂದದ್ದು ಎಂದರೆ ಥ್ಯಾಕರೇನ ಜೊತೆಗೇ ಇನ್ನಿಬ್ಬರು ಬ್ರಿಟಿಶರು ತೀರಿಹೋದದ್ದು. ಅವರಲ್ಲಿ ಮನ್ರೋ ಎಂಬವನ ಹೆಸರು ಬರುತ್ತದೆ. ನಿಜಕ್ಕೂ ಅವನು ಯುದ್ಧಕ್ಕೆಂದು ಬಂದವನಲ್ಲ. ಸೊಲ್ಲಾಪುರದ ಕಲೆಕ್ಟರೇಟ್‌ನಲ್ಲಿ ಅಸಿಸ್ಟೆಂಟ್ ಆಗಿದ್ದವ, ಥ್ಯಾಕರೇನನ್ನು ಕಾಣಲೆಂದು ಧಾರವಾಡ-ಕಿತ್ತೂರುಗಳಿಗೆ ಬಂದವ. ಮೇಲೆ ಹೇಳಿದಂತೆ ಒಳಗೆ ಸಿಕ್ಕಿಕೊಂಡಿದ್ದ ಬ್ರಿಟಿಶ್ ಸೈನಿಕರೆಲ್ಲ ಥ್ಯಾಕರೇನ ಮರಣದ ಅನಂತರ ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟು ಶರಣು ಬಂದರಷ್ಟೆ. ಅವರೆಲ್ಲರನ್ನು ಕುರಿತು "ನೀವು ನಿಮ್ಮ ಕ್ಯಾಂಪಿಗೆ ಸುರಕ್ಷಿತವಾಗಿ ಹೋಗಬಹುದು" ಎಂದು ಹೇಳಲಾಯಿತಂತೆ. ಅಲ್ಲದೆ ಅವರಿಗೆ ಕಿರುಕಾಣಿಕೆಯ ತರಹ ಕೊಟ್ಟರಂತೆ. ("With small presents" ಎಂದು ಒಂದು ದಾಖಲೆಯಲ್ಲಿದೆ.) ಆದರೆ ಅವರು ತಮ್ಮ ಕ್ಯಾಂಪ್ ಮುಟ್ಟುವ ಮುಂಚೆಯೇ ರೊಚ್ಚಿಗೆದ್ದ ಜನ ಅದೆಲ್ಲವನ್ನೂ ಧ್ವಂಸಗೊಳಿಸಿದರಂತೆ.

ಬ್ರಿಟಿಶ್ ಸೈನ್ಯದಲ್ಲಿ ಇನ್ನು ಹಲವರು ಮರಣ ಹೊಂದಿದ್ದರಾದರೂ, ಕಿತ್ತೂರಿನಲ್ಲಿ ಆಶ್ರಯ ಪಡೆದವರೆಂದರೆ ಎಲಿಯೆಟ್ ಮತ್ತು ಸ್ಟೀವನ್‌ಸನ್. ಇವರಿಬ್ಬರನ್ನೇ ಪಾರು ಮಾಡಿ ಸುರಕ್ಷಿತ ಸ್ಥಳದಲ್ಲಿ ಇರಿಸಿದ್ದೇಕೊ? ನನಗೆ ಅನಿಸಿದುದೇನೆಂದರೆ, ಎಲಿಯಟ್ ಈ ಮೊದಲು ಕಿತ್ತೂರಿಗೆ ಹಲವು ಬಾರಿ ಹೋಗಿ ಬಂದು ಪರಿಚಿತನಾದವನಿದ್ದ. ರಾಜಕೀಯ ಕೆಲಸಕ್ಕಾಗಿ ಅಲ್ಲ; ಬೇಟೆಗಾರನಾಗಿ. ಆಗೆಲ್ಲ ಧಾರವಾಡ - ಕಿತ್ತೂರಿನ ನಡುವಿನ ಪ್ರದೇಶವು ದಟ್ಟವಾದ ಕಾಡಿನಿಂದ ಕೂಡಿದ್ದಾಗಿತ್ತು. ಹುಲಿ, ನರಿ, ಚಿಗರೆಗಳು ದೊಡ್ಡ ಸಂಖ್ಯೆಯಲ್ಲಿ ಓಡಾಡುತ್ತಿದ್ದ ಪ್ರದೇಶವಾಗಿತ್ತು.

ಇವರಿಬ್ಬರೂ ಉಂಡು, ತಿಂದು ಸುಖವಾಗೇ ಇದ್ದರು. ರಾಮರಾಯನೆಂಬವ ಇವರುಗಳಿಗೆ ಬೇಕಾದ ಬಟ್ಟೆ, ಪುಸ್ತಕಾದಿಗಳನ್ನು ಹೇಳಿದಾಗೊಮ್ಮೆ ಧಾರವಾಡಕ್ಕೆ ಹೋಗಿ ತಂದುಕೊಡುತ್ತಿದ್ದ. (ಅವರು ಅನಂತರ ಸಾದರಪಡಿಸಿದ ವರದಿಗಳಲ್ಲಿ ಕಿತ್ತೂರವರು ತಮ್ಮನ್ನು ಚೆನ್ನಾಗಿ ನೋಡಿಕೊಂಡರಲ್ಲದೆ, ಊರಲ್ಲಿಯೇ ಎಲ್ಲಿ ಬೇಕೆಂದರಲ್ಲಿ ಹೋಗುವ ಸ್ವಾತಂತ್ರ್ಯವೂ ತಮಗೆ ಇತ್ತೆಂದು ತಿಳಿಸಿದ್ದಾರೆ.) ಆದರೆ ಬೆಳಗಾಂವಿ, ಮುಂಬಯಿಗಳಲ್ಲಿದ್ದ ಮೇಲಧಿಕಾರಿಗಳಿಗೆ ಆ ಇಬ್ಬರ ಸುರಕ್ಷಿತತೆಯ ಬಗ್ಗೆ ಅತೀವ ಕಾಳಜಿ. ಚೆನ್ನಮ್ಮನಿಗೆ ಮೇಲಿಂದ ಮೇಲೆ ಪತ್ರ ಬರೆದು, "ಅವರಿಬ್ಬರನ್ನು ಮೊದಲು ಬಿಡುಗಡೆ ಮಾಡಲೇಬೇಕು. ಅಂದಾಗಲೇ ಮುಂದಿನ ವಿಚಾರ" ಎಂದು ಒತ್ತಾಯ ಹಾಕಿದರು. ಹಾಗೆ ಮಾಡಿದರೆ ಒಟ್ಟಿನಲ್ಲಿ ಒಳ್ಳೆಯದಾದೀತೆಂದು ಎಣಿಸಿಯೇ ಅವರಿಬ್ಬರನ್ನೂ ಬಿಡುಗಡೆ ಮಾಡಲಾಯಿತು (೨ ಡಿಸೆಂಬರ್, ೧೮೨೪).

ಹಾಗಿದ್ದರೂ ಕಮಿಷನರ್ ಮಾಲ್ಕಮ್ ದಂಡೆತ್ತಿಕೊಂಡು ಬಂದು ಕಿತ್ತೂರನ್ನು ದೊಡ್ಡ ಸೇನೆಯ ಸಹಿತವಾಗಿ ಮುತ್ತಿದನಷ್ಟೆ. ಕಿತ್ತೂರ ಕೋಟೆ ವಶವಾಯಿತು. ಯುದ್ಧ ಮುಗಿದು ಕಿತ್ತೂರವರಿಗೆ ಅಪಾರ ನಷ್ಟವಾಗಿದ್ದರೂ ಟ್ರೆಜರಿಯಲ್ಲಿ ೧೬ ಲಕ್ಷ ರೂ. ನಗದು, ೪ ಲಕ್ಷ ರೂ. ಜವಾಹಿರಿ ಇವಲ್ಲದೆ, ೬೦ ತೋಪುಗಳೂ ಅವೆಷ್ಟೋ ಕುದುರೆ, ಒಂಟೆ, ಆನೆಗಳು ಸಹ ಬ್ರಿಟಿಶರ ವಶವಾದುವು.

ಕಿತ್ತೂರಿನ ಕಾಳಗದ ವೃತ್ತಾಂತ ಅಲ್ಲಿಗೇ ಮುಗಿಯಲಿಲ್ಲ. ಐದು ವರ್ಷಗಳ ಅನಂತರ ಸಂಗೊಳ್ಳಿ ರಾಯಣ್ಣ ಸಿಡಿದೆದ್ದನಷ್ಟೆ. ಕಿತ್ತೂರ ಸಂಸ್ಥಾನದ ಸಮಗ್ರ ಜನತೆ ಅವನ ಹಿಂದಿದ್ದಿತೆಂಬುದನ್ನು ಮರೆಯಲಾಗದು. (ಸಂಗೊಳ್ಳಿ ರಾಯಣ್ಣನನ್ನು ಕುರಿತ ಲೇಖದಲ್ಲಿ ಆ ವಿವರಗಳಿವೆ.)

ಮುಂದೆಯೂ ಸ್ವಾತಂತ್ರ್ಯದ ಹಂಬಲ ಕಿತ್ತೂರ ಪರಿಸರದ ಮತ್ತು ಬೆಳಗಾವಿಯ ದಕ್ಷಿಣ ಭಾಗದ ಜನತೆಯಲ್ಲಿ ಓತಪ್ರೋತವಾಗಿ ಇದ್ದಿತು. ಜೊತೆಗೆ ಕಿತ್ತೂರ ಸಂಸ್ಥಾನವು ನಿಶ್ಶೇಷವಾದದ್ದರ ಬಗ್ಗೆ ಅವರಲ್ಲಿ ನಿತಾಂತವಾದ ಅಸಮಾಧಾನದ ಹೊಗೆಯನ್ನು ಹೊಮ್ಮಿಸಿತ್ತು.

●


೭. ಬ್ರಿಟಿಶ್ ದಾಖಲೆಗಳು ರೂಪಿಸಿದ ಸಂಗೊಳ್ಳಿ ರಾಯಣ್ಣ

ರಾಯಣ್ಣನ ಚರಿತ್ರೆಯ ಬಗ್ಗೆ ಇರುವ ಮುಖ್ಯ ಆಕರಗಳೆಂದರೆ ಜಾನಪದ ಹಾಡುಗಳು ಮತ್ತು ಆ ಕಾಲದ ಬ್ರಿಟಿಷ್ ದಾಖಲೆಗಳು. ಈ ದಾಖಲೆಗಳು ಹೆಚ್ಚಾಗಿ ಮುಂಬಯಿಯಲ್ಲಿರುವ 'ಮಹಾರಾಷ್ಟ್ರ ಆರ್ಕೈವ್ಸ್'ನಲ್ಲಿ ಇವೆ. ಮುಂಬಯಿಯ ಸಂಗ್ರಹಾಲಯದಲ್ಲಿ ರಾಯಣ್ಣನ ಬಗ್ಗೆ ಅದೆಷ್ಟೋ ಹೆಚ್ಚಿನ ದಾಖಲೆಗಳಿದ್ದು ಅವುಗಳ ಆಧಾರದಿಂದ ರಾಯಣ್ಣನ ಹೋರಾಟದ ಸಾದ್ಯಂತ ಚರಿತ್ರೆಯನ್ನು ಇಲ್ಲಿ ಕೊಡುವ ಪ್ರಯತ್ನ ಮಾಡಲಾಗಿದೆ.

'ರಾಯಣ್ಣನ ವೃತ್ತಾಂತವು ಮೊತ್ತಮೊದಲಿಗೆ ಎಚ್. ಜೆ. ಸ್ಟೋಕ್ಸ್ ಎಂಬ ಆಂಗ್ಲ ಅಧಿಕಾರಿಯು ಬರೆದ A Historical Account of the Belgaum District' (೧೮೭೦) ಗ್ರಂಥದಲ್ಲಿ ಬಂದಿದೆ. ಅದು ನಾಲ್ಕೇ ಪುಟಗಳದ್ದಾದರೂ ಅಧಿಕೃತವಾದದ್ದು. ಹೇಗೆಂದರೆ, ಯಾರೊಡನೆ ರಾಯಣ್ಣನು ಸೆಣಸಿದನೋ ಆ ಕೃಷ್ಣರಾಯ (ಸಂಪಗಾವಿಯ ಮಾಮಲೇದಾರ)ನ ಮಗನು ಸ್ಟೋಕ್ಸ್‌ನಿಗೆ ಮಾಹಿತಿ - ಒದಗಿಸಿದ್ದಾನೆ. (ಸರಕಾರೀ ದಾಖಲೆಗಳಂತೂ ಸರಿಯೇ). ಏನಿದ್ದರೂ ಅದು ಸರಕಾರ ಪರವಾದ ಧೋರಣೆಯಿಂದ ಬರೆದದ್ದು. ಸ್ಟೋಕ್ಸ್ ರಾಯಣ್ಣನನ್ನು 'ಲೂಟಿಗಾರ' ಎಂದು ಸಂಬೋಧಿಸಿದರೂ ತುಸು ಸಹಾನುಭೂತಿಯಿಂದಲೇ ವಿವರಗಳನ್ನು ಕೊಟ್ಟಿರುವನೆಂಬುದು ಸೂಕ್ಷ್ಮವಾಗಿ ಅವಲೋಕಿಸಿದಾಗ ಮನದಟ್ಟಾಗುವುದು.

ಮೊದಲಲ್ಲಿ (ಎದ್ದು ಕಾಣುವ) ಸಂಗತಿ ಎಂದರೆ, ಬ್ರಿಟಿಶ್ ಸರಕಾರದವರು ರಾಯಣ್ಣನ ಹೋರಾಟವನ್ನು ಕಿತ್ತೂರ ವಿಪ್ಲವದ್ದೇ ಒಂದು ಅಂಗವೆಂದು ಬಗೆದಿದ್ದರು. ಅವರ ದೃಷ್ಟಿಯಲ್ಲಿ, ಕಿತ್ತೂರ ದಂಗೆಯು ೧೮೨೪ರಿಂದ ೧೮೩೧ರವರೆಗೂ ರಾಯಣ್ಣ ಹಾಗೂ ಇತರ ಹೋರಾಟಗಾರರ ಸಾವಿನ ಶಿಕ್ಷೆಯವರೆಗೂ ನಡೆಯಿತು.

ಈಗಾಗಲೇ ತಿಳಿದಿರುವಂತೆ ಕಿತ್ತೂರಿನ ಅಂತಿಮ ಯುದ್ಧದಲ್ಲಿ (೩ ಡಿಸೆಂಬರ್ ೧೮೨೪) ರಾಯಣ್ಣನು ಭಾಗವಹಿಸಿದ್ದ. ಸೆರೆಸಿಕ್ಕ ನೂರಾರು ಜನರಲ್ಲಿ ಅವನೂ ಒಬ್ಬ.


ಬೆಳಗಾಂವಿ ಜಿಲ್ಹೆಯಲ್ಲಿ ಸಂಗೊಳ್ಳಿ ರಾಯಣ್ಣ ಯುದ್ಧ ಮಾಡಿದ ಸ್ಥಳಗಳು
(೧೮-೧೯ ನೇ ಶತಮಾನ)
ಗೋಕಾಕ
ಉದಯಗಟ್ಟಿ
ಕೌಲಗುಡ್ಡ
ದೇಶನೂರ (೮)
ಬೆಳಗಾಂವಿ
ಸುತಗಟ್ಟಿ
ಜಕ್ಕನಾಯ್ಕನ ಹಳ್ಳಿ (೬)
ಬೈಲಹೊಂಗಲ
ಸಂಪಗಾವಿ (೭)
ಅಂಕಲಗಿ (೫)
ಸಂಗೊಳ್ಳಿ (೯)
ಮು.ಖಾ. ಹುಬ್ಬಳ್ಳಿ
ಪಾರಿಶವಾಡ (೪)
ಖಾನಾಪುರ (೩)
ಕಿತ್ತೂರ (೧೨)
ಸಂದಗಡ (೨)
ಬೀಡಿ (೧)
ಬಾಳಗುಂದ (೧೦)
ಗುಂಡೊಳ್ಳಿ (೧೧)

ಕ್ಷಮಾಪಣೆಯನ್ನು ಕೋರಿ ಯಾರು ತಮ್ಮ ಊರಿಗೆ ಉದ್ಯೋಗಕ್ಕೆ ಹಿಂದಿರುಗಬಯಸುವರೋ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವುದಾಗಿ ಸಾರಲಾಗಿತ್ತು. ಹಾಗೆ ಮಾಫಿ ಬೇಡಿದ್ದವರಲ್ಲಿ ರಾಯಣ್ಣನೂ ಒಬ್ಬನಾಗಿದ್ದ. ಅಂಥ ಐವರನ್ನು ಬಿಡುಗಡೆ ಮಾಡಬೇಕೆಂದು ಹೊರಡಿಸಿ, ಕಮೀಶನರ್ ಚಾಪ್ಲಿನ್ ಸಹಿ ಮಾಡಿದ ದಿನಾಂಕ ೨೩-೧-೧೮೨೫ರ ಹುಕುಮಿನ ಕಾಗದ ಮುಂಬಯಿಯ ಸಂಗ್ರಹದಲ್ಲಿದೆ. ಆ ಯಾದಿಯಲ್ಲಿ ನಾಲ್ಕನೆಯ ಹೆಸರು Rayana Rogannavar ಎಂಬುದು ಅರ್ಥಾತ್ ರಾಯಣ್ಣನದು. ರಾಯಣ್ಣ ಮಾಫಿ ಬೇಡಿದ್ದರ ಕಾರಣವನ್ನು ಹೀಗೆಯೇ ಎಂದು ಊಹಿಸಲು ಸಾಧ್ಯವಿಲ್ಲ. ಅಂತೂ ಬಿಡುಗಡೆ ಹೊಂದಿದ ಕೂಡಲೇ ತನ್ನ ಊರಾದ ಸಂಗೊಳ್ಳಿಗೆ ಹೋಗಿರಲು ಸಾಕು. ಆದ್ದರಿಂದ ರಾಯಣ್ಣನ ಹೋರಾಟದ ಆರಂಭವನ್ನು ಅವನು ೧೮೨೪ರಲ್ಲಿ ಊರು ಬಿಟ್ಟು ಮರೆಯಾದಂದಿನಿಂದ ಎಣಿಸಬೇಕು.

ರಾಯಣ್ಣ ದಂಗೆ ಎದ್ದುದರ ಹಿನ್ನೆಲೆ

ಮುಂದೆ ಆ ವರ್ಷದ ಕೊನೆಯಲ್ಲಿ ರಾಯಣ್ಣ ಅದೇಕೆ ಸಿಡಿದೆದ್ದನೆಂದು ತಿಳಿಯುವುದು ಪ್ರಸಕ್ತವಾದುದು. ಅವನೊಬ್ಬ ಶೇತ್ಸನದಿ. ಆಗಿನ ಕಾಲದ ಸಂಸ್ಥಾನಿಕರು. ಜಾಗೀರುದಾರರು ತಮ್ಮ ಒಡೆತನದ ಗ್ರಾಮಗಳ ವಿವಿಧ ಬಗೆಯ ಕಾಯಕಗಳಿಗಾಗಿ ಜಮೀನಿನ ಉಪಭೋಗದ ಹಕ್ಕನ್ನು ಕೊಟ್ಟು ಜನರನ್ನು ತಮ್ಮ ಅಧಿಕಾರದಲ್ಲಿ ಇರಿಸಿಕೊಳ್ಳುತ್ತಿದ್ದರು. ಪ್ರಸಂಗ ಬಿದ್ದಲ್ಲಿ ಹೊರಗಿನ ದಾಳಿಗಳನ್ನು ಎದುರಿಸುವಂತೆ ಅವರು ಪ್ರಾಥಮಿಕ ಸ್ವರೂಪದ ಸೈನಿಕ ತರಬೇತಿಯನ್ನೂ ಹೊಂದಿರುತ್ತಿದ್ದರು. ಬ್ರಿಟಿಷ್ ಸತ್ತೆ ನೆಲೆಗೊಂಡ ಮೇಲೆ ಅವರಿಗೆ ಶೇತ್ಸನದಿಗಳ ಅಗತ್ಯ ಅಷ್ಟಾಗಿ ತೋರಿ ಬರಲಿಲ್ಲ. ಮಹತ್ವದ್ದೆಂದರೆ ಬ್ರಿಟಿಷ್ ಸರಕಾರಕ್ಕೆ ಕಂದಾಯ ವಸೂಲಿಯಲ್ಲಿ ಏಕರೂಪತೆ ತರಬೇಕಿತ್ತು. ಆದ್ದರಿಂದ ಅಂಥವರ ಜಮೀನಿನ ಹಕ್ಕನ್ನು ಕ್ರಮೇಣ ರದ್ದುಪಡಿಸತೊಡಗಿದರು. ಅದರ ಅನುಷ್ಠಾನದಲ್ಲಿ ಸ್ಥಳೀಯ ಅಧಿಕಾರಿಗಳಿಗೆ ಅದೆಂಥ ಉತ್ಸಾಹ!

ಸ್ಟೋಕ್ಸ್ ಈ ಸನ್ನಿವೇಶವನ್ನು ಹೀಗೆ ವಿವರಿಸಿದ್ದಾನೆ :

> He (Rayappa) was a Sanadi or village watchman of Sangolli...rendered desperate by the confiscation of his service-land (a measure necessary in his case, as in others owing to the enormously superfluous number of Sanadis) and exasperated by a quarrel which he had with the Kulkarni of his village, he gathered round him many of the disaffected. (ಪುಟ 82)

'Disaffected' : ಈ ರೀತಿಯಲ್ಲಿ ಆಸ್ತಿಯ ಮೇಲಣ ಹಕ್ಕನ್ನು ಕಳೆದುಕೊಂಡಿದ್ದ ಅನೇಕರು ಮುಂಬಯಿಯವರಿಗೆ ಅರ್ಜಿಯನ್ನು ಗುಜರಾಯಿಸುತ್ತಿದ್ದರು. ಗವರ್ನರ್ ಮಾಲ್ಕಮ್‌ನಿಗೆ ಇದರ ಅರಿವಿದ್ದಿತೆಂಬುದು ಅವನ ಈ ಶರಾದಿಂದ ತಿಳಿದುಬರುತ್ತದೆ.

Minutes dt. 23-6-1829.

I am neither surprised at the insurrection in Kittur nor at the feelings of inhabitants of that Province being with the insurgents, who were compelled to make a severe example of this petty principality and in effecting this many of the Watandars and others with heriditory rights suffered... The internal peace of our Provinces will depend more on our settling according to usage.

ಈ ಕುರಿತು ರಾಯಣ್ಣನೇ ಹೇಳಿದ ದಾಖಲೆಯಿದೆ. ಅವನ ಬಂಧನವಾದ ಮೇಲೆ, ಸಂಪಗಾಂವಿಯ ಅಮಲ್ದಾರನೆದುರು ಅವನ ಪ್ರಾಥಮಿಕ ವಿಚಾರಣೆ ನಡೆಯಿತು. (ದಿ.: ೨೮-೪-೧೮೩೦), ಆ ಕಾಲಕ್ಕೆ ಅವನು ಯಾವುದನ್ನೂ ಬಚ್ಚಿಡದೆ, ತಾನು ದಂಗೆ ಎದ್ದದ್ದನ್ನು ಖಡಾಖಂಡಿತವಾಗಿ ಒಪ್ಪಿಕೊಂಡನಲ್ಲದೆ, ಅವರು ಕೋರ್ಟಿನ ವ್ಯವಹಾರರೀತ್ಯಾ ಕೇಳಿದ ಹತ್ತಾರು ಪ್ರಶ್ನೆಗಳಿಗೆ ಉತ್ತರಿಸಿದ್ದಾನೆ. ಅದನ್ನೆಲ್ಲ ಬರೆದು ತೆಗೆದಾದ ಮೇಲೆ 'ಇದೀಗ ಓದಿದ್ದು ಸರಿಯೇ?' ಎಂದು ಕೇಳಿದ್ದಕ್ಕೆ 'ಹೌದು' ಎಂದು ನುಡಿದು ಸಹಿ ಹಾಕಿದ್ದಾನೆ. ಅವನ ವಿವರವಾದ ಜವಾಬಿನಲ್ಲಿ ಅವನ ಜೊತೆಗಾರರು ಯಾರಿದ್ದರು.* ದುಡ್ಡನ್ನು ಹೇಗೆ ಕೂಡಿಸುತ್ತಿದ್ದರು. ಎಲ್ಲೆಲ್ಲಿ ಅಡಗಿರುತ್ತಿದ್ದರು? ಮುಂತಾದ ವಿವರಗಳು ದೊರೆಯುತ್ತವಲ್ಲದೆ, ರಾಯಣ್ಣನ ಒಳ್ಳೆಯ ನಡತೆಯನ್ನು ತೋರ್ಪಡಿಸುವ ಒಂದೆರಡು ನಿದರ್ಶನಗಳೂ ಇವೆ.

ತಾನು ಊರು ಬಿಟ್ಟಿದ್ದರ ಕಾರಣವನ್ನು ಅವನು ಮೇಲಣ ೨೮-೪-೧೮೩೦ರ ಜವಾಬಿನಲ್ಲಿ ಹೀಗೆ ಹೇಳಿದ್ದಾನೆ :

The year before last they imposed more rent on the half hoozruttee field, which I cultivated in Sangolli. For this I and Muntguttee Shet-Sundee of same village left the village together.

ಸರಕಾರೀ ಪಕ್ಷದವರು

ಅವನ ಮುಂದಿನ ಕಾರ್ಯಾಚರಣೆ ಸರಕಾರೀ ಅಧಿಕಾರಿಗಳ ವಿರುದ್ಧ ತಾನೇ. ಆ ಕ್ಷೇತ್ರದಲ್ಲಿ ಅವನ ಎದುರಾಳಿಗಳು ಯಾರು ಯಾರು ಎಂಬುದನ್ನು ನೋಡೋಣ.

ಮುಂಬಯಿ ಪ್ರಾಂತದ ಗವರ್ನರ್ ಮಾಲ್ಕಮ್‌ನ ಹೆಸರನ್ನು ತಗೊಂಡದ್ದೇ ಇದೆ. ಈ ಪ್ರಾಂತದ ದಕ್ಷಿಣ ಭಾಗದ ಕಮೀಶನರ್ ಆಗಿದ್ದ ಚಾಪ್ಲಿನ್ನನ ಹೆಸರು ಕಿತ್ತೂರಿನ ೧೮೨೪ರ ವಿಪ್ಲವದ ಕಾಲದಿಂದ ಪರಿಚಿತವಾದದ್ದು. ಇನ್ನೊಬ್ಬ ನಿಸ್ಬತ್. ಈತನು ಧಾರವಾಡ ಸುಭಾದ ಕಲೆಕ್ಟರ್ ಇದ್ದ (ಅಲ್ಲದೆ ಕೊಲ್ಹಾಪುರ ಸಂಸ್ಥಾನದ ಪೊಲಿಟಿಕಲ್ ಏಜೆಂಟ್). ರಾಯಣ್ಣನ ಕಥಾನಕದಲ್ಲಿ ಇವನದೇ ಮುಖ್ಯ ಒಕ್ಕಣಿಕೆ. ಬೆಳಗಾವಿ ಜಿಲ್ಲೆಯು ಆಗಿನ್ನೂ ಅಸ್ತಿತ್ವದಲ್ಲಿ ಬಂದಿದ್ದಿಲ್ಲವಾದ್ದರಿಂದ ಆ ಭಾಗದ ಸಿವಿಲ್ ಮತ್ತು ಮಿಲಿಟರಿ ಆಡಳಿತ ಇವನ ಜವಾಬ್ದಾರಿಯದಾಗಿತ್ತು. ಅನಂತರದ, ಅಷ್ಟೇ ಮಹತ್ವದ ಹೆಸರು ಸಂಪಗಾವಿಯ ಅಮಲ್ದಾರನಾದ

ಕೃಷ್ಣರಾಯನದು. ರಾಯಣ್ಣನನ್ನು ಎದುರಿಸಿ, ಮುಗಿಸುವಲ್ಲಿ ಅವನು ಅತ್ಯಂತ ನಿಷ್ಠೆ ಹಾಗೂ ಮುತುವರ್ಜಿಯಿಂದ ಸರಕಾರದ ಪರವಾಗಿ ಶ್ರಮಿಸಿದವ. ಅವನ ತಮ್ಮ ಸ್ವಾಮಿರಾವ್ ಹಾಗೂ ಇತರ ಕೆಲವರು ಪ್ರಾಸಂಗಿಕವಾಗಿ ಕಾಣಿಸಿಕೊಳ್ಳುತ್ತಾರೆ.

ಇವರೆಲ್ಲ ಸಿವಿಲ್ ಆಡಳಿತಕ್ಕೆ ಸಂಬಂಧಿಸಿದವರು. ಮಿಲಿಟರಿ ವಿಚಾರದಲ್ಲಿ ಮೆಕ್ಲಿಯಾಡ್ ಎಂಬಾತ ದಕ್ಷಿಣ ಭಾಗದ ಸೈನ್ಯಕ್ಕೆ ಮುಖ್ಯಸ್ಥನಿದ್ದ (Commander of Doab Field Force). ಅವನ ಕೈಯಲ್ಲಿ ಮದ್ರಾಸ್ ನೇಟಿವ್ ಇನ್ಫೆಂಟ್ರಿಯ ಹಲವಾರು ರೆಜಿಮೆಂಟ್‌ಗಳು ಇದ್ದವು. (ನಂ. ೧೮, ೪೦, ೫೦). ಅವುಗಳ ಮುಖ್ಯಸ್ಥರೆಂದು ರಾಸ್, ಪಿಕರಿಂಗ್, ಎಡ್ವರ್ಡ್ ಕೊರ್ರಿ (Corrie) ಇವರ ಹೆಸರುಗಳು ಕಾಣಿಸಿಕೊಂಡಿದ್ದು ರಾಯಣ್ಣನ ಸಂಗಡ ನೇರವಾಗಿ ಯುದ್ಧ ಮಾಡಿದ್ದಾರೆ. ಇದಲ್ಲದೆ ಸತಾರಾ, ಕಲಾದಗಿ, ಬೆಳಗಾಂವಿಗಳಲ್ಲಿ ಕಾದಿಟ್ಟ ಸೈನ್ಯದ ತುಕಡಿಗಳಿದ್ದವು.

ಸರಕಾರೀ ಸೈನ್ಯದಲ್ಲಿ ಹಲವಾರು ದರ್ಜೆಗಳಿದ್ದವು. ಒಂದನೆಯದು, ಶೇತ್ಸನದಿಗಳು ಹಾಗೂ ವಾಲೀಕಾರರದು. ಇದು ಕಚ್ಚಾ ಸೈನ್ಯ; ಅವರು ಬಳಸುತ್ತಿದ್ದ ಶಸ್ತ್ರಗಳು ಹಳೆಯ ಕಾಲದವು. ಹಾರೆ, ಕೊಡಲಿಗಳೂ ಆಯುಧಗಳ ಸಾಲಿನಲ್ಲೇ ಬರುತ್ತಿದ್ದವು. ಈ ಹಿಂದೆ ಹೇಳಿದಂತೆ ಪ್ರತೀ ಹಳ್ಳಿಯಲ್ಲಿ ಇಂಥ ಹಲವಾರು ಶೇತ್ಸನದಿಗಳಿದ್ದರು. ಪ್ರಸಂಗ ಬಂದರೆ ಅವರನ್ನು ವಿವಿಧ ಕಡೆಗಳಿಂದ ಕಲೆ ಹಾಕುತ್ತಿದ್ದರೆಂಬುದು ನಿಸ್ಬತನ ದಿ|| ೭-೧-೧೮೩೦ರ ಒಕ್ಕಣಿಕೆಯಿಂದ ಸ್ಪಷ್ಟವಾಗಬಲ್ಲದು:

In the meantime I have sent for 550 Shet-sanadee Peons from the Taluks of Nowlgoond, Purshghur and Dummul, which I propose to place at the disposal of the Amildar.

ಶೇತ್ಸನದಿಗಳು ಒಂದರ್ಥದಲ್ಲಿ Mercenaries ಇದ್ದ ಹಾಗೆ. ಈ ಪಡೆಯ ಉಸ್ತುವಾರಿಯನ್ನು ಅಮಲ್ದಾರರೇ ನೋಡಿಕೊಳ್ಳುತ್ತಿದ್ದರು. ಇನ್ನೊಂದು ಪಡೆ ಕುದುರೆ ಸವಾರರದ್ದು. ಅದಕ್ಕೊಬ್ಬ ರಿಸಾಲದಾರ ಮುಖ್ಯಸ್ಥನಿರುತ್ತಿದ್ದ. ಅಂತಿಮವಾಗಿ ಹೇಳಬೇಕಾದದ್ದು ಬ್ರಿಟಿಶರ ಖಾಸಾ ಸೈನ್ಯ. ನಿಯಮಿತವಾಗಿ ತರಬೇತಿ ಹೊಂದಿದ ಸುಸಜ್ಜಿತ ಸೈನ್ಯಪಡೆ ಅದು. ರಾಯಣ್ಣನೊಡನೆಯ ಹೋರಾಟದಲ್ಲಿ ಒಮ್ಮೆ ಮಾತ್ರ ಅದೂ ಅಂಶತಃ ಭಾಗವಹಿಸಿದೆ. ಇಷ್ಟಕ್ಕೂ ರಾಯಣ್ಣನದು hit and run ರೀತಿಯ ಗೆರಿಲ್ಲಾ ಕ್ರಮದ ಯುದ್ಧವಾದ್ದರಿಂದ ಘೋರತರವಾದ ಯುದ್ಧ ನಡೆಯಿತೆಂದು ಹೇಳುವ ಹಾಗಿರಲಿಲ್ಲ. ಬ್ರಿಟಿಶ್ ದಾಖಲೆಗಳಿಂದ ರಾಯಣ್ಣನ ಯುದ್ಧದ ಸ್ವರೂಪವನ್ನು ಸ್ಪಷ್ಟವಾಗಿ ತಿಳಿಯಬಹುದು. ದೇಶನೂರ, ಶಮಶೇರಗಡ ಬಳಿಯ ಅಥವಾ ಯಾವುದೊಂದು ಊರಿನ ಬಳಿ ಇರಬಹುದಾದ ದಟ್ಟ ಅಡವಿಗಳಲ್ಲಿ ತಂಗುವುದು. ಸರಕಾರದ ಸೈನ್ಯ ನೆಲೆಯೂರಿದಲ್ಲಿ ಗಕ್ಕನೆ ಎರಗಿ, ಗರಿಷ್ಠ ಪ್ರಮಾಣದಲ್ಲಿ ಹಾನಿಗೈದು ಮತ್ತೆ ಮರೆಯಾಗಿಬಿಡುವುದು. ಇತ್ತ ಸರಕಾರೀ ಕಚೇರಿಗಳು,

ಚಾವಡಿಗಳು ಇರುವಲ್ಲಿ ಇಲ್ಲಿಯ ಕಾಗದ ಪತ್ರಗಳು ನಾಶವಾಗುವಂತೆ ಸುಟ್ಟುಬಿಡುವುದು. ತಿಜೋರಿ ಇದ್ದರೆ ಹಣದ ಲೂಟಿ ಮಾಡುವುದು. ಸರ್ಕಾರಿ ಟಪಾಲಿನ ಸಾಗಣೆಯನ್ನು ಪ್ರತಿಬಂಧಿಸುವುದು - ಇವು ನಿಯಮಿತ ಕಾಯಕಗಳಾಗಿದ್ದುವು. ಕೆಲಸ ಮುಗಿದೊಡನೆ ರಾಯಣ್ಣನ ಜನರು ತಮ್ಮ ಆಶ್ರಯದ ಗುಡ್ಡದ ಓರೆಗಳಲ್ಲಿ, ಅಡವಿಗಳಲ್ಲಿ ಅಂತರ್ಧಾನರಾಗಿಬಿಡುತ್ತಿದ್ದರು. ಯಾವುದನ್ನು ಛತ್ರಪತಿ ಶಿವಾಜಿಯು ಅನುಸರಿಸಿದನೋ, ತದ್ವತ್ತಾಗಿ ರಾಯಣ್ಣ ಅದನ್ನೇ ಮಾಡಿದನೆಂಬುದನ್ನು ಗಮನಿಸಬಹುದು.

ದಾಳಿಯ ಪೂರ್ವತಯಾರಿ

ಇನ್ನೀಗ ರಾಯಣ್ಣ ತಲೆಮರೆಸಿಕೊಂಡು ಸಂಗೊಳ್ಳಿಯನ್ನು ಬಿಟ್ಟ ಮೇಲೆ ಏನು ಮಾಡಿದನೆಂಬುದನ್ನು ನೋಡೋಣ. ಅಕ್ಟೋಬರ್ ೧೮೨೯ರ ಸುಮಾರಿಗೆ ಆತನು ಗೋಕಾಕ ತಾಲೂಕಿನ ಉದಗಟ್ಟಿಯಲ್ಲಿ ಬಸ್ಯಾ ಎಂಬವನ ಮನೆಯಲ್ಲಿದ್ದಾಗ, ಒಬ್ಬನು ಬಂದು ಬಾಪೂ ಭಂಡಾರಿ ಮತ್ತು ಗಂಟ್ಯಾ (Guntya) ಇವರು ಸರಕಾರದ ವಿರುದ್ಧ ದಂಗೆಯೇಳಲಿದ್ದಾರೆಂದೂ ರಾಯಣ್ಣನು ಕೂಡಿಕೊಳ್ಳಬೇಕೆಂದು ಅವರು ಅಪೇಕ್ಷಿಸುವುದಾಗಿಯೂ ತಿಳಿಸಿದ. ಅದರಂತೆ ಅವರೆಲ್ಲ ಅಂಕಲಗಿ ಬಳಿಯ ಕೌಲಗುಡ್ಡ ಊರಿನ ಹೊರಗೆ ಸೇರಿದರು.

ಆಗ ಕೈಕೊಂಡ ಮಹತ್ವಪೂರ್ಣ ನಿರ್ಣಯವೆಂದರೆ, ತಮ್ಮ ಹೋರಾಟಕ್ಕಾಗಿ ಕಿತ್ತೂರಿನ ಕೊನೆಯ ದೊರೆ ಶಿವಲಿಂಗರುದ್ರನ ದತ್ತಕಮಗ ಸವಾಯಿ ಮಲ್ಲಸರ್ಜನನ್ನು ಮುಂದಿಟ್ಟುಕೊಳ್ಳಬೇಕೆಂಬುದು. ಅವನನ್ನು ಕರೆತರಲು ಜಂಗಮ ಸಿದ್ದಯ್ಯ, ಅಪ್ಪಾಜಿ ಸುತಗಟ್ಟಿ, ಹಾಗೂ ಇನ್ನೊಬ್ಬನು ಆ ಹುಡುಗನಿದ್ದ ಮಾಸ್ತಮರಡಿಗೆ ಹೋದರು. ಮಧ್ಯರಾತ್ರಿಯ ವೇಳೆಗೆ ಅವನ ಮನೆಯ ಬಾಗಿಲು ತಟ್ಟಿ ಎಬ್ಬಿಸಿದರಂತೆ.

ಸವಾಯಿ ಮಲ್ಲಸರ್ಜನಿಗೆ ಉಭಯಸಂಕಟ. ಅದಕ್ಕಿಂತ ಹೆಚ್ಚಾಗಿ ಹೆದರಿಕೆ. ಇವರನ್ನು ಕೂಡಿಕೊಂಡು ಸರಕಾರದವರ ಕೈಗೆ ಸಿಕ್ಕಿಬಿದ್ದರೆ ಏನು ಗತಿ ಎಂಬುದು ಒಂದಾದರೆ; ಇನ್ನೊಂದೆಡೆ, ಬಂಡುಗಾರರ ಬೆದರಿಕೆ! "ಆಯ್ತು, ನಾನೇ ಬರುತ್ತೇನೆ. ಎಳೆದೊಯ್ಯುವುದು ಬೇಡ" ಎಂದನಂತೆ. (ರಾಯಣ್ಣ ತನ್ನ ಜವಾಬಿನಲ್ಲಿ ಹೇಳಿದ್ದಂತೆ). ಅಂತೂ ಅವನನ್ನು ಗುಟ್ಟಾಗಿ ಗೋಕಾಕದ ಕಡೆ ಒಂದೆಡೆ ಸಾಗಿಸಿದರು. ಇತ್ತ ತಾವು ಅವನ ಹೆಸರನ್ನು ಮುಂದೆ ಮಾಡಿ ಊರೂರುಗಳಿಗೆ ಹೋಗಿ ಪ್ರಚಾರ ಮಾಡಿದರು, ದುಡ್ಡು ಕೂಡಿಸಿದರು. ಕೌಲಗುಡ್ಡದಲ್ಲಿ ನೆರೆದಿದ್ದ ಏಳೆಂಟು ಜನರ ಗುಂಪಿಗೆ ವಿವಿಧ ಕಡೆಗಳಿಂದ ಜನರು ಬಂದು ಸೇರಿದರು. ಅಂತೂ ಬಂಡಾಯದ ಹೊಳಹು ಸಂಪಗಾವಿಯಿಂದ ಉತ್ತರಕ್ಕೆ ಸಾಕಷ್ಟು ದೂರವಿದ್ದ ಗೋಕಾಕ ತಾಲೂಕಿನಲ್ಲಿ ರೂಪುಗೊಂಡಿತು. ಇತ್ತ ನಿಸ್ಬತನಿಗೆ, ಯಾರೋ ಕೆಲವರು ದಂಗೆಯೇಳಲಿದ್ದಾರೆಂಬುದಷ್ಟೆ ತಿಳಿದಿತ್ತು. ಆದರೆ ಅವರು ಯಾರು, ಅವರು ಯಾವ ಊರಿನ ಮೇಲೆ ದಾಳಿ ಮಾಡಲಿದ್ದಾರೆ, ಈ ವಿಚಾರಗಳೊಂದೂ ಗೊತ್ತಾಗಿರಲಿಲ್ಲ.

ಮೊದಲ ದಾಳಿ: ಬೀಡಿಯ ಮೇಲೆ (೫-೧-೧೮೩೦)

ರಾಯಣ್ಣನ ಮೊದಲ ದಾಳಿಯು ದಿನಾಂಕ ೯-೧-೧೮೩೦ರಂದು ಆಯಿತೆಂದು 'History of Freedom Movement in Karnataka'ದಲ್ಲಿದೆ. ಸ್ಟೋಕ್ಸ್, ತಾರೀಖಿನ್ನೇನು ಕಾಣಿಸದೆ, ೧೮೨೯ರಲ್ಲಿ ಬೀಡಿ ಊರಿನ ಮೇಲೆ ಆಯಿತು ಎಂದು ಕಾಣಿಸಿದ್ದಾನೆ. ಎರಡರಲ್ಲಿಯೂ ತುಸು ತಪ್ಪಿದೆ. ದಾಖಲೆಗಳ ಪ್ರಕಾರ ಮೊದಲ ದಾಳಿಯು ದಿನಾಂಕ ೫-೧-೧೮೩೦ರ ನಡುರಾತ್ರಿಯಲ್ಲಿ ಬೀಡಿಯ ಮೇಲೆ ಆಯಿತು. 'The attack was made without immediate warning, not withstanding which, the few peons on guard appear to have done their duty' ಎಂಬುದಾಗಿ ನಿಸ್ಬತ್ ಮರುದಿನ ಮುಂಬಯಿಗೆ ಬರೆದ. ರಾಯಣ್ಣ ಅಲ್ಲಿ ಜಮೆಯಾಗಿದ್ದ ಸು. ೧೯೦೯ರೂ.ಗಳನ್ನು ದೋಚಿದ ಮತ್ತು ಕಾಗದಪತ್ರಗಳ ಸಹಿತ ಆ ಚಾವಡಿಯನ್ನು ಸುಟ್ಟು ಹಾಕಿದ. ಆ ಘರ್ಷಣೆಯಲ್ಲಿ ರಾಯಣ್ಣನ ಕಡೆಯ ಒಬ್ಬ, ಕಾವಲಿನವರ ಪೈಕಿ ಒಬ್ಬ ಸತ್ತನು. ಇಬ್ಬರು ಕಾವಲಿನವರು ಗಾಯಗೊಂಡರು.

ತನ್ನ ಮೊದಲ ದಾಳಿಗೆ ಬೀಡಿಯನ್ನು ಆಯ್ದುಕೊಂಡದ್ದರ ಕಾರಣವೆಂದರೆ ಅಲ್ಲಿಯ ಸರಕಾರೀ ತಿಜೋರಿಯಲ್ಲಿ ತುಂಬಾ ಹಣ ಜಮೆಯಾದದ್ದರ ವಾರ್ತೆ ಬಂದಿತ್ತು. ಆದರೆ ಮುನ್ನಾ ದಿನವೇ ರೂ. ೨೮,೦೦೦ಗಳನ್ನು ಅಲ್ಲಿಂದ ಸಾಗಿಸಿತ್ತು. ಆ ಮಟ್ಟಿಗಾದರೂ ಉಳಿತಾಯವಾಯಿತೆಂದು ನಿಸ್ಬತ್ ಸಮಾಧಾನ ವ್ಯಕ್ತ ಮಾಡಿದ್ದಾನೆ.

ಅದೇ ವೇಳೆಗೆ ನಿಸ್ಬತ್ ಇನ್ನೆರಡು ಪತ್ರಗಳನ್ನು ಬರೆದ. ಮ್ಯಾಕ್ಲಿಯಾಡನಿಗೆ ಬರೆದದ್ದರಲ್ಲಿ, 'ಬಂಡುಗಾರರ ಸಂಖ್ಯೆ ಹೆಚ್ಚುತ್ತಲೇ ಇದ್ದು, ಅದನ್ನು ತಡೆಯದೇ ಹೋದರೆ, ಇತರೇ ಅನೇಕ ಜನರು (ಸಾಮಾನ್ಯರು) ಸೇರಿಕೊಳ್ಳುವ ಸಂಭವವಿದೆಯಾದ್ದರಿಂದ, ಬೆಳಗಾವಿಯಲ್ಲಿಯ ಸೈನ್ಯವನ್ನು ಸಿದ್ಧವಾಗಿಡಬೇಕೆಂದು ಆಗ್ರಹಿಸಿದ.

ಇನ್ನೊಂದು ಪತ್ರ ರಾಸ್‌ನಿಗೆ :

Apprehending an attack on the treasury of Sampgaon, I have the honour to request that you will have the goodness to despatch with least practicable delay, a party of sepoys of sufficient strength to bring the Amildar of the latter place with whatever treasure he may have, to Bylhongal, the residence of the widow of the late Desai of Kittur, and to guard both - it (i.e. the treasure) and the widow - who being possessed of considerable property - as also for other reasons - is likely to be an object of attraction to the insurgents.

ನಿಸ್ಬತನ ಈ ಪತ್ರದ ಒಂದು ವ್ಯಂಗ್ಯವೆಂದರೆ ಯಾವ ವ್ಯಕ್ತಿಯ ಸ್ವಾತಂತ್ರ್ಯವನ್ನು ಮರಳಿ ಕೊಡಿಸುವ ವಿಚಾರದಲ್ಲಿ ಬಂಡುಗಾರರೆಲ್ಲ ಏಕನಿಷ್ಠೆಯಿಂದ ಶ್ರಮಿಸುತ್ತ ಇದ್ದರೋ

ಅಂಥ ವೀರಮ್ಮನ ಹಾಗೂ ಅವಳ 'ಸಂಪತ್ತಿನ' ಮೇಲೆ ಬಂಡುಗಾರರಿಂದ ಗಂಡಾಂತರ ವಿದೆಯೆಂದು, ಅವಳ ರಕ್ಷಣೆ ತಮ್ಮದೇ ಹೊಣೆ ಎಂಬಂತೆಯೂ ನಿಸ್ಬತ್ ಭಾವಿಸಿದ್ದುದು.

ಇನ್ನೊಂದು ಗಣನೀಯ ಅಂಶವೆಂದರೆ, ಮೇಲಣ ಮೂರು ಪತ್ರಗಳಲ್ಲಿ ನಿಸ್ಬತ್ ದಾಳಿಗಾರರು ದತ್ತಕ ಮಗನಾದ ಸವಾಯಿ ಮಲ್ಲಸರ್ಜನನ್ನು ಮುಂದಿಟ್ಟುಕೊಂಡಿದ್ದಾರೆಂದು ಸ್ಪಷ್ಟವಾಗಿ ಕಾಣಿಸಿದ್ದಾನೆ. ಹೇಗೂ ಅವನ ಹೆಸರಿನಲ್ಲಿಯೇ ಜನಬಲ ಹಾಗೂ ಧನಬಲ ಸಂಗ್ರಹವಾಗುತ್ತಿತ್ತು.

ರಾಯಣ್ಣನ ದಾಳಿಯು ಮುಂದಿನ ಗುರಿ ಸಂಪಗಾವಿ - ಎಂದು ನಿಸ್ಬತ್ ತಿಳಿದಿದ್ದನಲ್ಲವೆ. ರಾಯಣ್ಣ ಹೋದದ್ದು ನಂದಗಡಕ್ಕೆ - ದಿನಾಂಕ ೭ರಂದು. ನಂದಗಡ - ಇದು ವ್ಯಾಪಾರೀ ಸ್ಥಳವಾಗಿತ್ತು. ಸರಕಾರೀ ಹಣಕ್ಕಿಂತ ತನ್ನ ಜನಕ್ಕೆ ಸಾಮಗ್ರಿಯನ್ನೊದಗಿಸಲು ಹಣ ಕೂಡಿಸಬೇಕಾಗಿದ್ದಿತು. ಆ ಊರಿಗೆ ರಾಯಣ್ಣ ಯಾವುದೇ ಹಾನಿ ಮಾಡಲಿಲ್ಲವೆಂದು ನಿಸ್ಬತ್ ಸ್ವತಃ ಹೇಳಿದ್ದಾನೆ. (They did not plunder the village). ಊರಿನ 'ಕಿಲ್ಲೇದಾರ'ನಿಂದಲೂ, ಕೆಲವು ವ್ಯಾಪಾರಿಗಳಿಂದಲೂ, ಸವಾಯಿ ಮಲ್ಲಸರ್ಜನಿಗಾಗಿ ಎಂಬುದಾಗಿ ಹೇಳಿ ಹಣ ವಸೂಲು ಮಾಡಿದ್ದನಂತೆ.

ರಾಯಣ್ಣನಿನ್ನು ಸಂಪಗಾವಿಯ ಮೇಲೆ ಎರಗುವನೆಂದು ನಿಶ್ಚಿತವಾಗಿ ಗ್ರಹಿಸಿ, ನಿಸ್ಬತ್ ರಾಸ್‌ನಿಗೆ ಬರೆದ ಪತ್ರದಲ್ಲಿ ಹೇಳಿದಂತೆ, ಸು. ೨೧,೫೦೦ ರೂ.ಗಳನ್ನು ಶ್ರಮಪಟ್ಟು ಬೈಲಹೊಂಗಲಕ್ಕೆ ಸಾಗಿಸುವ ವ್ಯವಸ್ಥೆ ಮಾಡಿದ. 'ಇನ್ನು ಬೇಕಿದ್ದರೆ ರಾಯಣ್ಣ ದಾಳಿ ಮಾಡಿಕೊಳ್ಳಲಿ' ಎಂಬ ನಿಶ್ಚಿಂತೆ ಇದ್ದಾಗ ರಾಯಣ್ಣನೆಲ್ಲಿ? ಅವನು ಖಾನಾಪುರದತ್ತ ಸಾಗಿದ್ದ!

ಯಶಸ್ವೀ ಮುನ್ನಡೆ

'Having received intelligence of the plunder and burning of Khanapoor by the Kittur insurgents' ಎಂಬುದಾಗಿ ನಿಸ್ಬತ್ ಮ್ಯಾಕ್ಲಿಯಾಡನಿಗೆ ದಿನಾಂಕ ೮-೧-೧೮೩೦ರಂದು ಪತ್ರ ಬರೆದಿರುವುದರಿಂದ ಈ ದಾಳಿ ೭ನೇಯ ತಾರೀಖಿನ ನಡುರಾತ್ರಿ, ಇಲ್ಲವೆ ೮ನೆಯ ತಾರೀಖಿನ ಹಗಲಿನಲ್ಲಿ ನಡೆದಿರಬೇಕು. ('History of Freedom Movement in Karnataka'ದಲ್ಲಿ ಹೇಳಿದಂತೆ ೯ನೆಯ ತಾರೀಖಿಗೆ ಅಲ್ಲ.) ಖಾನಾಪುರ ದಾಳಿಯಲ್ಲಿ ಜನಬಲ ದೊಡ್ಡದಿದ್ದುದರಿಂದಲೂ ವಿಧ್ವಂಸಕ ಕೆಲಸ ಭರ್ಜರಿಯಾಗಿಯೇ ನಡೆದಿರಬೇಕು. ಅದು ಮುಗಿದೊಡನೆ ರಾತ್ರಿ ಶಮಶೇರಗಡದ ನೆರೆಯ ಅಡವಿಯಲ್ಲಿ ಮುಕ್ಕಾಂ ಮಾಡಿದರು.

ಅಲ್ಲಿಂದ ಇಟಗಿಗೆ ಬಂದರು. ಆ ಊರಿನ ರೈತ ಜನರು ಐದು ಸಾವಿರ ರೂ. ಹಣ ಕೂಡಿಸಿಕೊಟ್ಟರಂತೆ. ಅನಂತರ ಪಾರಿಶವಾಡ ಹಾಗೂ ಅಂಕಲಗಿಗೆ ಪ್ರಯಾಣ. ಅಂಕಲಗಿಯಲ್ಲಿ ರಾಚೋಟೆಪ್ಪ ಮತ್ತು ಗಜಪತಿ ಎಂಬವರಿಂದ ಹಣವನ್ನು ಸಂಗ್ರಹಿಸಿದುದಾಗಿ ರಾಯಣ್ಣ ಹೇಳಿದ್ದಾನೆ. ಅದನ್ನು ಮುಗಿಸಿಕೊಂಡು ಹಡಲಗಿಗೆ ಬಂದರು.

ಶೇತ್ಸನದಿಗಳ ಆ ಸೈನ್ಯದಲ್ಲಿ ಶಿಸ್ತು, ವ್ಯವಸ್ಥೆ ಹೇಳಿಕೊಳ್ಳುವಂತಹದಿರಲಿಲ್ಲ. ಇಷ್ಟಕ್ಕೂ ಪ್ರತಿ ನಿತ್ಯ ಹೊಸ ಹೊಸ ಜನರು ಬಂದು ಸೇರುತ್ತಲೇ ಇದ್ದರು. ನಂದಗಡದ ಮೇಲೆ ದಾಳಿ ಮಾಡ ಹೊರಟಾಗ ಅವನ ಬಳಿ ಒಂದು ಸಾವಿರದಷ್ಟು ಅನುಯಾಯಿಗಳಿದ್ದರು. ಒಂದು ದಿನವಂತೂ ಮಲೆನಾಡ ಕಡೆಯಿಂದ ಹಿಂಡುಹಿಂಡಾಗಿ ಜನ ಬಂದು ಸೇರಿದರಂತೆ. ಆಗ "ನಮ್ಮ ಜೊತೆಗೆ ಮೂರು ಸಾವಿರದಷ್ಟು ಅನುಯಾಯಿಗಳಿದ್ದರು" ಎಂದಿದ್ದಾನೆ ರಾಯಣ್ಣ.

ಇಷ್ಟೊಂದು ಜನರ ಬೆಂಬಲವಿದ್ದಾಗ ರಾಯಣ್ಣ ನಿರ್ಭಯವಾಗಿ ಹಲವು ಊರುಗಳಿಗೆ ಸಂಚರಿಸಿದ. ಅವನೇ ಹಿರಿಯ ನಾಯಕನಿದ್ದರೂ ಬೇರೆ ಪುಢಾರಿಗಳು ಕೆಲವರಿದ್ದರು. ತಮ್ಮವರೇ ಆಗಿರಲಿ, ಪ್ರಸಂಗ ಬಂದರೆ ಸುಲಿಯಬೇಕೆಂದು ಯೋಚಿಸಿದ್ದರು. ಅಂಥವರಲ್ಲಿ ಬಾಪೂ ಭಂಡಾರಿ ಒಬ್ಬ. ಈತ ಹಡಲಗಿಯಲ್ಲಿ ತನಗಾಗದವರ ಮೇಲೆ ದ್ವೇಷ ಸಾಧಿಸಲೋಸುಗ ಅಲ್ಲಲ್ಲಿ ಬೆಂಕಿ ಇಟ್ಟ. ಅದರಲ್ಲಿ ದನಕರುಗಳು, ಎಳೆಯ ಮಕ್ಕಳು ಸಹ ಸುಟ್ಟುಹೋದರಂತೆ. ಆಗೊಬ್ಬ ಮುದುಕ ರಾಯಣ್ಣನ ಬಳಿ ಬಂದು ತನ್ನ ದುಃಖವನ್ನು ತೋಡಿಕೊಂಡಾಗ, ರಾಯಣ್ಣ ಅವನನ್ನು ಸಮಾಧಾನಪಡಿಸಿ, ತನ್ನ ಬಳಿಯಲ್ಲಿ ಆ ಕ್ಷಣಕ್ಕೆ ಇದ್ದಷ್ಟು ಹಣವನ್ನು ಕೊಟ್ಟು ಕಳುಹಿಸಿದ. ಎರಡು ದಿನಗಳ ಹಿಂದೆ, ನಂದಗಡದಲ್ಲಿಯೂ ಬಾಪೂನದು ಇದೇ ಬಗೆಯ ದುಷ್ಕೃತ್ಯ. ಓರ್ವ ಬ್ರಾಹ್ಮಣ ಮುದುಕಿ ರಾಯಣ್ಣನೆಡೆಗೆ ಬಂದು, ಬಾಪೂ ತನ್ನ ಗಂಡನನ್ನು ಕಟ್ಟಿಹಾಕಿ ಕೊಲ್ಲಬಯಸಿದ್ದಾನೆಂದು ದುಃಖಿಸಿದಳು. ಅದನ್ನು ತಡೆಗಟ್ಟಬೇಕೆಂದು ರಾಯಣ್ಣ ಜನ ಕಳುಹಿಸಿದ್ದಾಗಲೇ ಬಾಪೂ ತನ್ನ ಕೆಲಸ ಮುಗಿಸಿಬಿಟ್ಟಿದ್ದನು. ರಾಯಣ್ಣ ಭಂಡಾರಿಯನ್ನೇ, ಅವನ ಖಾಸಾ ಹಸ್ತಕರೊಡನೆ ಎಳೆದು ತರಬೇಕೆಂದು ನಿರ್ಧರಿಸಿದ. ಆಗ ಸಿಕ್ಕ ಅವನ ಅನುಯಾಯಿಗಳನ್ನೂ ಸ್ವತಃ ಭಂಡಾರಿಯ ಮಗನನ್ನೂ ಕೊಂದುಹಾಕಿದರು. ಆಮೇಲೆ ಬಾಪೂನನ್ನು ಹಿಡಿದು ತರಲಾಯಿತು. ಆಗಿನ ಘರ್ಷಣೆಯಲ್ಲಿ 'ಮೂಸ್ಯಾ' ಎಂಬವನ ಕಟ್ಟಿಗೆಯ ಆಯುಧದ ಹೊಡೆತದಿಂದ ಬಾಪೂ ಭಂಡಾರಿ ಅಸುನೀಗಿದ. (ಈ ಘಟನೆಯನ್ನು ರಾಯಣ್ಣನೇ ತನ್ನ ಜವಾಬಿನಲ್ಲಿ ಹೇಳಿದ್ದಾನೆ). ಅನಂತರ ರಾಯಣ್ಣನ ನಾಯಕತ್ವ ಅಬಾಧಿತವಾಗಿರಲಿಕ್ಕೆ ಸಾಕು.

ದಿನಾಂಕ ೧೧ರಂದು ಜಕ್ಕನಾಯಕನಕೊಪ್ಪದ ಮೇಲೆ ದಾಳಿ ನಡೆಯಿತೆಂದು ಸರಕಾರೀ ದಾಖಲೆಯೊಂದು ತಿಳಿಸುತ್ತದೆ. ‘A party of the insurgents.., set fire to the village and evacuated (?) three or four of the village people’ ಎಂದು ಅದರಲ್ಲಿ ಹೇಳಲಾಗಿದೆ. ಹೆಚ್ಚಿನ ವಿವರಗಳು ತಿಳಿಯವು. ಆದರೆ ಆ ಸುದ್ದಿ ತಿಳಿದೊಡನೆ, ನಂದಗಡದಲ್ಲಿದ್ದ ಅಮಲ್ದಾರ ಕೃಷ್ಣರಾಯನು, ೧೨೫ ಸಿಪಾಯಿಗಳು ಮತ್ತು ೧೫ ಜನ ಕುದುರೆ ಸವಾರರೊಡನೆ (Village peons and Jageerdars horse) ರಾಯಣ್ಣನನ್ನು ಹಿಡಿಯಲೆಂದು ಹೊರಟ.

ಸರಕಾರದ ಮತ್ತು ರಾಯಣ್ಣನ ಪಡೆಗಳ ನಡುವೆ ನಡೆದ ನೇರ ಯುದ್ಧದ ವಿವರಗಳು ಮೊದಲ ಬಾರಿಗೆ ಇಲ್ಲಿವೆ. ನಿಸ್ಬತನ ಆದೇಶದ ಮೇರೆಗೆ ಅದಕ್ಕೆ ಸಜ್ಜಾದ ಕೃಷ್ಣರಾಯನು ತನ್ನ ಪಡೆಯೊಡನೆ ನಂದಗಡದಿಂದ ಹೊರಟು ೧೧ನೇ ತಾರೀಖಿನ ರಾತ್ರಿ ಮುಗಟಖಾನಹುಬ್ಬಳ್ಳಿಗೆ ಬಂದ ಕಾರಣವೆಂದರೆ ಅಲ್ಲಿ ಅವನ ತಮ್ಮ ಸ್ವಾಮಿರಾಯ ಧಾರವಾಡ ಕಡೆಯಿಂದ ಹೆಚ್ಚಿನ ಸಿಪಾಯಿಗಳನ್ನು ಕರೆತರಲೆಂದು ಹೋದವ ಮರಳಿ ಬಂದಿದ್ದ. ತನ್ನ ಒಟ್ಟಿನ ಸೈನ್ಯವನ್ನು ಎರಡು ಭಾಗವಾಗಿ ಮಾಡಿ ಒಂದನ್ನು ಬೀಡಿ-ನಂದಗಡದ ಕಡೆಗೆ ಕಳಿಸಿ ತಾನು ಜಕ್ಕನಾಯಕನಕೊಪ್ಪದತ್ತ ಹೊರಟನು.

ಆದರೆ ರಾಯಣ್ಣ ಪುನಃ ಕೈಕೊಟ್ಟಿದ್ದ. ಅವನ ಗಮನವೀಗ ಆಯಕಟ್ಟಿನ ಸ್ಥಳವಾದ ಸಂಪಗಾವಿಯತ್ತ ಹರಿದಿತ್ತು.

ಸಂಪಗಾವಿಯ ಕಾಳಗ

ದಿನಾಂಕ ೧೨-೧-೧೮೩೦ರ ನಸುಕಿನಲ್ಲಿ (an hour before dawn) ರಾಯಣ್ಣ ೪೦೦ ಜನ ಸಿಪಾಯಿಗಳು ಹಾಗೂ ೬ ಕುದುರೆ ಸವಾರರೊಡನೆ ಸಂಪಗಾವದ ಮೇಲೆ ಎರಗಿದ. ಅಲ್ಲಿದ್ದ ಕಂದಾಯದ ಹಣವನ್ನು ಮೂರು ನಾಲ್ಕು ದಿನಗಳ ಹಿಂದೆ ಬೈಲಹೊಂಗಲಕ್ಕೆ ಸಾಗಿಸಿದ್ದರು. ಆಮೇಲೆ ಒಂದು ಸಾವಿರದಷ್ಟು ಜಮೆಯಾಗಿತ್ತು. ಯಾವುದೇ ಗಳಿಗೆಗೆ ರಾಯಣ್ಣ ಬಂದು ಅದನ್ನು ದೋಚಿಯಾನು - ಎಂಬ ಹೆದರಿಕೆ ಇದ್ದೇ ಇದ್ದಿತು. ಆಗ ಸಂಪಗಾವಿಯ ಪೇಶ್ಕಾರ್, ಕಿಲ್ಲೇದಾರನಾದ ಕೃಷ್ಣಪ್ಪ ಹಾಗೂ ತಾಲೂಕು ಮುನಶಿ ಇವರು, ೮-೯ ಜನ ಸಿಪಾಯಿಯ ಸಹಾಯದಿಂದ ತಿಜೋರಿಯನ್ನೇ, ಊರ ಮಸೀದೆಯ ಮೇಲ್ಗಡೆ ಇರಿಸಿದರು. ಜೊತೆಗೆ ಮದ್ದು ಗುಂಡನ್ನು ಸಹ! ರಾಯಣ್ಣ ಕಚೇರಿಗೆ ಬೆಂಕಿ ಇಟ್ಟರೆ ಅದೆಲ್ಲ ನಾಶವಾಗುವುದು ತಾನೇ. ಮುಸ್ಲಿಮರ ಮಸೀದೆಯ ಮೇಲೆ ರಾಯಣ್ಣ ಏರಿ ಹೋಗಿ, ಅವರನ್ನು ರೊಚ್ಚಿಗೆಬ್ಬಿಸುವುದಿಲ್ಲ ಎಂಬ ಅವರ ಲೆಕ್ಕಾಚಾರ ಧೂರ್ತತನದಿಂದ ಕೂಡಿದೆಯಲ್ಲವೆ?

ಅವರು ಎಣಿಸಿದಂತೆ, ರಾಯಣ್ಣನ ಜನ ಮಸೀದೆಯೆದುರು ಏನೂ ಮಾಡುವ ಹಾಗಿರಲಿಲ್ಲ. ಬದಲಾಗಿ ಮಸೀದೆಯ ಮೇಲಿದ್ದವರು ಕೆಳಗಿನವರನ್ನು ಹೊಡೆದು ಬೀಳಿಸುವುದು ಸುಲಭವಿದ್ದಿತು.

The Taluk Officer fired on the insurgents from the top of the Mosque. They killed two of their number and severely wounded two others.

ರಾಯಣ್ಣ ಅಲ್ಲಿ ಹೆಚ್ಚು ಹೊತ್ತು ನಿಲ್ಲದೆ, ತಾಲೂಕು ಕಚೇರಿಗೆ ಬಂದ. ಅಲ್ಲಿ ದೇವಲಾಪುರದಿಂದ ಕರೆಸಲಾಗಿದ್ದ ೧೦-೧೫ ಜನ ಸಿಪಾಯಿಗಳು ಕಾವಲಿಗೆಂದು ಇದ್ದರು. ಅವರೆಲ್ಲ ತಕ್ಷಣ ರಾಯಣ್ಣನನ್ನು ಕೂಡಿಕೊಂಡರೆಂದು ನಿಸ್ಬತ್ ದಾಖಲಿಸಿದ್ದಾನೆ: deserted

instantly and joined the insurgents. ಅವರೆಲ್ಲ ಸೇರಿ ಕಚೇರಿಗೆ ಬೆಂಕಿ ಇಟ್ಟು ಕಾಗದ ಪತ್ರಗಳನ್ನೆಲ್ಲ ಸುಟ್ಟು ಹಾಕಿದರು. ಅಮಲ್ದಾರನ ಮನೆಯನ್ನೂ ಸುಟ್ಟು ಹಾಕಿದರು.

ಆಗ ಬೆಳಗಿನ ೯ ಗಂಟೆಯಾಗಿರಬೇಕು. ಸಂಪಗಾವಿಗೆ ಧಾವಿಸಿ ಬಂದ ಕೃಷ್ಣರಾಯ ಊರ ಹೊರಗಿನ ಹೊಂಡದ ಆ ಬದಿಗೆ ಯುದ್ಧಕ್ಕೆ ಸಿದ್ಧನಾಗಿ ನಿಂತಿದ್ದಾನೆ. ಹಿಂದಿನ ದಿನ ಜಕ್ಕನಾಯಕನಕೊಪ್ಪದತ್ತ ಹೊರಟಿದ್ದ ಆತ ರಾಯಣ್ಣ ದಿಕ್ಕು ಬದಲಿಸಿದ್ದು ತಿಳಿದೊಡನೆ ಘಾನಿಹಳ್ಳಿ (ಬೆಣ್ಣೆ ಹಳ್ಳ?) ಮಾರ್ಗವಾಗಿ 'ಸಂಪಗಾವಿಯಿಂದ ಎರಡು ಮೈಲು ದೂರದಲ್ಲಿದ್ದದ್ದು) ಸಂಪಗಾವಿಗೆ ಬಂದ. ತಕ್ಕಮಟ್ಟಿಗೆ ತುರುಸಿನ ಕಾಳಗವೇ ನಡೆಯಿತು. ನಿಸ್ಬತ್ ಹೇಳುತ್ತಾನೆ.

'Amildar himself was particularly distinguished. He wounded three or four of the men and struck off with a blade, the hand of one of them who attacked him with a long sword. Eight of the insurgents were killed and twentyfive wounded. They retreated..... The Amildar continued their pursuit to Sootguttee, the people of which place favoured the insurgents and enabled them to effect their escape over the Deshnoor hills into the jungle.'

ಮೇಲಣ ವರದಿಯಲ್ಲಿ ನಿಸ್ಬತ್ ತಮ್ಮ ಕಡೆಯವರಿಗಾದ ಸಾವು-ನೋವುಗಳನ್ನು ಪ್ರಸ್ತಾಪಿಸಿಯೇ ಇಲ್ಲ. ಇತ್ತ ಕೃಷ್ಣರಾಯನು ಹೇಗಾದರೂ ಮಾಡಿ ರಾಯಣ್ಣನನ್ನು ಮುಗಿಸಿ ಬಿಡಬೇಕೆಂದು ಪಣ ತೊಟ್ಟಂತಿತ್ತು. ಸುತಗಟ್ಟಿ, ದೇಶನೂರುಗಳನ್ನು ಸುತ್ತುವರಿಯಬೇಕು, ರಾಯಣ್ಣ ಪಾರಾಗಿ ಹೋಗದಂತೆ ನೋಡಿಕೊಳ್ಳಬೇಕು ಎಂದು ಹಂಚಿಕೆ ಹಾಕಿದನು. ನಂದಗಡದಲ್ಲಿದ್ದ ತಮ್ಮ ರಿಸಾಲದಾರನಿಗೂ, ಅಣ್ಣಾಜಿರಾವ ಎಂಬ ಹುಜೂರ ಮುನಶಿಗೂ ತಮ್ಮ ಪಡೆಯೊಡನೆ ಸುತಗಟ್ಟಿಗೆ ಹೋಗಬೇಕೆಂದು ತಿಳಿಸಿದ. ಅಲ್ಲದೆ ಮೇಜರ್ ಪಿಕರಿಂಗ್ ಎಂಬಾತ ಬೆಳಗಾವಿಯಿಂದ ಅದೇ ತಾನೆ ನಂದಗಡಕ್ಕೆ ತನ್ನ ಪಡೆಯೊಡನೆ ಬಂದಿದ್ದ. ಅವನೂ ಸುತಗಟ್ಟಿಯ ಬೇರೊಂದು ಬದಿಗೆ ಸಾಗಿಹೋದನು.

ಆದರೆ ಕೃಷ್ಣರಾಯನ ಯತ್ನ ಜನತೆಯ ಅಸಹಕಾರದಿಂದಾಗಿ ಫಲಿಸಲಿಲ್ಲ. ರಾಯಣ್ಣ ದೇಶನೂರಿನ ಅಡವಿಯಲ್ಲಿ ಒಂದು ದಿನ ವಿಶ್ರಾಂತಿಯನ್ನು ಹೊಂದಿ, ಮರುದಿನ ಅಂದರೆ ದಿನಾಂಕ ೧೩ರ ರಾತ್ರಿ ತನ್ನ ಹುಟ್ಟೂರಾದ ಸಂಗೊಳ್ಳಿಗೆ ಬಂದ. ಆಗ ಅವನ ಜೊತೆಗೆ ೧೦೦೦ ಅನುಯಾಯಿಗಳಿದ್ದರು. ಸಂಗೊಳ್ಳಿಯ ಚಾವಡಿಯನ್ನು ನಿರಾತಂಕವಾಗಿ ಸುಟ್ಟು ಹಾಕಿದನು. 'ದೊಡ್ಡ' ಪ್ರಮಾಣದ ಸೈನ್ಯವನ್ನು ಕಟ್ಟಿಕೊಂಡು ಹೋರಾಡುವುದು ಅವನ ಯುದ್ಧ ನೀತಿಯಾಗಿರಲೇ ಇಲ್ಲ. ಅಂತೆಯೇ ತನ್ನ ಜನರ ಒಂದು ಗುಂಪನ್ನು ಮಾರಿಕಟ್ಟೆಗೆ ಕಳಿಸಿದ.

ಸಂಗೊಳ್ಳಿ! ಅವನ ಹುಟ್ಟೂರು. ಅಲ್ಲಿ ಅವನಿಗೂ, ಅವನ ಸಾವಿರದಷ್ಟು ಅನುಯಾಯಿಗಳಿಗೂ ಆತ್ಮೀಯವಾದ ಸ್ವಾಗತ ದೊರೆತಿರಲು ಸಾಕು. ರಾಯಣ್ಣನ ಜೊತೆಗೆ

ಅವನ ನೆಚ್ಚಿನ ಬಂಟನಾದ ಮಂಟಗುತ್ತಿ ಚನಬಸವಯ್ಯನಿದ್ದ. ಚಾವಡಿಗೆ ಮಾತ್ರ ಬೆಂಕಿ ಹಚ್ಚಿದರು. ರಾಯಣ್ಣನ ಆಸ್ತಿಯ ಒಡೆತನವನ್ನು ಕಸಿದುಕೊಳ್ಳಬಯಸಿದ್ದ ಕಾಗದಪತ್ರಗಳು ಸಹ ಆಗ ಸುಟ್ಟುಹೋಗಿರಬೇಕು.

ಈ ಕಾಲಕ್ಕೆ ರಾಯಣ್ಣನಿಗೆ, ಸರಕಾರೀ ಟಪಾಲನ್ನು ಒಯ್ಯುತ್ತಿದ್ದ ಅಬ್ದುಲ್ಲಾ ಹಾಗೂ ಬಾವಲೂ (Bauloo) ಸಿಕ್ಕಿಬಿದ್ದರು. 'ಇನ್ನು ಮೇಲೆ ಸರಕಾರೀ ಟಪಾಲನ್ನು ಒಯ್ಯಕೂಡದು. ಹಾಗೇನಾದರೂ ಕಂಡುಬಂದರೆ ಅಲ್ಲೇ ತುಂಡರಿಸುವೆವು' ಎಂಬುದಾಗಿ ಬೆದರಿಸಿದ. ಅಲ್ಲದೆ ಅವರಿಗೆ ಅಂಜಿಕೆ ಮೂಡಲೆಂದು ಅವರ ಚರ, ಸ್ಥಿರ ಆಸ್ತಿಯನ್ನೆಲ್ಲ ನಾಶಪಡಿಸಿದನಂತೆ. ಅವರಿಬ್ಬರೂ ಆ ಕೂಡಲೇ ತಮ್ಮ ಮೇಲಿನವರಿಗೆ ದೂರಿಕೊಂಡರು. (ದಿ. ೧೬-೧-೧೮೩೦). ಅದರ ಆಂಗ್ಲ ರೂಪಾಂತರ ಹೀಗಿದೆ.

At 12 O' clock at night on the 14th instant as we were in the Tappal choultry at Sangolli, about 1000 armed rebels with two headmen, named Royana Rogannavar and Mantekuttee Chinbussiah attacked the village, burned one of our houses and carried off all the property that they could find. They laid hold of us both and beat us tremendously on their departure, they ordered us peremptorily not to convey the dawk hereafter, not to serve the Honourable Company and threatended to cut us into peices if we did so. They took one of our badges and went off towards Kittur. We lost all our property, were severely beaten and left naked.'

ಇತ್ತ ದೇಶನೂರ ಅಡವಿಯಲ್ಲಿ ರಾಯಣ್ಣನನ್ನು ಸಂಧಿಸುವುದು ಸಾಧ್ಯವಾಗದೇ ಹೋದಾಗ ಯಾರೋ ಒಬ್ಬರು ಕೃಷ್ಣರಾಯನಿಗೆ ರಾಯಣ್ಣ ಕುರುವಿನಕೊಪ್ಪ-ಮಾಸ್ತಿಕೊಪ್ಪಗಳತ್ತ ಹೋಗಿರುವನೆಂದು ತಿಳಿಸಿದ ಹಾಗೆ ಕಾಣುತ್ತದೆ. ಆದಕಾರಣ ಕೃಷ್ಣರಾಯನು ಹುಜೂರು ಮುನಶಿ ಅಣ್ಣಾಜಿರಾವ, ರಿಸಾಲದಾರ ಮಹಮ್ಮದಗೌಸ ಇವರೊಡನೆ ಅತ್ತ ಸಾಗಿದನು. ರಾಯಣ್ಣನೋ ಆ ಕಡೆ ಹೋಗದೆ ಕಿತ್ತೂರಿನ ದಾರಿ ಹಿಡಿದಿದ್ದ. ಹಾಗೆಂದು ಇವರೂ ಕಿತ್ತೂರಿಗೆ ಹೋದರು. ರಾಯಣ್ಣ ಕಿತ್ತೂರಿನ ಹೊರವಲಯದಲ್ಲಿ ಅರ್ಧತಾಸು ಮಾತ್ರ ಇದ್ದು, ಮತ್ತೆಲ್ಲಿಗೋ ಹೋದನೆಂದು ಸುದ್ದಿ ಬಂದದ್ದರಿಂದ ಉಪಾಯಗಾಣದೆ ಕೃಷ್ಣರಾಯ ತನ್ನ ಜನರೊಡನೆ ಮರಳಿ ಸಂಪಗಾವಿಗೆ ಹಿಂತಿರುಗಿದ.

ಸಂಗೊಳ್ಳಿಯಿಂದ ಹೊರಟ ರಾಯಣ್ಣ ಕಿತ್ತೂರಿಗೆ ಬಂದದ್ದು ನಿಜವೇ. ಏಕೆ ಬಂದದ್ದು? ಕಾರಣ ಸ್ಪಷ್ಟವಾಗಿ ತಿಳಿಯದು. ಆಗ ಅವನ ಜೊತೆಗೆ ಸುಮಾರು ೫೦೦ ಜನ ಅನುಯಾಯಿಗಳಿದ್ದರು. ಊರೊಳಗೆ ಹೋಗದೆ, ಹೊರಗಿನ ಗುರುಸಿದ್ಧೇಶ್ವರನ ಗುಡಿಯಲ್ಲಿ ಕಾಯಿ-ಹಣ್ಣಿನ ನೈವೇದ್ಯ ಮಾಡಿದರಂತೆ. ನೆರೆಯ ತಾಟಗಿ ಕೃಷ್ಣಪ್ಪ ಎಂಬವನ ತೋಟದಲ್ಲಿ ಕಬ್ಬಿನ ರಸ ಕುಡಿದುದಲ್ಲದೆ, ಎರಡು ಹೊರೆ ಕಬ್ಬಿನ ಜಲ್ಲೆಗಳನ್ನು ತೆಗೆದುಕೊಂಡರು, ಡೊಂಬರಕೊಪ್ಪದತ್ತ ಸಾಗಿದರು.

ರಾಯಣ್ಣನ ಮುಂದಿನ ಯಾತ್ರೆ ಬಾಳಗುಂದಕ್ಕೆ (ದಿ. ೧೫ರ ರಾತ್ರಿ). ಅಲ್ಲಿ ಅನಿರೀಕ್ಷಿತವಾಗಿ ಸರಕಾರೀ ಪಡೆಯೊಡನೆ ಘರ್ಷಣೆಯಾಯಿತೆಂದು ರಾಯಣ್ಣನೇ ಹೇಳಿದ್ದಾನೆ. ಸರಕಾರೀ ದಾಖಲೆಗಳಲ್ಲಿ ಅದರ ಪ್ರಸ್ತಾಪವಿಲ್ಲ. ಆ ಸಂದರ್ಭದಲ್ಲಿ, ರಾಯಣ್ಣನು ಹಳ್ಯಾಳದ ಮೇಲೆ ದಾಳಿ ಮಾಡಿದುದಾಗಿ ಹೇಳಿದ್ದಾನೆ.

A Hubshee Patel of Moomdutte Hallihal said there was money in the Hullihal treasury.

ಇದು ಈಗಣ ಉತ್ತರ ಕನ್ನಡ ಜಿಲ್ಲೆಯ ಹಳ್ಯಾಳವೇ ಇರಬೇಕು. ಏಕೆಂದರೆ ಬಾಳಗುಂದಕ್ಕೆ ಕೆಲವೇ ಮೈಲುಗಳ ಅಂತರದ ಮೇಲೆ ಈ ಸ್ಥಳವಿದೆ. ಅಲ್ಲಿ ನಡೆದ ಕಾಳಗದಲ್ಲಿ ರಾಯಣ್ಣನ ಕಡೆಯ ಇಬ್ಬರು ಸತ್ತರು; ೪ ಜನರಿಗೆ ಗಾಯವಾಯಿತಂತೆ. ಸ್ವತಃ ರಾಯಣ್ಣನ ಕಾಲಿಗೆ ಗುಂಡು ತಗುಲಿತು. ಅದರ ಉಪಚಾರಕ್ಕಾಗಿ ರಾಯಣ್ಣ ಬಾಳಗುಂದ ಗುಡ್ಡವಲ್ಲಿಯ ತನ್ನ ಸ್ಥಾನಕ್ಕೆ ಹಿಂತಿರುಗಿ ಅಲ್ಲಿಯೇ ನಾಲ್ಕೈದು ದಿನ ಉಳಿಯಬೇಕಾಯಿತು.

ಈ ವೇಳೆಗೆ ರಾಯಣ್ಣನ ಹೋರಾಟ ಆರಂಭವಾಗಿ ಎರಡು ವಾರಗಳು ಕಳೆದಿದ್ದವು. ನಿರ್ಣಾಯಕವೆನ್ನಬಹುದಾದ ಯುದ್ಧ ನಡೆದಿರಲಿಲ್ಲವಾದರೂ, ಅಂಥದೊಂದು ನಡೆದದ್ದು ಬ್ರಿಟಿಶ್ ದಾಖಲೆಗಳಲ್ಲಿ ದೊರೆಯುತ್ತದೆ, ಅದುವೇ ದಿ. ೨೧-೧-೧೮೩೧ರಂದು ಗುಂಡೊಳ್ಳಿಯಲ್ಲಿ (ಖಾನಾಪುರ ತಾ||) ನಡೆದ ಯುದ್ಧ. ಆ ಯುದ್ಧದಲ್ಲಿ ಓರ್ವ ಮುಂದಾಳುವಾಗಿ ಭಾಗವಹಿಸಿದ್ದ ರಾಮಪ್ಪ ಅಖಬರನವೀಸ ಎಂಬಾತ ಅದೇ ತಾಲೂಕಿನ ಲಿಂಗನಮಠ ಊರಿನಿಂದ ವರದಿ ಮಾಡಿದ್ದಾನೆ.

'I went to Goondolee a place very mountainous and thickly wooded, to look for Rayana... On the night of the 21st, about past 11 O' clock, Rayana and his followers came suddenly out of the jungle upon the place where we were pitched. They came blowing horns and trumpets making a great noise and hallooing, and with much assurance commenced an attack upon us with fire arms.....'

ಯಾವ ಮುನ್ಸೂಚನೆಯನ್ನು ಕೊಡದೆ ರಾಯಣ್ಣ ಧುತ್ತೆಂದು ದಾಳಿ ಮಾಡುವುದರ ಕ್ರಮವಿದು.

ರಾಮಪ್ಪನ ಮುಂದಿನ ವರದಿಯ ಪ್ರಕಾರ, ಮುಕ್ಕಾಲು ಗಂಟೆಯವರೆಗೆ ನಿಖರವಾದ ಕಾಳಗವೇ ನಡೆಯಿತು. ಅವರ ಒಂದು ಧೈರ್ಯದ ಬೆಂಬಲವೆಂದರೆ, ಬದಿಯ ದಿಬ್ಬದ ಮೇಲೆ ಪಿಕರಿಂಗನ ಸುಸಜ್ಜಿತ ಸೈನ್ಯವಿದ್ದದ್ದು. ಬಯಲಲ್ಲಿ ನಡೆದಿದ್ದ ಯುದ್ಧವಾದ್ದರಿಂದ ಪಿಕರಿಂಗನ ಸೈನಿಕರು ಅಲ್ಲಿಂದ ಗುಂಡು ಹಾರಿಸಿದ್ದರೆ ತನ್ನವರೂ ಸಾಯುವರೆಂಬ ಅಂಜಿಕೆಯಿದ್ದಿತು. ರಾಮಪ್ಪನ ಕೋರಿಕೆಯ ಪ್ರಕಾರ ಪಿಕರಿಂಗ್ ತನ್ನ ಸೈನ್ಯಾಧಿಕಾರಿಯೊಬ್ಬನನ್ನು ಚಿಕ್ಕ

ಪಡೆಯೊಡನೆ ಕಳುಹಿಸಿಕೊಟ್ಟನು. ಆಮೇಲೆ ರಾಯಣ್ಣನ ಜನ ಯುದ್ಧಭೂಮಿಯಿಂದ ಹಿಂತೆಗೆದರಂತೆ.

ರಾಮಪ್ಪನ ವರದಿಯಿಂದ ತಿಳಿದುಬರುವ ಒಂದು ಮಹತ್ವದ ಅಂಶವೆಂದರೆ, ರಾಯಣ್ಣನನ್ನು ಹಿಡಿಯಲು ಹೆಚ್ಚಿನ ಶೇತ್ಸನದಿಗಳನ್ನು ಧಾರವಾಡ ಕಡೆಯಿಂದ ಕಳೆ ಹಾಕಿದ್ದರು. ಒಂದು ಕಡೆ 'The following people of Nowlgoond Taluk distinguished themselves' ಎಂಬ ಮಾತು ಬರುತ್ತದೆ. ತಮ್ಮ ಕಡೆಯಲ್ಲಿ ಸತ್ತವರ, ಗಾಯಗೊಂಡವರ ಬಗ್ಗೆ ಹೇಳುವಾಗ ರಾಮಪ್ಪನು ಅವರು ಯಾವ ಯಾವ ಊರಿನವರು ಎಂದು ಹೇಳುತ್ತ ದೊಡ್ಡ ಪಟ್ಟಿಯನ್ನೇ ಕೊಟ್ಟಿದ್ದಾನೆ.

ಮುಂದಿನ ೧೫ ದಿನಗಳವರೆಗೆ ಬ್ರಿಟಿಶ್ ದಾಖಲೆಗಳಲ್ಲಿ ರಾಯಣ್ಣನ ಪ್ರಸ್ತಾಪ ನನಗೆ ಕಂಡುಬಂದಿಲ್ಲ. ರಾಯಣ್ಣನ ನಿಷ್ಕ್ರಿಯ ಒಂದು ಕಾರಣವೆಂದರೆ, ಅವನ ಅನುಯಾಯಿಗಳಲ್ಲಿ ಅನೇಕರು ಬಿಟ್ಟುಹೋದದ್ದು. ಜನ ಕಡಿಮೆಯಾಯಿತೆಂದು ಹೊಸಬರನ್ನು 'ರಿಕ್ರೂಟ್' ಮಾಡುವುದು ನಡೆದಿತ್ತಾದರೂ, ಅನುಯಾಯಿಗಳ ಸಂಖ್ಯೆ ಒಟ್ಟಿನಲ್ಲಿ ಕಡಿಮೆಯಾಗುತ್ತಿತ್ತೆಂದು ಅನಿಸುವುದು. ರಾಯಣ್ಣನ ಜವಾಬಿನಿಂದ ಇದರ ಕಲ್ಪನೆ ಬಂದೀತು.

'When I was at Sampgaon there were about 80 people at Deshnoor hill. Kullur Kurbasappa, Juddemani Bheema, Goujanhall Moharva (Basava?) and others brought 100 persons. These two bodies and some more persons of mine altogether amounted to 300. From among these some deserted after the skirmish at Goodholee (Gundolli).

'Deserted'! ಈ ಪರಿಸ್ಥಿತಿ ಸದಾ ಇರುತ್ತಿತ್ತು. ಏಕೆಂದರೆ ಎಷ್ಟೋ ಜನ ಮನೆಮಾರು ಬಿಟ್ಟು ಬಂದವರು, ದೇಶನೂರು ಮುಂತಾದ ಕಡೆಯ ಅಡವಿಗಳಲ್ಲಿ ಬಹಳ ಕಾಲ ಇರಲಾಗದೆ, ಹೇಳಕೇಳದೆ ಹೋಗಿಬಿಡುತ್ತಿದ್ದರು.

ಮುಂದಿನ ದಾಳಿ, ೮-೨-೧೮೩೧ರದು. ಕಿತ್ತೂರಿನ ಮೇಲಿನದು. ಈ ಹಿಂದೆಯೇ ದೇಗಾಂವಿ ಶಾನು(ಭೀಮ?) ನಾಯಕ ಕಿತ್ತೂರ ದಾಳಿಯನ್ನು ಸೂಚಿಸಿದ್ದರೂ ರಾಯಣ್ಣ ಒಪ್ಪಿರಲಿಲ್ಲ. ಆದರೆ ಕಿತ್ತೂರಿನ ವ್ಯಾಪಾರೀ ವರ್ಗಕ್ಕೆ ತಮ್ಮ ಅಂಗಡಿ ಮುಚ್ಚಲು ವಾಲೇಕಾರರಿಂದ ರಾಯಣ್ಣ ಹೇಳಿಕಳುಹಿಸಿದ್ದನಂತೆ. ಏನೇ ಆಗಲಿ, ಇಂದು ಎಲ್ಲೆಡೆ ಕಂಡುಬರುವ 'ಹರತಾಳ' ಇಲ್ಲವೆ ಅಂಗಡಿ ಆಫೀಸುಗಳ ಮುಚ್ಚುವಿಕೆಯನ್ನು ರಾಯಣ್ಣನೇ ಆರಂಭಿಸಿದನೆನ್ನಬೇಕು. ಆದರೆ ಆ ವ್ಯಾಪಾರಸ್ಥರು ಒಪ್ಪಲಿಲ್ಲ. ರಾಯಣ್ಣ ಹಗಲಿನಲ್ಲೇ ಕಿತ್ತೂರ ಮೇಲೆ ಸಾಗಿ ಬಂದ. ಆಗ ವೇಳೆ ಮಧ್ಯಾಹ್ನದ ಎರಡು ಗಂಟೆ. ಆ ವೇಳೆಗೆ ಕಿತ್ತೂರಿನ ಹೊರವಲಯದಲ್ಲಿ ಕೊರ್‍ರಿ (Corrie) ಎಂಬಾತ ತನ್ನ ೧೪ನೆಯ ರಿಜಿಮೆಂಟಿನೊಂದಿಗೆ ತಳವೂರಿದ್ದ, ಅದು ರಾಯಣ್ಣನಿಗೆ ಗೊತ್ತಿರಲೂ ಸಾಕು. ಈ ರೀತಿ ದಾಳಿ ಮಾಡಿದ್ದುದು

ಬ್ರಿಟಿಶರಿಗೂ ಅಚ್ಚರಿಯನ್ನುಂಟು ಮಾಡಿತೆನ್ನುವುದು - "The rebels with a degree of daringness hardly to be supposed took a position..... within one mile of Lt. Corrie's camp" ಎಂಬ ನಿಸ್ಬತನ ಹೇಳಿಕೆಯಿಂದ ಊಹಿಸಬಹುದು.

ಆ ಯುದ್ಧದಲ್ಲಿ ಏನು ನಡೆಯಿತೆಂಬುದನ್ನು ಕೊರ್ರಿಯ ಬಾಯಿಯಿಂದಲೆ ಕೇಳೋಣ. (ದಿ. 9-2-1830): 'Yesterday, at 2 O' clock p.m. a party of the plunderers said to have been 250 in number took up a position on a hill about a mile from this place. I immediately proceeded to the attack with my detachment and the party of horse under the Risaldaar had succeeded in cutting up nearly all of them.'

ರಾಯಣ್ಣ ನಡೆಸಿದ ಯುದ್ಧಗಳಲ್ಲೆಲ್ಲ ಇದುವೆ ಹೆಚ್ಚು ಭೀಕರವಾದದ್ದು. ಏಕೆಂದರೆ ಅದರಲ್ಲಿ ಅವನ ಪೈಕಿ ೭೮ ಜನ ಸತ್ತರಂತೆ. ೮೫ ಜನ ಸೆರೆಸಿಕ್ಕರು. ಅವರಲ್ಲಿ ೩೭ ಜನ ಗಾಯಗೊಂಡಿದ್ದರು. ಕೊರ್ರಿ ಮುಂದುವರಿದು ಹೀಗೆ ಹೇಳಿದ್ದಾನೆ:

'I cannot refrain from mentioning that our attack on the hill was most ably seconded by the Risaldar, who completely cut off their retreat after we had driven them down on the plain.'

ಕೊರ್ರಿಯ ಮುಂದಿನ ಹೇಳಿಕೆ ಬ್ರಿಟಿಶರ ಯುದ್ಧ ಕ್ರಮವನ್ನು ನಿದರ್ಶಿಸುವಂತಿದೆ:

'I am happy to say that there were no casualties among our men. although several men and horses of the Risaldar's party were wounded.'

ಸ್ಥಳೀಯ ದಂಗೆಗಳಿದ್ದಾಗ, ನಮ್ಮದೇ ಜನರ ವಿಶೇಷತಃ ಶೇತ್ಸನದಿಗಳ ಕಚ್ಚಾ ಸೈನ್ಯವನ್ನು ಮುಂದೆ ಮಾಡುತ್ತಿದ್ದರು. ಅದರ ಹಿಂದೆ ಮತ್ತು/ಅಥವಾ ಬದಿಗಳಲ್ಲಿ ಕುದುರೆಯವರು. ಇದೆಲ್ಲದರ ಹಿಂದೆ ತಮ್ಮ ಖಾಸಾ ಹಾಗೂ ಸುಸಜ್ಜಿತ ಪಡೆ. ಅವರ ಕೆಲಸ ಗುಂಡು ಹಾರಿಸುವುದು. ಎದುರಾಳಿಗಳು ಗುಂಡು ಹಾರಿಸಿದರೆ ಅದನ್ನು ನೇರವಾಗಿ ಎದುರಿಸಿ ಸಾಯಬೇಕಾದವರು ಕಚ್ಚಾ ಸೈನ್ಯದವರು!

ರಾಣಿ ವೀರಮ್ಮನ ಸ್ಥಳಾಂತರ

ಇವರ ಮುಂದಿನ ಮಹತ್ವದ ಘಟನೆ, ರಾಣಿ ವೀರಮ್ಮನನ್ನು ಬೈಲಹೊಂಗಲದಿಂದ ಸ್ಥಳಾಂತರಿಸಿದ್ದು, ಅದರ ಹಿಂದಿನ ವರ್ಷ, ಅವಳಿಗೆ ಹಿರಿ ಅತ್ತೆಯ ಸ್ಥಾನದಲ್ಲಿದ್ದ ಚೆನ್ನಮ್ಮ ತೀರಿಕೊಂಡಿದ್ದಳು. ವೀರಮ್ಮ ಆಗ ೧೭ ವರ್ಷದವಳು. ತನ್ನವರೆನ್ನುವವರು ಯಾರೂ ಇದ್ದಿಲ್ಲ. ಸಾಮಾನ್ಯ ಜನತೆ ಹಾಗೂ ಶೇತ್ಸನದಿಗಳಲ್ಲಿ, ಕಿತ್ತೂರಿನ ಪತನವಾದದ್ದರ ಬಗ್ಗೆ

ಅಸಮಾಧಾನ ಹೊಗೆಯಾಡುತ್ತಿದ್ದ ಕಾರಣದಿಂದ ಅವರಿಗೆ ಯಾರಾದರೊಬ್ಬರು ಮೇಟಿಯು ಕಂಬವಾಗಬೇಕಿದ್ದಿತು. ದತ್ತಕನಾದ ಸವಾಯಿ ಮಲ್ಲಸರ್ಜನೇನೋ ಇದ್ದ, ಆದರೆ ತಲೆಮರೆಸಿಕೊಂಡು. ಆದಾಗ್ಯೂ ಅವನಿಗೆ ಹಣದ ಅಡಚಣೆ ಇದ್ದುದು ತಿಳಿದುಬಂದು ವೀರಮ್ಮ ೪೫೫ ರೂ.ಗಳನ್ನು ಕಳಿಸಿದಳೆಂದು ಒಂದು ಉಲ್ಲೇಖವಿದೆ.

ರಾಯಣ್ಣ ಹಾಗೂ ವೀರಮ್ಮ ಇವರ ನಡುವೆ ಸಂಪರ್ಕವಿದ್ದಿತೆ? ಈ ಕುರಿತು ಒಂದಾದರೂ ದಾಖಲೆ ಇಲ್ಲವೆ ಜನಪದ ಹಾಡುಗಳಲ್ಲಿ ಉಲ್ಲೇಖ ಸಿಕ್ಕಿದ್ದರೆ ನೆಟ್ಟಗಿತ್ತು. ವೀರಮ್ಮ ಗೃಹಬಂದಿಯಾಗಿ ಇದ್ದಳಲ್ಲದೆ ಮಾಮೂಲಿಯ ಸೆರೆಮನೆಯಲ್ಲಿ ಅಲ್ಲ. ಅವಳ ಯೋಗಕ್ಷೇಮಕ್ಕಾಗಿ ೨೦ಕ್ಕೂ ಮೇಲ್ಪಟ್ಟು ಸೇವಕ ವರ್ಗದವರಿದ್ದರು. ಬ್ರಿಟಿಶರ ಕಾವಲು ಇದ್ದಿರಲೂ ಸಾಕು. ಆದರೂ ರಾಯಣ್ಣ ಮನಸ್ಸು ಮಾಡಿದ್ದರೆ ಅವಳನ್ನು ಗುಟ್ಟಾಗಿ ಸಂದರ್ಶಿಸುವುದು ಅಸಾಧ್ಯವೇನೂ ಇರಲಿಲ್ಲ. ಆದಕಾರಣ ಆಗೀಗ ರಾಯಣ್ಣ ಅವಳನ್ನು ಭೇಟಿಯಾಗಿರಲೂಬಹುದು. ಏನಿದ್ದರೂ ಅವಳಿಗೆ ರಾಯಣ್ಣನ ವಿವಿಧ ದಾಳಿಗಳ ಪರಿಚಯವು ಇದ್ದುದಂತೂ ಸ್ಪಷ್ಟವೇ ಇದೆ. ಹೀಗಿರುವಾಗ ಸುರುವಿಗೆ ನಿಸ್ಬತನು ರಾಯಣ್ಣನೇ ಅವಳ ಮೇಲೆ ದಾಳಿ ಮಾಡಿ ಅವಳ ಆಸ್ತಿಯನ್ನು ವಶಪಡಿಸಿಕೊಳ್ಳಬಹುದೆಂಬ ಸಂಶಯ ವ್ಯಕ್ತಮಾಡಿದ್ದನ್ನು ನೋಡಿದ್ದೇವೆ, ಈಗ ಮಾತ್ರ ನಿಸ್ಬತ್ ಅದರ ವಿರುದ್ಧದ ಅಭಿಪ್ರಾಯ ಹೊಂದಿದ್ದ:

'I am firmly convinced of the guilt of the Kittoor-Desainee. (She) as well as every servant and people of this country, from a strong attachment to their former government are ready and willing to obey any directive from the rebels (12-2-1830).'

ರಾಯಣ್ಣನ ಕಡೆಯ ಯಾವುದೋ ಒಂದು ಸೂಚನೆಯನ್ನು ವೀರಮ್ಮ ಕಾರ್ಯಗತಗೊಳಿಸುವಲ್ಲಿ ಉದ್ಯುಕ್ತಳಾಗಿದ್ದಿರಬಹುದೆ? ಬೈಲಹೊಂಗಲದಿಂದ ಅವಳ ಸ್ಥಾನಾಂತರವು 'at the earliest' ಆಗಬೇಕೆಂದು ಆತನು ಆಗ್ರಹಪಡಿಸುವಷ್ಟು ಅವಳ guilt ಗುರುತರವಾಗಿದ್ದಿತೆ?

ಅವಳನ್ನು ಸಾಗಿಸುವುದಕ್ಕೆ ನಿಸ್ಬತ್ ಎಷ್ಟೊಂದು ಮುಂಜಾಗ್ರತೆ ವಹಿಸಿದ್ದ! ಅದಕ್ಕಾಗಿ ಮದ್ರಾಸಿನ 18ನೇ ರೆಜಿಮೆಂಟಿನಿಂದ ಎರಡು ಸೈನ್ಯದ ತುಕಡಿಗಳನ್ನು ಕರೆಸಿದ್ದ. 'ಜಾಗೀರದಾರ ಕುದುರೆ ಸವಾರ'ರ ಪಡೆ ಇದ್ದಿತು. ಇಷ್ಟಿದ್ದರೂ ನಿಸ್ಬತನಿಗೆ ಕಾಳಜಿಯಾಯಿತು. 'You will increase the party to such strength as you may deem necessary by another detachment', ಎಂಬುದಾಗಿ ಮ್ಯಾಕ್ಲಿಯಾಪನಿಗೆ ತಿಳಿಸಿ ಇಟ್ಟಿದ್ದ.

ಇಷ್ಟೆಲ್ಲಾ ಯಾತಕ್ಕಾಗಿ? ರಾಯಣ್ಣ ತನ್ನ ಸವಾರರೊಡನೆ ಏರಿ ಬರಬಹುದೆಂಬ ಅಂದಾಜಿನಿಂದ. ಅದಕ್ಕಾಗೇ ಬೈಲಹೊಂಗಲದ ನೆರೆಯ ಹಳ್ಳಿಯಾದ ಅನಗೋಳದಲ್ಲಿ ಒಂದು

ಸಾವಿರದಷ್ಟು ಜನ ನೆರೆದಿದ್ದರು. ಮೇಲು ನೋಟಕ್ಕೆ ರಾಣಿ ವೀರಮ್ಮನ ದರ್ಶನಕ್ಕಾಗಿ ಎನ್ನಬಹುದಾದರೂ ರಾಯಣ್ಣ ಒಂದು ವೇಳೆ ಎರಿಬಂದರೆ ನೆರವಾಗುವ ಉದ್ದೇಶವೂ ಕೆಲವರಲ್ಲಿ ಇದ್ದಿರಲು ಸಾಕು. ಆದರೇನು? ರಾಯಣ್ಣ ಬರಲೇ ಇಲ್ಲ.

ಕಾರಣವನ್ನು ಊಹಿಸುವುದು ಕಷ್ಟದ್ದಾದರೂ, ತನ್ನ ಜನಬಲ ಕಡಿಮೆಯಾಗುತ್ತ ನಡೆದದ್ದೂ, ಈಚೆಗೆ ಕಿತ್ತೂರಲ್ಲಿ ಆದಂತೆ ತನ್ನ ಜನರ ಪ್ರಾಣಹಾನಿಯನ್ನು ಮಾಡಗೊಡಬಾರದು ಎಂಬುದೂ ಅವನ ವಿಚಾರ ಇದ್ದಿರಬೇಕು.

ಫಿತೂರಿ

ರಾಯಣ್ಣ ಆ ಮುಂದೆ ಅಲ್ಲಿ ಇಲ್ಲಿ ಮುತ್ತಿಗೆ ಹಾಕುತ್ತಿದ್ದ. ಹೊಸದಾಗಿ ಜನರನ್ನು ಕೂಡಿಸುತ್ತಿದ್ದ ಎಂತಲೇ ಕೃಷ್ಣರಾಯನು ಹೇಗಾದರೂ ಮೋಸದಿಂದಲಾದರೂ ರಾಯಣ್ಣನನ್ನು ಕಟ್ಟಿಹಾಕಬೇಕೆಂದು ನಿರ್ಧಾರ ಮಾಡಿದ. ಶಿವಲಿಂಗರುದ್ರನು ತನ್ನ ಮಗನನ್ನು ದತ್ತಕ ತೆಗೆದುಕೊಳ್ಳಲಿಲ್ಲವೆಂಬ ಅಸಮಾಧಾನದಲ್ಲಿದ್ದ ಖಿದಾನಪುರದ ಲಿಂಗನಗೌಡನನ್ನು ಒಲಿಸಿಕೊಂಡನು. ಲಿಂಗನಗೌಡನು ಸೇಡು ತೀರಿಸಿಕೊಳ್ಳುವ ಉದ್ದೇಶದ ಜೊತೆಗೇ ಸರಕಾರದಿಂದ ಇನಾಮನ್ನು ಪಡೆಯಬಹುದೆಂಬ ಆಮಿಷವನ್ನೂ ಹೊಂದಿದ್ದನು. ಅಂತೂ ಈ ಫಿತೂರಿಯ ಮೂಲ ವಿಚಾರವು ಕೃಷ್ಣರಾಯನದೇ ಆಗಿದ್ದಿತು. ಲಿಂಗನಗೌಡ ಒಬ್ಬನಿಂದಲೇ ಈ ಕೆಲಸ ಕೈಗೂಡದೆಂದು ಅನಿಸಿ ನೇಗಿಹಾಳದ ವೆಂಕನಗೌಡನನ್ನು ಜೊತೆಗೂಡಿಸಿದ.

ಈ ಹಂಚಿಕೆಯ ಪ್ರತಿಯೊಂದು ವಿವರವನ್ನು ಕೃಷ್ಣರಾಯನು ನಿಸ್ಬತನಿಗೆ ತಿಳಿಸಿಯೇ ಇದ್ದ. "The parties made known their scheme to me in the first instance and having obtained my consent immediately proceeded..." ಎಂದಿದ್ದಾನೆ ನಿಸ್ಬತ್.

ಪೂರ್ವ ಯೋಜನೆಯಂತೆ ರಾಯಣ್ಣನ ಸೈನ್ಯ ಸೇರಲು ಗೌಡರಿಬ್ಬರೂ ತಮ್ಮ ಸಂಗಡ 150 ಜನರನ್ನು ಕರೆತಂದಿದ್ದರು. ತನ್ನ ಪದ್ಧತಿಯಂತೆ ರಾಯಣ್ಣ ಅವರೆಲ್ಲರಿಂದ ಸ್ವಾಮಿನಿಷ್ಠೆಯ ಪ್ರಮಾಣವಚನವನ್ನು ಪಡೆದಿದ್ದ. ಇಷ್ಟೇ ಅಲ್ಲ, ತಮ್ಮ ಬಗ್ಗೆ ರಾಯಣ್ಣನಲ್ಲಿ ವಿಶ್ವಾಸ ಮೂಡುವ ದೃಷ್ಟಿಯಿಂದ ಅವರೂ ಕೆಲವು ದಾಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. 'ನಾನು ಮತ್ತು ಅವರು ಸೇರಿ ಧಾರವಾಡ ತಾಲ್ಲೂಕಿನ ಗಿಡದ-ಹುಬ್ಬಳ್ಳಿಯನ್ನು ಸುಟ್ಟುಹಾಕಿದೆವು' ಎಂದು ರಾಯಣ್ಣನೇ ಹೇಳಿದ್ದಾನೆ. (ದೊರೆತಿರುವ ದಾಖಲೆಗಳ ಪ್ರಕಾರ ಇದುವೆ ರಾಯಣ್ಣನ ಕಡೆಯ ದಾಳಿ).

ಆದರೆ ರಾಯಣ್ಣನನ್ನು ಮೋಸದಿಂದಲೇ ಆಗಲಿ ಹಿಡಿಯುವುದು ಅಷ್ಟು ಸುಲಭವಿರಲಿಲ್ಲ. ಅವನದೇ ಖಾಸ ಅಂಗರಕ್ಷಕ ಪಡೆ ಸದಾ ಅವನೊಟ್ಟಿಗೆ ಇದ್ದಿತು. ಅದರಲ್ಲಿ ಕೆಲವು ಪಟಿಂ ಜನರಿದ್ದರು. ತುಸು ಅಂತರದಲ್ಲಿ ಅವನಲ್ಲಿ ನಿಷ್ಠೆಯಿಟ್ಟಿದ್ದ ಸೈನಿಕರೂ ಇದ್ದರು.

ನಿಸ್ಬತನ ಪ್ರಕಾರ ಆ ಗೌಡದ್ವಯರ ಬಗ್ಗೆ ರಾಯಣ್ಣನಿಗೆ ವಿಶ್ವಾಸ ಮೂಡಿರಲಿಲ್ಲ. ಏಕೆಂದರೆ ಗಿಡದಹುಬ್ಬಳ್ಳಿ ಹಾಗೂ ಇನ್ನೊಂದು ಊರಿನ ಮೇಲಿನ ದಾಳಿಯಲ್ಲಿ ಅವರು ಕಾರ್ಯಶ್ರದ್ಧೆಯನ್ನು ತೋರಿರಲಿಲ್ಲ. ಹಾಗೆಂದು ಅವರನ್ನು ಸುಲಭವಾಗಿ ಎದುರು ಹಾಕಿಕೊಳ್ಳುವಂತಿರಲಿಲ್ಲ. ತಮ್ಮ ಸಂಗಡ ಅವರು ನೂರಕ್ಕೆ ಮೇಲ್ಪಟ್ಟು ಅನುಯಾಯಿಗಳನ್ನು ಕರೆತಂದಿದ್ದರಲ್ಲವೆ.

ರಾಯಣ್ಣನ ಸೆರೆ

ಕೊನೆಗೊಮ್ಮೆ ಆ ದುರ್ದಿನ ಬಂದೊದಗಿತು (೮-೪-೧೮೩೦). ಗಿಡದ-ಹುಬ್ಬಳ್ಳಿಯ ದಾಳಿಯನ್ನು ಮುಗಿಸಿದ ಮೇಲೆ ಇರಬೇಕು. ಬೆಳಗಿನ ೧೦ ಗಂಟೆಯ ಸಮಯ. ರಾಯಣ್ಣ ತನ್ನ ಆಶ್ರಯದ ಅಡವಿಗೆ ಬಂದ. ರಕ್ತಸಿಂಚಿತವಾದ ತನ್ನ ಖಡ್ಗವನ್ನು ಹತ್ತಿರದ ಝರಿಯಲ್ಲಿ ತೊಳೆದು, ಸ್ನಾನವನ್ನು ಮುಗಿಸಿ ರಾಯಣ್ಣ ಒದ್ದೆ ಮೈಯಿಂದ ನಿಂತಿದ್ದ. ಆಗ ಪಟದಮ್ಮನವರ ಲಕ್ಯಾ ಓಡುತ್ತ ಬಂದ. ಅವನು ಲಿಂಗನಗೌಡನ ಕಡೆಯವನೇ. ಹೇಳಿದ್ದು ಹೀಗೆ: 'ರಾಯಣ್ಣಾ, ರಾಯಣ್ಣಾ, ಲಿಂಗನಗೌಡ ತನ್ನ ಜನರೊಡನೆ ನಿನ್ನನ್ನು ಕೊಲ್ಲಲೆಂದು ಧಾವಿಸಿ ಬರುತ್ತಿದ್ದಾನೆ.'

ಒದ್ದೆಯಾಗಿದ್ದ ರಾಯಣ್ಣ ತನ್ನ ಖಡ್ಗವನ್ನು ಅವನ ಕೈಗಿತ್ತು, ಬಟ್ಟೆ ಧರಿಸಿಕೊಳ್ಳುತ್ತ ತುಸು ನಡೆದು ಬರುವಷ್ಟರಲ್ಲಿ, ಐದಾರು ಜನ ಶೇತ್ಸನದಿಗಳು ಬಂದರು. ಅವರ ಕೈಯಲ್ಲಿ ಶಸ್ತ್ರಗಳೇನೂ ಇರಲಿಲ್ಲ. ಅಲ್ಲದೆ, ಅವರು ತನ್ನ ಪೈಕಿಯೇ ಎಂದು ಲಕ್ಯಾ ಹೇಳಿದ. ಅಷ್ಟರಲ್ಲಿ ಅವರು ಹಿಂದಿನಿಂದ ಬಂದು ಗುದಮುರಿಗೆ ಹಾಕಿ ರಾಯಣ್ಣನನ್ನು ಹಿಡಿದುಕೊಂಡರು. "ಲಕ್ಯಾ, ನನ್ನ ಖಡ್ಗವನ್ನು ಕೊಡೊ" ಎಂದು ರಾಯಣ್ಣ ಕೂಗಿದ. ಆತ ಕೊಡಲಿಲ್ಲ. ಆ ಕೂಡಲೇ ಲಿಂಗನಗೌಡ ಇನ್ನಷ್ಟು ಜನರೊಂದಿಗೆ ಆ ಸ್ಥಳಕ್ಕೆ ಬಂದ. ರಾಯಣ್ಣನ ಅಂಗರಕ್ಷಕ ಪಡೆಯವರು ಕೆಲವರು ಅಲ್ಲಿ ಇದ್ದರೂ, ಅವರು ಸುಮ್ಮನಿದ್ದರಂತೆ. ಆಮೇಲೆ ರಾಯಣ್ಣನನ್ನು ಒಂದು ಹೊರಸಿಗೆ ಕಟ್ಟಿಹಾಕಿದರು.

'The whole plot was throughout conducted with much coolness and intrepidity' ಎಂದು ನಿಸ್ಬತ್ ಹೆಮ್ಮೆಯಿಂದ ದಾಖಲಿಸಿದ್ದುದು ನಿಜವೇ ಆಗಿದ್ದಿತು.

ಆ ಮುಂದೆ ಅನೇಕರು – ೪೦೦ಕ್ಕೂ ಮಿಕ್ಕಿದ ಜನ – ತಾವಾಗಿ ಶರಣಾಗತರಾದರಂತೆ. ಅವರಲ್ಲಿ ಕೆಲವರನ್ನು ಮಾತ್ರ (ಒಟ್ಟಿಗೆ ೧೩ ಜನ) ಸೆರೆಯಲ್ಲಿಟ್ಟು ಅವರ ಮೇಲೆ 'ರಾಜದ್ರೋಹ'ದ ಆರೋಪ ಹೊರಿಸಲಾಯಿತು. ಅವರಲ್ಲಿ ಜೈನರು, ಬೇಡರೂ ಇದ್ದರು. ಅಪ್ಪೋಣಿ ಎಂಬ ಮುಸಲ್ಮಾನನೂ ಇದ್ದ. Yelmaiah (ಇದರ ಉಚ್ಚಾರ ಹೇಗೊ?) ಎಂಬ ಹೆಸರಿನ ಮುದುಕನೂ ಇದ್ದ.

ದಿನಾಂಕ ೨೮-೪-೧೮೩೦ರಂದು ಇವರೆಲ್ಲರ ಪ್ರಾಥಮಿಕ ಸ್ವರೂಪದ ವಿಚಾರಣೆಯನ್ನು ಸಂಪಗಾವಿಯಲ್ಲಿ ನಡೆಸಲಾಯಿತು. ರಾಯಣ್ಣನ 'ಕಬೂಲಿ' ಜವಾಬು ಆ ದಿನದ್ದು. ಯಾವುದೇ ಸಂಗತಿಯನ್ನು ಮರೆಮಾಚದೆ ಕೇಳಿದ್ದಕ್ಕೆಲ್ಲ ಉತ್ತರಿಸಿದ್ದಾನೆ - ರಾಯಣ್ಣ, ತನಗಿನ್ನು ಮರಣದಂಡನೆ ಎಂದು ಗೊತ್ತಿದ್ದರೂ ನಿರ್ಭೀತಿಯಿಂದ ಹೇಳಿದ್ದಾನೆಂಬುದನ್ನು ಮನಗಂಡಿದ್ದೇವೆ. ಮುಂದೆ ಸುಮಾರು ೮ ತಿಂಗಳ ಕಾಲ ರಾಯಣ್ಣನ ಸೆರೆಮನೆ ವಾಸ. ಓರ್ವ ವಿಶೇಷ ನ್ಯಾಯಾಧೀಶನ (ಕಮೀಶನರ್ ಆಂಡರ್ಸನ್) ಮುಂದೆ ವಿಚಾರಣೆಯ ನಾಟಕ ನಡೆಯಿತು. (೧೬-೧೨-೧೮೩೦). ಎಲ್ಲ ಗಲಭೆಗಳಿಗೆ ರಾಯಣ್ಣನೇ ಕಾರಣ; ಅವನೇ ಮುಖಂಡ ಎಂಬುದಾಗಿ ನಿರ್ಧರಿಸಿ ಅವನಿಗೆ ಫಾಸಿ ಶಿಕ್ಷೆಯನ್ನು ವಿಧಿಸಲಾಯಿತು.

ನಂದಗಡದಲ್ಲಿ ಫಾಸಿ ಶಿಕ್ಷೆಯ ಕಾರ್ಯಾಚರಣೆ. ಮುಂದೆ ಆ ಸ್ಥಳದಲ್ಲಿ ಆಲದ ಮರದ ನೆಡುವಿಕೆ. ಅದರ ಕಟ್ಟೆಯ ಮೇಲೆ ಒಂದು ಗುಡಿ. ಅದರ ಮಹಾತ್ಮೆ, ಜನರು ಅದರ ಹೆಸರಿನಲ್ಲಿ ಇಂದಿಗೂ ಹರಕೆ ಹೊತ್ತಿರುವುದೂ, ತಿಳಿದ ವಿಷಯವೇ. ಆದರೆ ರಾಯಣ್ಣನ ಮರಣಾನಂತರ ಮೂರು-ನಾಲ್ಕು ದಶಕಗಳಲ್ಲಿಯೇ ಅದರ ಅತೀಂದ್ರಿಯತೆ ನೆಲೆಗೊಂಡುಬಿಟ್ಟಿತ್ತು. ಸ್ಟೋಕ್ಸ್ ಹೇಳುತ್ತಿದ್ದಾನೆ. ಆ ಮಾತನ್ನು:

'Under the shade of it (i.e. the banyan tree) a temple has been erected, to which poor people who desire offspring or wealth or health, make pilgrimages from great distances. And where the husbandsmen, on their way with their products to the market in Nandgad, stop to vow an offering on their return, if they obtain good prices. This deification of Rayappa is the most singular part of this history. Whether....he be now glorified on account of the excess of misery he occasioned in his lifetime, or whether his popularity as a leader of the poorer classes in a cause which has their sympathy was the reason of his apotheosis are questions that naturally present themselves.'

ಗೌಡದ್ವಯರು ಮತ್ತು ಕೃಷ್ಣರಾಯ

ಯಾವ ಇನಾಮಿನ ದೆಸೆಯಿಂದ ಲಿಂಗನಗೌಡ, ವೆಂಕನಗೌಡರು ರಾಯಣ್ಣನನ್ನು ಹಿಡಿದುಕೊಟ್ಟರೋ ಅದು ಅವರಿಗೆ ಸಿಕ್ಕಿತೇ? ಹೌದು ತಲಾ ೩೦೦ ರೂ. ಮಾತ್ರ! ದೂರದ ಮುಂಬಯಿಯಲ್ಲಿ ಕುಳಿತ ಮೇಲಧಿಕಾರಿಗಳಿಗೆ ಅವರ 'ಸಾಹಸ'ದ ಕಲ್ಪನೆ ಹೇಗೆ ಬಂದೀತು?

ನಿಸ್ಬತನಿಗೆ ಮಾತ್ರ 'ಇಷ್ಟೇನೆ?' ಎಂಬ ಬೇಸರ ಮೂಡಿತು. ಈ ಇನಾಮಿನ ಹಣವನ್ನು ಎರಡು ಪಟ್ಟಾದರೂ ಹೆಚ್ಚಿಸಬೇಕಲ್ಲದೆ, ಶಾಶ್ವತ ಸ್ವರೂಪದ ಇನಾಮನ್ನೂ ಕೊಡಬೇಕೆಂದು ಒತ್ತಾಯಿಸಿ ಬರೆದನು. ನಿಸ್ಬತ್ ಅದರ ಸಮರ್ಥನೆ ಮಾಡಿದ ರೀತಿ ಗಮನಾರ್ಹವಾದುದು:

'A much more beneficial effect is likely to be produced throughout the country by the circumstance... of the above achievement having been accomplished by the police, than if the same has been attained by a body of military.'

ರಾಯಣ್ಣನಂತಹವರನ್ನು ಸದೆಬಡೆಯಲು ಮಿಲಿಟರಿ ಶಕ್ತಿಯೇ ಬೇಕಾಗಿತ್ತು. ಅಷ್ಟರ ಮಟ್ಟಿಗಿನ ಶ್ರಮ ಹಾಗೂ ವೆಚ್ಚವನ್ನು ಉಳಿಸಿ ಮೋಸದ ಸುಲಭೋಪಾಯದಿಂದ ಮುಗಿಸಿಬಿಟ್ಟಿದ್ದರಲ್ಲ! ಕೊನೆಗೆ ಲಿಂಗನಗೌಡನಿಗೆ ಕಿತ್ತೂರಿನ ಹತ್ತಿರದ ಕಲ್ಲೊಳ್ಳಿಯೂ ವೆಂಕಟಗೌಡನಿಗೆ ಧಾರವಾಡ ತಾಲ್ಲೂಕಿನ ಡೋರಿ ಹಳ್ಳಿಯೂ - ಇನಾಮ ಗ್ರಾಮಗಳಾಗಿ ದೊರೆತುವು.

ಇತ್ತ ಕೃಷ್ಣರಾಯನಿಗೆ? ಅದಕ್ಕೆ ಸಂಬಂಧಿಸಿದ ದಾಖಲೆಗಳು ಸಿಕ್ಕಿಲ್ಲ. ನಿಸ್ಬತ್ ಮಾತ್ರ ಅವನನ್ನು ಬಾಯ್ತುಂಬ ಹೊಗಳಿ ಬರೆದಿದ್ದಾನೆ:

'I cannot speak too highly of the Amaldar for his unwearied assiduity... and the zest for executing a service of uncommon danger..... His subsequent zeal and activity have established for him a still stronger claim.'

ಸಮಾರೋಪ

ಇಷ್ಟರವರೆಗಿನ ರಾಯಣ್ಣನ ಸಾಹಸ ಕಥನದಿಂದ ಕೆಲವೊಂದು ಅಂಶಗಳು ನಿಷ್ಪನ್ನವಾಗುವುವು.

ಮೊದಲನೆಯದು ಕಿತ್ತೂರಿನ ಮುಖ್ಯ ಘರ್ಷಣೆಯ ಕಾಲಕ್ಕೆ (ಅಕ್ಟೋಬರ್-ಡಿಸೆಂಬರ್ 1828) ಅವನು ಒಬ್ಬ ಶೇತ್ಸನದಿ-ಬಂಡುಗಾರನಿದ್ದನಲ್ಲದೆ ನಾಯಕತ್ವದ ಮಟ್ಟದಲ್ಲಿ ಅಲ್ಲ. ಅನಂತರ ಅವನು ದಂಗೆ ಎದ್ದುದರ ಕಾರಣ. ಅವನ ಆಸ್ತಿಯ ಒಡೆತನಕ್ಕೆ ಧಕ್ಕೆ ಬಂತು - ಎಂದು. ಅದರಿಂದ ಅವನ ಸ್ವಾಭಿಮಾನ ಕೆರಳಿತು. ಸ್ವಾತಂತ್ರ್ಯದ ಹಂಬಲವನ್ನು ಮೂಡಿಸಿತು. ಕಿತ್ತೂರ ಸಂಸ್ಥಾನವನ್ನು ಬ್ರಿಟಿಶರು ನಿರ್ನಾಮಗೊಳಿಸಿದ್ದನ್ನು ಪ್ರತಿಭಟಿಸಲೆಂದು ಅವನು ಸುರುವಿಗೇ ಸಿಡಿದೇಳಲಿಲ್ಲ. ಹಾಗಿದ್ದರೆ ೧೮೨೯-೩೦ರಿಂದ ಮುಂದಿನ ನಾಲ್ಕು ವರ್ಷಗಳವರೆಗೆ ಸುಮ್ಮನೆ ಉಳಿಯುತ್ತಿದ್ದಿಲ್ಲ. ಅಲ್ಲದೆ ತಾನು ದಂಗೆ ಎದ್ದುದರ ನಿರ್ದಿಷ್ಟವಾದ ಕಾರಣವನ್ನು ಅವನೇ ಹೇಳಿದ್ದಾನೆ.

ಸ್ವಾತಂತ್ರ್ಯದ ಹಂಬಲ ಅವನಿಗಿದ್ದಂತೆ ಕಿತ್ತೂರ ಪರಿಸರದ ಮತ್ತು ಬೆಳಗಾವಿಯ ದಕ್ಷಿಣ ಭಾಗದ ಜನತೆಯಲ್ಲಿಯೂ ಓತಪ್ರೋತವಾಗಿ ಇದ್ದಿತು. ಜೊತೆಗೆ ಕಿತ್ತೂರ ಸಂಸ್ಥಾನವು ನಿಶ್ಶೇಷವಾದದ್ದರ ಬಗ್ಗೆ ಅವರಲ್ಲಿ ನಿತಾಂತವಾದ ಅಸಮಾಧಾನದ ಹೊಗೆಯನ್ನು ಹೊಮ್ಮಿಸಿತ್ತು. ಕಿತ್ತೂರಿನ ದೇಸಾಯಿಗಳು ವಿಶೇಷತಃ ಹಿರಿಯ ಮಲ್ಲಸರ್ಜನು ಸಾಮಾನ್ಯ [illegible] ಕೈವಾರಿಯಾಗಿದ್ದ.

ಈ ವಿಷಯವಾಗಿ ಸ್ಟೋಕ್ಸ್ ಹೃದ್ಯವೆನಿಸುವ ರೀತಿಯಲ್ಲಿ ವಿಶ್ಲೇಷಿಸಿದ್ದಾನೆ:

'The Desays of Kittur had always been regarded with affection by the poorer classes of this country. Their memory is still tenderly cherished. Mallasarja the last Desay but one, who ruled for thirty years and is the best remembered had not spared the wealthier classes of the population from whom he often found pretexts to make large exractions.... Measures of this sort only increased his popularity with the humbler classes and therefore any outbreak with the ostensible aim of restoring the family had their fullest sympathies.'

ಏನಾದರೂ ನೆಪದಿಂದ ಸಿರಿವಂತರಿಂದ ಹಣ ಮುಂತಾದ್ದನ್ನು ಪಡೆದು ಬಡವರ ಕಲ್ಯಾಣಕ್ಕಾಗಿ ಅದನ್ನು ಬಳಸುವುದೆ? ಎಷ್ಟೊಂದು ಉದಾತ್ತತೆ!

ರಾಯಣ್ಣನ ಕಾಲದಲ್ಲಿ ಇದರ ಪ್ರಾಪ್ರೋಳಪು (reflection) ಯಾವ ರೀತಿ ಜನತೆಯಲ್ಲಿ ವ್ಯಕ್ತವಾಯಿತೆಂಬುದನ್ನು, ನಿಸ್ಪತ್‌ನ ದಾಖಲೆಗಳಿಂದಲೇ ನೋಡೋಣ:

'There is scarcely an individual of the Kittur province who would not directly assist in any measure, which he conceived would tend to the re-establishment of its independence.

Every day brings to light some fresh disclosure to confirm the belief that the whole province is united in one common cause... namely to recover their independence.

The fact that almost all the heads of the villages and the whole of Shetsanadis throughout the province being engaged in the insurrection is alone sufficient to prove...

The people of the country from a strong attachment to their former government are ready and willing to obey any directive from.. which they may receive.'

ರಾಯಣ್ಣ ಉಚ್ಚ ಕುಲದಲ್ಲಿ ಜನಿಸಿದವನೇನೂ ಅಲ್ಲ; ರಾಜನೀತಿ ವಿಶಾರದನೇನಲ್ಲ. ಮಹಾಮುತ್ಸದ್ದಿ ಎಂದೂ ಹೇಳಲಾರೆವು. ಆದಾಗ್ಯೂ ಅವನ ಸಂಘರ್ಷದ ಕರೆಗೆ ನೂರಾರು, ಸಾವಿರಾರು ಜನ ಓಗೊಟ್ಟಿರಲ್ಲ! ಅದರ ಕಾರಣಗಳು ಎರಡು; ಒಂದು, ಅವನಲ್ಲಿದ್ದ ನಿಸ್ಸೀಮ ಧೈರ್ಯ ಮತ್ತು ನೇರ ಸ್ವಭಾವ. ಇನ್ನೊಂದು, ಜನತೆಯಲ್ಲಿಯೇ ಹುದುಗಿದ್ದ ಕಿತ್ತೂರ ಸಂಸ್ಥಾನದ ಮೇಲಿನ ಅಪ್ಪಟ ಗೌರವ ನಿಷ್ಠೆ.

ಜನತೆಯ ಈ ಭಾವನೆ ಕ್ರಿಯಾತ್ಮಕವಾಗಿಯೂ ವ್ಯಕ್ತವಾಗಿದೆ. ಮೊದಲನೆಯದಾಗಿ ರಾಯಣ್ಣ ಮದ್ದು ಕೇಳಿದಾಗೆಲ್ಲ ಕೂಡಿಸಿ ಕೊಟ್ಟಿದ್ದಾರೆ. ರಾಯಣ್ಣ ಒಂದು ಕಡೆಗೆ `ತನಗೆ

೬,೫೦೦ ರೂ.ಗಳು ಜಮೆಯಾದುವು' ಎಂದು ತನ್ನ ಜವಾಬಿನಲ್ಲಿ ಪ್ರಸ್ತಾಪಿಸಿದ್ದುಂಟು. ಹಳ್ಳಿಗರಿಂದ ಹತ್ತಿಪ್ಪತ್ತು ರೂ.ಗಳು ಜಮೆಯಾದದ್ದೂ ಇದೆ. ಏನಿದ್ದರೂ ಬಾರಿ, ಭಾವೀ ದೇಸಾಯಿಯಾಗಬಹುದಾಗಿದ್ದ ಸವಾಯಿ ಮಲ್ಲಸರ್ಜನನ ಬರಿ ಹೆಸರನ್ನು ಹೇಳಿಯೂ ಹಣ ಸಂಗ್ರಹವಾಗಿದ್ದುದು ಏನನ್ನು ತೋರಿಸುತ್ತದೆ?

ಜನತೆಯ ಇನ್ನೊಂದು ಸಕ್ರಿಯ ಸಹಾಯದ ಬಗೆ ಎಂದರೆ, ಸರಕಾರಕ್ಕೆ ಅವನ ಚಲನವಲನಗಳನ್ನು ತಿಳಿಯಗೊಡುತ್ತಿದ್ದಿಲ್ಲ. ('The peons of some of the villages in that part of the country did not afford any assistance against the insurgents. They appear to act in concert with them, furnishing them with information and offering no resistance to their attacks.') ಬದಲಾಗಿ ಸರಕಾರೀ ಸೀಪಾಯಿಗಳ ಸುಳಿವನ್ನು ರಾಯಣ್ಣನಿಗೆ ತಿಳಿಸುತ್ತಿದ್ದರು. ಹೀಗಾಗಿ ಅವರು ಎಲ್ಲಿ ಇರುತ್ತಿದ್ದಿಲ್ಲವೋ ಅಲ್ಲಿ ಅವನು ದಾಳಿ ಮಾಡುತ್ತಿದ್ದ.

ಈ ಬಾಬತಿನಲ್ಲಿ ಜನತೆ ಸರಕಾರದ ಕಡೆಯವರಿಗೇ ಮೋಸ ಮಾಡಿದ ಪ್ರಸಂಗವೊಂದು ಸರಕಾರೀ ದಾಖಲೆಯಲ್ಲಿದೆ. ಬೀಡಿ ಊರಿನ ಫಕೀರನಾಯಕ ಎಂಬವನು, ರಾಯಣ್ಣನ ಸುಳಿವನ್ನು ಕೊಡುವೆನೆಂದು ಕಾವಲುಪಡೆಯೊಂದರ ಮುಖ್ಯಸ್ಥನಾದ ರಾಮಪ್ಪ ಎಂಬವನಿಗೆ ಹೇಳಿ, ಗೊಂಡಹಳ್ಳಿಯಲ್ಲಿ ಅವರಿವರನ್ನು ಭೇಟಿಯಾಗತೊಡಗಿದನಂತೆ. ರಾಮಪ್ಪ ಮುಂಜಾಗ್ರತೆ ಎಂದು ತನ್ನ ಇಬ್ಬರು ಹಸ್ತಕರನ್ನು ಫಕೀರನಾಯಕನ ಹಿಂದೆ ಕಳಿಸಿದ್ದ. 'ಆಮೇಲೆ ತಿಳಿದು ಬಂದಿತು ಆತ ತನ್ನನ್ನು ವಂಚಿಸಿದ' ಎಂಬುದಾಗಿ ರಾಮಪ್ಪ ಮೇಲಿನವರಿಗೆ ವರದಿ ಮಾಡಿದ.

ಅದರಂತೆ ಅನೇಕ ಸರಕಾರೀ ಕಾವಲಿನವರು ರಾಯಣ್ಣ ಬಂದೊಡನೆ, ಅವನೆದುರು ಸೆಣಸ ಹೋಗದೆ ಅವನನ್ನೇ ಕೂಡಿಕೊಳ್ಳುತ್ತಿದ್ದರು. (ಅಂಥ ಒಂದೆರಡು ಪ್ರಸಂಗಗಳನ್ನು ಈ ಹಿಂದೆ ಕೊಟ್ಟದ್ದಿದೆ).

ಸರಕಾರದೊಡನೆಯ ಒಟ್ಟಿನ ಸೆಣಸಾಟದಲ್ಲಿ ರಾಯಣ್ಣ ಯಾವ ಯುದ್ಧದಲ್ಲಿ ಗೆದ್ದ; ಯಾವುದರಲ್ಲಿ ಸೋತ – ಎಂದು ಕೇಳಿದರೆ ಹೇಳುವಂತಹದೇನೂ ಇಲ್ಲ. ದೊಡ್ಡ ಸುಸಜ್ಜಿತ ಸೈನ್ಯವನ್ನು ಕಟ್ಟಿಕೊಂಡು ಅವನು ಯುದ್ಧ ಮಾಡಿದರೆ ತಾನೇ ಆ ಮಾತು? ಅವನ ಉದ್ದೇಶ ಸ್ಪಷ್ಟವಾಗಿದ್ದಿತು. ತನಗಾದ ಅನ್ಯಾಯಕ್ಕೆ ಪ್ರತೀಕಾರ ಹೂಡಬೇಕೆನ್ನುವುದು ನಿಮಿತ್ತವಾಯಿತು. ಮುಂದೆ ಕಿತ್ತೂರನ್ನು ಕಬಳಿಸಿದ ಸರಕಾರದ ವಿರುದ್ಧ ಜನತೆಯ ಅಸಂತೋಷ ಸೇರಿದ್ದರಿಂದ ಅವನಲ್ಲಿಯ ಸ್ವಾತಂತ್ರ್ಯದ ಕೆಚ್ಚು ವಿಶಾಲ ವ್ಯಾಪ್ತಿಯನ್ನು ಪಡೆಯಿತು. ಅವನ ಗುರಿ ಬ್ರಿಟಿಶರನ್ನೇ ಈ ದೇಶದಿಂದ ಹೊರಹಾಕಬೇಕು ಎನ್ನುವುದಿರದೆ, ಅವರ ಆಡಳಿತ ಯಂತ್ರ ನಡೆಯಗೊಡಬಾರದು ಮತ್ತು ಸಾಧ್ಯವಾದರೆ ಕಿತ್ತೂರ ದೇಸಗತಿಯನ್ನು ಪುನಃ ಪ್ರಸ್ಥಾಪಿಸಬೇಕು ಎಂಬುದಾಗಿತ್ತು.

ಹಾಗಿದ್ದರ ಆಡಳಿತಕ್ಕೆ ವ್ಯತ್ಯಯ ಬರಲು ಏನು ಮಾಡಬೇಕು? ಅವರ ಕಾಗದ ಪತ್ರಗಳ ನಾಶ, ಚಾವಡಿ ಕಚೇರಿಗಳಿಗೆ ಬೆಂಕಿ, ತಿಜೋರಿಯ ಹಣದ ಲೂಟಿ, ಸರಕಾರೀ ಪತ್ರ ಸಂಚಾರಕ್ಕೆ ತಡೆ – ಮುಂತಾದ ಕಾರ್ಯಗಳನ್ನು ಕೈಗೊಂಡನು. ಯಾವುದನ್ನು ೧೯೪೨ರ ಆಗಸ್ಟ್ ಕ್ರಾಂತಿಕಾರರು ಮಾಡಹೆಳಸಿದರೋ, ಅವನ್ನೇ ರಾಯಣ್ಣ ೧೧೦ ವರ್ಷಗಳ ಹಿಂದೆಯೇ ಕೈಕೊಂಡದ್ದು ಆಶ್ಚರ್ಯವೆನಿಸುವಂತಿದೆ.

೧೮೩೦ರ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಅವನ ಚಟುವಟಿಕೆಗಳು ಜೋರಾಗಿಯೇ ಇದ್ದವು. ನಿಜಕ್ಕೂ ಬ್ರಿಟಿಶ್ ಅಧಿಕಾರಿಗಳಿಗೆ ತಾಪದಾಯಕವಾಗಿದ್ದುವು. ಮಾರ್ಚ್‌ನಲ್ಲಿ ಅದರ ಉಗ್ರತೆ ಕಡಿಮೆಯಾಯಿತೇನೊ – ಎಂದೆನಿಸುತ್ತದೆ. ಅದರ ಮುಖ್ಯ ಕಾರಣವೆಂದರೆ ಈ ಹಿಂದೆ ಹೇಳಿದಂತೆ ಅವನ ಅನುಚರ-ಸಿಪಾಯಿಗಳು ಸ್ಥಿರವಾಗಿ ಉಳಿದುಕೊಳ್ಳದಂತಾದದ್ದು; ಆಗ ಹೊಸಬರನ್ನು ಪ್ರಯತ್ನಪೂರ್ವಕವಾಗಿ 'ರಿಕ್ರೂಟ್' ಮಾಡಬೇಕಾಗುತ್ತಿತ್ತು. ಲಿಂಗನಗೌಡನು ಇದರ ಲಾಭವನ್ನು ಮಾಡಿಕೊಂಡ. ಸುಮಾರು ೧೫೦ ಜನರನ್ನು ಜಮಾಯಿಸಿಕೊಂಡು ಬಂದದ್ದರಿಂದ ರಾಯಣ್ಣ ಅವನನ್ನು ಬರಮಾಡಿಕೊಂಡ. ಅದರ ಪರಿಣಾಮ ದುರಂತಮಯವಾಯಿತು. ರಾಯಣ್ಣನ ಬಂಧನದ ಅನಂತರ ಇಡೀ ಹೋರಾಟವು ಕುಸಿದು ಬಿದ್ದಿತು.

ಆದರೆ ಕಿತ್ತೂರ ದೇಸಗತಿಯನ್ನು ಪುನಃ ಪ್ರಸ್ಥಾಪಿಸುವ ಅಪೇಕ್ಷೆ ಜನತೆಯಿಂದ ಪೂರ್ಣತಃ ಕಣ್ಮರೆಯಾಗಿರಲಿಲ್ಲ. ಪ್ರಸಂಗ ಒದಗಿ ಬಂದರೆ ಮತ್ತೆ ಜನರು ಅದರಲ್ಲಿ ಉದ್ಯುಕ್ತರಾಗುತ್ತಿದ್ದರು. ಹುಡುಗನಾಗಿದ್ದ ಮಾಸ್ತಮರಡಿಯ ಸವಾಯಿ ಮಲ್ಲಸರ್ಜ ಮುಂದೆ ತನ್ನ ತರುಣ ವಯಸ್ಸಿನಲ್ಲಿ ದಂಗೆ ಎದ್ದ. ರಾಯಣ್ಣನ ಅಂತ್ಯವಾಗಿ ೧೪ ವರ್ಷಗಳು ಕಳೆದ ಮೇಲೆ, ಆಗೂ ಜನ ಮತ್ತೆ ಸಹಾಯ ಮಾಡಲು ಮುಂದಾದರು.

'Through the instrumentality of one Luxman Krishna Josee, small sums of money and liberal promises were disseminated throughout these districts. Several of the old servants of the late Dessae had engaged to assemble large bodies of men required'– (E. W. West: Southern Maratha Country).

ಹೀಗೆ ಕೂಡಿದ ಹಣದಿಂದ, ನಿಜಾಮನ ರಾಜ್ಯದಿಂದ ಕೊಲ್ಲಾಪುರ ಸಂಸ್ಥಾನ ಹಾಗೂ ಗೋವೆಯ ಕಡೆಗಳಿಂದ ಸಿಪಾಯಿಗಳನ್ನು ಕಲೆ ಹಾಕಬೇಕು ಎಂದೆಲ್ಲ ಗುಪ್ತವಾಗಿ ಎತ್ತುಗಡೆ ನಡೆದಿತ್ತು. ಆದರೆ ಈ ಸಂಚಿನ ರಹಸ್ಯ ಬಯಲಾಗಿಬಿಟ್ಟಿತು. ಯಾರಿಂದ? ಸವಾಯಿ ಮಲಸರ್ಜನಿಗೆ ಹೆಣ್ಣುಕೊಟ್ಟಿದ್ದ ವಂಟಮುರಿ ದೇಸಾಯಿಯಿಂದ, ರಾಯಣ್ಣನನ್ನು ಹಿಡಿದುಕೊಟ್ಟ ಲಿಂಗನಗೌಡ ಸವಾಯಿ ಮಲ್ಲಸರ್ಜನಿಗೆ ದೂರದಲ್ಲಿ ಸೋದರಮಾವನಿದ್ದರೆ, ಈತ ಖಾಸಾ ಮಾವ! ಇತಿಹಾಸದ ಪುನರಾವೃತ್ತಿ ಇಂಥ ವಿಷಯಗಳಲ್ಲಿಯೂ ಕಂಡುಬರಬಲ್ಲುದು!

೮. ಕಿತ್ತೂರಿನ ಕಿರಿಯ ರಾಣಿ ವೀರಮ್ಮ

ಪ್ರಸಿದ್ಧ ವ್ಯಕ್ತಿಯೊಬ್ಬರ ಸಾಧನೆಯನ್ನು ನಾವು ಪ್ರಶಂಸಿಸುತ್ತೇವೆ. ಆ ಪ್ರಶಂಸೆಯ ವ್ಯಾಪ್ತಿ ವಿಶಾಲವಾಗುತ್ತ, ಅವರನ್ನು ತುಂಬಾ ಮೇಲೆತ್ತಿ ಹಿಡಿಯುತ್ತೇವೆ. ಅದರ ಒಂದು ಪರಿಣಾಮವೆಂದರೆ, ಆ ವ್ಯಕ್ತಿಯ ಸಾಧನೆಗೆ ಕಾರಣರಾಗಿ ಮತ್ತು ಜೊತೆಗಾರರಾಗಿ ಇದ್ದವರ ಪಾತ್ರವನ್ನು ನಾವು ಉಪೇಕ್ಷಿಸುತ್ತೇವೆ.

ಪ್ರಸ್ತುತ ಕಿತ್ತೂರ ಇತಿಹಾಸದಲ್ಲಿ ಬರುವ ಇಬ್ಬರು ರಾಣಿಯರಿಗೂ ಈ ಮಾತು ಅನ್ವಯಿಸುತ್ತದೆ. ಚೆನ್ನಮ್ಮ ರಾಣಿ ನಿಸ್ಸಂಶಯವಾಗಿ ಪ್ರಮುಖ ಪಾತ್ರ ವಹಿಸಿದವಳು. ಅವಳ ನಾಡಪ್ರೇಮ, ಧೀಮಂತಿಕೆ ಮತ್ತು ರಾಜನೀತಿಜ್ಞತೆ ಯಾವ ಕಾಲಕ್ಕೂ ಒಡೆದು ತೋರುವಂತಹವು. ಆದರೆ ಅದನ್ನು ಎತ್ತಿ ಹಿಡಿಯುವಾಗ ಅವಳ ಜೊತೆಗಿದ್ದ ವೀರಮ್ಮನತ್ತ ನಮ್ಮ ಗಮನ ಹರಿಯ ದಂತಾಗಿದೆ. ಕಿತ್ತೂರಿನ ಚರಿತ್ರೆಗಳಲ್ಲಿ ವೀರಮ್ಮನ ಹೆಸರು ಒಂದು Passing reference ತರಹ ಬರುತ್ತದ್ದಲ್ಲದೆ ಅವಳ ಬಗ್ಗೆ ಸಮರ್ಪಕವಾಗಿ ತಿಳಿದುಕೊಳ್ಳುವ ಗೊಡವೆಗೆ ನಾವು ಹೋಗಿಲ್ಲ. ಆದ್ದರಿಂದ ಈಗಾಗಲೇ ನಮಗೆ ಗೊತ್ತಿರುವ ಬ್ರಿಟಿಶ್ ದಾಖಲೆಗಳನ್ನು ಮತ್ತು ಲಾವಣಿ ಸಾಹಿತ್ಯದ ಆಕರಗಳನ್ನು ಈ ದೃಷ್ಟಿಯಿಂದ ಪುನರಾವಲೋಕಿಸುವುದಲ್ಲದೆ ಈಚೆಗೆ ಹೊಸದಾಗಿ ದೊರೆತ ಕೆಲವು ದಾಖಲೆಗಳನ್ನು ಬಳಸಿಕೊಂಡು ಅವಳ ಬದುಕು ಮತ್ತು ಕಾರ್ಯಗಳನ್ನು ಇಲ್ಲಿ ರೂಪಿಸಬಯಸಿದೆ.

ಕಿತ್ತೂರಿನ ಹಿರಿಯ ದೊರೆ ಮಲ್ಲಸರ್ಜನ ಹೆಂಡತಿ ರುದ್ರಮ್ಮ ತಲ್ಲೂರ ದೇಸಾಯಿ ಮನೆತನದವಳು. ಚೆನ್ನಮ್ಮ ಕಾಕತಿಯ ಧೂಳಪ್ಪ ದೇಸಾಯರ ಮಗಳು. ಇವರುಗಳ ಮಗ ಶಿವಲಿಂಗ ರುದ್ರನ ಪತ್ನಿಯಾದ ವೀರಮ್ಮ ಯಾವ ಮನೆತನದಿಂದ ಬಂದವಳು? ಇದುವರೆಗಿನ ಕಿತ್ತೂರ ಚರಿತ್ರೆಯ ಗ್ರಂಥಗಳಲ್ಲಿ ಇದರ ಪ್ರಸ್ತಾಪವಿಲ್ಲ.

ಆ ಕಾಲಕ್ಕೆ ಕಿತ್ತೂರಿನಲ್ಲಿ ಸೆರೆಯಾಳಾಗಿ ಇದ್ದ ಸಬ್ ಕಲೆಕ್ಟರ್ ವಾಲ್ಟರ್ ಎಲಿಯೆಟ್ ತನ್ನ ಸ್ಮರಣಸಂಪುಟ(Reminiscence)ದಲ್ಲಿ ಇದನ್ನು ಕಾಣಿಸಿದ್ದಾನೆ. ಅದರಲ್ಲಿ ಬಂದ

ಪ್ರಕಾರ ವೀರಮ್ಮ ಹುಮನಾಬಾದಿನ (ಈಗಿನ ಬೀದರ ಜಿಲ್ಲೆ) ಓರ್ವ ಸೆಟ್ಟಿಯ ಮಗಳು. ಅಷ್ಟು ದೂರದ ಕನ್ಯೆ ಕಿತ್ತೂರಿನ ರಾಣಿ ವಾಸವನ್ನು ಅದೆಂತು ಸೇರಿದಳೊ!

ವೀರಮ್ಮನ ಮುಂದಿನ ಪ್ರಸ್ತಾಪ ಕಲೆಕ್ಟರ್ ಥ್ಯಾಕರೇಯ ಒಂದು ಪತ್ರದಲ್ಲಿದೆ. (ದಿ. ೧೪ ಸೆಪ್ಟೆಂಬರ್ ೧೮೨೪). ರೋಗಗ್ರಸ್ತ ಶಿವಲಿಂಗರುದ್ರನ ಸಾವಿನ ಬಗ್ಗೆ ವರದಿ ಮಾಡುತ್ತ "The family of the deceased consisits of his widow (ವೀರಮ್ಮ) whose age is only eleven years, his stepmother (ಚೆನ್ನಮ್ಮ) and the widow of his brother (ಜಾನಕಿಬಾಯಿ) who is above sixteen ಎಂದು ಕಾಣಿಸಿದ್ದಾನೆ.

ಬಾಲ್ಯ ವಿವಾಹವು ಸರ್ವ ಸಾಮಾನ್ಯವಿದ್ದ ಆಗಿನ ದಿನಗಳಲ್ಲಿ ವೀರಮ್ಮ ಚಿಕ್ಕವಳಿದ್ದಾಗ ಮದುವೆ ಆಗಿದ್ದದ್ದು ಸಹಜ. ಆದರೆ ಈ ಹೆಂಡತಿಯಿಂದ ತನಗಿನ್ನು ಮಕ್ಕಳಾಗುವುದಿಲ್ಲವೆಂದು ದತ್ತಕ ಮಗನನ್ನು ತರಹೊರಟ ಶಿವಲಿಂಗರುದ್ರ ಯೋಚಿಸಿದ್ದೇ ಆದರೆ ಅದು ಹಾಸ್ಯಾಸ್ಪದವೆನಿಸುವುದು. ಹಾಗಿದ್ದರೆ ಥ್ಯಾಕರೆ, ವರ್ಷ ಹೇಳಿದ್ದರಲ್ಲಿ ತಪ್ಪಾಗಿರಬಹುದೆ? ಹಾಗಾಗಲು ಸಾಧ್ಯವೇ ಇಲ್ಲ. ಮೇಲಾಗಿ ಅವಳ ಮೇಲಿನ ಲಾವಣಿ ಯೊಂದರಲ್ಲಿ (ಹೆಬ್ಬಳ್ಳಿ ಬಸವನದು) 'ಪುರುಷನ ಕೂಡೊಂದು ಕಾಲ ಸರಸವಾಡಲಿಲ್ಲಾ. ಅರಸು ಬಾಪೂಸಾಬ ಇನ್ನೊಂದೊರುಷವಿರಲಿಲ್ಲಾ' ಎಂದು ಹೇಳಿದ್ದಿದೆ. ಆದ್ದರಿಂದ 'ತನಗಿನ್ನು ಮಕ್ಕಳಾಗುವುದಿಲ್ಲ' ಎಂದು ನಿರ್ಧರಿಸಬೇಕಾದರೆ ಈ ಹಿಂದೆ ಬೇರೆ ಮದುವೆಯಾಗಿರಬೇಕು?

ಹೌದು. ಇಲ್ಲಿ ಮತ್ತೆ ಎಲಿಯೆಟ್ಟನ ಆ ದಾಖಲೆ ಪುರಾವೆಯನ್ನು ಒದಗಿಸುತ್ತದೆ: Shivalinga Rudra Sarja.... had been twice married but both his wives had died without children and he was betrothed to a third - the daughter of the Setty of Humanabad..... ಶಿವಲಿಂಗರುದ್ರ ಈ ಮುಂಚೆ ಎರಡು ಬಾರಿ ಮದುವೆಯಾಗಿದ್ದ ಅಂಶವು ಮೊದಲ ಬಾರಿಗೆ ವ್ಯಕ್ತವಾಗಿದೆ.

ವೀರಮ್ಮನ ಎರಡನೆಯ ಪ್ರಸ್ತಾಪವೂ ಥ್ಯಾಕರೇನ ನಿಮಿತ್ತದಿಂದಲೇ ಬಂದದ್ದು. ಅವನು ಕಿತ್ತೂರಿನ ಒಳಾಡಳಿತದಲ್ಲಿ ಕೈ ಹಾಕುತ್ತ 'ದತ್ತಕ ಹುಡುಗನಾದ ಸವಾಯಿ ಮಲ್ಲಸರ್ಜನನು ಊರು ಬಿಟ್ಟು ಹೋಗಬೇಕು' ಎಂದು ಆಜ್ಞಾಪಿಸುತ್ತಾನೆ. ಮುಂದೆ ವೀರಮ್ಮ, ಚೆನ್ನಮ್ಮ ಪುಣೆ - ಮುಂಬಯಿಗಳತ್ತ ಹೋಗಬೇಕೆಂದಾಗ 'ಚೆನ್ನಮ್ಮ ಬೇಕಾದರೆ ಹೋಗಲಿ, ವೀರಮ್ಮ ಹೋಗುವುದು ಸಲ್ಲ" ಎಂದು ಸರದಾರ ಗುರುಸಿದ್ದಪ್ಪನಿಗೆ ಹೇಳುತ್ತಾನೆ.

ಹೀಗೆ ದತ್ತಕ ಮಗನನ್ನೂ, ಅದರಂತೆ ಚೆನ್ನಮ್ಮನನ್ನೂ ಕಿತ್ತೂರಿನಿಂದ ಹೊರ ಹೊರಡಿಸಿ ವೀರಮ್ಮ ಒಬ್ಬಳನ್ನೇ ಉಳಿಸಿಕೊಳ್ಳಬೇಕೆನ್ನುವಲ್ಲಿ ಥ್ಯಾಕರೇನ ಉದ್ದೇಶ ಏನಿದ್ದೀತು? 'ದತ್ತಕವನ್ನು ಒಪ್ಪಿಕೊಳ್ಳಬೇಡ. ಅದರಿಂದ ನಿನಗೆ ಸುಖವಾಗುವುದಿಲ್ಲ. ಆಗ ರಾಜ್ಯಕ್ಕೆ ನೀನೇ ಹಕ್ಕುದಾರಿಣಿ. ಅದರ ಆಡಳಿತವನ್ನು ನಾವು ನೋಡಿಕೊಳ್ಳುತ್ತೇವೆ. ನಿನಗೆ

ಭರಪೂರ ವರ್ಷಾಶನವನ್ನು ಕೊಡುತ್ತೇವೆ. ಸುಖವಾಗಿ ಇದ್ದೀಯಂತೆ' ಎಂದು ಅವಳ ಮನವೊಲಿಸುವ ವಿಚಾರ ಅವನದಿದ್ದಿರಬಹುದು. ಎಲಿಯೆಟ್ಟನ ಪೂರ್ವೋಕ್ತ ದಾಖಲೆಯಲ್ಲಿ ಇದರ ಪರ್ಯಾಯದ ಹೊಳಹು ಇದೆ: If the Government should not be disposed to sanction the adoption, the Desagatti lands would either revert entirely to the Sircar, or they might be bestowed wholly or in part on the younger Desaini during her life-time.

ನಮಗೆ ಇಲ್ಲಿ ಪ್ರಸ್ತುತವಾದದ್ದು, ವೀರಮ್ಮ ಹೀಗೆ ತೀರ ಎಳವೆಯಲ್ಲಿ ರಾಜಕೀಯದ ತಿರುಗಣಿಯಲ್ಲಿ ಸಿಕ್ಕಿಕೊಂಡದ್ದು. ಸಾಲದ್ದಕ್ಕೆ ಅವಳಿಗೆ ಕಿತ್ತೂರಿನ ಅರಮನೆಯಲ್ಲಿ ಖಾಸ ತನ್ನವರೆನ್ನುವವರು (ವಿಶೇಷತಃ ತವರಿನವರು) ಯಾರೂ ಇರಲಿಲ್ಲ. ಎಲಿಯೆಟ್ ಅದನ್ನು ಪುಷ್ಟೀಕರಿಸಿದ್ದಾನೆ :

The only other person who had the slightest claim on the estate was the wife of the late Desai still a mere child. She had no immediate friends or relations of her own, having been transplanted into her husband's house alone, and from a distant land. She was surrounded by the relatives of her late husband, who looked only to their own interests.

ಈ ಬಾಲಿಕೆಯ ಮನಸ್ಸನ್ನು ಕೆಡಿಸಲು ಅರಮನೆಯಲ್ಲಿಯ ಅವರಿವರೂ ಯತ್ನಿಸಿರಬೇಕು. ಆದರೇನು ಅವಳು ನಂಬಿದ್ದುದು ಚೆನ್ನಮ್ಮನನ್ನೇ. ಚೆನ್ನಮ್ಮನ ಮುಂದಿನ ಸರಕಾರಿ ಮನವಿಗಳಲ್ಲಿ (ಉದಾಹರಣೆಗೆ: ೧೨-೧೧-೧೮೨೪, ೩-೧೨-೧೮೨೪) ವೀರಮ್ಮನ ಹೆಸರು ಜೊತೆಯಾಗಿಯೇ ಬರುತ್ತದೆ - ಆಕೆ ಚಿಕ್ಕವಳಿದ್ದರೂ ಕೂಡ. ಚೆನ್ನಮ್ಮನಿಗೋ ಇವಳು ಮಲಸೊಸೆ. ತನ್ನ ಖಾಸಾ ಸೊಸೆ ಎಂದರೆ ತನ್ನ ಗತಿಸಿದ ಮಗನ ಹೆಂಡತಿಯೂ ವೀರಮ್ಮನಿಗಿಂತ ಐದಾರು ವರ್ಷಗಳಿಗೆ ಹಿರಿಯಳೂ ಆದ ಜಾನಕಿಬಾಯಿ ಇದ್ದಾಳೆ. ಆದರೂ ಕಿತ್ತೂರಿನ ರಾಣೀವಾಸದ ಈ ಮೂವರಲ್ಲಿ ವೀರಮ್ಮನ ಅನಂತರವೇ ಜಾನಕಿಬಾಯಿಗೆ ಸ್ಥಾನ ಸಂದಿದೆ.

ಕಿತ್ತೂರ ಪತನಾನಂತರ ಈ ಮೂವರು ರಾಣಿಯರು ಬೈಲಹೊಂಗಲದಲ್ಲಿ ಗೃಹಬಂದಿಗಳಾಗಿ ಇರಬೇಕಾಗಿ ಬಂದಿತು. ಆ ಮುಂದಿನ ಎಂದರೆ ಡಿಸೆಂಬರ್ ೧೮೨೪ರಿಂದ ಡಿಸೆಂಬರ್ ೧೮೨೯ರವರೆಗಿನ ಐದು ವರ್ಷಗಳ ಅವಧಿಯಲ್ಲಿ ಕಿತ್ತೂರಿನ ವಿಮೋಚನೆಯ ಯಾವ ಯತ್ನವೂ ನಡೆಯಲಿಲ್ಲ. ಆದರೆ ಅವರಿವರಲ್ಲಿನ ಅಸಂತೋಷ ಗುಟ್ಟಾಗಿ ಹೊರಹೊಮ್ಮುತ್ತಿತ್ತು. ಅರಮನೆಯ ಪರಿವಾರದಿಂದ ಯಾರೊಬ್ಬರು ಅದಕ್ಕೆ ಮೇಟಿಯ ಕಂಬವಾಗಬೇಕಿತ್ತು. ಚೆನ್ನಮ್ಮನೋ ಮೊದಲ ಒಂದೆರಡು ವರ್ಷಾವಧಿಯಲ್ಲಿಯೇ ಅಂತರ್ಮುಖಿಯಾಗಿಬಿಟ್ಟಳು. ಇತ್ತ ದತ್ತಕ ವಾರಸುದಾರ ಇನ್ನೂ ಹುಡುಗ; ಮೇಲಾಗಿ ದೂರದ ಮಾಸ್ತಮರಡಿಯಲ್ಲಿ ಇದ್ದವ. ವೀರಮ್ಮನೂ ಚಿಕ್ಕವಳೇ. ಆದರೆ ಬ್ರಿಟಿಷ್ ಸತ್ತೆಗೆ

ಅಸಮಾಧಾನ ಹೊಂದಿದ್ದವರು ಆಗೀಗ ಬರುತ್ತಿದ್ದರು; ವ್ಯಕ್ತಪಡಿಸುತ್ತಿದ್ದರು. ಯಾವಾಗ ಚೆನ್ನಮ್ಮ ಹಾಗೂ ಜಾನಕಿಬಾಯಿ ೧೮೨೯ರ ಪೂರ್ವಾರ್ಧದಲ್ಲಿ ತೀರಿಹೋದರೊ ಆಗ ಅವರ ಪಾಲಿಗೆ ವೀರಮ್ಮ ಒಬ್ಬಳೇ ಉಳಿದಳು. ಆಗಿನ ಅವಳ ವಿಚಾರ, ನಡವಳಿಕೆ ಹೇಗಿತ್ತು? ತೋಯಿಸಿಕೊಂಡ ಗುಬ್ಬಿ, ಮರಿಯಂತೆ ಮುದುಡಿಕೊಂಡು ದಿನಗಳೆದಳೆ?

ಇಲ್ಲ. ಅವಳೀಗ ೧೬ ವರ್ಷದ ಪ್ರಬುದ್ಧೆಯಾಗಿದ್ದಳು. ಆ ಐದು ವರ್ಷಗಳಲ್ಲಿ ಅವಳಿಗೆ ನಾಡಿನ ಸ್ಥಿತಿಗತಿಯ, ತನ್ನ ಹೊಣೆಯ ಅರಿವಾಗತೊಡಗಿತ್ತು. ಚೆನ್ನಮ್ಮನ ಸ್ಥಾನವನ್ನು ತಾನು ವಹಿಸಬೇಕಾಗಿ ಬಂದಿತು. ಕ್ರಿ.ಶ. ೧೮೨೪ರಲ್ಲಿ ಶಿವಲಿಂಗರುದ್ರ ಸರ್ಜನ ಮರಣಾನಂತರ ಇಂಥದೇ ಜವಾಬ್ದಾರಿ ಚೆನ್ನಮ್ಮನ ಮೇಲೆ ಬಿದ್ದಿತ್ತಷ್ಟೆ. ಆದರೆ ಅವಳಿಗೆ ಜೀವನಾನುಭವ ಸಾಕಷ್ಟಿದ್ದಿತು. ಸರದಾರ ಗುರುಸಿದ್ಧಪ್ಪ ಮತ್ತಿತರ ನಿಷ್ಠಾವಂತರ ಬೆಂಬಲವಿದ್ದಿತು. ಎಲ್ಲಕ್ಕೂ ಹೆಚ್ಚಾಗಿ ಬ್ರಿಟಿಶ್ ಸತ್ತೆಯ ಹಿಡಿತದಿಂದ ಅವಳು ಸ್ವತಂತ್ರಳೇ ಇದ್ದಳು.

ಹದಿವಯದ ವೀರಮ್ಮನಿಗೆ ಇದಾವ ಅನುಕೂಲತೆ ಇರಲಿಲ್ಲ! ಈ ಜವಾಬ್ದಾರಿಯನ್ನು ಅವಳು ಸಮರ್ಥವಾಗಿ ನಿರ್ವಹಿಸಿದಳೆಂದೇನೂ ನಾನು ಹೇಳುವುದಿಲ್ಲ. ಆದರೆ ಕಿಂಚಿತ್ತಾದರೂ ಸಕ್ರಿಯವಾಗಿ ಪಾಲ್ಗೊಂಡಿರಬಹುದೆಂಬುದಕ್ಕೆ ಮುಂದಿನ ಘಟನೆಗಳು ಪರೋಕ್ಷವಾದ ಸಾಕ್ಷಿಗಳಾಗಿವೆ.

ಹೊರಗುಳಿದಿದ್ದ ಚನ್ನಬಸಯ್ಯ, ಜಂಗಮ ಸಿದ್ಧಯ್ಯ ಮುಂತಾದ ಸ್ವಾತಂತ್ರ್ಯವೀರರು ೧೮೨೯ರ ಡಿಸೆಂಬರದಲ್ಲಿ ವಾಸ್ತವುರಡಿಯಲ್ಲಿದ್ದ ಮಲ್ಲಸರ್ಜನನ್ನು ಅಲ್ಲಿಂದ ಹೊರಹೊರಡಿಸಿದರು. ರಾಯಣ್ಣನಂತೂ ಸೈನ್ಯವನ್ನು ಸಜ್ಜುಗೊಳಿಸುತ್ತಿದ್ದ. ಮರು ತಿಂಗಳಲ್ಲಿಯೇ (೫ ಜನವರಿ ೧೮೩೦) ಕಿತ್ತೂರ ವಿಮೋಚನೆಯ ಹೋರಾಟ ಸಕ್ರಿಯವಾಗಿ ಪ್ರಾರಂಭವಾಯಿತು. ಆ ಅವಧಿಯಲ್ಲಿ ವೀರಮ್ಮ ದೂರದಲ್ಲಿದ್ದ ತನ್ನ ದತ್ತಕ ಮಗನಿಗೆ ೪೫೫ ರೂ.ಗಳನ್ನು ಗುಟ್ಟಾಗಿ ಕಳುಹಿಸಿದಳೆಂಬ ಉಲ್ಲೇಖ ಒಂದೆಡೆ ಬಂದಿದೆ. ಅದಕ್ಕಿಂತ ಸ್ಪಷ್ಟವಾದ ನಿದರ್ಶನವನ್ನು ಎಂದರೆ ವೀರಮ್ಮನು ವಿಮೋಚನಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಳೆಂಬುದನ್ನು ಧಾರವಾಡ ಸುಭಾದ ಆಗಿನ ಪ್ರಿನ್ಸಿಪಲ್ ಕಲೆಕ್ಟರ್ ನಿಸ್ಬತ್ ಸಮರ್ಥಿಸುತ್ತಾನೆ; ಈ ತನ್ನ ಒಕ್ಕಣಿಕೆಯಿಂದ:

I am firmly convinced of the guilt of the Kittur Desainee. (She) as well as every servant and people of this country, from a strong attachment to their former government, are ready and willing to obey any directive from the rebels (12-2-1830).

ಇದೇ ಕಾರಣ ಕೊಟ್ಟು, ಆತ ವೀರಮ್ಮನನ್ನು ಬೈಲಹೊಂಗಲದಿಂದ ಸ್ಥಾನಾಂತರಿಸಬೇಕೆಂದೂ, ಅಪರಿಚಿತ ಹಾಗೂ ದೂರದ ಮಾಲೇಗಾಂವಕ್ಕೆ ಇಲ್ಲವೆ ಅಹಮ್ಮದನಗರ ಕೋಟೆಗೆ ಸಾಗಿಸಬೇಕೆಂದೂ ಆಗ್ರಹಿಸಿದ. ಅದೂ 'at the earliest' ಆಗಬೇಕು ಎಂದು ಹೇಳುವಷ್ಟು ಅವಳ 'guilt' ಗುರುತರವಾಗಿತ್ತು!

ವೀರಮ್ಮನ ಕಾರ್ಯಭಾರದ ಮಹತ್ವವನ್ನು ಅಳೆಯಲಿಕ್ಕೆ ಇನ್ನೊಂದು ನಿದರ್ಶನವಿದೆ. ಅದೆಂದರೆ ಮರುವಾರ ಆಕೆಯನ್ನು ಬೈಲಹೊಂಗಲದಿಂದ ಸ್ಥಾನಾಂತರ ಮಾಡುವಾಗ ನೆರೆದ ಅಪಾರ ಜನಸಮ್ಮರ್ದ. ಹತ್ತಿರದ ಹಳ್ಳಿಯಾದ ಆನಿಗೋಳದಲ್ಲಿ ಸಾವಿರಕ್ಕೆ ಮೇಲ್ಪಟ್ಟು ಜನ ನೆರೆದಿದ್ದರು. ಬೀಳ್ಕೊಡುವುದಕ್ಕಲ್ಲ; ಪ್ರತಿಭಟಿಸಲಿಕ್ಕೆ! ರಾಯಣ್ಣನೇನಾದರೂ ತನ್ನ ಪಡೆಯೊಡನೆ ಮೇಲ್ಬಾಯ್ದು ಬಂದರೆ ಅವನಿಗೆ ಸಹಾಯ ಮಾಡುವುದಕ್ಕೆ.

ಅವನ ಆಗಮನವನ್ನು ಬ್ರಿಟಿಷರೂ ಕಾತರದಿಂದ ನೋಡುತ್ತಿದ್ದರು! ಅದಕ್ಕಾಗೇ ಮದ್ರಾಸಿನ ೧೮ನೇ ರೆಜಿಮೆಂಟಿನಿಂದ ಎರಡು ಸೈನ್ಯದ ತುಕಡಿಗಳನ್ನು ಕರೆಸಿದ್ದರು. 'ಜಾಗೀರದಾರ ಕುದುರೆ' ಸವಾರರ ಪಡೆಗಳಿದ್ದವು. 'ಮುಂದ ಮುನ್ನೂರು ಕುದರಿ ಮಂದಿ, ಹಿಂದ ಇನ್ನೂರ ಬಾರಿನ ಮಂದಿ ಮಾಡುತ್ತೊಂಟರಣ್ಣ ಪಾರಾಗಸ್ತಿ' ಎಂದು ಒಬ್ಬ ಲಾವಣಿಕಾರ ಹೇಳಿಯೇ ಇದ್ದಾನೆ. ಇಷ್ಟಿದ್ದರೂ ನಿಸ್ಬತನಿಗೆ ಕಳವಳ. ತಮ್ಮ ಇನ್‌ಚಾರ್ಜ ಸೈನ್ಯಾಧಿಕಾರಿಗೆ, 'You will increase the party to such strength as you may deem necessary by another detachment' – ಎಂಬ ಮುನ್ನೆಚ್ಚರದ ಮಾತನ್ನು ಹೇಳುತ್ತಾನೆ! ಅಂತೂ ವೀರಮ್ಮನ ಆ ದುಃಖಾಂತ ಯಾತ್ರೆಗೆ ಇಷ್ಟರಮಟ್ಟಿಗಿನ ಮಿಲಿಟರಿ ಗೌರವ!

ತನ್ನ ಸ್ಥಾನಾಂತರದ ಈ ಎತ್ತುಗಡೆಯನ್ನು ವೀರಮ್ಮ ಹೇಗೆ ಎದುರಿಸಿದಳು? ನಮ್ಮ ಜಾನಪದ ಕವಿಗಳು, 'ಆಕೆ ಬ್ರಿಟಿಶ್ ಅಧಿಕಾರಿಗಳಿಗೆ ಅಂಗಾಲಾಚಿದಳು, ದುಂಬಾಲು ಬಿದ್ದಳು, ಭೋರೆಂದು ದುಃಖ ಮಾಡಿದಳು' ಎಂದೆಲ್ಲ ಹೇಳುತ್ತಾರೆ. ಅದು ಅವರ ಅತಿಶಯೋಕ್ತಿಯ ಅನಿಸಿಕೆ. ಬದಲಾಗಿ 'ರಾಯಣ್ಣ ಬಂದಾನು, ಏನಾದರೂ ಮಾಡಿಯಾನು' ಎಂದು ಅವಳು ಆಸೆ ಹಿಡಿದಿಡಿರಲು ಸಾಕು. ಆದರೆ ರಾಯಣ್ಣ ಬರಲೇ ಇಲ್ಲವಲ್ಲ!

ಅಂದಹಾಗೆ, ವೀರಮ್ಮಳೊಬ್ಬಳನ್ನೇ ಸಾಗಿಸುವುದಿರಲಿಲ್ಲ! ಅವಳ ಯೋಗಕ್ಷೇಮ ಕ್ಕೆಂದು ಇಪ್ಪತ್ತು ಜನ ಸೇವಕರಿದ್ದರಷ್ಟೆ. ಕೆಲವರು ಎರಡು ಮೂರು ತಲೆಮಾರುಗಳಿಂದ, ಕಿತ್ತೂರಿನ ಅರಮನೆಯಲ್ಲಿ ಕೆಲಸಕ್ಕಿದ್ದವರು. (ಅವರ ಯಾದಿ, ಮತ್ತಿತರ ಅಂಶಗಳು ಒಂದು ಬ್ರಿಟಿಶ್ ದಾಖಲೆಯಲ್ಲಿವೆ. ಇಲ್ಲಿ ಅದರ ವಿವರಗಳು ಬೇಡ) ಅಂತೂ ಸದ್ಯ ಸ್ಥಿತಿಯಲ್ಲಿ ವೀರಮ್ಮನೇ ಅವರ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾಗಿ ಬಂದಿತು.

ದಿ. ೧೭ ಫೆಬ್ರುವರಿ ೧೮೩೦ರಂದು ಬೈಲಹೊಂಗಲದಿಂದ ವೀರಮ್ಮ ಹಾಗೂ ಅವಳ ಪರಿವಾರ ಮುಂದೆ ಸಾಗಿತು. ನೇರವಾಗಿ ಧಾರವಾಡಕ್ಕೆ ಬರಬೇಕೆಂದು ನಿಸ್ಬತನ ಆದೇಶವಿದ್ದಿತು. ಹಾಗಿದ್ದರೂ ದಾರಿಯಲ್ಲಿ ಈ 'ಪಾರ್ಟಿ' ಖೋದಾನಪುರದಲ್ಲಿ ವಿಶ್ರಾಂತಿಗಾಗಿ ತಂಗಿದ್ದಂತೆ ಜಾನಪದ ಹಾಡೊಂದರಿಂದ ತಿಳಿದುಬರುತ್ತದೆ. ಅಂತೂ ಸೋಮವಾರ ಬೆಳಿಗ್ಗೆ ಬೈಲಹೊಂಗಲ ದಿಂದ ಹೊರಟವರು ಬುಧವಾರ ಧಾರವಾಡವನ್ನು ತಲುಪಿದರು. ಬಂದೊಡನೆ ಧಾರವಾಡದ ಈಗಿನ ಮಾಳಮಡ್ಡಿಯಲ್ಲಿರುವ ಉಳವಿ ಬಸವೇಶ್ವರ ಗುಡಿಯಲ್ಲಿ ಇಳಿಸಿದರೆಂದು ದ್ಯಾಮವ್ವ ಮಡಿವಾಳರ – ಇವಳ ಲಾವಣಿಯಲ್ಲಿ ಹೇಳಿದ್ದಿದೆ. ನಿಸ್ಬತ್ ವೀರಮ್ಮನನ್ನು ಮಹಾರಾಷ್ಟ್ರದ

ಅಪರಿಚಿತ ಪ್ರದೇಶವೊಂದರಲ್ಲಿ ಅವಳನ್ನು ಇರಿಸಬೇಕೆಂದು ಸೂಚಿಸಿದ್ದನಷ್ಟೇ. ಅದಕ್ಕೆ ಮುಂಬಯಿ ಗವರ್ನರನಿಂದ ಆ ವೇಳೆಗೆ ಉತ್ತರ ಬಂದಿರಲಿಲ್ಲ. ಹೀಗಾಗಿ ನಿಸ್ಬತ್ ಅವರಿಗಾಗಿ ಕುಸುಗಲ್ಲ ಕೋಟೆಯನ್ನು ಆರಿಸಿದ. ಟೀಪೂ ಸುಲ್ತಾನ ಆ ಕೋಟೆಯನ್ನು ಕಟ್ಟಿಸಿದ್ದು. ಸಾಕಷ್ಟು ವಿಸ್ತೀರ್ಣವುಳ್ಳದ್ದು. ವೈಭವಯುತವಾದದ್ದು. ಯುದ್ಧ ಪ್ರಸಂಗಗಳಲ್ಲಿ ಅದನ್ನು ಹಾಳುಗೆಡವಿದ್ದರೂ ಒಂದಷ್ಟು ಭಾಗ ವಾಸಯೋಗ್ಯವಾಗಿತ್ತು. ಕಿತ್ತೂರಿನ ರಾಣಿವಾಸದ ಹಿಂದಿನ, ಅಂದಿನ ಪರಿಸ್ಥಿತಿಯನ್ನು ಸಾಂಕೇತಿಕವಾಗಿ ಸೂಚಿಸುವಂತಿತ್ತು.

ನಿಸ್ಬತ್ ವೀರಮ್ಮನನ್ನು ಹೇಗೆ ಬರಮಾಡಿಕೊಂಡ? ಬ್ರಿಟಿಶರ ಮಾಮೂಲಿಯ ಕೃತ್ರಿಮ ಸೌಜನ್ಯದಿಂದಲೇ ಇರಬೇಕು. ನಮ್ಮ ಜಾನಪದ ಕವಿಗಳಿಗೆ ಆ ಬಗೆಯೇ ತಿಳಿಯದು. ಆದ್ದರಿಂದ ಅವರ ಪ್ರಕಾರ ನಿಸ್ಬತ್ ಹೀಗೆ ಹೇಳಿದನಂತೆ:

"ಕೊಟ್ಟು ಅನ್ನ ಬಿಟ್ಟಕೇರ
ಕೆಟ್ಟ ಬುದ್ಧಿಯನ್ನು ಇಷ್ಟು
ಮಾಡತಿದ್ದಿ ನಮ್ಮ ಮೇಗ ಜ್ಯಾಸ್ತಿ
ರಾತ್ರಿಲಿ ರಾಯನಾಕನ್ನಚ್ಚ ರೌಡ ಮಾಡಿ
ಸುತ್ತಿನ ಹಳ್ಳಿ ಅವನ ಕೈಲಿಂದ ಸುಡಿಸ್ತಿ."

ನಿಸ್ಬತ್ ಹೀಗೆ ನುಡಿದಿರಲಿ ಬಿಡಲಿ, ಇದರಿಂದ ಚಿಕ್ಕ ವಯಸ್ಸಿನ ವೀರಮ್ಮ ಆ ಮಟ್ಟಿಗೆ ಕಿತ್ತೂರಿನ ವಿಪ್ಲವದಲ್ಲಿ ಮಹತ್ವದ ಪಾತ್ರ ವಹಿಸಿದ್ದಳೆನ್ನುವುದರ ಅರಿವಾಗುವುದು.

ಅಲ್ಲಿಂದ ಮಾತ್ರ ವೀರಮ್ಮನ ಪ್ರಕೃತಿ ಹದಗೆಟ್ಟಿತು. ಜೀವನದಲ್ಲಿ ಹತಾಶ ಭಾವನೆ – ಅದೂ ಸ್ತ್ರೀಯರಲ್ಲಿ ಮೂಡಿದಾಗ ದೈಹಿಕ ಆರೋಗ್ಯದ ಮೇಲೆ ಅದು ಒಂದಿಲ್ಲೊಂದು ರೀತಿಯಲ್ಲಿ ದುಷ್ಪರಿಣಾಮ ಮಾಡದೇ ಇರದು. ಅದಾವುದೊ ರೋಗ ಬಾಧಿಸತೊಡಗಿತು. ಅರಳೆಯ ಮಧ್ಯದಲ್ಲಿ ಹುದುಗಿದ ಕಿಡಿಯೊಂದು ಕ್ರಮೇಣ ಆ ಅರಳೆಯನ್ನು ಸುಡುವಂತೆ ಅವಳ ದೇಹಸ್ಥಿತಿಯಾಯಿತು. ಆ ರೋಗದ ಲಕ್ಷಣ ಹೀಗಿತ್ತಲ್ಲ – ಅದು ಅವಳ ರಕ್ತವನ್ನು ಅಕ್ಷರಶಃ ಅಟ್ಟಿಸುತ್ತ ಹೋಯಿತು. ಲಾವಣಿಕಾರ ಹೆಬ್ಬಳ್ಳಿ ಬಸವ ಹೇಳ್ತಾನೆ:

"ಇನ್ನು ಈ ದರೆಯಲ್ಲಿ ಮುನ್ನ
ಇರಬಾರದೆಂದು
ಅನ್ನುವದಕ ಯಲ್ಲ ಬಿಟ್ಟಳೊ.
ಸಣ್ಣಾದವು ಕೈಕಾಲು
ಮಣ್ಣುಪಾಲವಾಗಲೆಂದು
ಬಣ್ಣ ವಣಗಿಸಿ ಬಿಟ್ಟಳೊ.
ಸಂಗ್ರಾಣಿ ಬ್ಯಾನಂತ ಸರ್ವಾಂಗವೆಲ್ಲಾ
ವಣಗಿಸಿ

ಹುಣಾದ್ಹಾಂಗ ದೇಹ ಸುಟ್ಟಳೊ.
ನವಲಗುಂದ ಕಾಡಶಿದ್ದನ್ನಂತೇಲಿ ಹೋಗಿ...
ಜಂಗಮು ತೀರ್ಥವ ಪಡೆದು...
ಧಾರ್ವಾಡಕ ಹೊರಟ ಬಂದಳೊ
ಧಾರ್ವಾಡಕಽ ಬಂದು ಮೂರಾರು ದಿನಿದ್ದು
ಮರಣಕಾಲ ಬಂದು ಪ್ರಾಣ ಬಿಟ್ಟಳೊ...."

– ಮರಣಕಾಲ ಬಂತೆಂದು ಪ್ರಾಣ ಬಿಟ್ಟಳೊ? ಬದುಕಿಗೆ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಳೊ? ಅಥವಾ ಸ್ಥಾನಿಕ ಕಲೆಕ್ಟರನಾದ ಬೇಬರ್ ಬಣ್ಣದ ಗುಳಿಗೆಗಳನ್ನು ಕೊಡುತ್ತ ಅದರಲ್ಲಿ ವಿಷ ಹಾಕಿ ಕೊಂದನೊ? ಅವಳ ಸಾವಿನ ಬಗ್ಗೆ ಹೀಗೆ ಊಹಾಪೋಹಗಳಿವೆ.

ಆದರೆ ಈ ಕುರಿತು ಹೆಚ್ಚಿನ ಹಾಗೂ ವಿಶೇಷವಾದ ಬೆಳಕನ್ನು ಬೀರುವಂಥ ಬ್ರಿಟಿಶ್ ದಾಖಲೆಯೊಂದಿದೆ. ಅವಳು ಗತಿಸಿದ ಮಾರನೆಯ ದಿನವೇ ನಿಸ್ಬತ್ ಮುಂಬಯಿಗೆ ಆ ಸುದ್ದಿಯನ್ನು ತಿಳಿಸಿದ ಪತ್ರವದು:

"Sir,

1. It is with regret that I am called upon to report, that the Desainee of Kittur died at this place early yesterday morning. The body has just been buried with all due conformity, to the usual ceremonies of caste.

2. The deceased had been ill for some months during which time she was visited, at my desire, by the civil surgeon, both at Kusugal and subsequently at Navalgoond, to which place she was removed on the 10th Ultimo for the benefit of change of air and better accommodation. But owing to her strict concealment of the nature of her illnes, no danger was apprehended until then within a few days of her death. The disease which caused her death was one peculiar to the female sex.

Dharwar
14th July 1830

Sd /-
J. Nisbet
Political Agent"

ಮೊದಲಲ್ಲಿ ತಿಳಿದಿರಬೇಕಾದ ಮಾತೆಂದರೆ ಇದು ತತ್‌ಕ್ಷಣದ ತತ್ಕಾಲೀನ ದಾಖಲೆ. ಮೇಲಾಗಿ ತಮ್ಮವರಿಗೇನೆ ಬರೆದದ್ದು. ಇದರಲ್ಲಿ ಮುಚ್ಚುಮರೆ ಮಾಡಬೇಕಾದ ಪ್ರಸಂಗ ಅಥವಾ ಅಗತ್ಯವೇನೂ ಇದ್ದಿಲ್ಲ. ಹೇಗೂ ಕಿತ್ತೂರಿನ ಸರ್ವಸ್ವವನ್ನು ಅವರು ಅಪಹರಿಸಿದ್ದರು. ಆ ಮುಂಚೆ ರಾಯಣ್ಣನನ್ನು ಬಂಧಿಸಿದ್ದರಿಂದ ಅವನ ಹೆದರಿಕೆಯೂ ಇರಲಿಲ್ಲ. ಆದ್ದರಿಂದ ಇದನ್ನು ನಂಬಲರ್ಹವಾದ ದಾಖಲೆಯೆಂದೇ ಪರಿಗಣಿಸತಕ್ಕುದು.

ಈ ದಾಖಲೆಯಿಂದ ಮೂರು ಅಂಶಗಳು ಹೊರಪಡುತ್ತವೆ. ಒಂದು, ಅವಳು ನುಂಗಿದ ಬಣ್ಣದ ಗುಳಿಗೆಗಳು ವಿಷದ ಗುಳಿಗೆಗಳೇನಲ್ಲ. ಅವು ಸಿವಿಲ್ ಸರ್ಜನ್ ಕೊಟ್ಟಿದ್ದಿರಬಹುದಾದ ಅಲೊಪಥಿ ಔಷಧದ ಗುಳಿಗೆಗಳಿರಬಹುದೆ?

ಎರಡನೆಯ ಮಹತ್ವದ ಅಂಶವೆಂದರೆ, ಈವರೆಗೆ ತಿಳಿದಿದ್ದಂತೆ ಅವಳನ್ನು ಕುಸುಗಲ್ಲಿನಿಂದ ನೇರವಾಗಿ ಧಾರವಾಡಕ್ಕೆ ತರಲಿಲ್ಲ. ಮಧ್ಯೆ ಒಂದು ತಿಂಗಳು ಆಕೆ ನವಲಗುಂದದಲ್ಲಿದ್ದಳು. 'ನವಲಗುಂದ ಕಾಡಶಿದ್ದನ್ನಂತಲಿ ಹೋಗಿ' ಎಂದು ಲಾವಣಿಯಲ್ಲಿ ಹೇಳಿದ್ದು ನಿಜ ಸಂಗತಿಯೇ.

ಮೂರನೆಯದು ಅವಳ ಬೇನೆಯ ವಿಚಾರ. ಲಾವಣಿಯಲ್ಲಿ ಬಂದಿರುವ ಸಂಗ್ರಾಣಿ ರೋಗಕ್ಕೂ ನಿಸ್ಬತ್ ಹೇಳುವ ಮಾತಿಗೂ ಏನಾದರೂ ಹೊಂದಿಕೆ ಇದೆಯೆ ಎಂಬುದನ್ನು ನೋಡೋಣ.

ಸಂಗರಾಣಿ –ಇದು ಮರಾಠಿ ಶಬ್ದ. ಈ ರೋಗವು ಕರುಳಿನ ಊತಕ್ಕೆ ಸಂಬಂಧಿಸಿದ್ದು. ಅದರಿಂದ ವಾಂತಿಯಾಗುತ್ತದೆ. ಹೊಟ್ಟೆಯಲ್ಲಿ ಅತೀವ ನೋವು ಕಾಣಿಸಿಕೊಳ್ಳುತ್ತದೆ. ರಕ್ತವೂ ಅಟ್ಟಿಸಬಹುದು. ಇದೇನೂ peculiar to female sex ಅಂತ ಅಲ್ಲ. ಈ ಬಗ್ಗೆ ನಾನು ಓರ್ವ ತಜ್ಞ ಡಾಕ್ಟರರನ್ನು ವಿಚಾರಿಸಿದಾಗ, 'ಹೆಂಗಸರಿಗೆ ಆ ಎಳೆಯ ವಯಸ್ಸಿನಲ್ಲಿ ಪ್ರಾಣಾಂತಿಕವಾಗಿ ಬರಬಹುದಾದ ಒಂದು ರೋಗವೆಂದರೆ, Puberty menorrhagia' ಎಂದು ಹೇಳಿದರು. ಏನೇ ಆಗಲಿ, ವೀರಮ್ಮ ಆ ರೋಗದಿಂದ ಬಳಲಿ ಬೆಂಡಾದದ್ದು ಮನ ಕಲಕುವಂಥ ಸಂಗತಿ.

ಅವಳಿಗೆ ಧಾರವಾಡದಲ್ಲೇ ಮಣ್ಣು ಕೊಟ್ಟರೆನ್ನುವುದು ಖಚಿತ. ಹಾಗಿದ್ದರೆ ಅವಳ ಗದ್ದುಗೆ ಎಲ್ಲಿದೆ? ಧಾರವಾಡದ ರವಿವಾರ ಪೇಟೆಯ ಹಪ್ಪಳಿ ಶೆಟ್ಟರ ಮನೆಯಲ್ಲಿ ಇದೆಯೆಂದು ಒಂದೆಡೆ ಉಲ್ಲೇಖ ಬಂದಿದೆ. (ರವಿವಾರ ಪೇಟೆಯಲ್ಲಿ ನಾನು ವಿಚಾರಿಸಿದೆ; ಪತ್ತೆ ಹತ್ತಲಿಲ್ಲ.)

ಇಂತಿದು ವೀರಮ್ಮನ ಬದುಕಿನ ದಾರುಣವಾದ ಕಥೆ. ಕಿತ್ತೂರಿನ ಧೀರ ಮಹಿಳೆಯರಲ್ಲಿ ಚೆನ್ನಮ್ಮ, ತುಸುಮಟ್ಟಿಗೆ ರುದ್ರಮ್ಮ ಇವರನ್ನು ಎಣಿಸುತ್ತೇವೆ. ಅವರ ಸಾಲಿನಲ್ಲಿ

ವೀರಮ್ಮನನ್ನೂ ಗಣಿಸತಕ್ಕುದು. ಇಷ್ಟೇ ಅಲ್ಲ, ಅವರಿಬ್ಬರಿಗಿಂತ ವೀರಮ್ಮ ನಮ್ಮ ಹೆಚ್ಚಿನ ಅನುಕಂಪೆಗೆ ಕಾರಣಳಾಗುತ್ತಾಳೆ. ಏಕೆಂದರೆ ಅವಳ ಆ ಇಬ್ಬರು ಹಿರಿಯ ಅತ್ತೆಯರಿಗೆ ಏನೆಲ್ಲ ಅನುಕೂಲತೆಗಳಿದ್ದವು. ಇವಳಿಗೋ ಚಿಕ್ಕ ವಯಸ್ಸು; ಗಂಡನ ಸಂಪರ್ಕವೇ ಇಲ್ಲ, ತನ್ನವರೆನ್ನುವ ಖಾಸಾ ಜನರಿಲ್ಲ. ಕೊನೆಯಲ್ಲಿ ದಾರುಣವಾದ ಬೇನೆಯಿಂದ ಬಳಲುವಿಕೆ. ಆದಾಗ್ಯೂ ಕೆಲವೇ ವರ್ಷಗಳದ್ದಾದರೂ ಕಿತ್ತೂರ ಚರಿತ್ರೆಯಲ್ಲಿ ಸ್ಥಾಯಿಯಾಗಿ ನಿಲ್ಲಬಹುದಾದ ಪಾತ್ರ ವಹಿಸಿದ್ದಳೆನ್ನುವುದು ನಿರ್ವಿವಾದದ ಸಂಗತಿಯಾಗಿದೆ.

●

೯. ಮುಧೋಳ ರಾಜನ ಪರಕಾಯ ಪ್ರವೇಶ

'ದಕ್ಷಿಣ ಮರಾಠಾ ಪ್ರದೇಶ'ಗಳಲ್ಲಿ ಮುಧೋಳ ಸಂಸ್ಥಾನವು ಸಾಕಷ್ಟು ದೊಡ್ಡದಿತ್ತು. ಇದನ್ನು ಆಳಿದವರಲ್ಲಿ ಮಾಲೋಜಿ ಘೋರ್ಪಡೆ (೧೭೧೬ - ೧೮೦೫) ಪ್ರಖ್ಯಾತನಾಗಿದ್ದನು. ಈತ ಪುಣೆಯಲ್ಲಿ ತನ್ನದೇ ಆದ ವಾಡೆಯನ್ನು ಕಟ್ಟಿಸಿಕೊಂಡಿದ್ದನು. ಇವನ ಹಿರಿಯ ಮಗ ಅಪ್ರಾಪ್ತ ವಯಸ್ಸಿನಲ್ಲಿ ತೀರಿಕೊಂಡಾಗ ಮಾಲೋಜಿಯ ಮೊಮ್ಮಗ ನಾರಾಯಣರಾವ ಮುಧೋಳದ ಸಿಂಹಾಸನವನ್ನೇರಿದನು.

ಈ ನಾರಾಯಣರಾಯನ ಹಿರಿಯ ಮಗನೇ ಗೋವಿಂದರಾವ. ಈತ ೧೬ ವರುಷದವನಿರುವಾಗ ತಂದೆ ನಾರಾಯಣರಾವ ಇವನನ್ನು ಪುಣೆಗೆ ಕರೆದೊಯ್ದನು. ಅಲ್ಲಿ ಗೋವಿಂದರಾವ ಸುಮಾರು ಐದು ವರುಷಗಳ ಕಾಲ ತನ್ನ ಎರಡನೆಯ ಪತ್ನಿ ಜಾನಕಿಯೊಂದಿಗೆ ವಾಸಿಸುತ್ತಿದ್ದನು. ಇದೇ ಸುಮಾರಿಗೆ ಈ ದಂಪತಿಗಳಿಗೆ ಗಂಡು ಮಗುವೊಂದು ಜನಿಸಿತು.

ನಾರಾಯಣರಾವ ಕ್ರಿ.ಶ. ೧೮೧೬ರಲ್ಲಿ ತೀರಿಕೊಂಡಾಗ ಅವನ ಹಿರಿಯ ಹೆಂಡತಿ ಬಕ್ಕಾಬಾಯಿ ತನ್ನ ಮಗ ವೆಂಕಟನನ್ನು ಸಿಂಹಾಸನವನ್ನೇರಿಸುವ ಉದ್ದೇಶದಿಂದ, ಆತ ಪ್ರಾಪ್ತ ವಯಸ್ಕನಾಗುವ ವರೆಗೆ ರಾಜ್ಯಭಾರದ ಹೊಣೆ ಹೊತ್ತಳು. ನಾರಾಯಣರಾಯನ ಮೂವರು ಮಕ್ಕಳಲ್ಲಿ ಗೋವಿಂದರಾಯನೇ ಹಿರಿಯವನಾಗಿದ್ದ. ಸಿಂಹಾಸನಕ್ಕಾಗಿ ದಾಯಾದಿಗಳಿಬ್ಬರ ನಡುವೆ ವ್ಯಾಜ್ಯ ನಡೆದಾಗ ಎರಡನೆಯ ಬಾಜೀರಾವ್ ಪೇಶ್ವೆಯ ಮಧ್ಯಸ್ಥಿಕೆಯಲ್ಲಿ ಇದರ ನಿರ್ಣಯವನ್ನು ಮೋರೊಪಂತ ಎಂಬವನಿಗೆ ಒಪ್ಪಿಸಲಾಯಿತು. ಬಕ್ಕಾಬಾಯಿಯು ಆಗಿಂದಾಗ್ಗೆ ಮೋರೊಪಂತನ ಕೈಬಿಸಿ ಮಾಡುತ್ತಾ ವ್ಯಾಜ್ಯ ತನ್ನ ಪರವಾಗುವಂತೆ ನೋಡಿಕೊಂಡಳು. ಈ ಘಟನೆಯಿಂದ ಸಿಂಹಾಸನಕ್ಕೆ ನ್ಯಾಯಸಮ್ಮತ ಹಕ್ಕುದಾರನಾಗಿದ್ದ ಗೋವಿಂದರಾವ ನೊಂದುಕೊಂಡು, ಮರಾಠಾ ಪ್ರಾಂತ್ಯದಲ್ಲಿಯ ಹೆಸರುವಾಸಿಯಾಗಿದ್ದ ಸರದಾರ ಬಾಪುಗೋಖಲೆಯ ಜೊತೆ ಸೇರಿಕೊಂಡನು. ಈ ನಡುವೆ ಕ್ರಿ.ಶ. ೧೮೧೮ರಲ್ಲಿ ಬ್ರಿಟಿಶರ

ಮತ್ತು ಮರಾಠರ ನಡುವೆ 'ಅಷ್ಟಿ' ಎಂಬಲ್ಲಿ ನಡೆದ ನಿರ್ಣಾಯಕ ಯುದ್ಧದಲ್ಲಿ ಬಾಪು ಗೋಖಲೆ ಮರಣವನ್ನಪ್ಪಿದನು. ಗೋವಿಂದರಾವ ಗಾಯಗೊಂಡು ಯುದ್ಧಭೂಮಿಯಲ್ಲಿ ಬಿದ್ದಿದ್ದನು. ತದನಂತರ ಅವನ ಸ್ಥಿತಿ ಏನಾಯಿತು ಎನ್ನುವುದರ ಬಗ್ಗೆ ಯಾವ ಸುದ್ದಿಯೂ ಇರಲಿಲ್ಲವಾಗಿ ಆತನೂ ಯುದ್ಧಭೂಮಿಯಲ್ಲಿ ತೀರಿಕೊಂಡಿರಬೇಕೆಂದು ಭಾವಿಸಲಾಗಿತ್ತು.

ಯುದ್ಧ ಕಳೆದು ಎಂಟು ವರುಷಗಳ ಬಳಿಕ ಗೋವಿಂದರಾವನ ಹೆಸರು ಗವರ್ನರ್ ಎಲ್ಫಿನ್‌ಸ್ಟನ್‌ಗೆ ಬಂದ ಪತ್ರದ ಮೂಲಕ ಬೆಳಕಿಗೆ ಬಂತು. ಕ್ರಿ.ಶ. ೧೮೨೬ರಲ್ಲಿ ಬರೆದ ಆ ಪತ್ರದಲ್ಲಿ "ಯುದ್ಧದಲ್ಲಿ ಮೂರು ಪ್ರಾಣಾಂತಿಕ ಗಾಯಗಳಾಗಿ ನಾನು ನೆಲಕ್ಕುರುಳಿದೆ. ಆದರೆ ನಮ್ಮ ಸೇನೆಗೆ ಸಂಬಂಧಪಟ್ಟವರೊಬ್ಬರೂ ಹತ್ತಿರ ಸುಳಿಯದ್ದರಿಂದ ಮಾನಸಿಕವಾಗಿ ವ್ಯಥಿತನಾಗಿ ಅಂದು ರಾತ್ರಿಯೇ ಅಲ್ಲಿಂದ ತೆರಳಿ ಸುಮಾರು ಆರು ತಿಂಗಳ ಕಾಲ ಯಾರ ದೃಷ್ಟಿಗೂ ಬೀಳದಂತೆ ಮರೆಯಾಗಿದ್ದೆ. ಈ ಸಮಯದಲ್ಲಿ ಕೆಲವು ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದೆ. ಅನಂತರ ನಾನು ಖಾನದೇಶಕ್ಕೆ ಬಂದಾಗ ನನಗೆ ಸೇರಬೇಕಿದ್ದ ಸಂಸ್ಥಾನವನ್ನು ಗೌರವಾನ್ವಿತ ಕಂಪೆನಿಯು ನನ್ನ ತಮ್ಮ ವೆಂಕಟರಾವ್ ರಾಜೇಗೆ ಕೊಡಮಾಡಿರುವ ಸಂಗತಿ ತಿಳಿಯಿತು. ಈ ಪತ್ರ ಬರೆಯುವ ಉದ್ದೇಶವೇನೆಂದರೆ ಗೌರವಾನ್ವಿತ ಕಂಪೆನಿ ಸರಕಾರದ ಆಶ್ರಯದಲ್ಲಿ ನನ್ನ ಸೇವೆಯನ್ನು ಎಂದಿನಂತೆ ಮುಂದುವರೆಸುವ ಆಶಯವುಳ್ಳವನಾಗಿರುವೆ. ಆದುದರಿಂದ ನಾನು ವಿನಂತಿಸಿಕೊಳ್ಳುವುದೇನೆಂದರೆ ನಿಮ್ಮ ಸಮ್ಮುಖದಲ್ಲಿಯೇ ಅನ್ಯಾಯವನ್ನು ಸರಿಪಡಿಸಿ ಸತ್ಯಸಂಗತಿಯನ್ನು ಅರಿತುಕೊಳ್ಳುವುದು" ಎಂದು ಹೇಳಲಾಗಿತ್ತು.

ಈ ಪತ್ರದ ಕಾರಣದಿಂದಾಗಿ ತೀರಿಹೋದನೆಂದು ಭಾವಿಸಲಾಗಿದ್ದ ಗೋವಿಂದರಾವ ಜೀವಂತನಾಗಿರುವನೆಂಬ ಸುದ್ದಿ ಶರವೇಗದಲ್ಲಿ ಹಬ್ಬಿತು. ಚಿಂಚೋಳಿಯಲ್ಲಿ ವಸತಿ ಹೂಡಿರುವ ಈ ವ್ಯಕ್ತಿ 'ಗೋವಿಂದರಾವನೇ ಹೌದೇ?' ಎಂಬುದನ್ನು ಖಾತ್ರಿಗೊಳಿಸಲು ವೆಂಕಟರಾವ್ ತನ್ನ ಆಪ್ತ ವರ್ಗದ ಕೆಲವರನ್ನು ಚಿಂಚೋಳಿಗೆ ಕಳುಹಿಸಿದನು. ಇವರು ಗೋವಿಂದರಾಯನನ್ನು ಮುಖತಃ ಭೇಟಿಯಾಗಿ, ಮಾತನಾಡಿಸಿ ಈತನೇ ಗೋವಿಂದರಾವ ಎನ್ನುವ ನಿಶ್ಚಿತ ನಿಲುವು ತಳೆದರು. ಅನಂತರ ವೆಂಕಟರಾವ್ ತನ್ನ ಕಾರುಭಾರಿ ಅಪ್ಪಾಜಪ್ಪನನ್ನು ಗೋವಿಂದರಾವನ ಬಳಿ ಕಳುಹಿಸಿದನು. ಈತನೂ ಚಿಂಚೋಳಿಯಲ್ಲಿರುವ ವ್ಯಕ್ತಿ ಗೋವಿಂದರಾವ ಹೌದು ಎನ್ನುವುದನ್ನು ದೃಢೀಕರಿಸಿದನು.

ಸೈದಾಪುರ ಪೇಟೆಯ ಬಸಲಿಂಗಪ್ಪ ಎಂಬಾತನು ಚಿಂಚೋಳಿಗೆ ತೆರಳಿ, ಗೋವಿಂದರಾಯನ ಜೊತೆ ಪೂರ್ಣ ಒಂಬತ್ತು ದಿನ ಉಳಿದು ಆತನ ಮಾತು, ಚರ್ಯೆಯನ್ನು ತಿಳಿದನಲ್ಲದೆ, ಸಂಬಂಧಿಗಳ ಹೆಸರು ವಿವರಗಳನ್ನೂ ಕೇಳಿ, ಈತ ಗೋವಿಂದರಾವ ಹೌದೆನ್ನುವುದನ್ನು ಖಾತ್ರಿಪಡಿಸಿಕೊಂಡು ಮರಳಿದನು. ಮುಧೋಳವಾಡೆಗೆ ಬಟ್ಟೆ ವ್ಯಾಪಾರಕ್ಕೆಂದು ಬರುತ್ತಿದ್ದು ಪರಿಚಿತನಾಗಿದ್ದ ರಾಣೋಜಿ ಸಿಂಧೆಯು ಚಿಂಚೋಳಿಯಲ್ಲಿ

ಗೋವಿಂದರಾಯನನ್ನು ಭೆಟ್ಟಿಯಾಗಿ ತಮ್ಮ ಪೂರ್ವದ ವ್ಯವಹಾರದ ಬಗ್ಗೆ ಮಾತಾಡಿದನು. ನಾಗಬಸಲಿಂಗಯ್ಯನ ಸ್ಥಳೀಯ ಪ್ರಾಥಮಿಕ ಶಾಲೆಯಲ್ಲಿ ಗೋವಿಂದರಾಯನ ಸಹಪಾಠಿಯಾಗಿದ್ದ ಪಾಂಡುರಂಗರಾವ್ ಭಕ್ಷಿಗೂ ಕೂಡ ಆತನೇ ಗೋವಿಂದರಾವ್ ಎನ್ನುವುದರಲ್ಲಿ ಸಂದೇಹವಿರಲಿಲ್ಲ.

ಈ ಕಾರಣದಿಂದಾಗಿ ವೆಂಕಟರಾಯನ ತಾಯಿ ಬಕ್ಕಾಬಾಯಿ ಸಹಜವಾಗಿಯೇ ಚಿಂತಿತಳಾದಳು. ಗೋವಿಂದರಾವ ಈತನೇ ಹೌದೇ? ಅಲ್ಲವೇ? ಎನ್ನುವುದನ್ನು ದೃಢೀಕರಿಸಲು ಈಕೆ ವಾಡೆಯ ಅಡುಗೆಯವ ಹಾಗೂ ಕಿರಾಣಿ ಅಂಗಡಿಯವರನ್ನು ಚಿಂಚೋಳಿಗೆ ಕಳುಹಿಸಿದಳು. ಅಸಲಿ ಗೋವಿಂದರಾಯನ ಮೊಣಕಾಲಿನಲ್ಲಿ ಇದ್ದ ಕಲೆ ಇದೆಯೇ ಎಂಬುದನ್ನು ತಿಳಿಯಲು ಅಪೇಕ್ಷಿಸಿದಳು. ಅದರಂತೆ ಚಿಂಚೋಳಿಗೆ ಹೋದ ಪ್ರತಿಯೊಬ್ಬರೂ ಆತ ಗೋವಿಂದರಾಯನೇ ಹೌದೆಂದು ಅಭಿಪ್ರಾಯಪಟ್ಟರು. ಹೀಗೆ ಗೋವಿಂದರಾವ ಬದುಕಿರುವನೆಂದು ಜನರು ಸಹಜವಾಗಿಯೇ ನಂಬಿದರು. ಬಕ್ಕಾಬಾಯಿ ಮಾತ್ರ ಚಿಂಚೋಳಿಗೆ ಹೋಗಿ ಬಂದವರಾರೂ ಗೋವಿಂದರಾಯನ ಪರವಾಗಿ ಒಂದು ಮಾತೂ ಆಡಬಾರದಾಗಿ ಆಜ್ಞಾಪಿಸಿದಳು.

ಇತ್ತ ಗೋವಿಂದರಾಯನ ಹೆಂಡತಿ? ವಾಡೆಯಲ್ಲಿರುವವರೆಲ್ಲ ಅನುಕೂಲಾಭಿಪ್ರಾಯ ಕೊಟ್ಟಿದ್ದಷ್ಟೆ ಅವಳಿಗೆ ಸಾಕಾಯಿತೇನೊ ಅವನನ್ನು ಪತಿ ಎಂದು ಸ್ವೀಕರಿಸಲು ಮಾನಸಿಕವಾಗಿ ಸಿದ್ಧಳೇ ಆಗಿರಬೇಕು, ಸರಕಾರವು ನಿರ್ಣಯ ತೆಗೆದುಕೊಳ್ಳುವುದಕ್ಕೆ ಮುಂಚೆಯೇ ಆಕೆ ಅವನನ್ನು ಕೂಡಿಕೊಂಡಳು. ಅವನ ಮೊದಲ ಭೆಟ್ಟಿಯಲ್ಲಿ ಅವಳೂ ತುಸು 'ವಿಚಾರಣೆ' ನಡೆಸಿರಬೇಕು - ಬಹುಶಃ ಕಾಂತಾಸಮ್ಮಿತತಯಾ.

ಧಾರವಾಡ ಸುಭಾದ ಮುಖ್ಯಾಧಿಕಾರಿಯಾಗಿದ್ದ ಟಿ.ಎಚ್. ಬೇಬರ್ ತೋರಿದ ವಿಶೇಷ ಆಸಕ್ತಿಯಿಂದಾಗಿ ಕೊನೆಗೂ ಮುಧೋಳ ಸಂಸ್ಥಾನದ ನ್ಯಾಯಸಮ್ಮತ ಒಡೆಯನಾರು ಎಂದು ಇತ್ಯರ್ಥವಾಗುವ ಕಾಲ ಸನ್ನಿಹಿತವಾಯಿತು. ಬೇಬರನು ಈ ಕೆಲಸದ ಹೊಣೆಗಾರಿಕೆಯನ್ನು ಸೂಂಡೂರಿನ ನರಸಿಂಗರಾವ್ ಎಂಬವನಿಗೆ ಗುಪ್ತವಾಗಿ ಒಪ್ಪಿಸಿದ. ಅದರಂತೆ ನರಸಿಂಗರಾಯನು ಮುಧೋಳ ಮತ್ತು ಪುಣೆಗೆ ಹೋದನು. ಗೋವಿಂದರಾವ್ ಹೌದೇ ಎಂದು ಖಚಿತಪಡಿಸಿಕೊಳ್ಳಲು ತಪಾಸಣೆ ನಡೆಸಿದನು. ತದನಂತರ ಬೇಬರನು ಈ ವ್ಯಾಜ್ಯದ ಬಗ್ಗೆ ಸವಿವರವಾದ ವರದಿಯನ್ನು ಸಿದ್ಧಪಡಿಸಿ ಎಲ್ಫಿನ್‌ಸ್ಟನ್‌ಗೆ ಕಳುಹಿಸಿಕೊಟ್ಟನು. ಈತನ ನಿಲುವು ಗೋವಿಂದರಾಯನಿಗೆ ತುಸು ಅನುಕೂಲಕರವಾಗಿತ್ತು. ಆದರೆ ಅದು ಗೋವಿಂದರಾಯನಿಗೆ ಪೂರ್ಣತಃ ಸಂಸ್ಥಾನದ ಹಕ್ಕನ್ನು ಬಿಟ್ಟುಕೊಡುವಷ್ಟು ಶಕ್ತವಾಗಿರಲಿಲ್ಲ. ಘೋರ್ಪಡೆ ಕುಟುಂಬದ ಆಸ್ತಿಯಲ್ಲಿ ಸ್ವಲ್ಪ ಪಾಲನ್ನು ಗೋವಿಂದರಾಯನಿಗೆ ಕೊಡುವುದು ಸೂಕ್ತವೆಂದು ಅದರಲ್ಲಿ ಸೂಚಿಸಲಾಗಿದ್ದಿತು.

ಈ ಹೊತ್ತಿಗೆ ಬಾಲಾಜಿಪಂತನ ರಂಗಪ್ರವೇಶ. ಈತನು ೧೮೧೭-೧೮೧೮ರ ಮರಾಠಾ ಮತ್ತು ಬ್ರಿಟಿಶರ ನಡುವಿನ ಮಹತ್ವದ ಹಣಾಹಣಿಯಲ್ಲಿ ಬ್ರಿಟಿಶರ ಪರ ಬೇಹುಗಾರನಾಗಿ ಎಲ್ಫಿನ್‌ಸ್ಟನ್‌ಗೆ ಹತ್ತಿರದವನಾಗಿದ್ದ. ಈತನು ವೆಂಕಟರಾಯನಿಂದ ಲಂಚ ಸ್ವೀಕರಿಸಿ, ಎಲ್ಫಿನ್‌ಸ್ಟನ್‌ನೊಂದಿಗೆ ಮಾತನಾಡಿ ಗೋವಿಂದರಾಯನಿಗೆ ಸಂಸ್ಥಾನದ ಆಸ್ತಿಯಲ್ಲಿ ನ್ಯಾಯವಾದ ಹಕ್ಕು ದೊರೆಯದಂತೆ ನೋಡಿಕೊಂಡನು. ವೆಂಕಟರಾವ ಬಾಲಾಜಿಪಂತ ನಾತುವಿಗೆ ಕೊಟ್ಟ ಲಂಚದ ಮೊತ್ತವು ೫೦ ಸಾವಿರ ರೂಪಾಯಿಗಳಾಗಿದ್ದು, ಈ ಮೊತ್ತವನ್ನು ವೆಂಕಟರಾವ ಸಂಸ್ಥಾನದಲ್ಲಿ ಭೂ ತೆರಿಗೆಯ ಮೂಲಕ ಸಂಗ್ರಹಿಸಿದನೆನ್ನಲಾಗಿದೆ.

ಗೋವಿಂದರಾಯನ ಪತ್ರಕ್ಕೆ ಉತ್ತರವಾಗಿ ಎಲ್ಫಿನ್‌ಸ್ಟನ್ನನು, ಧಾರವಾಡ ಸುಭೆಯ ಮುಖ್ಯಾಧಿಕಾರಿಯನ್ನು ಭೇಟಿಯಾಗುವಂತೆ ಗೋವಿಂದರಾಯನಿಗೆ ಬರೆದನು. ಗೋವಿಂದರಾವ ತನಗೆ ಧಾರವಾಡದಲ್ಲಿ ಯಾರೂ ಪರಿಚಿತರಿಲ್ಲವಾದುದರಿಂದ ವಿಚಾರಣೆಯನ್ನು ಪುಣೆಯಲ್ಲಿಯೇ ನಡೆಸಬೇಕೆಂದು ಪ್ರತಿಪಾದಿಸಿದನು. ಪುಣೆಯಲ್ಲಿ ಮಹಾರಾವ ಹಾಗೂ ಇತರ ಆತ್ಮೀಯ ಸಂಬಂಧಿಕರು ವಾಸವಾಗಿದ್ದರು. ಆದರ ಕಂಪೆನಿ ಸರಕಾರದಿಂದ ಗೋವಿಂದರಾಯನ ಈ ಕೋರಿಕೆಗೆ ಅನುಮತಿ ದೊರೆಯದ ಕಾರಣ ಧಾರವಾಡದ ರಾಜ ಪ್ರತಿನಿಧಿಯ ಸಹಾಯಕನಾದ ವಾಲ್ಟರ್ ಎಲಿಯೆಟ್ ವಿಚಾರಣೆ ನಡೆಸಿದನು. ವಾಲ್ಟರ್ ಎಲಿಯೆಟ್ ತನ್ನ ವರದಿಯಲ್ಲಿ "ಈತ ಗೋವಿಂದರಾವ ಹೌದೆನ್ನುವುದಕ್ಕೆ ಸಾಕಷ್ಟು ಪುರಾವೆಗಳು ಲಭ್ಯವಿಲ್ಲ"ವೆಂದು ಅಭಿಪ್ರಾಯಪಟ್ಟನು.

ತಿಂಗಳುಗಳೇ ಉರುಳಿದರೂ ಯಾವುದೇ ತೀರ್ಮಾನವಿಲ್ಲದೆ ಈ ವ್ಯಾಜ್ಯ ಕೊಳೆಯುತ್ತಿತ್ತು. ಗೋವಿಂದರಾವ ಗವರ್ನರನನ್ನು ಈ ಕುರಿತು ನೆನಪಿಸುತ್ತಲೇ ಬಂದನು. ಎಲ್ಫಿನ್‌ಸ್ಟನ್ನನ ಅನಂತರ ಗವರ್ನರ್ ಆಗಿ ಬಂದ ಜಾನ್ ಮಾಲ್ಕಮ್ ಈ ವ್ಯಾಜ್ಯದ ಇತ್ಯರ್ಥಕ್ಕೆ ಬೇರೆಯೇ ಆದ ರೀತಿಯಲ್ಲಿ ಪ್ರಯತ್ನಿಸಿದನು. ಜಮಖಂಡಿ, ಮೀರಜ್, ನಿಪ್ಪಾಣಿ ಹಾಗೂ ಸಾಂಗ್ಲಿಯ ಸಂಸ್ಥಾನಿಕರು ಮತ್ತು ಬೆಳಗಾವಿಯ ಕೆಲವು ಪ್ರಮುಖ ಸರದಾರರು ಸದಸ್ಯರಾಗಿರುವ ಒಂದು ಪಂಚಾಯತಿಯನ್ನು ರಚಿಸಿದನು. ಸಾಂಗ್ಲಿಯ ಚಿಂತಾಮಣರಾವ ಪಟವರ್ಧನನನ್ನು ಇದರ ಪ್ರಮುಖ ವಕ್ತಾರನನ್ನಾಗಿ ಮಾಡಿದನು. ಬಾಲಾಜಿಪಂತ್ ನಾತು ಈ ಪಂಚಾಯತಿಯ ಕಾರ್ಯಕಲಾಪಗಳನ್ನು ನೇಪಥ್ಯದಲ್ಲಿದ್ದು ನಿಯಂತ್ರಿಸುತ್ತಿದ್ದನು. ಕ್ರಿ.ಶ. ೧೮೨೯ನೇ ಇಸವಿಯಲ್ಲಿ ಒಂದು ದಿನ ಈ ವಿಚಾರಣೆ ನಡೆಯಿತು.

ಆಗ ಗೋವಿಂದರಾಯನ ಕೈಬರಹ ಮತ್ತು ಭಾಷಾ ಜ್ಞಾನದ ವಿವರಗಳನ್ನೂ ಪರೀಕ್ಷೆಗೊಳಪಡಿಸಲಾಯಿತು. ಗೋವಿಂದರಾವ ತನ್ನ ಹೇಳಿಕೆಯನ್ನು ಬರಹಕ್ಕಿಳಿಸಿ ಸಾಂಗ್ಲೀಕರ ಅಪ್ಪಾಸಾಹೇಬರಿಗೆ ಕೊಡಬೇಕೆಂದಿದ್ದಾಗ "ವಿಚಾರಣೆಯು ಈಗಾಗಲೇ ಮುಗಿದಿರುವ ಕಾರಣ ನಾನು ಇದನ್ನು ಸ್ವೀಕರಿಸುವುದಿಲ್ಲ" ಎಂದು ಸಾಂಗ್ಲೀಕರನು ನಿರಾಕರಿಸಿದನು.

ಪಂಚಾಯತಿನ ಅಂತಿಮ ತೀರ್ಪಿನಲ್ಲಿ ಸಾಂಗ್ಲೀಕರನ ಕೆಲವು ಪ್ರಶ್ನೆಗಳಿಗೆ ಗೋವಿಂದರಾವನ ಉತ್ತರ ಸಮರ್ಪಕವಾಗಿರಲಿಲ್ಲವೆಂದಿತ್ತು. ನಿಪ್ಪಾಣಿಕರನ ಅಭಿಪ್ರಾಯವೂ ಇದೇ ಆಗಿತ್ತು.

ಅಂತಿಮವಾಗಿ ಬ್ರಿಟಿಶ್ ಸರಕಾರವು ಈ ಕೆಳಗಿನಂತೆ ಆಜ್ಞೆ ಹೊರಡಿಸಿತು: "ಗೋವಿಂದರಾವ ಘೋರ್ಪಡೆಯ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ವಾಲ್ಟರ್ ಎಲಿಯೆಟ್ ಒದಗಿಸಿದ ಆಧಾರಗಳನ್ನೂ, ಪಂಚಾಯತ್ ಪ್ರಮುಖರ ಅನಿಸಿಕೆಗಳನ್ನೂ ಲಕ್ಷಿಸಿ ಗೋವಿಂದರಾವ ಎಂದು ಹೇಳಿಕೊಂಡಿರುವ ವ್ಯಕ್ತಿಯು ವಂಚಕನೆಂದು ಸಾಬೀತಾಗಿದ್ದು ಈ ಕೆಳಗಿನ ಹುಕುಮನ್ನು ಆ ವ್ಯಕ್ತಿಯ ಮೇಲೆ ತಕ್ಷಣ ಜ್ಯಾರಿಗೊಳಿಸಬೇಕು.

"ಈಗಾಗಲೇ ಸುಳ್ಳೆಂದು ಸಾಬೀತಾಗಿರುವ ಈ ವ್ಯಾಜ್ಯವನ್ನು ಪುನಃ ಹೂಡಿದ ಪಕ್ಷದಲ್ಲಿ ಈತನನ್ನು ವಂಚಕನೆಂದು ಹಾಗೂ ಸಾರ್ವಜನಿಕ ಶಾಂತಿಗೆ ಧಕ್ಕೆಯುಂಟು ಮಾಡುವನೆಂದು ಪರಿಗಣಿಸಿ ಈತನ ಮೇಲೆ ಕಾನೂನು ಕ್ರಮ ಕೈಗೊಂಡು ದಸ್ತಗಿರಿ ಮಾಡಿ ಶಿಕ್ಷಿಸಲಾಗುವುದು.

"ಅಪರಾಧಿಯೆಂದು ಸಾಬೀತಾದ ಗೋವಿಂದರಾವ ಎರಡು ತಿಂಗಳೊಳಗಾಗಿ ದಕ್ಷಿಣ ಪ್ರದೇಶವನ್ನು ಬಿಟ್ಟು ಉತ್ತರಕ್ಕೆ ಕೃಷ್ಣಾ ತೀರದ ಕಡೆಗೆ ತೆರಳಬೇಕು. ಎರಡು ತಿಂಗಳ ನಂತರವೂ ಈತ ದಕ್ಷಿಣ ಭಾಗದಲ್ಲಿ ಎಲ್ಲಿಯಾದರೂ ಕಾಣಿಸಿಕೊಂಡನೆಂದಾದರೆ ಈತನನ್ನು ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಲಾಗುವುದು.

"ದಕ್ಷಿಣ ಪ್ರಾಂತ್ಯದಲ್ಲಿರುವ ಸಾರ್ವಜನಿಕರಲ್ಲಿ ಈ ಮೂಲಕ ವಿನಂತಿಸಿಕೊಳ್ಳು ವುದೇನೆಂದರೆ ಗೋವಿಂದರಾವ ಘೋರ್ಪಡೆಯೆಂದು ಕರೆದುಕೊಳ್ಳುತ್ತಿರುವ ಈ ವ್ಯಕ್ತಿ ಅಪರಾಧಿಯೆಂದು ದೃಢಪಟ್ಟಿದ್ದರೂ ನಿಗದಿತ ಸಮಯದ ನಂತರವೂ ದಕ್ಷಿಣ ಪ್ರಾಂತ್ಯದಲ್ಲಿ ಎಲ್ಲಾದರೂ ಕಾಣಿಸಿಕೊಂಡು ತಾನು ಗೋವಿಂದರಾವ ಎಂದು ಹೇಳಿಕೊಂಡಲ್ಲಿ ತಕ್ಷಣ ಸರಕಾರಕ್ಕೆ ಮಾಹಿತಿ ನೀಡಿ ಸಹಕರಿಸಬೇಕು."

'ಬೆಳಗಾವಿಯಲ್ಲಿ ವಿಚಾರಣೆಯ ವೇಳೆ ತನಗೆ ಸತ್ಯವನ್ನು ನಿರೂಪಿಸುವುದಕ್ಕೆ ಸಾಕಷ್ಟು ಅವಕಾಶವಾಗಲಿಲ್ಲ' ಎನ್ನುವ ಕಾರಣ ಕೊಟ್ಟು ಗೋವಿಂದರಾವ ತನ್ನ ವ್ಯಾಜ್ಯವನ್ನು ಪುನಃ ಪರಿಶೀಲಿಸಬೇಕಾಗಿ ಮೇಲ್ಮನವಿ ಸಲ್ಲಿಸಿದನಾದರೂ ಅದು ಸರಕಾರದಿಂದ ತಿರಸ್ಕರಿಸಲ್ಪಟ್ಟಿತು. ಅನಂತರ ವ್ಯಾಜ್ಯದ ಯಥಾಪ್ರತಿಯನ್ನು ತನಗೆ ನೀಡುವಂತೆ ಕಂಪೆನಿ ಸರಕಾರವನ್ನು ಈತ ಕೇಳಿಕೊಂಡ. ಇದು ಕೂಡಾ ಯಾವುದೇ ಪರಿಹಾರ ಕಾಣದೆ ಬಿದ್ದುಹೋಯಿತು. ಹೀಗಾಗಿ ಪತ್ನಿ ಹಾಗೂ ತಮ್ಮಿಬ್ಬರಿಗೆ ಹುಟ್ಟಿದ ಇಬ್ಬರು ಮಕ್ಕಳು ಸಹಿತವಾಗಿ ಊರು ಬಿಟ್ಟು ಉತ್ತರದ ಕಡೆಗೆ ಹೊರಟು ಹೋದ.

ಹತ್ತಿಪ್ಪತ್ತು ವರ್ಷಗಳಾದ ಮೇಲೆ ಗೋವಿಂದರಯನ ನಿಜಸ್ವರೂಪ ಬಯಲಿಗೆ ಬಂದಿತು. ಪೂರ್ವೋಕ್ತ ಇ. ಡಬ್ಲ್ಯೂ. ವೆಸ್ಟ್ ಕಂಡುಕೊಂಡ ಪ್ರಕಾರ ಲಕ್ಷ್ಮಣರಾಯನೆಂಬ ಸಂಸ್ಥಾನೀ ಸಂಬಂಧಿಕ ಹಾಗೂ ಅವನ ತಂಗಿ - ಇವರು ಓರ್ವ ಗೋಸಾವಿಯನ್ನು ಕಂಡರು. ಗೋವಿಂದರಾಯನದೇ ತದ್ರೂಪ. ಸರಿ; ಅವನಿಗೆ ಗೋವಿಂದರಾಯನ ಹಿಂದಿನ ಜೀವನದ ಪ್ರತಿಯೊಂದು ವಿವರಗಳನ್ನು ತಿಳಿಸಿ ಅವನನ್ನು ಸಜ್ಜುಗೊಳಿಸಿದರು. ಗೋಸಾವಿಯು ತನ್ನೀ ಪಾತ್ರವನ್ನು ಚಾಕಚಕ್ಯತೆಯಿಂದ ನಿರ್ವಹಿಸಿದರೂ ಏನೂ ಪ್ರಯೋಜನ ಆಗಲಿಲ್ಲವಲ್ಲ!

೧೦. ದತ್ತಕವಿಧಿ – ಕೆಲ ವಿಶಿಷ್ಟ ಘಟನೆಗಳು

ಅತಿ ಪ್ರಾಚೀನ ಕಾಲದಲ್ಲಿ, ಕುಟುಂಬದಲ್ಲಿ ಓರ್ವ ಮಗ ಅವಶ್ಯವಾಗಿ ಬೇಕಾಗುತ್ತಿದ್ದ. ಉದ್ದೇಶ, ಕುಟುಂಬದಲ್ಲಿಯ ಇಳಿ ವಯಸ್ಸಿನವರ ರಕ್ಷಣೆ ಮಾಡಬೇಕೆಂದು. ಗಂಡು ಮಗ ಒಂದು ವೇಳೆ ಇರದೆ ಹೋದರೆ, ಬೇರೊಬ್ಬನನ್ನು ಕುಟುಂಬದೊಳಗೆ ಸೇರಿಸಿಕೊಳ್ಳುತ್ತಿದ್ದರು. ಇದಕ್ಕೆ ಯಾವುದೇ ಧಾರ್ಮಿಕ ಸ್ವರೂಪವಿರಲಿಲ್ಲ. ಆ ಸ್ವರೂಪ ಬಂದದ್ದು ಆರ್ಯರ ಪ್ರಭಾವದಿಂದ. ಕ್ರಮೇಣ ಎಂದರೆ ವೇದೋತ್ತರ ಕಾಲದಲ್ಲಿ ಅದಕ್ಕೆ ಸಾಮಾಜಿಕ ನೆಲೆಯೂ ಸೇರಿಕೊಂಡಿತು. ಪುರಾಣ ಕಥೆಗಳಲ್ಲಿ ಒಂದೆರಡು ದೃಷ್ಟಾಂತಗಳೂ ಇವೆ. ಅತ್ರಿ ಋಷಿಯು ತನ್ನೊಬ್ಬ ಮಗನನ್ನು ದತ್ತಾಗಿ ಬೇರೊಬ್ಬರಿಗೆ ಕೊಟ್ಟನೆಂದು ತೈತ್ತಿರೀಯ ಸಂಹಿತೆಯಲ್ಲಿ ಬಂದಿದೆ. ಅದಕ್ಕಿಂತ ಶುನಶ್ಶೇಪನ ದತ್ತಕ ವಿಶಿಷ್ಟವಾಗಿದೆ. ಶುನಶ್ಶೇಪನ ತಂದೆ ಅಜೀಗರ್ತ. ತಂದೆಯು ಮಾತುಕೊಟ್ಟಿದ್ದ ತಪ್ಪಿಗಾಗಿ ಶುನಶ್ಶೇಪನನ್ನು ಯಜ್ಞದಲ್ಲಿ ಬಲಿ ಕೊಡಬೇಕಾಗಿ ಬಂದಾಗ, ವಿಶ್ವಾಮಿತ್ರ ಮುನಿಯು ಅದರಿಂದ ಅವನನ್ನು ಪಾರು ಮಾಡಿದ. ವಿಶ್ವಾಮಿತ್ರನಿಗೋ ಅದಾಗಲೇ ಹಲವಾರು ಮಕ್ಕಳು; ಅವರಲ್ಲಿಯೇ ಒಬ್ಬನನ್ನಾಗಿ ಎಣಿಸಿ ಶುನಶ್ಶೇಪನನ್ನು ದತ್ತು ತೆಗೆದುಕೊಂಡನಂತೆ.

ಪ್ರಾಚೀನ ಇತಿಹಾಸ ಕಾಲದಲ್ಲಿ ದತ್ತಕ ವಿಧಿಯನ್ನು ನಿಯಮಿತಗೊಳಿಸಲು ಕೆಲವು ಸ್ಮೃತಿ-ಗ್ರಂಥಗಳು ಪ್ರಯತ್ನಿಸಿದುವು. ಅವುಗಳಲ್ಲಿ ಮನು, ವಾಸಿಷ್ಠ, ಬೌಧಾಯನ, ಶೌನಕ ಮತ್ತು ಸಾಕಲ್ಯ ಇವರ ಗ್ರಂಥಗಳು ಹೆಚ್ಚು ಪ್ರಸಿದ್ಧವಾದವುಗಳು. ಅವುಗಳ ಮೇಲೆ ಪ್ರತ್ಯೇಕವಾಗಿ ದತ್ತಕ ವಿಧಿಯನ್ನು ಕುರಿತೇ ಟೀಕಾ ಗ್ರಂಥಗಳು ಹೊರಟವು. ಅಂಥವುಗಳಲ್ಲಿ ನೀಲಕಂಠನ 'ಮಯೂಖ', ನಂದಪಂಡಿತನ 'ದತ್ತಕ ಚಂದ್ರಿಕಾ', ಹಾಗೇನೆ 'ದತ್ತಕ ಮೀಮಾಂಸಾ' ಇವು ಮೂರನ್ನು, ಪ್ರಸಂಗ ಬಂದಾಗ, ಪರಿಶೀಲಿಸಿ ನಿರ್ಣಯಕ್ಕೆ ಬರುವುದು ರೂಢಿಗತ ವಾಯಿತು.

ಆದರೆ ಈ ಟೀಕಾಗ್ರಂಥಗಳ ವಿವರಣೆ ಒಂದರ ಹಾಗೆ ಇನ್ನೊಂದು ಇಲ್ಲ. ಅದಕ್ಕೆ ಕಾರಣವೆಂದರೆ ನಮ್ಮ ದೇಶದಲ್ಲಿಯು ಹಿಂದೂ ಸಮಾಜವು ಬೆಳೆ ಬೆಳೆದಂತೆಲ್ಲ ದತ್ತಕವಿಧಿಯು ಪ್ರಾದೇಶಿಕ ಬದಲಾವಣೆಗಳನ್ನು, ಮೈಗೂಡಿಸಿಕೊಂಡದ್ದು. ಉದಾಹರಣೆಗೆ 'ಪುತ್ರ' ಎಂಬವನು ದತ್ತಕ ಹೋಗಲು ಸಾಧ್ಯವಷ್ಟೆ. ಆದರೆ ನಂದಪಂಡಿತನು 'ಪುತ್ರ' ಇದರಲ್ಲಿ 'ಪುತ್ರಿ'ಯೂ ಅಂತರ್ಗತವೆಂದು ತಿಳಿಯಬೇಕು ಎನ್ನುತ್ತಾನೆ. ಅರ್ಥಾತ್ ಸ್ತ್ರೀಯನ್ನೂ ದತ್ತು ತೆಗೆದುಕೊಳ್ಳಬಹುದು ಎಂದಾಯಿತು. ಅದಕ್ಕೆ ಅವನು ಎರಡು ಪೌರಾಣಿಕ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಒಂದು, ಶಾಂತಾ ಎಂಬ ದಶರಥನ ಮಗಳು, ಲೋಮಪಾದ ರಾಜನಿಗೆ ದತ್ತಕ ಹೋದುದಂತೆ. ಇನ್ನೊಂದು ಉದಾಹರಣೆ, ಕುಂತೀಭೋಜನೆಂಬವನ ಮಗಳಾದ ಕುಂತಿಯನ್ನು ದತ್ತು ತೆಗೆದುಕೊಂಡದ್ದು.

ಮಧ್ಯಯುಗದಲ್ಲಿ

ಮಧ್ಯಯುಗದಲ್ಲಿ 'ದತ್ತಕ'ದ ಉದ್ದೇಶಗಳನ್ನು ನಿರ್ದಿಷ್ಟಗೊಳಿಸ ಲಾಗಿದ್ದಿತು. ಅವೆಂದರೆ

- ಸ್ವರ್ಗದಲ್ಲಿಯ ಪಿತೃಗಳಿಗೆ ಸದ್ಗತಿ-ಪ್ರಾಪ್ತಿ.
- ಕುಟುಂಬದ ವಂಶಪರಂಪರೆಯನ್ನು ಮುಂದುವರಿಸುವುದು.
- ವಂಶಾನುಗತವಾದ ಹಕ್ಕುಗಳನ್ನು ಮತ್ತು ಆಸ್ತಿಯನ್ನು ಉಪಭೋಗಿಸುವುದು.

ಮೇಲಿನವುಗಳಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಇವೆರಡೂ ಸೇರಿರುತ್ತವೆ ಎಂಬುದನ್ನು ಗಮನಿಸಬೇಕು. ಇವುಗಳಲ್ಲಿ ಯಾವುದಕ್ಕೆ ಹೆಚ್ಚು ಒತ್ತು ಎಂದು ಹೇಳುವುದು ಕಷ್ಟ. ಅದು ಆ ಆ ಕುಟುಂಬಗಳ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ.

ಮೇಲಿನವುಗಳಲ್ಲಿ ಮೂರನೆಯದರ ಕಾರ್ಯಾಚರಣೆಯ ಬಾಬತಿನಲ್ಲಿ ಸರಕಾರೀ ಯಂತ್ರದ ಅಗತ್ಯ ಬೀಳತೊಡಗಿತು. ಆಸ್ತಿಯ ಹಸ್ತಾಂತರ ಅಷ್ಟು ಸುಲಭವಾದದ್ದಲ್ಲ. ಆದ್ದರಿಂದ ಮಧ್ಯಯುಗದಲ್ಲಿ ಆ ಪ್ರದೇಶಗಳ ಸರಕಾರದವರು (ಅದು ಸಂಸ್ಥಾನವೂ ಆಗಿರಬಹುದು) ಒಂದಿಷ್ಟು 'ನಜರಾಣಾ' ಪಡೆದು ದತ್ತಕಕ್ಕೆ ಅಧಿಕೃತ ಮುದ್ರೆಯನ್ನೊತ್ತುವ ಕ್ರಮವು ಬಳಕೆಯಲ್ಲಿ ಬಂದಿತು. ಸಾಮ್ರಾಜ್ಯವನ್ನೇ ಆಳುತ್ತಿದ್ದ ಪೇಶ್ವೆಯರು, ಸಂಬಂಧಪಟ್ಟ ಪ್ರದೇಶದ ಅಧಿಕಾರಿಗಳಿಗೆ ಮುಂಚಿತ ತಿಳಿಸಿಯೇ ದತ್ತಕ ತೆಗೆದುಕೊಳ್ಳಬೇಕೆಂದು ವಿಧಿಸಿದ್ದರು. ಆದರೇನು, ಅವರುಗಳು ಲಂಚ ತೆಗೆದುಕೊಂಡು ದತ್ತಕ-ಪಶ್ಚಾತ್ ಎಷ್ಟೋ ಬಾರಿ ಮಂಜೂರನ್ನು ಕೊಟ್ಟದ್ದುಂಟು.

ಎಲ್ಲರಿಗೂ ತಿಳಿದಿರುವ ಹಾಗೆ ದತ್ತಕ ವಿಧಿಯು, ಮೂವರು ಗಂಡಸರನ್ನು ಒಳಗೊಳ್ಳುತ್ತದೆ. ಮಗನನ್ನು ದತ್ತು ಕೊಡುವ ತಂದೆ, ಅದನ್ನು ಸ್ವೀಕರಿಸುವವ, ಮತ್ತು ಸ್ವತಃ ದತ್ತು ಹೋಗುವವ. ಈ ಮೂವರ ಕಾರ್ಯದಲ್ಲಿ ನ್ಯಾಯಕ್ಷಮತೆ ಇದೆಯೆಂಬುದನ್ನು ಖಾತ್ರಿ

ಮಾಡಿಕೊಳ್ಳಬೇಕಾಗುತ್ತದೆ. ಆದರೆ ಎಷ್ಟೋ ಬಾರಿ ಇಲ್ಲಿ ಆ ಮೂವರಲ್ಲದೆ, ಸಂಬಂಧಪಟ್ಟ ಸ್ತ್ರೀಯರದೂ ಪಾತ್ರವಿರುತ್ತದೆ. ಇವರೆಲ್ಲ ಸೇರಿದಾಗ ನ್ಯಾಯಕ್ಷಮತೆಯು (Competence) ಪ್ರಶ್ನಾರ್ಹವಾಗುತ್ತದೆ.

ಬ್ರಿಟಿಶರ ಕಾಲದಲ್ಲಿ

ಬ್ರಿಟಿಶರ ಕಾಲದಲ್ಲಿ ಎಂದರೆ ೧೯ನೆಯ ಶತಮಾನದಲ್ಲಿ ದತ್ತಕ ವಿಧಿಯಲ್ಲಿ ಹತ್ತಾರು ತೊಡಕುಗಳು ಕಾಣಿಸಿಕೊಂಡವು. ಹಿಂದೂಗಳ ದತ್ತಕವಿಧಿ ಎನ್ನುವುದೇ ಅವರಿಗೆ ಹೊಸತು. ಅವರು ಎದುರಿಸಬೇಕಾಗಿ ಬಂದ ಕೆಲವು ತೊಡಕುಗಳಿವು:

- ಶಾಸ್ತ್ರದ ಪ್ರಕಾರ ದತ್ತಕ ವಿಧಿ ಜರುಗಿತೆ?
- ದತ್ತಕ ಹೋದ ಹುಡುಗನ ಮದುವೆಯಾಗಿತ್ತೆ?
- ದತ್ತಕದ ಕಾಲಕ್ಕೆ ಮೃತನಾದವನ ಹೆಂಡತಿ ಗರ್ಭಿಣಿ ಇದ್ದರೆ?
- ದತ್ತಕ ವಿಧಿಗೆ ಸವತಿಯರ ಒಪ್ಪಿಗೆಯನ್ನು ಪಡೆದಿತ್ತೆ?
- ಆಸ್ತಿಯನ್ನು ದತ್ತಕಕ್ಕೆ ಮುಂಚೆ ಅಥವಾ ಆ ಕೂಡಲೇ ಬೇರೆ ರೀತಿಯಲ್ಲಿ ವಿಲೇವಾರಿ ಮಾಡಿದ್ದಿತೆ?

ಇಂಥ ಅಂಶಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳುವಲ್ಲಿ ಮುಂಬಯಿಯ ಪ್ರಥಮ ಗವರ್ನರ್ ಎಲ್‌ಫಿನ್‌ಸ್ಟನ್ ಪುಣೆಯಲ್ಲಿಯ ಶಾಸ್ತ್ರಿಗಳನ್ನು ಕೇಳುವ ಕ್ರಮವನ್ನು ರೂಢಿಸಿದ್ದ. ಒಂದು ವಿಷಯದಲ್ಲಿ ಮಾತ್ರ ಎಂದರೆ - ಆಸ್ತಿ ಇದ್ದವರು, ಸಂಸ್ಥಾನಿಕರು ಪೂರ್ವ ಪರವಾನಿಗೆ ಪಡೆದಿರಬೇಕು ಎನ್ನುವ ಬಾಬತಿನಲ್ಲಿ ಕಟ್ಟುನಿಟ್ಟಾಗಿ ವರ್ತಿಸುತ್ತಿದ್ದರು. ಆಮೇಲೆ ಅದಕ್ಕೆ ಇನ್ನೆರಡು ನಿಯಮಗಳನ್ನು ಸೇರಿಸಿದರು:

(೧) ಸರಕಾರವು ದತ್ತಕವನ್ನು ಮಾತ್ರ ಮಾನ್ಯ ಮಾಡಬಹುದು. ಅದರರ್ಥ ಅವನು ತಂತಾನೆ ಹಕ್ಕಿನಿಂದ ಆ ಆಸ್ತಿಗೆ ಒಡೆಯನಾಗಲಾರ. ಆ ಹಕ್ಕುದಾರಿಕೆಯನ್ನು ನಿರ್ದಿಷ್ಟವಾಗಿ ಪಡೆದಿರಬೇಕಾಗುತ್ತದೆ.

(೨) ಯಾವದೊಂದು ದತ್ತಕ ವಿಧಿಯನ್ನು ಒಪ್ಪಿದ ಸರಕಾರವು ಆ ವ್ಯಕ್ತಿಯ ಮೇಲೆ ಉಪಕಾರಗೈದಂತೆಯೇ ಎಂದು ತಿಳಿಯತಕ್ಕುದು.

ಇದರಲ್ಲಿ ಅವರ ಅಪ್ಪಟ ಸ್ವಾರ್ಥವಿತ್ತೆಂದು ಬೇರೆ ಹೇಳಬೇಕಿಲ್ಲ. ಯಾರೊಬ್ಬ ದೇಸಾಯಿ / ಸಂಸ್ಥಾನಿಕ ತೀರಿಹೋದರೆ, ಮಕ್ಕಳಿಲ್ಲವೆಂಬ/ವಾರಸುದಾರರಿಲ್ಲೆಂಬ ಕಾರಣ ಕೊಟ್ಟು ಆ ಪ್ರದೇಶವನ್ನು ತಮ್ಮ ನೇರ ಆಡಳಿತಕ್ಕೆ ಒಳಗಾಗಿಸಬಹುದು. ಡಾಲ್‌ಹೌಸಿ ವ್ಹಾಯಿಸರಾಯನ 'Doctrine of Lapse' ಈ ವಿಷಯದಲ್ಲಿ ಕುಪ್ರಸಿದ್ಧವಿದೆ. ಅದರ ಬಹು ದೊಡ್ಡ ಉದಾಹರಣೆ ಝಾಂಸಿಯ ರಾಣಿ ಲಕ್ಷ್ಮೀಬಾಯಿಯದು. ಅಲ್ಲಿಯ ರಾಜನು ಜೀವಂತ ಇದ್ದಾಗಲೇ ಒಬ್ಬ ಹುಡುಗನನ್ನು ದತ್ತು ತೆಗೆದುಕೊಂಡಿದ್ದನು. ರಾಣಿಯು ಅದಕ್ಕೆ ಮಂಜೂರಾತಿಯನ್ನು ಕೇಳಿದಾಗ ಡಾಲ್‌ಹೌಸಿ ಕೊಡಲಿಲ್ಲ. ಆ ಮುಂದೆ ೧೮೫೭ರ ವಿಪ್ಲವದಲ್ಲಿ ರಾಣಿಯು ಯಾವ ರೀತಿ ಪ್ರತಿಕ್ರಿಯೆ ತೋರಿದಳೆಂಬುದನ್ನು ಬಲ್ಲೆವು.

ಮುಂಬಯಿ ಕರ್ನಾಟಕದಲ್ಲಿ

ಬ್ರಿಟಿಶರು ಈ ಭಾಗವನ್ನು ವಶಪಡಿಸಿಕೊಂಡಾಗ ಇಲ್ಲಿ ನಾನಾ ಬಗೆಯ ವತನದಾರರು (ದೇಸಾಯಿ, ದೇಶಪಾಂಡೆ, ಇನಾಂದಾರ) ಇದ್ದರು. ಅವರಲ್ಲಿ ಬ್ರಿಟಿಶರ ಆರಂಭದ ವರ್ಷಗಳಲ್ಲಿಯೆ (೧೮೨೦ರ ದಶಕ) ದತ್ತಕ ವ್ಯಾಜ್ಯದ ಪ್ರಕರಣಗಳು ತಲೆದೋರಿದುವು. ಆ ಕಾಲಕ್ಕೆ ಇಲ್ಲಿ ಸೆಂಟ್ ಜಾನ್ ಥ್ಯಾಕರೆ ಇಡೀ ಧಾರವಾಡ ಸುಭಾದ (ಬೆಳಗಾಂವಿ, ವಿಜಾಪುರಗಳೂ ಸೇರಿದಂತೆ) ಕಲೆಕ್ಟರನಾಗಿಯೂ, ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳ ಪೊಲಿಟಿಕಲ್ ಎಜಂಟ್ ಎಂದೂ ನೇಮಕವಾಗಿ ಇದ್ದನು. ಅವನ ಮೇಲಿನ ಅಧಿಕಾರಿಯಾಗಿ ಚಾಪ್ಲಿನ್ ಎಂಬಾತ ಕಮಿಶನರ್ ಆಗಿದ್ದನು.

೧೮೨೦ರ ಆಗಸ್ಟ್ ೧೨ರಂದು ಚಾಪ್ಲಿನ್ ಈ ಕೆಳಗಿನ ಆಶಯದ ಹುಕುಮನ್ನು ಹೊರಡಿಸಿದನು: 'ಈ ಹಿಂದೆ ಪೇಶ್ವೆಯರ ಕಾಲದಲ್ಲಿ ದತ್ತಕ ತೆಗೆದುಕೊಳ್ಳುವವರು ಆ ಸರಕಾರದ ಪರವಾನಿಗೆಯನ್ನು ಪಡೆಯಬೇಕೆಂದು ವಿಧಿಸಿದ್ದರೂ ಅನೇಕರು ಹಾಗೆ ಮಾಡುತ್ತಿಲ್ಲ. ಆದ್ದರಿಂದ ಈ ಮೂಲಕ ತಿಳಿಸುವುದೇನೆಂದರೆ, ಯಾರೇ ವತನದಾರರು ದತ್ತಕ ತೆಗೆದುಕೊಳ್ಳುವ ಮುಂಚೆ ಸುಭಾದ (ಧಾರವಾಡ) ಮುಖ್ಯಸ್ಥನ ಲಿಖಿತ ಅನುಮತಿಯನ್ನು ಪಡೆದಿರಲೇಬೇಕು. ಹಾಗೆ ಅರ್ಜಿ ಸಲ್ಲಿಸಿದಾಗ ಆ ಮುಖ್ಯಸ್ಥನು ವಿಚಾರಣೆ ನಡೆಸಿ, ಶಾಸ್ತ್ರ ರೀತ್ಯಾ ಅದು ಸರಿಯಾದದ್ದೆಂದು ಖಾತ್ರಿ ಮಾಡಿಕೊಂಡು ಅನುಮತಿ ನೀಡಬಹುದು. ಇಲ್ಲವೆ ನಿರಾಕರಿಸಬಹುದು. ಅದನ್ನು ಪೂರ್ಣತಃ ಪಾಲಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಸರಕಾರವು ಅಂಥ ದತ್ತಕವನ್ನು ಮಾನ್ಯ ಮಾಡುವದಿಲ್ಲ ಮತ್ತು ದತ್ತು ಹೋದ ಹುಡುಗನಿಗೆ ಯಾವುದೇ ಹಕ್ಕು-ಆಸ್ತಿ ಪಡೆಯುವುದನ್ನು ನಿರ್ಬಂಧಿಸಲಾಗುವುದು.'

ಕಿತ್ತೂರಿನ ಕೊನೆಯ ದೇಸಾಯಿ ಶಿವಲಿಂಗರುದ್ರ ಸರ್ಜ ಇವನು ದತ್ತಕ ತೆಗೆದುಕೊಂಡ ಮರುಗಳಿಗೆಗೆ ತೀರಿಕೊಂಡನಷ್ಟೆ. ಆಗ ಥ್ಯಾಕರೆ ಕಿತ್ತೂರಿಗೆ ಬಂದು ಇದೇ ಹುಕುಮನ್ನು ರಾಣಿ ಚೆನ್ನಮ್ಮ ಹಾಗೂ ಇತರ ಗಣ್ಯರಿಗೆ ಓದಿ ತೋರಿಸಿದ. (ಅಕ್ಟೋಬರ್ ೧೮೨೪) ಮತ್ತು ಅದರನ್ವಯ ಮಾಸ್ತಮರಡಿಯ ಆ ಹುಡುಗನ ದತ್ತಕವನ್ನು ಮಾನ್ಯ ಮಾಡದೇ ಕಿತ್ತೂರ ದೇಸಗತಿಯನ್ನು ನೇರ ಬ್ರಿಟಿಶ್ ಆಡಳಿತದಲ್ಲಿ ತರಬಯಸಿದ.

ಆದರೆ ಬ್ರಿಟಿಶರು ಬರುವುದಕ್ಕೆ (೧೮೧೮) ಮುಂಚೆ ಜರುಗಿದ್ದ ದತ್ತಕಗಳ ಸ್ಥಾನಮಾನ ಏನೆಂದು ಇರಬೇಕು? ಇಂಥವು ಸಾಕಷ್ಟು ಇದ್ದುದರಿಂದ ಸರಕಾರವು ಬೇರೊಂದು ಹುಕುಮನ್ನು ಹೊರಡಿಸಿ 'As the Government admits, children adopted should succeed to Inam lands. But with regard to Jagirs, no adoption can have any effect unless it is expressly so declared by Govt.'

'ಇನಾಮು' ಮತ್ತು 'ಜಹಗೀರು' ಇವುಗಳ ಅಂತರವನ್ನು ತುಸು ವಿವರಿಸಬೇಕು. ಇನಾಮ ಜಮೀನು/ಆಸ್ತಿ ವಂಶಪಾರಂಪರ್ಯವಾಗಿ ಬಂದಿರುವಂತಹದು. ಜನ್ಮಜಾತವಾಗಿ ಅದರ ಹಕ್ಕುದಾರಿಕೆ ಪ್ರಾಪ್ತವಾಗುವುದು. ದೇಸಾಯಿಗಳು, ದೇಶಪಾಂಡೆಗಳು, ಇತರ ಸಂಸ್ಥಾನಿಕರು ಈ ಸದರಿನಲ್ಲಿ ಬರುವರು. ಅದೇ 'ಜಹಗೀರ' ಎನ್ನುವುದು. ಸರಕಾರವು ವ್ಯಕ್ತಿಯೊಬ್ಬ ತನಗೆ ಸಲ್ಲಿಸಿದ ಸೇವೆಯ ಪ್ರತಿಫಲವೆಂದು ಉದಾರವಾಗಿ ಕೊಟ್ಟಿರುವಂತಹದು. ಪಟೇಲರು, ಕುಲಕರ್ಣಿಗಳು, ಕೊತ್ವಾಲರು ಇದರಡಿಯಲ್ಲಿ ನಿಲ್ಲುತ್ತಾರೆ.

ದತ್ತಕ ಪೂರ್ವದ ಅಥವಾ ಅನಂತರದ ಆಸ್ತಿಯ ವಿಲೇವಾರಿಯ ಸಾಧಕ ಬಾಧಕಗಳನ್ನು ತಿಳಿಯಲು, ಸರಕಾರವು ಮಾಹಿತಿಯನ್ನು ಸಂಗ್ರಹಿಸಿ, ಅದೇ ಆಗ ನೇಮಕವಾಗಿದ್ದ, ಮತ್ತು ಇಂಥ ಸಂದಿಗ್ಧಗಳನ್ನು ಪರಿಹರಿಸಲು ಅನುಜ್ಞೆಯನ್ನು ಹೊಂದಿದ್ದ ಇನಾಮ ಕಮಿಶನರಿಗೆ ಕಳಿಸಿಕೊಟ್ಟಿತು. ಆಗ ಕಮಿಶನರ್ ಆಗಿದ್ದ ಹಾರ್ಟ್ ಈ ಕುರಿತು ತನ್ನ ವರದಿಯನ್ನು ಸಾದರಪಡಿಸಿದ. (೨೭ ಮಾರ್ಚ್ ೧೮೪೭). ಅದರಲ್ಲಿ ಇನಾಮ ಆಸ್ತಿಯ ದಾನ/ವಿಕ್ರಯಗಳಿಗೂ ಸರಕಾರದ ಪೂರ್ವಾನುಮತಿ ಬೇಕೆಂದು ಸ್ಪಷ್ಟಪಡಿಸಿದ್ದಾನೆ.

ಮರುವರ್ಷ (೨೯ ಮಾರ್ಚ್ ೧೮೪೮) ಹಾರ್ಟ್ ದತ್ತಕ ವಿಧಿಯ ಪೂರ್ವಾಪರ ಗಳನ್ನು ಕುರಿತು ಇಡೀ ಪ್ರಾಂತಕ್ಕೆ ಅನ್ವಯಿಸುವ ಸವಿವರ ನಿಯಮಾವಳಿಯನ್ನು ಸಿದ್ಧಗೊಳಿಸಿ ಸರಕಾರಕ್ಕೆ ಹಾಜರುಪಡಿಸಿದನು. ಅದರ ಒಂದು ಯೋಜೆಂದರೆ ಈ ನಿಯಮಾವಳಿಯ 'ಗಟ್ಟಿತನ' (efficacy) ಅಥವಾ ಯುಕ್ತಾಯುಕ್ತತೆಯನ್ನು ಪರೀಕ್ಷೆಗೆ ಒಳಪಡಿಸಲು, ಮೊದಲು ಅದನ್ನು ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಪ್ರಯೋಗಿಸಿ ನೋಡಬೇಕು - ಎಂದುದು. ಇದನ್ನೇ ತಳಹದಿಯಾಗಿಟ್ಟುಕೊಂಡು ಇಡೀ ದೇಶಕ್ಕೆ ಅನ್ವಯಿಸುವ 'The Hindu Law of Adoption' ೧೮೭೯ರಲ್ಲಿ ಸಿದ್ಧವಾಯಿತು.

ವಿಧವೆಯರು ದತ್ತಕ ತೆಗೆದುಕೊಳ್ಳುವುದು

ಹೆಚ್ಚಿನ ತೊಡಕುಗಳು ವಿಧವೆಯರು ದತ್ತಕ ತೆಗೆದುಕೊಳ್ಳಲು ಹೊರಟಾಗ ತೋರಿಬಂದುವು. ನಮ್ಮ ಸಮಾಜದ ನಡವಳಿಕೆಯಲ್ಲಿ ಗಂಡಸು ತನಗೆ ಬೇಕೆಂದವರನ್ನು ದತ್ತು ತೆಗೆದುಕೊಳ್ಳುವನು. ಅದಕ್ಕೆ ಅವನ ಸಹಧರ್ಮಿಣಿಯ ಒಪ್ಪಿಗೆ ಸ್ವಯಂಸಿದ್ಧವಾದದ್ದಾಗುತ್ತಿತ್ತು. ಆದರೆ ಗಂಡ ಜೀವಂತ ಇಲ್ಲದಾಗ ಅಷ್ಟೇ ಸ್ವತಂತ್ರವಾಗಿ ಆಕೆ ತನಗೆ ಬೇಕೆಂದವನನ್ನು ದತ್ತು ತೆಗೆದುಕೊಳ್ಳುವುದು ಸುಲಭವಿರಲಿಲ್ಲ. ತನ್ನ ಖಾಸ ತವರಿನವರನ್ನೂ ಅಥವಾ ಯಾರಯಾರನ್ನೊ ಆಕೆ ದತ್ತು ತೆಗೆದುಕೊಂಡು, ಆಸ್ತಿ ಇನ್ನೆಲ್ಲಿಯೋ ಹರಿದು ಹೋಗಬಾರದೆಂದು, ಆಗಿನ ಅವಿಭಕ್ತ ಕುಟುಂಬದ ಇತರ ಹಿರಿಯರಾಗಲೀ ಸವತಿಯರಾಗಲೀ ಸಮ್ಮತಿಸದೇ ಹೋಗಬಹುದು (ಆಸ್ತಿವಂತ ತನಗೆ ಮಕ್ಕಳಿಲ್ಲದಾಗ ಇನ್ನೊಂದು/ಎರಡು ಹೆಚ್ಚಿನ ಹೆಣ್ಣನ್ನು ತರುತ್ತಿದ್ದುದು ಸ್ವಾಭಾವಿಕವೇ ತಾನೇ). ಅಂತೂ ಕುಟುಂಬದಲ್ಲಿ ಅವಳದು ದುಯ್ಯಮ ಸ್ಥಾನವಾದ್ದರಿಂದ ಅವಳ ದತ್ತಕ ವಿಚಾರಗಳಿಗೆ ಅಡ್ಡಗಾಲು ಹಾಕಬಹುದಿತ್ತು.

ಸಾಲದ್ದಕ್ಕೆ ಈ ಮೊದಲು ಹೇಳಿದಂತೆ ಸ್ಮೃತಿಗಳಲ್ಲಿಯ ದತ್ತಕ ವಿಷಯದ ಟೀಕಾಗ್ರಂಥಗಳು ಪರಸ್ಪರ ವಿರೋಧರೂಪದ ನಿಲುವನ್ನು ತಳೆದದ್ದು ಬ್ರಿಟಿಶರಿಗೆ ಬಗೆಹರಿಯದ ಸಮಸ್ಯೆಯಾದದ್ದುಂಟು.

ಬ್ರಿಟಿಶ್ ಆಡಳಿತದ ಸುರುವಾತಿಗೆ ತಲೆದೋರಿದ ದತ್ತಕ ಸಮಸ್ಯೆಗಳು ಬಂದಾಗ ಶಾಸ್ತ್ರಿಗಳನ್ನು ಕೇಳುವ ಪರಿಪಾಠ, ಪುಣೆಯಲ್ಲದೆ ಇತರ ಕಡೆಗಳಿಗೂ ನಡೆದು ಬಂದ ಪ್ರಸಂಗಗಳಿವೆ. ಉದಾಹರಣೆಗೆ ಕಲೆಕ್ಟರ್ ಥ್ಯಾಕರೆ ಹುಬ್ಬಳ್ಳಿಯ ಓರ್ವ ಶಾಸ್ತ್ರಿಗಳನ್ನು ಈ ರೀತಿ ಕೇಳಿ ಉತ್ತರ ಪಡೆದನೆಂದು ಒಂದೆಡೆ ದಾಖಲೆಗೊಂಡಿದೆ (೧೮೨೦).

ಪ್ರಶ್ನೆ : ಸಾಯುವಾಗ ಗಂಡನು ದತ್ತಕ ತೆಗೆದುಕೊಳ್ಳುವ ಬಗ್ಗೆ ಏನೂ ಹೇಳದಿದ್ದಾಗ ವಿಧವೆಯಾದ ಹೆಂಡತಿ ದತ್ತು ತೆಗೆದುಕೊಳ್ಳಬಹುದೋ? ಈ ರೀತಿ - ದತ್ತು ಹೋದವನಿಗೆ ಆಸ್ತಿಯ ಹಕ್ಕುದಾರಿಕೆ ಪ್ರಾಪ್ತವಾಗುವುದೋ?

ಉತ್ತರ: 'ಧರ್ಮಸಿಂಧು'ವಿನ ಪ್ರಕಾರ ಆಕೆ ದತ್ತಕ ತಗೊಳ್ಳಬಹುದು. ಆದರೆ ನಂದಪಂಡಿತನು ಇದನ್ನು ಒಪ್ಪುವುದಿಲ್ಲ. ಗಂಡನ ಒಪ್ಪಿಗೆ ಇಲ್ಲದಂಥ ಯಾವ ಕೆಲಸವನ್ನೂ ಆಕೆ ಮಾಡಬಾರದು, ಎನ್ನುತ್ತಾನೆ. ಅದೇ, ವಿಜ್ಞಾನೇಶ್ವರನು, ವಿಧವೆ ದತ್ತಕ ತಗೊಳ್ಳುವುದಾದರೆ, ಸಾಯುವ ಮುಂಚೆ ಗಂಡನು ಅದಕ್ಕೆ ಒಪ್ಪಿರಬೇಕು – ಎನ್ನುತ್ತಾನೆ. ಏನಿದ್ದರೂ ನಮ್ಮ ಭಾಗದ (ಮುಂಬಯಿ ಪ್ರಾಂತ) ಪದ್ಧತಿಯು ವಿಧವೆಯು ದತ್ತಕ ತೆಗೆದುಕೊಳ್ಳಬಹುದೆಂತಲೇ ಹೇಳುತ್ತದೆ.

ಪ್ರಶ್ನೆ: ಹಾಗಿದ್ದರೆ ಕೆಲವು ಉದಾಹರಣೆಗಳನ್ನು ಕೊಡುವಿರ?

ಉತ್ತರ: ರಾಮದುರ್ಗ ಸಂಸ್ಥಾನದಲ್ಲಿ, ಸಂಸ್ಥಾನಿಕ ಗೋವಿಂದರಾಯನು ತೀರಿಕೊಂಡ ಮೇಲೆ ವಿಧವೆ ರಾಧಾಬಾಯಿಯು ರಾಮರಾವ ಎಂಬವನನ್ನು ದತ್ತಕ ತೆಗೆದುಕೊಂಡಿದ್ದಾಳೆ. ಜಾಲಿಹಾಳ ದೇಸಗತಿಯಲ್ಲಿ, ವಿಧವೆ ಲಕ್ಷ್ಮವ್ವನೂ ಹಾಗೇ ಮಾಡಿದ್ದಾಳೆ. ಆದರೆ ದತ್ತಕ ಹೋದ ಪಟೇಲ, ಕುಲಕರ್ಣಿಗಳು ಸರಕಾರದ ವಿರುದ್ಧ ಏನಾದರೂ ಮಾಡಿದ್ದರೆ, ಅವರ ಆಸ್ತಿಯನ್ನು ಸರಕಾರವು ವಶಪಡಿಸಿಕೊಂಡಿದೆ ಮತ್ತು ನಜರಾಣೆಯನ್ನು ಕೊಟ್ಟ ಮೇಲೆ ಅವರ ಆಸ್ತಿಯನ್ನು ಮರಳಿ ಕೊಟ್ಟದ್ದುಂಟು.

ಒಟ್ಟಿನಲ್ಲಿ ಮುಂಬಯಿ ಸರಕಾರವು ವಿಧವೆಯರ ದತ್ತಕ ವಿಧಿಯನ್ನು ಮಾನ್ಯ ಮಾಡುವ ಒಲವನ್ನೇ ತೋರಿತು.

ಪ್ರಕೃತ ಮುಂಬಯಿ ಕರ್ನಾಟಕಕ್ಕೆ ಸಂಬಂಧಿಸಿದ ೧೮೨೦ರ ದಶಕದ ಎರಡು ದತ್ತಕ ಪ್ರಕರಣಗಳನ್ನು ನೋಡುವಾ.

ಡಂಬಳ ದೇಸಾಯಿಣಿ

ಈ ಭಾಗದಲ್ಲಿ ಬ್ರಿಟಿಶ್ ಆಡಳಿತದ ವಿರುದ್ಧ ಮೊದಲು ಸಿಡಿದೆದ್ದ ಸಂಸ್ಥಾನವೆಂದರೆ ಡಂಬಳ. ಕ್ರಿ.ಶ. ೧೮೦೦ರಲ್ಲಿ ಕರ್ನಲ್ ವೆಲ್ಲೆಸ್ಲಿಯು ಮರಾಠಾ ಸೈನ್ಯದೊಡನೆ ಸೇರಿ ಡಂಬಳ ಕೋಟೆಯನ್ನು ಗೆದ್ದುಕೊಂಡನು.

ಅದರ ಕಾರಣ: ಡಂಬಳ ದೇಸಾಯಿಯು ಧೊಂಡಿಯಾ ವಾಘನಿಗೆ ಆಶ್ರಯ ನೀಡಿದ್ದುದು. ಕೋಟೆಯ ವಶವಾಗಿ ಡಂಬಳದ ವೆಂಕಪ್ಪ ದೇಸಾಯಿಯು ಸೆರೆಸಿಕ್ಕ ಮೇಲೆ ವೆಲ್ಲೆಸ್ಲಿಯು ಅವನನ್ನು ಗಲ್ಲಿಗೇರಿಸಿದನು. ತಾನು ಮಾಡಿದ್ದುದು ತಪ್ಪೆಂದು ತೋರಿತು - ವೆಲ್ಲೆಸ್ಲಿಗೆ! ಅವನು ಇಂಗ್ಲೆಂಡಿಗೆ ಹಿಂತಿರುಗುವ ಮುಂಚೆ, ವೆಂಕಪ್ಪನಾಯಕನ ಹೆಂಡತಿಯು ದತ್ತಕ ತೆಗೆದುಕೊಳ್ಳುವುದಕ್ಕೂ ಆ ಹುಡುಗನು ಡಂಬಳದ ಬಹದ್ದೂರ ದೇಸಾಯಿ ಎಂಬ ಬಿರುದನ್ನೂ, ದೇಸಗತಿಯ ಹಕ್ಕುದಾರಿಕೆಯನ್ನೂ ಪಡೆಯುವುದಕ್ಕೆ ಸಮ್ಮತಿಸಬೇಕೆಂದೂ ಬರೆದಿಟ್ಟು ಹೋದನು. ಆ ಪ್ರಕಾರ ವಿಧವೆ ಮಥುರಾಬಾಯಿಯು ಶಿವಪ್ಪ ಎಂಬವನನ್ನು ದತ್ತಕ ತೆಗೆದುಕೊಂಡಳು.

ಯಾವಾಗ ಥ್ಯಾಕರೆ ಧಾರವಾಡ ಸುಭಾದ ಆಡಳಿತವನ್ನು ವಹಿಸಿಕೊಂಡನೋ ಆಗಿನಿಂದ ಈ ದತ್ತಕವನ್ನು ಅಲ್ಲಗಳೆದು, ದೇಸಗತಿಯನ್ನು ಮುಣುಗಿಸಬೇಕೆಂದೇ ಎಣಿಸಿದ್ದ. ಕಮೀಶನರ್ ಚಾಪ್ಲಿನ್‌ಗೆ ಪತ್ರ ಬರೆದನು. (೩೦-೭-೧೮೨೦) ಅವನು ಈ ಉದ್ದೇಶವನ್ನಿಟ್ಟುಕೊಂಡು ಇತರರಿಗೂ ಅನ್ವಯಿಸುವ ಒಂದು ಜಾಹೀರನಾಮೆಯ ಕರಡನ್ನೂ ಸಿದ್ಧಗೊಳಿಸಿದನು! ಕೊಟ್ಟ ಕಾರಣವೆಂದರೆ ವೆಲ್ಲೆಸ್ಲಿಯದು ಸಾಮಾನ್ಯ ಸ್ವರೂಪದ ಅನುಮತಿ ಇತ್ತಲ್ಲದೆ ಶಿವಪ್ಪನೆಂಬ ಹುಡುಗನನ್ನು ದತ್ತು ತೆಗೆದುಕೊಳ್ಳಲೆಂದು ಸರಕಾರದ ಪೂರ್ವಾನುಮತಿಯನ್ನೂ ಪಡೆದಿಲ್ಲ - ಎಂಬುದಾಗಿತ್ತು! ಈ ಉದ್ದೇಶವನ್ನಿಟ್ಟುಕೊಂಡೇ ಇತರರಿಗೂ ಅನ್ವಯಿಸುವ ಒಂದು ಜಾಹೀರನಾಮೆಯ ಕರಡನ್ನು ಸಿದ್ಧಗೊಳಿಸಿದ್ದು. ಮುಂದೆ ೧೮೨೪ರಲ್ಲಿ ಕಿತ್ತೂರ ಸಂಸ್ಥಾನವನ್ನೂ ಇದೇ ರೀತಿ ಮುಣುಗಿಸಬೇಕೆನ್ನುವ ಅವನ ಮನೀಷೆಗೆ ಇದು ಸಮರ್ಥನೆಯನ್ನು ಕೊಡಬಲ್ಲುದು. ಡಾಲ್‌ಹೌಸಿಯ ನೀತಿಯನ್ನು ಮೂರು ದಶಕಗಳ ಹಿಂದೆಯೇ ಥ್ಯಾಕರೆ ಸಾಹೇಬನು ಕಾರ್ಯಾಚರಣೆಗೆ ತರುವ ಹವಣಿಕೆಯಲ್ಲಿದ್ದನೆಂದ ಹಾಗಾಯಿತಲ್ಲವೆ!

ಚಾಪ್ಲಿನ್ ಮಾತ್ರ ಅದಕ್ಕೆ ಅನುಮತಿ ಕೊಡಲಿಲ್ಲ. ೪-೮-೧೮೨೦ರಂದು ಆತ ಥ್ಯಾಕರೆಗೆ ಈ ರೀತಿ ಉತ್ತರಿಸಿದ:

'For the reasons, however stated by you I am unwilling to set aside the adoption by the Widow of the Dumbal Desaee. But with a view to prevent these irregularities in future, the proclamation you recommend may be issued.'

ಈ ಜಾಹೀರನಾಮೆಯನ್ನು ಈ ಹಿಂದೆ ಪ್ರಸ್ತಾಪಿಸಿದ್ದಾಗಿದೆ.

ರಂಗಾಪುರ ದತ್ತಕ ಪ್ರಕರಣ

ಡಂಬಳದ ಹತ್ತಿರವೇ ಇರುವ ಊರು ಈ ರಂಗಾಪುರ. ಅಲ್ಲಿಯ ಮಹಾಪುರುಷ ಮನೆತನದವರು ಆ ಹಳ್ಳಿಯನ್ನು ಇನಾಮ ರೂಪದಲ್ಲಿ ಉಪಭೋಗಿಸುತ್ತಿದ್ದರು. ಕುಟುಂಬದ

ಯಜಮಾನ ಶಿವಯ್ಯನು ಗಂಡು ಸಂತಾನವಿಲ್ಲದೆ ತೀರಿಕೊಂಡನು. ಅವನ ಹೆಂಡಂದಿರಾದ ತ್ರಿವೇಣಿ ಮತ್ತು ಪಾರ್ವತಿಯರಲ್ಲಿ ತ್ರಿವೇಣಿಗೆ ಗಂಗಾಬಾಯಿ ಎಂಬ ಮಗಳಿದ್ದಳು. ಆದ್ದರಿಂದ ಹಿರಿಯ ಹೆಂಡತಿಯಾದ ತ್ರಿವೇಣಿಯು ಮಹದೇವಯ್ಯ ಎಂಬವನನ್ನು ದತ್ತಕ ತೆಗೆದುಕೊಂಡಳು. ಅದಕ್ಕೆ ಪಾರ್ವತಿಯ ಸಮ್ಮತಿಯೂ ಇದ್ದಿತು.

ಕೆಲವು ವರ್ಷಗಳಾದ ಮೇಲೆ ತ್ರಿವೇಣಿಗೂ ದತ್ತಕ ಮಗನಿಗೂ ಹೊಂದಿಕೆಯಾಗಲಿಲ್ಲ. ಆಕೆ ತನ್ನ ಮಗಳು ಗಂಗಾಬಾಯಿಯ ಮಗನನ್ನು ದತ್ತಕ ತೆಗೆದುಕೊಳ್ಳ ಬಯಸಿದಳು. ಆದರೆ ಇದಕ್ಕೆ ಜ್ಞಾತಿಗಳ ಹಾಗೂ ಸವತಿಯ ಒಪ್ಪಿಗೆ ಇರಲಿಲ್ಲ. ಆದರೂ ಹಟ ಹಿಡಿದು, ತ್ರಿವೇಣಿಯು ನೆರೆಯ ಊರಾದ ಬಿದರಹಳ್ಳಿಯಲ್ಲಿ (ಇದು ಪಟವರ್ಧನರ ಶಿರಹಟ್ಟಿ ಸಂಸ್ಥಾನದ ಹದ್ದಿನಲ್ಲಿ ಇದ್ದುದರಿಂದ) ದತ್ತಕ ವಿಧಿಯನ್ನು ನಡೆಸಲಾಯಿತು. ಇನ್ನು ಆಸ್ತಿ ಗಂಗಾಬಾಯಿಯ ಮನೆತನಕ್ಕೆ ಹೋಗುವುದಾಯಿತಲ್ಲ! ಮೋಜೆಂದರೆ ದತ್ತಕವಿಧಿಯ ಕಾಲಕ್ಕೆ ತ್ರಿವೇಣಿ ಬಿದರಹಳ್ಳಿಗೆ ಹೋಗಿರಲಿಲ್ಲ. (ಏನಿದ್ದರೂ ವಿಧವೆಯೇ ನೇರವಾಗಿ ದತ್ತಕ ವಿಧಿಯಲ್ಲಿ ಭಾಗವಹಿಸ ಬರುವುದಿಲ್ಲ.) ಗಂಗಾಬಾಯಿ ಹಾಗೂ ಅವಳ ಗಂಡನೂ ಹೋಗಿರಲಿಲ್ಲ.

ಅದೇ ಆಗ ಅಧಿಕಾರ ಸ್ಥಾನ ವಹಿಸಿದ್ದ (೧೮೧೮) ಬ್ರಿಟಿಶ್ ಸರಕಾರಕ್ಕೆ ಇದೆಲ್ಲ ಹೊಸತು. ಆದ್ದರಿಂದ ೧೨ ಜನ ಸದ್ಗೃಹಸ್ಥರ ಪಂಚಾಯತಿಯನ್ನು ಧಾರವಾಡದಲ್ಲಿ ನೆರೆಸಿದರು.

ವಿಚಾರಣೆಯ ಆರಂಭಕ್ಕೆ ಮೊದಲ ದತ್ತಕದ ಹುಡುಗನನ್ನು ಸ್ವಗೋತ್ರದಿಂದ ಯಾಕೆ ತರಲಿಲ್ಲ? ತೀರ ಹೊರಗಿನವನನ್ನು ತಂದದ್ದೇಕೆ? ಎಂಬ ಪ್ರಶ್ನೆಯೂ ಬಂದಿತು. ಅವನ ಉಪನಯನವೂ ನಿರ್ಣಯಕ್ಕೆ ಬರುವಲ್ಲಿ ಪ್ರಸ್ತಾಪಿಸಲ್ಪಟ್ಟಿತ್ತು. ಸಂಬಂಧಪಟ್ಟವರ ಗೈರುಹಾಜರಿಯೂ ಚರ್ಚಾಸ್ಪದವೆನಿಸಿತು. ಕೊನೆಗೆ ಶಾಸ್ತ್ರಾಧಾರವನ್ನು ಹುಡುಕಿ, ಮೊದಲ ದತ್ತಕವು ಕಾನೂನು ರೀತ್ಯಾ ಮತ್ತು ಶಾಸ್ತ್ರರೀತ್ಯಾ ಸಿಂಧುವಾಗಿ ಇರುವಾಗ, ಇನ್ನೊಂದು ದತ್ತಕ ಹುಡುಗನನ್ನು ತರುವುದಕ್ಕೆ ಶಾಸ್ತ್ರಸಮ್ಮತಿಯಿಲ್ಲ ಎಂದು ಪಂಚಾಯ್ತಿಯು ನಿರ್ಧರಿಸಿತು.

ಇಂಥವೇ ಸೂಕ್ಷ್ಮ ಸಮಸ್ಯೆಗಳುಳ್ಳ ಹಲವಾರು ವ್ಯಾಜ್ಯಗಳು ಸರಕಾರದ ಮುಂದೆ ಬಂದುವು. ವಿಶೇಷತಃ ಇನಾಮ ಕಮಿಶನ್ನಿನ ಆಸ್ತಿಯ ಹಕ್ಕುದಾರಿಕೆಯನ್ನು ನಿರ್ಣಯಿಸುವಾಗ ಇವುಗಳ ಹೆಚ್ಚಳ ಕಂಡುಬರುತ್ತದೆ.

ಈ ವಿಷಯಕವಾದ ಅತ್ಯಂತ ದೊಡ್ಡ ವ್ಯಾಜ್ಯವೆಂದರೆ, ಕುರ್ತಕೋಟಿ ಗೌಡರ ಮನೆತನದ್ದು. ಅವರೇನು ಮಹಾಶ್ರೀಮಂತರಲ್ಲ. ಆದರೂ ಅತ್ಯಂತ ತುರುಸಿನಿಂದ ಹಲವಾರು ವರ್ಷಗಳ ವರೆಗೆ ಎರಡೂ ಪಕ್ಷಗಳು ಹೋರಾಡಿದುವು. ೧೯ನೇ ಶತಮಾನದ ಕೊನೆಯಲ್ಲಿ ಈ ವ್ಯಾಜ್ಯವು ಲಂಡನ್ನಿನ ಪ್ರೀವಿ ಕೌನ್ಸಿಲ್‌ವರೆಗೂ ಹೋಗಿ ಬಂದಿತು! ನಿರ್ಣಯ ಯಾರ ಪರವಾಗಿ ಆದರೇನಂತೆ! ನಮಗೀಗ ಅಪ್ರಸ್ತುತ.

●

೧೧. ಕರ್ನಾಟಕ ಏಕೀಕರಣದ ಮೊದಲ ಪ್ರಯತ್ನ

ಬ್ರಿಟಿಶರು ಆಳತೊಡಗಿದಾಗಿನಿಂದ ಕರ್ನಾಟಕವು ಹರಿದು ಹಂಚಿ ಹೋಗಿದ್ದದ್ದು; ಭಾರತದ ಸ್ವಾತಂತ್ರ್ಯದ ಚಳುವಳಿ ನಡೆದ ಕಾರಣದಿಂದಾಗಿ ಭಾಷಾವಾರು ಪ್ರಾಂತ ಗಳಾಗಬೇಕೆಂದದ್ದು. ಕರ್ನಾಟಕದ ಏಕೀಕರಣವಾಗುವುದಕ್ಕೆ ಮೈಸೂರವರು ವಿರೋಧಿಸಿದ್ದು, ಕೊನೆಗೊಮ್ಮೆ ೧೯೫೬ರಲ್ಲಿ ಕನ್ನಡಿಗರೆಲ್ಲ ಒಂದೇ ಆಡಳಿತಕ್ಕೆ ಒಳಪಟ್ಟದ್ದು, ಇವೆಲ್ಲ ತಿಳಿದ ವಿಷಯಗಳೇ - ಈಚಿನವಾದ್ದರಿಂದ.

ಆದರೆ ೧೮೩೬ರಷ್ಟು ಹಿಂದೆ ಕನ್ನಡ ಮಾತನಾಡುವವರು ಬಹುಮಟ್ಟಿಗೆ ಒಂದಾಗುವ ಪ್ರಸಂಗ ಒದಗಿ ಬಂತು. ಹಾಗೆಂದು ಸಂಬಂಧಪಟ್ಟವರಲ್ಲಿ 'ಏಕೀಕರಣ'ದ ಕಲ್ಪನೆಯೇನೂ ಇರಲಿಲ್ಲ. ಈ ಪ್ರದೇಶವನ್ನು ೧೮೧೮ರಿಂದ ಬ್ರಿಟಿಶರು ಅಳತೊಡಗಿದರಷ್ಟೇ. ಅದರ ಆರಂಭದಲ್ಲಿ ಎಂದರೆ ೧೮೨೦-೩೦ರ ಅವಧಿಯಲ್ಲಿ ಇವರ ಆಡಳಿತದ ಪ್ರತಿಭಟನಾರ್ಥವಾಗಿ ದಂಗೆಗಳೆದ್ದವು. ಕಿತ್ತೂರಿನದಂತೂ ಸರಿಯೇ (ಅಕ್ಟೋಬರ್ - ನವೆಂಬರ್ ೧೮೨೪) ಅದರ ಮರುತಿಂಗಳು ಸಿಂದಗಿಯಲ್ಲಿ; ಅನಂತರ ನಿಪ್ಪಾಣಿ, ಖಾನಾಪುರ, ಹಲಗಲಿ, ಬೈಲಹೊಂಗಲ, ಮುಂಡರಗಿ, ಡಂಬಳ ಮುಂತಾದ ಕಡೆಗಳಲ್ಲಿ ತಲೆದೋರಿದುವು. ಎಲ್ಲವೂ ಚಿಕ್ಕ ಪ್ರಮಾಣದವು. ಆದರೆ ಹೊಸದಾಗಿ ಆಡಳಿತಕ್ಕೆ ತೊಡಗಿದ್ದ ಬ್ರಿಟಿಶರಿಗೆ ಅವುಗಳ ಹಿನ್ನೆಲೆ ಮತ್ತು ವ್ಯಾಪಕತೆ ಇವು ತಿಳಿಯದಿದ್ದಾಗ ಹೌಹಾರಿದರು. ಆಗ ಹತ್ತಿರವೇ ಇದ್ದ ಮದ್ರಾಸ ಪ್ರಾಂತದ ಬಳ್ಳಾರಿ ಮುಂತಾದ ಠಾಣೆಗಳಿಂದ ಸೈನ್ಯಗಳ ತುಕಡಿಗಳನ್ನು ತರಿಸುತ್ತಿದ್ದರು; ಸೈನ್ಯ ಮಾತ್ರವಲ್ಲ ಅಧಿಕಾರಿಗಳೂ ಸಹ! ಮೇಲೆ ಹೇಳಿದ ಥಾಮಸ್ ಮನ್ರೋ, ಕನ್ನಡ ಪ್ರೇಮಿ ಎಲಿಯಟ್ ಮತ್ತು ಕಮೀಶನರ್ ಚಾಪ್ಲಿನ್ - ಇವರೇ ಮೊದಲಾದವರು ಮದ್ರಾಸ ಪ್ರಾಂತದಿಂದ ಬಂದವರೇ ಆಗಿದ್ದರು.

ಚಾಪ್ಲಿನ್ನನಿಗೆ ಆಡಳಿತದ ದೃಷ್ಟಿಯಿಂದ ಈ ಪ್ರದೇಶವು ತಾಪದಾಯಕವಾಗಿ ಕಂಡಿತು. ಅಲ್ಲದೆ ರೆವಿನ್ಯೂ ದೃಷ್ಟಿಯಿಂದ ಕಡಿಮೆ ಆದಾಯದ್ದಾಗಿತ್ತು. ಅದಾಗಲೇ ನೆಲೆಗೊಂಡಿದ್ದ ಮದ್ರಾಸ ಪ್ರಾಂತಕ್ಕೆ ಈ ಭಾಗವನ್ನೇಕೆ ಹಸ್ತಾಂತರಿಸಬಾರದು? ಎಂದು ಯೋಚಿಸಿ, ಮುಂಬಯಿಯ

ಗವರ್ನರ್ ಎಲ್‌ಫಿನ್‌ಸ್ಟನ್‌ನಿಗೆ ಪತ್ರ ಬರೆದನು. (೧೮೨೬ ಏಪ್ರಿಲ್ ೧). ಅವನು ಕೊಟ್ಟ ಕಾರಣಗಳಿವು –

(೧) ಇಲ್ಲಿಯ ಗಲಭೆಗಳನ್ನು ಹತ್ತಿಕ್ಕಲು ಮದ್ರಾಸದವರ ಸೈನಿಕ ಸಹಾಯವನ್ನು ಹೇಗೂ ಪಡೆಯುತ್ತಿದ್ದೇವೆ. (೨) ಇಲ್ಲಿಯ ಜನ ಕನ್ನಡ ಮಾತಾಡುತ್ತಾರೆ – ಮದ್ರಾಸ ಪ್ರಾಂತದ ಪಶ್ಚಿಮ ಭಾಗದವರಂತೆಯೇ. (೩) ಇಲ್ಲಿರುವ ಸಂಸ್ಥಾನಿಕರು, ವತನದಾರ ಮುಂತಾದವರು ಮರಾಠಿಗರು. ಪೇಶ್ವೆಯವರಿಂದಾಗಿ ಅಸ್ತಿತ್ವದಲ್ಲಿರುವ ಮರಾಠಿಗರ ಪ್ರಾಬಲ್ಯವನ್ನು ತುಸು ಮಟ್ಟಿಗೆ ತಗ್ಗಿಸಬಹುದು ಇತ್ಯಾದಿ.

ಆದರೆ ಮುಂಬಯಿ ಪ್ರಾಂತ್ಯದ ಆಡಳಿತ ಕೌನ್ಸಿಲ್‌ನ ಸದಸ್ಯರಲ್ಲಿ ಒಬ್ಬನಾದ ವಾರ್ಡೆನ್ ಇದನ್ನು ವಿರೋಧಿಸಿ, ಈ ಕೆಳಗಿನ ಆಕ್ಷೇಪಗಳನ್ನು ಮುಂದೆ ಮಾಡಿದ.

(೧) ಗಲಭೆಗಳಾದಾಗ ಮುಂಬಯಿ ಕಡೆಯಿಂದಲೇ ಮಿಲಿಟರಿ ಸಹಾಯ ಹೆಚ್ಚು ಸುಗಮವಾದದ್ದು. [ಅದಕ್ಕೆ ಏನೇನೊ ಕಾರಣ ಕೊಟ್ಟಿದ್ದಾನೆ.] (೨) ಇಲ್ಲಿಯ ಜನರಲ್ಲಿ ಅರ್ಧದಷ್ಟು ಜನ ಮರಾಠಿಗರು; ಮರಾಠಿಯನ್ನೆ ಮಾತಾಡ್ತಾರೆ. (೩) ಇಲ್ಲಿಯ ಸಂಸ್ಥಾನಿಕರ ಹಾಗೂ ಇನಾಂದಾರ ಜನರು ಮರಾಠಿಗರಿರುವರೆಂದೇ ಅವರನ್ನು ಮುಂಬಯಿ ಪ್ರಾಂತದಲ್ಲಿ ಉಳಿಸಿಕೊಳ್ಳಬೇಕು. ಅನವಶ್ಯಕವಾಗಿ ಏಕೆ ಅಗಲಿಸುವುದು?

ಎಲ್‌ಫಿನ್‌ಸ್ಟನ್ನನಿಗೆ ಉಭಯ ಸಂಕಟ! ಸೂಚನೆಯು 'evenly balanced' ಎಂದು ಸುರುವಿಗೆ ಹೇಳಿ, ಅದನ್ನು ಮದ್ರಾಸದ ಗವರ್ನರ್ ಆಗಿದ್ದ ಪೂರ್ವೋಕ್ತ ಮನ್ರೋನಿಗೆ ಅಭಿಪ್ರಾಯಾರ್ಥವಾಗಿ ಕಳಿಸಿಕೊಟ್ಟನು. ಇಲ್ಲಿಯ ಜನ ಎಷ್ಟರ ಮಟ್ಟಿಗೆ ಮರಾಠಿಗರು – ಎಂಬೊಂದು ವಿಷಯದಲ್ಲಿ ಮಾತ್ರ ಎಲ್‌ಫಿನ್‌ಸ್ಟನ್ ತನ್ನ ಸ್ಪಷ್ಟ ಅಭಿಪ್ರಾಯವನ್ನು ಹೇಳಿದ್ದಾನೆ.

'The first fact that the country in question.... where the language and people are Canerese, does not appear to me to admit of a doubt. I never heard it supposed than half the population were Marattas and it is extremely different, made on a person passing through the country, though it may be admitted that Mahrattee is the language of the upper classes and of revenue functionaries.

ಇದಕ್ಕೆ ದಿ. ೧–೫–೧೮೨೬ ರಂದು ಬರೆದ ಮನ್ರೋನ ಉತ್ತರ ಸಾಕಷ್ಟು ದೀರ್ಘವಾಗಿದೆ. ಅದರಲ್ಲಿ ಅವನ ರಾಜಕೀಯ ಪರಿಣತಿಯನ್ನೂ ನಮ್ಮ ಜನತೆಯ ಬಗ್ಗೆ ಅವನಿಗಿದ್ದ ಕಳಕಳಿಯನ್ನೂ ಕಾಣಬಲ್ಲೆವು.

ಈ ವಿಷಯವಾಗಿ ತನ್ನ ಅನುಭವ ಸೀಮಿತವಾದದ್ದು ಎಂದು ಆರಂಭಿಸಿ, ಹಸ್ತಾಂತರ ಯೋಜನೆಗೆ ತನ್ನ ಸಮ್ಮತಿಯನ್ನು ಸೂಚಿಸಿದ್ದಾನೆ. ಅವನ ಸಮರ್ಥನೆ ಇಂತಿದೆ:

(೧) ಆಗೀಗ ಕಂಡುಬರುವ ದಂಗೆಗಳು ತಾತ್ಪೂರ್ತಿಕ. ಅವುಗಳ ನಿಜ ಕಾರಣವನ್ನು ಕಂಡುಹಿಡಿದು ಸ್ವಲ್ಪದರಲ್ಲಿಯೆ ಬಗೆಹರಿಸಬಹುದು. (೨) ಈ ಪ್ರದೇಶದ ಬಹ್ವಂಶದ ಸೀಮೆಯು

ಮದ್ರಾಸ ಪ್ರಾಂತದಿಂದ ಸುತ್ತುವರಿದಿದ್ದು, ಈ ಸಂಲಗ್ನತೆಯು ಆಡಳಿತಕ್ಕೆ ಅನುಕೂಲವಾದುದು. (೩) ಇಲ್ಲಿಯ ಜನರಾಡುವ ಭಾಷೆ ಕೆನರೀಸ್ ಎಂಬುದಕ್ಕೆ ಎರಡು ಮಾತಿಲ್ಲ. ಅಲ್ಲದೆ ಅವರ ಕೌಟುಂಬಿಕ ಹಾಗೂ ವ್ಯಾಪಾರೀ ಸಂಬಂಧವು ನೆರೆಯ ಶಿರಸಿ –ಸೋಂದಾ ಮತ್ತು ಬಳ್ಳಾರಿ - ಹೊಸಪೇಟೆ – ಈ ಪ್ರದೇಶಗಳೊಡನೆಯೇ ಹೆಚ್ಚಾಗಿ ಇದೆ.

ಈ ಸಂಬಂಧದ ಅವನ ಮುಂದಿನ ಹೇಳಿಕೆಯನ್ನು ಅವಶ್ಯವಾಗಿ ಗಮನಿಸತಕ್ಕದು:

It would give more satisfaction to the people to be united to their own, than to be transferred to a country of Mahrattas with whom they have no natural connection.

ಕನ್ನಡಿಗರು ಒಂದೇ ಅಧಿಪತ್ಯದ ಕೆಳಗೆ ಇರಬೇಕೆನ್ನುವುದರ – ಎಂದರೆ ಏಕೀಕರಣದ ಸೂತ್ರವೇ ಇಲ್ಲಿದೆ. ಕೊನೆಯಲ್ಲಿ ಅವನು ಹೇಳಿದ್ದೇನೆಂದರೆ 'ಸದ್ಯ ಮಿಲಿಟರಿ ಆಡಳಿತವು ಬಹುಮಟ್ಟಿಗೆ ಮದ್ರಾಸಿನವರದ್ದಾಗಿದೆ. ಸಿವಿಲ್ ಆಡಳಿತವು ಮುಂಬಯಿ ಸರಕಾರಕ್ಕೆ ಸೇರಿದೆ. ಆಡಳಿತದ ಈ ರೀತಿಯ ವಿಭಜನೆ ಸಲ್ಲದು. ಎರಡೂ ಒಂದೇ ಅಧಿಕಾರಕ್ಕೆ ಒಳಪಟ್ಟಿರತಕ್ಕುದು.'

ಈ ಉತ್ತರ ಬಂದ ಮೇಲೆ ಎಲ್‌ಫಿನ್‌ಸ್ಟನ್ ಹಸ್ತಾಂತರದ ಆರ್ಥಿಕ ಪರಿಣಾಮವನ್ನು ಪರಿಶೀಲಿಸಲೆಂದು ಒಂದು ಸಮಿತಿಯನ್ನು ನಿಯಮಿಸಿದನು. ಅವರು ಎತ್ತಿದ ಸಂದೇಹಗಳಿಗೆ, ಕೇಳಿದ ಮಾಹಿತಿಗೆ ಉತ್ತರವಾಗಿ ಮನ್ರೋ ಇನ್ನೆರಡು ಪತ್ರಗಳನ್ನು ಬರೆದಿದ್ದಾನೆ.

ಈ ಎಲ್ಲಾ ಕಾಗದ ಪತ್ರಗಳ ದೊಡ್ಡ ಕಟ್ಟು, ಕಲಕತ್ತೆಯಲ್ಲಿ ಗವರ್ನರ್ ಜನರಲ್‌ನಿಗೆ ಹೋಯಿತು. ಅವನು ತನ್ನ ಶಿಫಾರಸಿನೊಂದಿಗೆ ಲಂಡನ್ನಿಗೆ ಕಳಿಸಿಕೊಟ್ಟನು. ಐದಾರು ತಿಂಗಳ ಮೇಲೆ, ಎಂದರೆ ಮರುವರ್ಷದ ಏಪ್ರಿಲ್ ತಿಂಗಳಲ್ಲಿ ಬಂತು, ಉತ್ತರ –

'ಹಸ್ತಾಂತರದ ಅಗತ್ಯವಿಲ್ಲ!'

ಯಾಕೆ ಹೀಗಾಯಿತು? ಮುಖ್ಯ ಕಾರಣವೆಂದರೆ ಮನ್ರೋ ಒಬ್ಬನನ್ನುಳಿದು ಯಾರಿಗೂ ಈ ವಿಚಾರವಾಗಿ ನಿಜವಾದ ಆಸ್ಥೆಯಾಗಲೀ, ಅದರಿಂದಾಗುವ ಪ್ರಯೋಜನದ ಕಲ್ಪನೆಯಾಗಲೀ ಇರಲಿಲ್ಲ. ಚಾಪ್ಲಿನ್ ಕೂಡ ಯೋಜನೆಯನ್ನು ಮಂಡಿಸುವಾಗಲೂ ಆಳವಾಗಿ ಆಲೋಚಿಸಿದಂತೆ ಕಾಣಲಿಲ್ಲ. ಕನ್ನಡ ಮಾತನಾಡುವವರು ಒಂದುಗೂಡುವರೆಂಬ ಕಾರಣವನ್ನು ಕಾಣಿಸಿದ್ದರೂ ಕರ್ನಾಟಕ ಏಕೀಕರಣದ ಕಲ್ಪನೆಯೇನೂ ಅವನಿಗಿರಲಿಲ್ಲ. ಆದರೆ ಯಾವ ಕಾರಣಕ್ಕಾಗಿ ಭಾಷಿಕ ಏಕೀಕರಣವಾಗಬೇಕು ಎಂದು ನಾವು ತಿಳಿದಿದ್ದೇವೆಯೊ ಅದು ತಂತಾನೆ ಕೈಗೂಡುತ್ತಿತ್ತು. ಈ ಹಸ್ತಾಂತರವಾಗಿದ್ದರೆ 'ಕೆನರಾ'ದ ೨ ಜಿಲ್ಲೆಗಳು ಮತ್ತು ಬಳ್ಳಾರಿ, ೧೮೩೪ರಲ್ಲಿ ವಿಲೀನವಾದ ಕೊಡಗು ಮತ್ತು ಧಾರವಾಡ, ಬೆಳಗಾಂವಿ, ವಿಜಾಪುರ ಜಿಲ್ಲೆಗಳು – ಹೀಗೆ ಒಟ್ಟಿಗೆ ೭ ಜಿಲ್ಲೆಗಳು ಒಂದೇ ಆಡಳಿತಕ್ಕೆ ಒಳಪಡುತ್ತಿದ್ದವು. ಕ್ಷೇತ್ರಮಾನದಲ್ಲಿ ಇದಿಷ್ಟು ಆಗಿನ ಮೈಸೂರ ಸಂಸ್ಥಾನಕ್ಕೆ ಸಮಾನವಾಗಿದ್ದಿತು. ಮೈಸೂರು ಸಂಸ್ಥಾನವಾದರೂ ಮದ್ರಾಸ ಪ್ರಾಂತದವರಂತೆಯೇ ತನ್ನ ಆಡಳಿತವನ್ನು ನಡೆಸುತ್ತಿದ್ದಿತು. ಆದ್ದರಿಂದ ಎರಡೂ ಪ್ರದೇಶಗಳ ಹತ್ತಿರದ ಒಡನಾಟಕ್ಕೆ ಅವಕಾಶವಿದ್ದಿತು. ಸಂಸ್ಥಾನದ ಹೆಚ್ಚಿನ ಹಿರಿಯ ಅಧಿಕಾರಿಗಳು ಮದ್ರಾಸ ಪ್ರಾಂತದಿಂದಲೇ

ಬಂದವರಾಗಿದ್ದರು. ಒಟ್ಟಿನ ಪರಿಣಾಮವೆಂದರೆ ನಿಜಾಮರ ಮೂರು ಜಿಲ್ಲೆಗಳನ್ನು ಬಿಟ್ಟರೆ, ಕನ್ನಡ ಮಾತನಾಡುವ ಎಲ್ಲರೂ ಒಂದೇ ಬಗೆಯ ಆಡಳಿತಕ್ಕೆ ಒಳಪಡುತ್ತಿದ್ದರು (ನಕಾಶವನ್ನು ನೋಡುವುದು). ಮದ್ರಾಸ ಪ್ರಾಂತದಲ್ಲಿ ಆಗ ತಮಿಳು, ತೆಲುಗು, ಮಲೆಯಾಳಿಗರೂ ಇದ್ದರೆನ್ನುವುದು ನಿಜ. ಆದರೆ ಅಲ್ಲಿ ಕನ್ನಡಿಗರು ಮುಂದಿನ ೧೩೦ ವರ್ಷಗಳ ಕಾಲ (೧೮೨೬–೧೯೫೬) ಅಲ್ಪಸಂಖ್ಯಾತರಾಗಿ ಉಳಿಯುತ್ತಿದ್ದಿಲ್ಲ. ಮೇಲೆ ತೋರಿಸಿದಂತೆ ದೊಡ್ಡ ಪ್ರದೇಶವಾಗಿ ತಮ್ಮ ಯಾವುದೇ ಬೇಡಿಕೆಯನ್ನು ಸಮರ್ಥವಾಗಿ ಮಂಡಿಸುವುದು ಸಾಧ್ಯವಿತ್ತು. ಅಂತೂ ಶಿಕ್ಷಣ, ಸಾಹಿತ್ಯ ರಚನೆ, ಸಾಮಾಜಿಕ ಅಂತಸ್ತು, ವಾಣಿಜ್ಯ ರಂಗ, ಅನಂತರದ ರಾಜಕೀಯ ಹೋರಾಟ – ಇವೆಲ್ಲವುಗಳಲ್ಲಿ ಕನ್ನಡಿಗರ ಅಭಿವೃದ್ಧಿಯನ್ನು ಹೊಂದುವ ಅವಕಾಶ ತಪ್ಪಿತು.

◆◆◆

ಕ್ರಿ.ಶ. ೧೮೨೯ರಲ್ಲಿ ಬೇರೊಂದು ಬಗೆಯ ಹಸ್ತಾಂತದ ಸೂಚನೆ ಮುಂದೆ ಬಂದಿತು. ಈ ಹಿಂದಿನವರಲ್ಲಿ ಮುಂಬಯಿಯ ಕನ್ನಡ ಪ್ರದೇಶವನ್ನು ಮದ್ರಾಸಿಗೆ ಸೇರಿಸುವುದೆಂದಿದ್ದರೆ, ಈಗ ಮದ್ರಾಸ ಆಧಿಪತ್ಯದಲ್ಲಿದ್ದ ಕೆಲ ಭಾಗವನ್ನು ಮುಂಬಯಿ ಪ್ರಾಂತಕ್ಕೆ ಸೇರಿಸಬೇಕೆಂಬ, ತದ್ವಿರುದ್ಧದ ಸೂಚನೆ ಆದಾಗಿತ್ತು. ಸೂಚನೆ ಬಂದದ್ದು ಮುಂಬಯಿ ಪ್ರಾಂತದ ಆಗಿನ ಗವರ್ನರ್ ಜಾನ್ ಮಾಲ್ಕಮ್‌ನಿಂದ. ಹಸ್ತಾಂತರ ಹೊಂದಬೇಕಾಗಿದ್ದ ಭಾಗವೆಂದರೆ ಈಗಿನ ಉತ್ತರ ಕನ್ನಡ ಜಿಲ್ಲೆಯ ಘಟ್ಟದ ಮೇಲಿನ ಪ್ರದೇಶ ಎಂದರೆ ಸೂಪಾ ತಾಲೂಕಿನಿಂದ ಸಿರ್ಸಿಯೂ ಸೇರಿದ್ದಂತೆ. ಸಿದ್ದಾಪುರದವರೆಗಿನ ತಪ್ಪಲಿನ ಪ್ರದೇಶವು ಹಾಗೂ ಕರಾವಳಿಯ ಸೀಮೆ ಇವುಗಳ ಮಧ್ಯೆ ಸಹ್ಯಾದ್ರಿ ಪರ್ವತ ಶ್ರೇಣಿ ಇದ್ದು, ಸಾರಿಗೆ ಸಂಪರ್ಕವು ಈಗಿನ ದಿನಗಳಲ್ಲೂ ದುರ್ಗಮವಾದದ್ದು. ಆದರೆ ಘಟ್ಟದ ಮೇಲಿನ ಈ ಪ್ರದೇಶಕ್ಕೆ ಸಮಪಾತಳಿಯಲ್ಲಿರುವ ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿಯ ಸಂಪರ್ಕವು ಎಷ್ಟೊಂದು ಸಸಾರ ಸುಲಭ! ಆಡಳಿತ ದೃಷ್ಟಿಯಿಂದ ನೋಡಿದಾಗ, ಕೋರ್ಟು-ಕಚೇರಿಯ ಕೆಲಸಗಳಿಗೆ ಈ ಪ್ರದೇಶದ ಜನ ಘಟ್ಟದ ಕಣಿವೆಯ ರಸ್ತೆಗಳಲ್ಲಿ ಹಾದು, ತೀರ ಕೆಳತುದಿಯಲ್ಲಿಯ ಮಂಗಳೂರಿಗೆ ಹೋಗಬೇಕು. ಇದಕ್ಕೆ ಪ್ರತಿಯಾಗಿ, ಅದೇ ಕೆಲಸಕ್ಕಾಗಿ ಧಾರವಾಡಕ್ಕೆ ಹೋಗುವುದಾದರೆ ಅದು ಸಹಜ ಸಂಗತಿಯೇ ಆದೀತು. ಅಂತೂ ಸಹ್ಯಾದ್ರಿ ಪರ್ವತ ಶ್ರೇಣಿಯನ್ನು ಧಾರವಾಡ ಮತ್ತು ಕೆನರಾ ಜಿಲ್ಲೆಗಳ ಸೀಮಾ ರೇಖೆಯಾಗಿ ಮಾಡಿದರೆ, ಅದು ಅತ್ಯಂತ ಸ್ಪೃಹಣೀಯವಾದ ಪ್ರಾಕೃತಿಕ ವಿಭಾಗ ಎನಿಸುತ್ತಿತ್ತು. ಹೀಗಿತ್ತು ಆ ಹೊಸ ಸೂಚನೆ.

ಆಡಳಿತಕ್ಕೆ ಸಂಬಂಧಿಸಿದ ಒಂದೆರಡು ವ್ಯಾವಹಾರಿಕ ಕಾರಣಗಳೂ ಈ ಸೂಚನೆಯ ಹಿಂದೆ ಇದ್ದುವು. ಉದಾಹರಣೆಗೆ ಒಂದು ಪ್ರಾಂತದವರು ಚಿಕ್ಕ ಅಪರಾಧವನ್ನೆಸಗಿಯೊ, ಸರಕಾರೀ ನಿಯಮವೊಂದನ್ನು ಉಲ್ಲಂಘಿಸಿಯೊ ಕೂಡಲೇ ಬದಿಯ ಪ್ರಾಂತದ ಸ್ಥಳಕ್ಕೆ ಸುಸೂತ್ರವಾಗಿ ಹೋಗಿಬಿಟ್ಟರೆಂದರೆ ಅವರನ್ನು ಹಿಡಿಯುವುದು ಸಾಧ್ಯವಾಗುತ್ತಿದ್ದಿಲ್ಲ.

ಅಂತೂ ಮದ್ರಾಸ ಪ್ರಾಂತದವರೊಂದಿಗೆ ಪತ್ರ ವ್ಯವಹಾರ ನಡೆಯಿತು. (ಆ ವೇಳೆಗೆ ಮನ್ರೋ ತೀರಿಕೊಂಡಿದ್ದನು). ಆದರೆ ಅವರಿಗೆ, ವಿಶೇಷತಃ ಕೆನರಾದ ಕಲೆಕ್ಟರನಿಗೆ ಈ ಹಸ್ತಾಂತರ


ಮುಂಬಯಿ ಕರ್ನಾಟಕ ಪ್ರದೇಶವನ್ನು ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಿದಾಗ
ಕೆನರಾ ಒಂದೇ ಜಿಲ್ಲೆಯಾಗಿ ಮದ್ರಾಸದಲ್ಲೇ ಇದ್ದಿತು.
ಹೈದರಾಬಾದದ ಕನ್ನಡ ಪ್ರದೇಶವನ್ನು ಬಿಟ್ಟು
ಮೈಸೂರು ಸಂಸ್ಥಾನವು ಆಡಳಿತ ವಿಭಾಗದಲ್ಲಿ ಹೇಗೂ ಮದ್ರಾಸ ಪ್ರಾಂತವನ್ನೆ ಅನುಸರಿಸಿತ್ತು.
ಬಿಜಾಪುರ
ಬೆಳಗಾವಿ
ಹೈದರಾಬಾದ
ಕಾರವಾರ
ಬಳ್ಳಾರಿ
ಮೈಸೂರು ಸಂಸ್ಥಾನ
ಬೆಂಗಳೂರು
ಕೊಡಗು
ಮೈಸೂರು

೧೨. ಆಡಳಿತ, ಶಿಕ್ಷಣರಂಗಗಳಲ್ಲಿ ಭಾಷಾಮಾಧ್ಯಮ ಸಮಸ್ಯೆ

ಬ್ರಿಟಿಷರು ತಾವು ಗೆದ್ದುಕೊಂಡ ಈ ದಕ್ಷಿಣ ಮಹಾರಾಷ್ಟ್ರ ಪ್ರದೇಶ ಜನರ ಭಾಷೆಯು ಯಾವುದೆಂದು ತಿಳಿಯುವದಕ್ಕೆಯೇ ಮೊದಲು ಪೇಚಾಡಿದರು. ಜನರು ಆಡುವ ಭಾಷೆಯೇನೊ ಕನ್ನಡ, ಎಂಬುದು ವೇದ್ಯವಾಯಿತು. ಆದರೆ ಕಚೇರಿಗಳಲ್ಲಿಯ ವ್ಯವಹರಣೆ, ಕಾಗದ ಪತ್ರ ಎಲ್ಲವೂ ಮರಾಠಿಯಲ್ಲಿ ಇದೆಯಲ್ಲ, ಎಂಬ ಗೊಂದಲದಲ್ಲಿ ಬಿದ್ದರು. ಹಾಗಿದ್ದರೂ ಜನತೆಯ ಭಾಷೆಯಾದ ಕನ್ನಡವೇ ಆಡಳಿತ ಭಾಷೆಯಾಗಬೇಕು ಎಂಬ ಸ್ಪಷ್ಟವಾದ ನಿಲುವನ್ನು ಮೊದಲಿನಿಂದಲೇ ತಳೆದಿದ್ದರು (೧೮೨೦ರ ಆರಂಭ). ಈಗೇನೊ ಈ ನಿಲುವು ವಾದಾತೀತ ಎನಿಸಬಹುದು. ಆದಾಗ್ಯೂ ಅದರ ಅನುಷ್ಠಾನವು ನಮ್ಮದೇ ಸರಕಾರ ಇದ್ದಾಗಲೂ ಅದೆಲ್ಲಿ ಸಾಧ್ಯವಾಗಿದೆ?

ಅಂದಿನ ದಿನಗಳಲ್ಲಂತೂ ಕನ್ನಡದ ಅನುಷ್ಠಾನ ಅಸಾಧ್ಯ ಕೋಟಿಯ ಮಾತೇ ಆಗಿದ್ದಿತು. ಜನತೆಯಲ್ಲಿ ಕನ್ನಡತನವೆಂಬುದರ ಅರಿವೂ ಇರಲಿಲ್ಲ. ಕನ್ನಡದಲ್ಲಿ ಓದುವುದು ಬರೆಯುವುದೂ ರೂಢಿಗತವಾಗಿರಲಿಲ್ಲ. ಇಂಥ ಸ್ಥಿತಿಯಲ್ಲಿ ಆಡಳಿತವು ಮರಾಠಿಯಲ್ಲೇ ನಡೆದರೆ ಅನರ್ಥಗಳಾಗುವ ಸಂಭವವೂ ಇದ್ದಿತು. ಒಂದು ಸಲವಂತೂ ಕೊಲೆಯ ಆಪಾದನೆಗೆ ಗುರಿಯಾದ ಒಬ್ಬ ಕನ್ನಡ ರೈತನು ತನಗೆ ತಿಳಿಯದ ಮರಾಠಿಯಲ್ಲಿ, ಇನ್ನೊಬ್ಬರ ಹೇಳಿಕೆಯಂತೆ ಲೇಖೀ ಜವಾಬು ಕೊಟ್ಟು ಮರಣದಂಡನೆಗೆ ಗುರಿಯಾಗಬೇಕಾಯಿತು! ಈ ಅನರ್ಥವನ್ನು ಬಹಿರಂಗಪಡಿಸಿದವ ಬೆಳಗಾವಿಯ ಒಬ್ಬ ಪಾದ್ರಿ-ಟೇಲರ್ ಎಂಬಾತ. ಮುಂದುವರಿದು ಆತ ಆಡಳಿತವು ಕನ್ನಡದಲ್ಲಿಯೇ ನಡೆಯಬೇಕೆಂದು ಒತ್ತಿ ಹೇಳಿದ. ಜನತೆಯ ಭಾಷೆಯೇ ಆಡಳಿತ ಭಾಷೆಯಾಗಿರಬೇಕೆನ್ನುವ ವಿಷಯದಲ್ಲಿ ಅವನ ಕಾರಣಮೀಮಾಂಸೆ ಅತ್ಯಂತ ಉದ್ಬೋಧಕವಾಗಿದೆ:

"ಯಾವುದೊಂದು ಪ್ರದೇಶದ ಆಡಳಿತ ವ್ಯವಹಾರವು ಅಲ್ಲಿಯ ಜನರು ಆಡುವ ಭಾಷೆಯೇ ಆಗಬೇಕಾದುದು ನ್ಯಾಯಸಮ್ಮತ. ಆದರೆ ಈ ಭಾಗದಲ್ಲಿ (ಮುಂಬಯಿ ಕರ್ನಾಟಕ) ಮತ್ತು ಹಿಂದುಸ್ಥಾನದ ಕೆಲವೆಡೆಗಳಲ್ಲಿ ಸದ್ಯ ಸ್ಥಿತಿಯು ಇದಕ್ಕೆ ವಿರುದ್ಧವಾದದ್ದಿದೆ. "ಧಾರವಾಡ

ಸುಭಾದಲ್ಲಿರುವ ಎಲ್ಲ ಕಡೆಗಳಲ್ಲಿ (ಪಾಚ್ಛಾಪುರ, ಬೀಡಿ ಮತ್ತು ಚಿಕ್ಕೋಡಿ ತಾಲೂಕಿನ ಕೆಲಭಾಗ ಬಿಟ್ಟು, ಕನ್ನಡ ಮಾತಾಡುವವರೇ ಇದ್ದಾರೆ. ಆದ್ದರಿಂದ ಸರಕಾರೀ ವ್ಯವಹಾರವೂ ಕಾಗದ ಪತ್ರಗಳೂ ಮರಾಠಿಗಿಂತ ಕನ್ನಡ ಭಾಷೆಯಲ್ಲಿಯೇ ಇರಬೇಕು ಎಂಬುದು ನನ್ನ ನಿಶ್ಚಿತ ಅಭಿಪ್ರಾಯವಾಗಿದೆ."

ಈ ಕನ್ನಡಪರ ಮಂಡನೆಯನ್ನು ಅನುಷ್ಠಾನದಲ್ಲಿ ತರಬೇಕಾದರೆ ಮೊದಲು ಸರಕಾರೀ ನೌಕರರು ಕನ್ನಡ ತಿಳಿದಿರಬೇಕಲ್ಲವೆ. ಆದಕಾರಣ ನೌಕರಿ ಬೇಕಾದವರು ಕನ್ನಡ ಚೆನ್ನಾಗಿ ತಿಳಿದಿರಬೇಕು ಎಂದು ಆಜ್ಞೆಯನ್ನು ಹೊರಡಿಸಿದರು (೧೮೨೫). ಅದು ಸರಿ, ಈಗಿದ್ದ ನೌಕರರಿಗೆ ಕನ್ನಡ ಬಾರದಿದ್ದರೆ? ಅವರೂ ಕಲಿಯತಕ್ಕುದು. ಅದಕ್ಕಾಗಿ ಅಂಥವರು 'ಕನ್ನಡ ಪರೀಕ್ಷೆಗೆ ಕುಳಿತು ಪಾಸಾಗಬೇಕು' ಎಂದರು.

ಈ ರೀತಿ ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕೆನ್ನುವ ನಿಯಮವು ಇಂಗ್ಲಿಶ್ ಅಧಿಕಾರಿಗಳಿಗೂ ಅನ್ವಯಿಸಿದ್ದಿತು. ಆ ಪ್ರಕಾರ ಬೆಥಿಂಗ್ಟನ್ ಎಂಬವನು ಪರೀಕ್ಷೆಗೆ ಕಟ್ಟಿ ಪಾಸದನಂತೆ. ಹಾಗೆ ಪಾಸಾದ ಅಧಿಕಾರಿಗಳಲ್ಲಿ ಅವನೊಬ್ಬನೇ ಇದ್ದ ಎಂಬ ಮಾತನ್ನು ವರದಿಯೊಂದರಲ್ಲಿ ಕಾಣಿಸಲಾಗಿದೆ.

ಕಡ್ಡಾಯ ಕನ್ನಡದ ಅನುಷ್ಠಾನವು ಸುಲಭಸಾಧ್ಯವಿರಲಿಲ್ಲ. (ಈಗಿನಂತೆಯೇ ಎನ್ನೋಣವೆ?) ಈ ಬಗ್ಗೆ ಧಾರವಾಡ ಸುಭಾದ ಮುಖ್ಯ ಕಲೆಕ್ಟರ್, ಡನ್‌ಲಪ್ ಎಂಬಾತ ಹೆಚ್ಚು ಸೂಕ್ಷ್ಮವಾಗಿ ಆಲೋಚಿಸಿದ್ದನೆನ್ನಬಹುದು. ತಾನು ಈ ವಿಷಯದಲ್ಲಿ ಮಾಡಿದ ಸೂಚನೆಗಳನ್ನು ಮುಕ್ತಾಯಗೊಳಿಸುತ್ತ ಡನ್‌ಲಪ್ ಬರೆದಿದ್ದ ಮಾತುಗಳು ಮನನೀಯವಾಗಿವೆ.

"ಈ ಯೋಜನೆಗೆ ಎಲ್ಲ ದೇಶೀ ನೌಕರರು ಸಾಕಷ್ಟು ವಿರೋಧ ಮಾಡುವುದರಲ್ಲಿ ಸಂಶಯವಿಲ್ಲ ಮತ್ತು ನಮ್ಮ ವಿದೇಶೀ ಮೇಲಧಿಕಾರಿಗಳ ಅಜ್ಞಾನವು ಅದಕ್ಕೆ ಪುಟಗೊಡುವಂತಿದೆ. ಆದ್ದರಿಂದ ಈಗಿದ್ದವರು ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕೆನ್ನುವುದನ್ನು ಒಂದು ವರ್ಷ ಕಾಲ ಮುಂದೂಡುವುದೊಳ್ಳೆಯದು. ಇದೊಂದು ಅಡೆತಡೆಯನ್ನು ದಾಟಿದೆವೆಂದರೆ, ಪ್ರಗತಿಯನ್ನು ಸಾಧಿಸಬಲ್ಲೆವು" - ಇದು ಡನ್‌ಲಪ್ ಇರಿಸಿಕೊಂಡಿದ್ದ ಆಶಾವಾದಕ್ಕೆ ನಿದರ್ಶನ. ಮುಂದುವರಿದು–

"ಈ ಭಾಷಾ ಬದಲಾವಣೆ ಕಷ್ಟಸಾಧ್ಯವೆಂಬುದನ್ನು ಬಲ್ಲೆ. ಆದರೆ ಇದರ ಉದ್ದೇಶ ಘನವಾದದ್ದು ಮತ್ತು ಪ್ರಯೋಜನಗಳು ಅಪಾರ. ಆದ್ದರಿಂದ ಏನೇ ತೊಂದರೆಗಳು ಬರಲಿ, ಇದನ್ನು ಪೂರೈಸುವಲ್ಲಿ ಸಾರ್ಥಕತೆ ಇದೆ."

ಡನ್‌ಲಪ್‌ನ (ಜೊತೆಗೆ ಮಿಶನರಿ ಟೇಲರನದೂ) ಮನವಿಗೆ ಮುಂಬಯಿ ಸರಕಾರವು ಒಪ್ಪಿತಲ್ಲದೆ 'ಪುಣೆ-ಕೊಂಕಣಗಳಿಂದ ನೌಕರಿಗಾಗಿ ಈ ಭಾಗಕ್ಕೆ ಬಂದಿದ್ದ ಮರಾಠೀ ನೌಕರರ ಯಾದಿಯನ್ನು ಕಳಿಸಿರಿ. ಅವರನ್ನು ಕ್ರಮೇಣ ಹಿಂದೆ ಕರೆಸಿಕೊಳ್ಳೋಣ!" ಎಂದು ತಿಳಿಯಪಡಿಸಿತು. ಅಲ್ಲದೆ ಪ್ರತೀವರ್ಷ ಈ ಭಾಷಾ ಹಸ್ತಾಂತರದ ಪ್ರಗತಿಯ ಬಗ್ಗೆ 'ಜಮಾಬಂದಿ ರಿಪೋರ್ಟ್'ನಲ್ಲಿ (?) ವಿವರಗಳನ್ನು ಕೊಡಬೇಕೆಂದೂ ಸೂಚಿಸಲಾಯಿತು.

ಪ್ರಗತಿ - ಇದ್ದಿತೆ? ಆದರೆ ಎದ್ದು ಕಾಣುವಂತಹದಲ್ಲ. ಇಷ್ಟೇ; ಕನ್ನಡದ ಬಗ್ಗೆ ಇದ್ದ ತಾತ್ಸಾರ; ಮತ್ತು ಅನಾಸ್ಥೆ ಕಡಿಮೆಯಾಯಿತೆನ್ನಬಹುದು. ಅಂತೂ ಸರಕಾರೀ ವರದಿಯೊಂದರ ಪ್ರಕಾರ (೧೮೪೮) ಕನ್ನಡ ಕಲಿತ ನೌಕರರ ಸಂಖ್ಯೆ ಹೆಚ್ಚುತ್ತಲಿದೆಯೆಂದು ತಿಳಿದುಬರುತ್ತದೆ. ಕೆಲವೊಂದು ಕಾಲದ ಮಟ್ಟಿಗಾದರೂ ಸರಕಾರೀ ನೌಕರರು ಮರಾಠೀ ಮತ್ತು ಕನ್ನಡ ಎರಡೂ ಭಾಷೆಗಳನ್ನು ಬಲ್ಲವರಾಗಿರಬೇಕು - ಎಂಬುದೂ ಆ ಕಾಲಕ್ಕೆ ನೆಲೆಗೊಂಡಿತು.

ಶಿಕ್ಷಣ ರಂಗ

ಇನ್ನು ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಪ್ರತಿಷ್ಠಾಪನೆಯ ವಿಷಯವನ್ನು ಪರಿಶೀಲಿಸೋಣ. ೧೮೨೫ರ ಭಾಷಾಮಾಧ್ಯಮದ ನೀತಿಯನ್ನು ಬೋರ್ಡ್ ಆಫ್ ಎಜ್ಯುಕೇಶನ್ ಸ್ವೀಕರಿಸಿತ್ತು. ತನ್ನ ೧೮೪೨ರ ವರದಿಯಲ್ಲಿ ಅದರ ಅನುಷ್ಠಾನದ ಕುರಿತು ಕೈಕೊಂಡ ಕೆಲವು ಕ್ರಮಗಳನ್ನು ಈ ರೀತಿ ವಿವರಿಸಿದೆ:

"ಈ ಪ್ರದೇಶದಲ್ಲಿ ಕನ್ನಡವೇ ಜನರ ಹಾಗೂ ಸರಕಾರದ ನಡುವಿನ ಸಂಪರ್ಕ ಭಾಷೆಯಾದ್ದರಿಂದ ಕನ್ನಡ ಶಾಲೆಗಳಲ್ಲಿ ಮರಾಠಿಯನ್ನು ಕಲಿಸಬಾರದು. ಇತ್ತ ಧಾರವಾಡ, ಹುಬ್ಬಳ್ಳಿ, ಬೆಳಗಾಂವಿ - ಈ ಮುಖ್ಯ ನಗರಗಳಲ್ಲಿ ಮರಾಠೀ ಶಾಲೆಗಳು ಇವೆಯಾದ್ದರಿಂದ ಆಡಳಿತದ ಕೆಲಸಕ್ಕೆಂದು ಹೊಸತಾಗಿ ಆ ಶಾಲೆಗಳನ್ನು ಸ್ಥಾಪಿಸುವ ಅಗತ್ಯವಿಲ್ಲ. ಈ ಮರಾಠೀ ಶಾಲೆಗಳಲ್ಲಿ ಕನ್ನಡವನ್ನು ಕಲಿಸಬಾರದು - ಎಂಬ ನಿರ್ದೇಶನವನ್ನು ಮಾತ್ರ ಹೊರಡಿಸಿದೆವು"

ಅದೇಕೊ? ಈಗಿನ ದಿನಗಳಲ್ಲಿ ಅದು ತತ್ವತಃ ಅಸಂಗತವೆನಿಸೀತು. ಆದರೆ ಆವಾಗ ಈ ನಿಲುವನ್ನು ಯಾರೂ ವಿರೋಧಿಸಿದಂತಿಲ್ಲ. 'ಕನ್ನಡ ಪ್ರಜ್ಞೆ' ಎನ್ನುವುದು ಇಲ್ಲದಿದ್ದಾಗ ಅದು ಸಹಜವೇ.

ಆದರೆ ಕನ್ನಡ ಶಾಲೆಗಳಲ್ಲಿ ಮರಾಠೀ ಕಲಿಸಬಾರದೆನ್ನುತ್ತಲೂ ಎಲ್ಲೆಲ್ಲಿಯೂ ವಿರೋಧವು ವ್ಯಕ್ತವಾಯಿತು. ಅದೂ ಕನ್ನಡಿಗರಿಂದಲೇ!

"ಎಲೇ ಮಾಸ್ತರಾ, ನೀ ನಮ್ಮ ಹುಡುಗ್ಗ ಮರಾಠೀ ಕಲಿಸದಿದ್ರ ನೋಡು! ನಿನ್ನ ಈ ಊರಾಗೇ ನಿಲ್ಲಗೊಡಾಕಿಲ್ಲ" ಎಂಬುದಾಗಿ ಕನ್ನಡ ವ್ಯಾಪಾರಸ್ಥನೊಬ್ಬನ ಬೆದರಿಕೆ! ಸ್ವತಃ ಅವನಿಗೆ ಎಷ್ಟರಮಟ್ಟಿಗೆ ಮರಾಠೀ ಬರುತ್ತಿತ್ತು ಎಂದು ಕೇಳಿದರೆ ಬರಿಯೆ ಮಾತಾಡಲಿಕ್ಕೆ ಮಾತ್ರ. ಆ ಭಾಷೆಯಲ್ಲಿ ಅವನಿಗೆ ಓದು ಬರಹ ಎರಡೂ ವರ್ಜ್ಯ.

ಚಿಕ್ಕೋಡಿ, ಗೋಕಾಕ ಊರುಗಳ ವ್ಯಾಪಾರಸ್ಥರಂತೂ ಕನ್ನಡ ಶಿಕ್ಷಕರ ಮೇಲೆ ಇದೇ ರೀತಿ ಒತ್ತಾಯವನ್ನು ತಂದರಂತೆ. 'ಮರಾಠಿಯನ್ನು ಕಲಿಸಲೇಬೇಕು, ಇಲ್ಲದಿದ್ದರೆ ಊರು ಬಿಡಿಸಿ, ಕಳಿಸುವೆವು' ಎಂಬ ಬೆದರಿಕೆಯನ್ನು ಹಾಕಿದರು. ಇದಕ್ಕೆ ಅಂಜಿ ಶಿಕ್ಷಕರು ಸ್ವಲ್ಪಮಟ್ಟಿಗೆ ಮರಾಠಿಯನ್ನು ಕಲಿಸುತ್ತಿದ್ದರೆಂದು ಕಾಣುತ್ತದೆ. ಗೋಕಾಕ ಶಾಲೆಯ ಆಗಿನ ಮಾಸ್ತರನು ಮಾತ್ರ

ಈ ಬಲವಂತದ ವಿರುದ್ಧ ತನ್ನದೇ ಆದ ರೀತಿಯಲ್ಲಿ ಪ್ರತೀಕಾರವನ್ನು ಹೂಡಿದನು. ಮರಾಠಿಯನ್ನು ಕಲಿಸಲೇಬೇಕೆಂದು ಒತ್ತಾಯಿಸಿದ ಪಾಲಕರ ಮಕ್ಕಳಿಗೆ ವಾರ್ಷಿಕ ಪರೀಕ್ಷೆಯಲ್ಲಿ ಯಾವ ಪಾರಿತೋಷಕವನ್ನೂ ಕೊಡಲಿಲ್ಲವಂತೆ!

ಕ್ರಿ.ಶ. ೧೮೩೫ನೆಯ ವರ್ಷವು ಕನ್ನಡದ ಪುನರುತ್ಥಾನದ ದೆಸೆಯಿಂದ ಮಹತ್ವದ್ದಾಗಿದ್ದಂತೆ, ಭಾರತದಲ್ಲಿ ಇಂಗ್ಲಿಶ್ ಶಿಕ್ಷಣದ ಅಭಿಯೋಗದ ಪ್ರಥಮ ವರುಷವೆಂದೂ ಅದು ಗಣನೀಯವಾಗಿದೆ.

ಇದೇ ಕಾಲಕ್ಕೆಯೇ ಮುಂಬಯಿ ಪ್ರಾಂತ್ಯದಲ್ಲಿ ಇಂಗ್ಲಿಶ್ ಬೇಕೆ, ಬೇಡವೆ ಎಂಬ ಬಗ್ಗೆ ವಾದ ವಿವಾದವೆದ್ದಿತು. ಎಲ್‌ಫಿನ್‌ಸ್ಟನ್ನನ ಸಪ್ತಸೂತ್ರಗಳಲ್ಲಿ ಇಂಗ್ಲಿಶ್ ಶಿಕ್ಷಣವೂ ಒಂದಾಗಿದ್ದಿತಷ್ಟೆ. ಅದನ್ನು ಒದಗಿಸುವುದಾದರೆ ಯಾವ ಯಾವ ವಿಷಯಗಳನ್ನು, ಯಾವ ಮಟ್ಟದಲ್ಲಿ ಕೊಡಬೇಕು ಎಂಬ ಬಗ್ಗೆ, ೧೮೩೪ರಲ್ಲಿ ಬೋರ್ಡ್ ಆಫ್ ಎಜುಕೇಶನ್ ಹಾಗೂ ಸರಕಾರೀ ಮಟ್ಟದಲ್ಲಿ ಚರ್ಚೆ ನಡೆಯಿತು. ಸರ್ ಪರ್ಕಿನ್ಸನ್ ಹಾಗೂ ಇನ್ನಿಬ್ಬರು ವಿದೇಶೀ ಸದಸ್ಯರು ಇಂಗ್ಲಿಶನ್ನು ವ್ಯಾಪಕವಾಗಿ ಕಲಿಸಬೇಕು, ಅದಕ್ಕಾಗಿ ಇಂಗ್ಲಿಶ್ ಶಾಲೆಗಳನ್ನು ಸ್ಥಾಪಿಸಬೇಕು ಎಂಬ ಧೋರಣೆಯವರಾಗಿದ್ದರು.

ಆದರೆ ಕರ್ನಲ್ ಜರ್ವಿಸ್ ಎಂಬಾತನು ಅದನ್ನು ಅಲ್ಲಗಳೆದನು. ಅವನ ವಿರೋಧವು ಪ್ರತಿವಾದ ಸ್ವರೂಪದ್ದಲ್ಲ. ಬದಲಾಗಿ ಪಾಶ್ಚಿಮಾತ್ಯ ಜ್ಞಾನವನ್ನು ದೇಶೀ ಭಾಷೆಯಲ್ಲಿಯೆ ಮಾಡಿಕೊಡೋಣ ಎಂಬುದು ಅವನ ನಿಲುಮೆಯಾಗಿದ್ದಿತು. ದೇಶೀ ಭಾಷೆಗಳು ಉಚ್ಚ ಶಿಕ್ಷಣದ ಮಾಧ್ಯಮವಾಗುವುದು ಕಷ್ಟಕರವೇನೂ ಅಲ್ಲ ಎಂದೆನ್ನುವ ಅವನ ನಿಲುಮೆಯನ್ನು ಅವಶ್ಯವಾಗಿ ಇಂದಿನವರು ಗಮನಿಸಬೇಕು.

೧೩. ಪ್ರಾಥಮಿಕ ಶಿಕ್ಷಣ ಸಾಗಿ ಬಂದ ದಾರಿ

(ಅ) ಹಿನ್ನೆಲೆ
(ಆ) ಪರಂಪರಾಗತ ಶಿಕ್ಷಣ
(ಇ) ಗವರ್ನರ್ ಎಲ್‌ಫಿನ್‌ಸ್ಟನ್ನನ ಹೊಸ ಶಿಕ್ಷಣ ಸೂತ್ರಗಳು
(ಈ) ವಾಲ್ಟರ್ ಎಲಿಯಟ್‌ನ ಕನ್ನಡ ಕಾರ್ಯ

ಅ) ಹಿನ್ನೆಲೆ

ಪೇಶ್ವೆಯವರು ಕ್ರಿ.ಶ. ೧೮೧೮ರಂದು ಖಡಕಿ ಯುದ್ಧದಲ್ಲಿ ಸೋತ ಮೇಲೆ, ಉತ್ತರ ಕರ್ನಾಟಕವು ಬ್ರಿಟಿಶರ ವಶವಾಯಿತಷ್ಟೇ. ಮುಂದೆ, ಶಿಕ್ಷಣದ ಆಗು-ಹೋಗುಗಳನ್ನು ನೋಡಿಕೊಳ್ಳಲು, ೧೮೫೫ರಂದು D.P.I. ಆಫೀಸು ಪ್ರತ್ಯೇಕವಾಗಿ ಏರ್ಪಟ್ಟಂದಿನಿಂದ, ಪಾಶ್ಚಿಮಾತ್ಯ ರೀತಿಯ ಶಿಕ್ಷಣ ಕ್ರಮವು ರೂಢವಾಗತೊಡಗಿತು. ಆಧುನಿಕ ಶಿಕ್ಷಣದ ಈ ಸಂಧಿಕಾಲದ ಇತಿಹಾಸವೇ ಪ್ರಸ್ತುತ ವಿಷಯವಾಗಿದೆ.

ಭಾರತವು ಸ್ವತಂತ್ರವಾದಂದಿನಿಂದ ಹೊಸ ರೀತಿಯಲ್ಲಿ ಶಿಕ್ಷಣ ಕ್ರಮವನ್ನು ರೂಪಿಸಬೇಕೆಂದು ಇಂದಿನ ಪ್ರಜಾಸರಕಾರವು ಯೋಚಿಸಿದ್ದಂತೆಯೇ ಆಗಿನ ಬ್ರಿಟಿಶ್ ಸರಕಾರವೂ ಯೋಚನೆ ಮಾಡಿತು. ಅದಕ್ಕಿಂತ ಪೂರ್ವದ ದೇಶೀ ಶಿಕ್ಷಣಕ್ರಮವು ಅತ್ಯಂತ ನಿರುಪಯುಕ್ತವೆಂದು ತಾನೇ ನಿರ್ಧರಿಸಿ, ಸುಧಾರಣೆಗಳನ್ನು ಮಾಡಬಯಸಿತು. ಉದ್ದೇಶ ಒಳ್ಳೆಯದಿದ್ದರೂ, ಹಲವು ಸಲ ತಪ್ಪು ದಾರಿ ಹಿಡಿಯಿತು.

ಬ್ರಿಟಿಶರು ತಾವು ಗೆದ್ದುಕೊಂಡ, ಈ ದಕ್ಷಿಣ ಮರಾಠಾ ಪ್ರದೇಶದ ಜನರ ಭಾಷೆಯು ಯಾವುದೆಂದು ತಿಳಿಯುವುದಕ್ಕೆಯೇ ಮೊದಲು ಪೇಚಾಡಿದರು. ಜನರು ಆಡುವ ಭಾಷೆ ಕನ್ನಡವೆಂದು ತಿಳಿದ ಮೇಲೆ, ಆಡಳಿತವು ಮರಾಠೀ ಭಾಷೆಯಲ್ಲಿ ನಡೆಯುತ್ತದಲ್ಲ ಎಂದು

ಗೊಂದಲದಲ್ಲಿ ಬಿದ್ದರು. ಇದರೊಟ್ಟಿಗೆ ಸ್ವಭಾಷೆಯಾದ ಇಂಗ್ಲಿಶಿನ ಅಭಿಮಾನ ಬೇರೆ. ಹೀಗೆ ಕನ್ನಡ, ಇಂಗ್ಲಿಶ್, ಹಿಂದಿ ಇವುಗಳ ಭಾಷಾ ಪ್ರಾಮುಖ್ಯದ ಬಗ್ಗೆ ಇರುವ ಇಂದಿನ ತೊಡಕೇ ಅಂದು ಮರಾಠೀ, ಕನ್ನಡ, ಇಂಗ್ಲಿಶ್ ಇವುಗಳಲ್ಲಿಯ ಘರ್ಷಣೆಯ ರೂಪವನ್ನು ತಾಳಿದ್ದಿತು.

ಸಂಧಿಕಾಲದ ಈ ಗೊಂದಲವಿದ್ದರೂ ಜನತೆಯ ಭಾಷೆಯಾದ ಕನ್ನಡವೇ ಆಡಳಿತ ಭಾಷೆಯಾಗಬೇಕು. ಶಿಕ್ಷಣದ ಮಾಧ್ಯಮವಾಗಬೇಕು ಎಂಬ ತತ್ವಕ್ಕೆ ಅಧಿಕಾರಿಗಳು ಗಟ್ಟಿಯಾಗಿ ಅಂಟಿಕೊಂಡರು! ಇಂದೇನೋ ಈ ತತ್ವವು ಅತಿ ಸಹಜ, ವಾದಾತೀತ ಎಂಬ ಮಾತು ನೆಲೆಗೊಂಡಿದೆ. ಆದರೂ ಕನ್ನಡವನ್ನೇ ಸಾರ್ವತ್ರಿಕವಾಗಿ ಬಳಸುವುದು ನಮ್ಮ ಸರಕಾರಕ್ಕೂ, ವಿದ್ಯಾಸಂಸ್ಥೆಗಳಿಗೂ ಅದೆಲ್ಲಿ ಸಾಧ್ಯವಾಗಿದೆ?

ಆಗಿನ ಪರಿಸ್ಥಿತಿಯನ್ನಂತೂ ಕೇಳುವುದೇ ಬೇಡ, ಜನತೆಯಲ್ಲಿ ಕರ್ನಾಟಕತ್ವದ ಅರಿವೇ ಇರಲಿಲ್ಲ. ಕನ್ನಡದಲ್ಲಿ ಓದು-ಬರಹದ ಸಾದಾ ಪರಿಚಯವೂ ಹೆಚ್ಚಿನ ಜನರಿಗೆ ಇರಲಿಲ್ಲ. ಇಂಥ ಸ್ಥಿತಿಯಲ್ಲಿ ಆಡಳಿತವು ಹೆಚ್ಚಿನ ಜನಕ್ಕೆ ಗೊತ್ತಿರದ ಮರಾಠಿಯಲ್ಲಿ ನಡೆಯುತ್ತಿದ್ದಾಗ ಹಲವು ಅನರ್ಥಗಳು ಜರುಗಿದವು. (ಒಂದನ್ನು ಹಿಂದಿನ ಲೇಖದಲ್ಲಿ ಕಾಣಿಸಿದ್ದಿದೆ.)

ಈ ವಿಷಮಸ್ಥಿತಿಯನ್ನು ಹೋಗಲಾಡಿಸಲು ಅನೇಕ ಬ್ರಿಟಿಶ್ ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲವು ಸಲ ತಮ್ಮ ಅಧಿಕಾರ ಮಿತಿಯನ್ನು ಮೀರಿ ಪ್ರಯತ್ನಪಟ್ಟರು. ೧೮೦ ವರ್ಷಗಳ ಹಿಂದಿನ ಸಂಗತಿ ಇದು. ಧಾರವಾಡದಂತಹ ಪ್ರಮುಖ (ರಾಜಧಾನಿ) ನಗರದಲ್ಲಿ ಕನ್ನಡ ಶಾಲೆ ಇಲ್ಲವೆಂದರೇನು? ಎಂಬುದಾಗಿ ಕಳವಳಗೊಂಡ ಧಾರವಾಡದ ಅಸಿಸ್ಟೆಂಟ್ ಕಲೆಕ್ಟರ್ - ವಾಲ್ಟರ್ ಎಲಿಯಟ್ ಎಂಬಾತ ಸರಕಾರದ ಪೂರ್ಣ ಮಂಜೂರಿಯನ್ನು ಕಾಯದೇ ಕನ್ನಡ ಶಾಲೆಯೊಂದನ್ನು ತೆರೆದನು. ಆ ಮಂಜೂರಾತಿ ಬರಲೇ ಇಲ್ಲ. ಆ ತಪ್ಪಿಗಾಗಿ ತನ್ನ ತಿಂಗಳ ಸಂಬಳದಿಂದಲೇ ಶಿಕ್ಷಕನ ಸಂಬಳವನ್ನು ಪೂರೈಸಿದನು. ಎಷ್ಟು ದಿನ? ಅಖಂಡ ಮೂರು ವರ್ಷಗಳವರೆಗೆ!

ಸರಕಾರದವರ ಈ ಕನ್ನಡಪರ ನಿಲುಮೆಯನ್ನು ಮರಾಠೀ ಅಧಿಕಾರಿಗಳು ವಿರೋಧಿಸಿದರೆ ಅದಕ್ಕೊಂದು ಅರ್ಥವಿದೆ. ಕನ್ನಡ ಜನತೆಯೇ ಹಾಗೆ ಮಾಡಿದ್ದಾದರೆ ಏನೆನ್ನಬೇಕು?

ಆಗಿನ ಕಾಲದ ಶಿಕ್ಷಣವು ಹೆಚ್ಚಾಗಿ ಪ್ರಾಥಮಿಕ ಸ್ವರೂಪದ್ದಾಗಿತ್ತು. ಆದ್ದರಿಂದ ಇಲ್ಲಿ ಪ್ರಾಥಮಿಕ ಶಿಕ್ಷಣದ ಇತಿಹಾಸವನ್ನೇ ಬಹ್ವಂಶವಾಗಿ ನಿರೂಪಿಸಲಾಗಿದೆ.

ತಾವು ಗೆದ್ದುಕೊಂಡ ಹೊಸ ರೀತಿಯ ಶಿಕ್ಷಣವನ್ನು ಕೊಡಬೇಕೆಂಬ ವಿಚಾರವು ಬ್ರಿಟಿಶರಲ್ಲಿ ೧೯ನೆಯ ಶತಮಾನದ ಆರಂಭದಿಂದಲೂ ಇದ್ದಿತು. ಇಂಗ್ಲೆಂಡಿನ ಪಾರ್ಲಿಯಮೆಂಟ್‌ನ ಸದಸ್ಯನಾದ ವಿಲ್ಬರ್ ಫೋರ್ಸ್ ಮತ್ತು ಇತರರು ಇದರ ಪುರಸ್ಕರ್ತರಾಗಿದ್ದರು (೧೮೧೧). ಆಗಿನ ಗವರ್ನರ್ ಜನರಲ್ ಲಾರ್ಡ್ ಮಿಂಟೊ ಅದನ್ನು ಅನುಮೋದಿಸಿದ್ದರ ಪರಿಣಾಮವಾಗಿ ೧೮೧೩ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯು

ವಿದ್ಯಾಪ್ರೋತ್ಸಾಹಕ್ಕಾಗಿ ಪ್ರತಿ ವರ್ಷ ಒಂದು ಲಕ್ಷ ರೂ.ಗಳನ್ನು ವೆಚ್ಚ ಮಾಡಬೇಕೆಂದು ನಿರ್ಧರಿಸಿತು. ಇದು ಇಡೀ ಹಿಂದುಸ್ತಾನದ ೩/೪ ಭಾಗಕ್ಕೆ ಅನ್ವಯಿಸಬೇಕಾಗಿದ್ದ ಮೊತ್ತ! ಅಲ್ಲದೆ ಈ ವೆಚ್ಚ ವಿದ್ಯಾ ಪ್ರೋತ್ಸಾಹಕ್ಕಾಗಿ; ಜನತೆಗೆ ಶಿಕ್ಷಣ ಕೊಡುವುದಕ್ಕಾಗಿ ಅಲ್ಲ. ಶಿಕ್ಷಣ ವ್ಯವಸ್ಥೆಯು ಒಂದು ಅಗತ್ಯವಾದ, ಕಡ್ಡಾಯವಾದ ಅಂಶವೆಂಬುದಾಗಿ ಕಂಪೆನಿ ಸರಕಾರವು ಭಾವಿಸಿರಲಿಲ್ಲ. ಇದೊಂದು ಐಚ್ಛಿಕವಾದ ಜನಹಿತ ಕಾರ್ಯವೆಂದಷ್ಟೇ ಆಗಿನ ಸರಕಾರವು ತಿಳಿದಿದ್ದಿತು.

ಆ) ಪರಂಪರಾಗತ ಶಿಕ್ಷಣ

ಇತ್ತ ನಮ್ಮ ಪರಂಪರಾಗತ ಶಿಕ್ಷಣ ವ್ಯವಸ್ಥೆ ಆ ಕಾಲಕ್ಕೆ ಹೇಗಿದ್ದಿತು? ಇದನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡಿ ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾದವರೆಂದರೆ ಮದ್ರಾಸದ ಗವರ್ನರ್ ಮನ್ರೊ ಮತ್ತು ಮುಂಬಯಿಯ ಗವರ್ನರ್ ಎಲ್‌ಫಿನ್‌ಸ್ಟನ್.

ಇವರಿಬ್ಬರೂ ಸುಮಾರು ಒಂದೇ ಕಾಲಾವಧಿಯಲ್ಲಿ ಗವರ್ನರರಾಗಿದ್ದರು. (೧೮೧೯-೧೮೨೭) ಪಾಶ್ಚಿಮಾತ್ಯ ವಿದ್ಯೆಯನ್ನು ದೇಶೀ ಜನರಿಗೆ ಕಲಿಸಿ ಅವರನ್ನು ಮುಂದೆ ತರಬೇಕೆನ್ನುವ ವಿಷಯದಲ್ಲಿ ಅವರಿಗೆ ನಿಜವಾದ ಕಳಕಳಿ ಇದ್ದಿತು. ಇಂಥ ಶಿಕ್ಷಣಕ್ಕಾಗಿ ಸರಕಾರವು ಏಕೆ ಹಣವನ್ನು ವೆಚ್ಚ ಮಾಡಬೇಕು ಎನ್ನುವ ವಿಷಯದಲ್ಲಿ ಮನ್ರೋ ಸಾಹೇಬನ ಧೋರಣೆ ಹೀಗಿದ್ದಿತು.

'The expenses incurred by the government on education would be amply repaid by the improvement of the country, for the general diffusion of knowledge is inseparably followed by more 'orderly habits', by increasing industry, by a taste for the comforts of life, by exertion to acquire them and by the growing prosperity of the people'.

ಅಂತೂ ಜನರು ದಂಗೆ ದೊಂಬಿಗಳಲ್ಲಿ ಮನಸ್ಸು ಹಾಕುವುದನ್ನು ತಪ್ಪಿಸಲಿಕ್ಕೆ ಶಿಕ್ಷಣವು ಒಂದು ಸಾಧನವಾದೀತು ಎಂಬುದೂ ಅವನ ಮನಸ್ಸಿನಲ್ಲಿದ್ದಿತು! ಎಲ್‌ಫಿನ್‌ಸ್ಟನ್ನನಿಗೂ ಬ್ರಿಟಿಶರು ಹೊಸತಾಗಿ ಗೆದ್ದುಕೊಂಡ ಪೇಶ್ವೆ ನಾಡಿನಲ್ಲಿ ಸುವ್ಯವಸ್ಥೆ, ಶಾಂತಿಯನ್ನು ಕಾಯ್ದುಕೊಳ್ಳುವ ವಿಚಾರವು ಪ್ರಧಾನವಾಗಿ ಇದ್ದಿತು.

ಇವರಿಬ್ಬರೂ ಕೈಕೊಂಡ ಮೊದಲ ಹೆಜ್ಜೆಯೆಂದರೆ, ತಮ್ಮ ಪ್ರಾಂತ್ಯಗಳಲ್ಲಿ ದೇಶೀ ಶಿಕ್ಷಣವು ಯಾವ ಸ್ವರೂಪದಲ್ಲಿದೆಯೆಂಬುದನ್ನು ತಿಳಿದುಕೊಳ್ಳಲು ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ ಪರಿಪತ್ರವನ್ನು ಕಳಿಸಿ ಅವರಿಂದ ವಿವರಗಳನ್ನು ಕಲೆಹಾಕಿದರು.

ಆ ಪ್ರಕಾರ ಧಾರವಾಡ ಸುಭೆಯ ಮುಖ್ಯ ಕಲೆಕ್ಟರನು ಕ್ರಿ.ಶ. ೧೮೨೩ರಲ್ಲಿ ಒದಗಿಸಿಧ ಶಾಲೆಯ ಅಂಕಿ-ಸಂಖ್ಯೆಗಳು ಗಮನಾರ್ಹವಾಗಿವೆ.

ಭಾಷೆ		ಶಾಲೆಗಳ ಸಂಖ್ಯೆ
ಮರಾಠೀ	–	೧೪೬
ಕನ್ನಡ	–	೧೧೨
ಕನ್ನಡ-ಮರಾಠೀ	–	೭
ಉರ್ದು	–	೫
ಒಟ್ಟು	–	೨೭೦

ಶಿಕ್ಷಕರು		ವಿದ್ಯಾರ್ಥಿಗಳು
೧೩೮	ಬ್ರಾಹ್ಮಣರು	೯೪೩
೧೨೯	ಲಿಂಗಾಯತರು	೨೦೯೨
೫	ಇತರ ಹಿಂದೂ	೭೭೫
೯	ಮುಸಲ್ಮಾನ್	೧೧೮
	ಒಟ್ಟು	೩೯೨೮

ಹೀಗೆ ಈ ಭಾಗದಲ್ಲಿ ಇದ್ದ ಶಾಲೆಗಳ ಸಂಖ್ಯೆ ೨೭೦. ಶಿಕ್ಷಕರು ೨೯೧, ಮತ್ತು ಶಾಲೆಗೆ ದಾಖಲಾದ ಹುಡುಗರ ಸಂಖ್ಯೆ ೩೯೨೮. ಎಂದರೆ ಸರಾಸರಿ ಒಂದು ಶಾಲೆಯಲ್ಲಿ ಮತ್ತು ಅಲ್ಲಿ ಕಲಿಯುವ ಹುಡುಗರು ಕೇವಲ ೧೫ ಎಂದಾಯಿತು.

ಹೆಚ್ಚು ಗಮನೀಯ ಅಂಶವೆಂದರೆ ಮರಾಠಿ ಶಾಲೆಗಳ ಬಾಹುಳ್ಯ. ಬ್ರಿಟಿಶರು ಬರುವುದಕ್ಕೆ ಮುಂಚೆ, ಎಂದರೆ ನೂರಿನ್ನೂರು ವರ್ಷಗಳಿಗೆ ಮುಂಚೆ ಮರಾಠರ ಆಳ್ವಿಕೆಗೆ ಒಳಪಟ್ಟ ಈ ಭಾಗದಲ್ಲಿ ದೇಸಾಯಿ, ದೇಶಪಾಂಡೆ, ಕುಲಕರ್ಣಿ ಮನೆತನಗಳು ಇದ್ದು ಮರಾಠೀ ಭಾಷೆಗೆ ಅವಾಸ್ತವ ಮಹತ್ವವು ಪ್ರಾಪ್ತವಾದದ್ದೇ ಇದರ ಕಾರಣವಾಗಿದೆ. ಶಿಕ್ಷಕರಲ್ಲಿ ಬ್ರಾಹ್ಮಣ, ಲಿಂಗಾಯಿತರ ಸಂಖ್ಯಾ ಪ್ರಮಾಣವು ಸಮಾನವಾಗಿದ್ದುದನ್ನೂ ಗಮನಿಸಬೇಕು! ಬ್ರಾಹ್ಮಣ ಶಿಕ್ಷಕರನ್ನು ಪಂತೋಜಿ ಎಂದೂ ಲಿಂಗಾಯತ ಶಿಕ್ಷಕರನ್ನು ಅಯ್ಯನವರು ಎಂದೂ ಸಾಮಾನ್ಯವಾಗಿ ಕರೆಯುತ್ತಿದ್ದರು.

ಒಟ್ಟಿನ ಜನಸಂಖ್ಯೆಯ ಮಾನದಿಂದ ಸಾಕ್ಷರತೆಯ ಪ್ರಮಾಣ ಎಷ್ಟಿದ್ದಿತು? ೧೮೨೯ಕ್ಕೆ ಸಂಬಂಧಿಸಿದ ಅಂಕಿಸಂಖ್ಯೆಗಳ ಪ್ರಕಾರ ಧಾರವಾಡ ಜಿಲ್ಲೆಯಲ್ಲಿ ಎಂಟು ಲಕ್ಷ ಜನವಸತಿ ಇದ್ದು, ಅದರಲ್ಲಿ ಮಕ್ಕಳ ಸಂಖ್ಯೆಯು ೨೬,೫೦೦. ಆದರೆ ಶಾಲೆಗೆ ಹೋಗುತ್ತಿದ್ದ ಮಕ್ಕಳ ಸಂಖ್ಯೆ ಕೇವಲ ೪,೫೦೦ ಅಂದರೆ ಆರರಲ್ಲಿ ಒಬ್ಬನು ಮಾತ್ರ ಶಾಲೆಯನ್ನು ಕಲಿಯಲು ಹೋಗುತ್ತಿದ್ದನು. ಈ ಕಡಿಮೆ ಪ್ರಮಾಣದ ಸಾಕ್ಷರತೆಯನ್ನು ಮನದಂದು, ಆಗಿನ ಕಲೆಕ್ಟರನು ತನ್ನ ಜಿಲ್ಲೆಯಲ್ಲಿ ಸುಮಾರು ೧೮೦ ಹೊಸ ಶಾಲೆಗಳು ಬೇಕಾಗುವದೆಂದು ವರದಿ ಮಾಡಿದ್ದನು.

ಈ ಅಂಕಿ-ಸಂಖ್ಯೆಗಳು ಖಚಿತವಾದವುಗಳೇನಲ್ಲ. ಕೇವಲ ಸ್ಥೂಲ ಚಿತ್ರಣವನ್ನು ಕೊಡಲು ನೆರವಾಗುತ್ತವೆ, ಅಷ್ಟೇ. ಅಲ್ಲದೆ, ಇದರಲ್ಲಿ ಮನೆಯಲ್ಲಿಯೇ ಶಿಕ್ಷಣ ಪಡೆಯುತ್ತಿರುವವರು ಸೇರ್ಪಡೆಯಾಗಿಲ್ಲ. ಎಷ್ಟೋ ಜನ ತಂದೆಯರು ತಮ್ಮ ನಿತ್ಯದ ಹೋರೆಯನ್ನು ಮುಗಿಸಿಕೊಂಡು ಸಂಜೆಯ ವೇಳೆಯಲ್ಲಿ ಮಕ್ಕಳಿಗೆ ಮನೆಯಲ್ಲಿಯೆ ಅಕ್ಷರಾಭ್ಯಾಸ ಮಾಡಿಸುತ್ತಿದ್ದರು. ಕೆನರಾದ ಶಾಲೆಗಳಲ್ಲಿ ಇಂಥವರ ಸಂಖ್ಯೆಯೇ ಹೆಚ್ಚು ಇತ್ತೆಂದು ತಿಳಿಯುತ್ತದೆ.

ಇತ್ತ, ಸಾಕ್ಷರತೆಯ ಸಾಮಾನ್ಯ ಮಟ್ಟವನ್ನು ಮೀರಿದ ಉಚ್ಚ ಶಿಕ್ಷಣದ ರೀತಿಯು ಬೇರೊಂದು ತೆರನಾಗಿದ್ದಿತು.

ಆಗಿನ ಕಾಲದ ಉಚ್ಚ ಶಿಕ್ಷಣವೆಂದರೆ ಕಾವ್ಯಶಾಸ್ತ್ರಗಳ ಅಧ್ಯಯನವೇ ಸೈ. ಅದೂ ಕೂಡ ಎಲ್ಲರಿಗೂ ಲಭ್ಯವಿರಲಿಲ್ಲ. ಏಕೆಂದರೆ ಶಾಸ್ತ್ರಾಧ್ಯಯನದ ಗುರುಗಳು ಸಿಕ್ಕುತ್ತಿರಲಿಲ್ಲ. ಬ್ರಾಹ್ಮಣ, ಲಿಂಗಾಯತ, ಜೈನಮಠಗಳಲ್ಲೇನೊ ಈ ಶಿಕ್ಷಣ ದೊರೆಯುತ್ತಿದ್ದಿತಾದರೂ ಇತರ ಕಡೆಗಳಲ್ಲಿ ಶಾಸ್ತ್ರವೇತ್ತ ಪಂಡಿತರ ಮನೆಗಳಲ್ಲಿಯೇ ವಿದ್ಯಾರ್ಥಿಗಳು ಇದ್ದುಕೊಂಡು ಕಲಿಯ ಬೇಕಾಗುತ್ತಿದ್ದಿತು. ಶಬ್ದಶಃ ಗುರು 'ಸೇವೆ'ಯನ್ನು ಮಾಡಿ, ಅವರ ಒಲವನ್ನು ಮೊದಲು ಸಂಪಾದಿಸಬೇಕಾಗಿದ್ದಿತು. ಧಾರವಾಡದಲ್ಲಿ ಈಗಿರುವ ಸಂಸ್ಕೃತ ಪಾಠಶಾಲೆಯಂತಹ ಸಂಸ್ಥೆಗಳು ೧೯ನೆಯ ಶತಮಾನದ ಕೊನೆಯಲ್ಲಿ ಆರಂಭವಾದವುಗಳಲ್ಲದೆ ಆ ಶತಮಾನದ ಪೂರ್ವಾರ್ಧದಲ್ಲಿ ಅಲ್ಲ. ಬಳ್ಳಾರಿಯಲ್ಲಿ ಮಾತ್ರ ಕ್ರಿ.ಶ. ೧೮೦೦ರಲ್ಲಿ ಒಂದು ಸಂಸ್ಕೃತ ಪಾಠಶಾಲೆ ಸ್ಥಾಪಿತವಾಗಿತ್ತು.

ಇವೆಲ್ಲವುಗಳ ಮೂಲಕ ಉಚ್ಚಶಿಕ್ಷಣವನ್ನು ಪಡೆದವರ ಸಂಖ್ಯೆ ಕಡಿಮೆಯಾಗಿದ್ದರೂ, ಜ್ಞಾನದಾಹವು ಕೆಲಮಟ್ಟಿಗೆ ಜನತೆಯಲ್ಲಿ ಜ್ವಲಂತವಾಗಿಯೇ ಇದ್ದಿತು. ಅನೇಕ ಜನ ಕೇವಲ ಜ್ಞಾನ ಸಂಪಾದನೆಯ ಮೇಲಣ ಪ್ರೀತ್ಯಾದರಗಳಿಂದಲೇ ಹೆಚ್ಚಿನ ಜ್ಞಾನವನ್ನು ಪಡೆದು ಪಂಡಿತರಾಗಿದ್ದರು. ಧರ್ಮಶಾಸ್ತ್ರ, ಕಾವ್ಯ, ನಾಟಕ, ವ್ಯಾಕರಣ ಮುಂತಾದವುಗಳಲ್ಲಿ ಪಾರಂಗತರಾದವರಿದ್ದರು. ಫ್ಲೀಟ್, ರೈಸ್ ಮುಂತಾದ ವಿದೇಶೀಯರು ಮಾಡಿದ ಕನ್ನಡದ ಕೆಲಸ ಅತ್ಯುಚ್ಚವೆಂದು ನಾವು ತಿಳಿದಿದ್ದೇವಷ್ಟೆ. ಅವರಿಗೆ ಕನ್ನಡದಲ್ಲಿ ತರಬೇತಿಯನ್ನಿತ್ತವರು ದೇಶೀಯರೇ, ಆದರೆ ವಿದೇಶೀಯರಂತೆ ವ್ಯವಸ್ಥಿತವಾದ ವ್ಯಾಸಂಗ ಬರೆಹ ಇವರಲ್ಲಿ ಇರಲಿಲ್ಲ.

ಪ್ರಾಥಮಿಕ ಮಟ್ಟದ ಶಾಲೆಗಳು ಮಾತ್ರ ಎಲ್ಲಾ ಕಡೆಗೂ ಇದ್ದವು. ಮುಂಬೈ ಪ್ರಾಂತ್ಯದ ಗವರ್ನಿಂಗ್ ಕೌನ್ಸಿಲ್‌ನಲ್ಲಿ ಮಂತ್ರಿಯಾಗಿದ್ದ ಪೆಂಡರ್‌ಗಾಸ್ಟ್(೧೮೨೩) ಒಂದು ಭಾಷಣ ಸಂದರ್ಭದಲ್ಲಿ ಹೀಗೆ ಹೇಳಿದ್ದನು. "ಸದಸ್ಯರಿಗೆಲ್ಲಾ ಗೊತ್ತಿದ್ದ ವಿಷಯವೇ ಎಂದರೆ ಈ ಭಾಗದಲ್ಲಿ ಶಾಲೆ ಇಲ್ಲದ ಒಂದು ಸಣ್ಣ ಹಳ್ಳಿಯೂ ಇಲ್ಲ. ದೊಡ್ಡ ಹಳ್ಳಿ ಅಥವಾ ನಗರಗಳಲ್ಲಿ ಒಂದಕ್ಕಿಂತ ಹೆಚ್ಚು ಶಾಲೆಗಳೂ ಇರುವುದುಂಟು."

ಶಾಲೆಗಳು ಹೆಚ್ಚಳದ ಕಾರಣವೆಂದರೆ ಓದು-ಬರಹ-ಗಣಿತದ ಮಟ್ಟಿಗೆ ಪ್ರತಿಯೊಬ್ಬನೂ ಕಲಿತಿರಬೇಕೆಂಬ ಸಾಮಾಜಿಕ ಪ್ರಜ್ಞೆ, ನಮ್ಮ ನಾಡಿನಲ್ಲಿ ಪುರಾತನ ಕಾಲದಿಂದಲೂ ರೂಢವಾಗಿದ್ದಿತು. ಇನ್ನೊಂದು ಕಾರಣ ಶಿಕ್ಷಕರಿಗಿದ್ದ ಜೀವನ ಸೌಲಭ್ಯಗಳು. ಅದರಿಂದಾಗಿ ಅನೇಕ ಜನರು ಶಿಕ್ಷಕ ವೃತ್ತಿಗೆ ಬಲು ಸುಲಭವಾಗಿ ಇಳಿಯಬಹುದಿತ್ತು.

ವಿದ್ಯಾದಾನವು ಪವಿತ್ರವಾದ ಕಾರ್ಯವೆಂಬುದನ್ನು ಭಾರತೀಯ ಸಂಸ್ಕೃತಿಯು ಎಂದಿನಿಂದಲೂ ಪರಿಭಾವಿಸಿದೆಯಷ್ಟೆ. ಹಣವುಳ್ಳವರು ಆಗಿನ ಶಿಕ್ಷಕನಿಗೆ ಪ್ರತಿ ತಿಂಗಳು ಒಂದರಿಂದ ಎಂಟು ಆಣೆಯ ವರೆಗೆ ಕೊಡುತ್ತಿದ್ದರು. ಕೆಲ ಪ್ರಸಂಗಗಳಲ್ಲಿ ಒಂದು ರುಪಾಯಿವರೆಗೂ ಮಾಸ್ತರನು ಕೇಳುತ್ತಿದ್ದುದುಂಟು. ಆದರೆ ಹುಡುಗರ ಸಂಖ್ಯೆ ಕಡಿಮೆ ಇರುತ್ತಿದ್ದುದರಿಂದಲೂ ಜನತೆ ಒಟ್ಟಿನಲ್ಲಿ ಬಡತನ ಸ್ಥಿತಿಯಲ್ಲಿದ್ದುದರಿಂದಲೂ ಶಿಕ್ಷಕನ ನಗದು ಗಳಿಕೆಯು ತಿಂಗಳಿಗೆ ನಾಲ್ಕು ಅಥವಾ ಐದು ರೂಪಾಯಿ ಮಾತ್ರವೇ ಇದ್ದಿತು. ಆಗಿನ ಪೇಟೆಯ ಧಾರಣೆಗಳೂ ತೀರಾ ಕಡಿಮೆಯದೇ ಇದ್ದುವಾದ್ದರಿಂದ ಅಲ್ಲಿಗಲ್ಲಿಗೆ ಸರಿ ಹೋಗುತ್ತಿತ್ತು.

ಆದರೆ ಇತರ ರೀತಿಗಳಿಂದ ಬರುತ್ತಿದ್ದ ಗಳಿಕೆಯೇ ಶಿಕ್ಷಕನಿಗೆ ಹೆಚ್ಚು ಫಲಪ್ರದ ವಾಗಿದ್ದಿತು. ಅವನಿಗೆ ಸುಗ್ಗಿಯ ದಿನಗಳಲ್ಲಿ ದವಸ, ಧಾನ್ಯ ಯಥೇಚ್ಛವಾಗಿ ಸಿಗುತ್ತಿದ್ದುವು. ಅವನು ಯಾರ ಮನೆಗೇ ಆಗಲಿ ಮಧ್ಯಾಹ್ನದ ಹೊತ್ತು ಹೋದನೆಂದರೆ ಹಕ್ಕಿನಿಂದ ಊಟ ಮಾಡಿ ಬರುವಷ್ಟು ಮರ್ಯಾದೆಯನ್ನು ಜನ ತೋರಿಸುತ್ತಿದ್ದರು. ಹುಣ್ಣಿಮೆ ಅಮಾವಾಸ್ಯದ ದಿನಗಳಲ್ಲಿ ವಿದ್ಯಾರ್ಥಿಗಳಿಂದ ತನ್ನ ಮನೆಯಲ್ಲಿ ಕೆಲಸ ಮಾಡಿಸಿಕೊಂಡರೆ ಪಾಲಕರು ಎಳ್ಳಷ್ಟೂ ತಪ್ಪು ತಿಳಿಯದಿದ್ದ ದಿನಗಳವು! ಬಾಲ್ಯಕಾಲದಲ್ಲಿಯೇ ವಿವಾಹಗಳಾಗುತ್ತಿದ್ದ ಆಗಿನ ದಿನಗಳಲ್ಲಿ ವಿದ್ಯಾರ್ಥಿಯ ಮದುವೆಯಂಥ ಪ್ರಸಂಗಗಳಲ್ಲಿ ಈ ವಿದ್ಯಾಗುರುವಿಗೆ ಧಾರಾಳವಾಗಿ ಉಡುಗೊರೆ ಸಲ್ಲುತ್ತಿದ್ದಿತು.

ಆಗಿನ ಶಾಲೆಗಳಲ್ಲಿ ಏನನ್ನು ಕಲಿಸುತ್ತಿದ್ದರು? ಬಳ್ಳಾರಿಯಲ್ಲಿ ಕಲೆಕ್ಟರನಾಗಿದ್ದ ಕ್ಯಾಂಬೆಲ್ ಎಂಬವನು ಮನ್ರೋ ಗವರ್ನರನ ಪ್ರಶ್ನಾವಳಿಗೆ ಕೊಟ್ಟ ಉತ್ತರದಲ್ಲಿ ಇದರ ಸ್ಪಷ್ಟ ವರ್ಣನೆ ಇದೆ. ಅವನ ಪ್ರಕಾರ, 'ನಮ್ಮಲ್ಲಿಯ ಮಕ್ಕಳ ವಿದ್ಯಾಭ್ಯಾಸವು ಅವರ ಐದನೆಯ ವರುಷದಿಂದಲೇ ಆರಂಭವಾಗುತ್ತಿದ್ದಿತು. ಒಂದು ಒಳ್ಳೆಯ ಮುಹೂರ್ತದ ದಿವಸ ಮಗುವಿಗೆ ಹೊಸ ಬಟ್ಟೆ ಹಾಕಿ, ಗಣಪತಿ ಇಲ್ಲವೆ ಕುಲದೇವತಾ ಮೂರ್ತಿ ಅಥವಾ ಚಿತ್ರದ ಎದುರಿಗೆ ಕೂಡ್ರಿಸುತ್ತಿದ್ದರು. ಶಿಕ್ಷಕ, ನೆರೆಮನೆಯವರು ಮತ್ತು ಇತರ ಮಕ್ಕಳು ಇವರ ಸಮ್ಮುಖದಲ್ಲಿ ಪೂಜೆ ವಗೈರೆ ನಡೆದ ಮೇಲೆ, ಆ ಮಗುವಿನ ಬೆರಳನ್ನು ಹಿಡಿದು ಅಕ್ಕಿ ಅಥವಾ ಬೇರೆ ಧಾನ್ಯದ ಮೇಲೆ ಶ್ರೀಕಾರ ಮತ್ತು ಒಂದೆರಡು ದೇವತಾಕ್ಷರಗಳನ್ನು ಬರೆಯಿಸುತ್ತಿದ್ದರು. ಅದೇ ಅಕ್ಷರ ಮುಹೂರ್ತ. ಅನಂತರ ಶಿಕ್ಷಕನಿಗೆ ವಸ್ತ್ರ ಇತ್ಯಾದಿಗಳ ಉಡುಗೊರೆ; ನೆರೆದವರಿಗೆ ಪ್ರಸಾದ ವಿನಿಯೋಗ.

ಮರುದಿನದಿಂದ ಆ ಮಗುವು ಶಾಲೆಗೆ ಹೋಗತೊಡಗುತ್ತಿದ್ದ. ಪ್ರತಿಯೊಬ್ಬನೂ ಶಾಲೆಗೆ ಬೇಗ ತಲುಪಬೇಕು. ಶಾಲೆಯಲ್ಲಿ ಮೊತ್ತ ಮೊದಲು ಬಂದ ಹುಡುಗನ ಕೈಮೇಲೆ 'ಸರಸ್ವತಿ' ಎಂದು ಬರೆಯಲಾಗುತ್ತಿದ್ದಿತು. ಎರಡನೆಯವನ ಕೈಮೇಲೆ ಸ್ವಸ್ತಿಕದ ಚಿಹ್ನೆ. ಮೂರನೆಯವನಾಗಿ ಬಂದವನ ಕೈಮೇಲೆ ಒಂದು ಪೆಟ್ಟು, ೪ನೆಯವನಿಗೆ ೨ ಪೆಟ್ಟುಗಳು, ೫ನೆಯವನಿಗೆ ೩ ಪೆಟ್ಟು..... ಹೀಗೆಯೇ ಆ ಸಂಖ್ಯೆ ಮುಂದುವರಿಯಬೇಕು!

ಈಗಿನಂತೆ ಒಂದರಿಂದ ಮುಲ್ಕೀವರೆಗೆ ನಿರ್ದಿಷ್ಟವಾದ ಕ್ಲಾಸುಗಳಿರಲಿಲ್ಲ. ಹಿರಿಯ ವಿದ್ಯಾರ್ಥಿಗಳು ಪಾಠ ಹೇಳುವುದೊಂದು ಆಗಿನ ಕಾಲದ ವಿಶೇಷತೆ. ಹೇಳಿದ ಪಾಠಗಳನ್ನು ತಪ್ಪಿಸಿದವನಿಗೆ 'ಊಟಾಬೈಸಿನ' ಶಿಕ್ಷೆ, ಇಲ್ಲವೆ ಜಂತಿಯನ್ನು ಹಿಡಿದು ಜೋತು ಬೀಳಬೇಕು! ಅಂಗೈ ಮತ್ತು ಬೆನ್ನ ಮೇಲಿನ ಪೆಟ್ಟುಗಳಂತೂ ಸರಿಯೇ.

ಇಂಥ ಶಾಲೆಗಳಲ್ಲಿ ಮೊದಲಿಗೆ ಕಲಿಸುವ ವಿಷಯಗಳೆಂದರೆ, ಅಕ್ಷರ ಬಳಕೆ, ವಾಚನ ಮತ್ತು ಲೇಖನ. ಇದಕ್ಕಾಗಿ ಉಸುಕಿನ ಅಥವಾ ಹುಡಿಮಣ್ಣಿನ ಗುಪ್ಪೆ ಹಾಕಿ ಓದುಬರಹದ ಪಾಠ ಮಾಡಿಸುತ್ತಿದ್ದರು. ಇದಕ್ಕೆ ಧೂಳಾಕ್ಷರ ಅಭ್ಯಾಸ ಎಂದು ಹೆಸರು, ಜೊತೆಗೆ ಅಂಕಿ, ಮಗ್ಗಿ, ಬಾಯಿಲೆಕ್ಕಗಳಂತೂ ಸರಿಯೇ.

ಓದಲು ಬರತೊಡಗಿದ ಮೇಲೆ ಬೇರೆ ಬೇರೆ ಹಸ್ತಾಕ್ಷರಗಳುಳ್ಳ ಕಾಗದಗಳನ್ನು ಮಾಸ್ತರನೇ ಅವರಿವರಿಂದ ಒಟ್ಟು ಮಾಡಿ ಹುಡುಗರಿಂದ ಅದನ್ನು ಓದಿಸುತ್ತಿದ್ದರು. ಆವಾಗ ಮುದ್ರಿತ ಪುಸ್ತಕಗಳು ಇದ್ದುವೆಲ್ಲಿ! ವಿದ್ಯಾರ್ಥಿಗಳಿಗೆ ನೀತಿಕಥೆಗಳನ್ನು ಹೇಳುವುದೂ, ಅವರಿಂದ ಕವಿತೆಗಳನ್ನು ಓದಿಸುವುದೂ ಆಗಿನ ಶಿಕ್ಷಣದ ಹೆಚ್ಚಿನ ಅಂಶಗಳಾಗಿದ್ದುವು.

ಆದರೆ ಒಟ್ಟಿನ ಶಿಕ್ಷಣ ಪದ್ಧತಿಯ ಬಗ್ಗೆ ಕ್ಯಾಂಬೆಲ್ ತನ್ನ ಮೆಚ್ಚುಗೆಯನ್ನೇ ಸೂಚಿಸಿದ್ದಾನೆ.

ಪೂರ್ವೋಕ್ತ ಪೆಂಡರ್‌ಗಾಸ್ಟನೂ ಇದೇ ತೆರನಾದ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾನೆ. "ಈ ಶಾಲೆಗಳಲ್ಲಿ ಓದು-ಬರಹ-ಗಣಿತ ಈ ಪ್ರಾಥಮಿಕ ವಿಷಯಗಳನ್ನು ಹೆಚ್ಚಿನ ವೆಚ್ಚವಿಲ್ಲದೇ ಕಲಿಸಲಾಗುತ್ತದೆ. ಕಲಿಸುವ ಪದ್ಧತಿಯೂ ಅತ್ಯಂತ ಸರಳ; ಅಷ್ಟೇ ಪರಿಣಾಮಕಾರಿಯೂ ಹೌದು. ಇಲ್ಲಿಯ ಸಾಮಾನ್ಯ ರೈತರು ಅಥವಾ ವ್ಯಾಪಾರಿಗಳು ಲೆಕ್ಕದಲ್ಲಿ ಇಷ್ಟೊಂದು ಚಾಕಚಕ್ಯತೆಯಿಂದ ವ್ಯವಹರಿಸುತ್ತಾರಲ್ಲ, ಅದೇ ಮಟ್ಟದ ನಮ್ಮ ದೇಶದ ಜನರಿಗಿಂತ ಇವರು ಈ ವಿಷಯದಲ್ಲಿ ಮೇಲ್ಮೆಯನ್ನು ಪಡೆದರೆಂದೇ ಹೇಳಬೇಕು."

ಇಂಥ ಶಿಕ್ಷಣ ಕ್ರಮವು ಮುಂಬಯಿ ಪ್ರಾಂತ್ಯದಲ್ಲಿಯೇ ಇದ್ದಿತಷ್ಟೆ. ಆದರೆ ಕರ್ನಾಟಕ ಭಾಗದಲ್ಲಿ ಕಂಡುಬರುತ್ತಿದ್ದ ಒಂದು ವೈಶಿಷ್ಟ್ಯವೆಂದರೆ ಕನ್ನಡಿಗರ ಕಾವ್ಯಪ್ರೀತಿ! ನಮ್ಮಲ್ಲಿಯ ಹಳ್ಳಿ ಹಳ್ಳಿಗಳಲ್ಲಿ ಕೂಡಾ ಜೈಮಿನಿ, ಕುಮಾರವ್ಯಾಸ ಭಾರತ, ಷಡಕ್ಷರಿಯ ರಾಜಶೇಖರ-ವಿಳಾಸ ಮುಂತಾದವುಗಳ ಪಠಣವು ನಿಯಮಿತವಾಗಿ ನಡೆಯುತ್ತಿತ್ತಷ್ಟೆ. ಶಾಲಾ ಮಾಸ್ತರರು ಇಂಥ ಕಾರ್ಯಕ್ರಮವನ್ನು ನಡೆಸುವುದರಲ್ಲಿ ಮುಖ್ಯರಾಗಿದ್ದರು.

ಮೇಲಿನ ಕಾವ್ಯಗಳಲ್ಲದೆ, ಬಸವಪುರಾಣ, ಕನಕದಾಸರ ಹರಿಭಕ್ತಿಸಾರ, ಸರ್ವಜ್ಞ ತ್ರಿಪದಿಗಳು, ಸೋಮೇಶ್ವರ ಶತಕ - ಈ ಕೃತಿಗಳ ಉಲ್ಲೇಖವೂ ಸರಕಾರೀ ವರದಿಗಳಲ್ಲಿ ಕಂಡುಬರುತ್ತದೆ. ಶಾಲೆಗಳಲ್ಲಿ ಮಕ್ಕಳಿಗೆ ಇವನ್ನು ಕಲಿಸುತ್ತಿದ್ದರೆಂದೂ, ಇದು ಮುಂಬಯಿ ಕರ್ನಾಟಕ ಭಾಗದ ವೈಶಿಷ್ಟ್ಯವೆಂದೂ ಅಧಿಕಾರಿಗಳು ಉಲ್ಲೇಖಿಸಿದ್ದಾರೆ.

ಮೇಲೆ ಕೊಡಲಾದ ದೇಶೀ (ಗಾವಠಿ) ಶಿಕ್ಷಣ ಕ್ರಮವು ಬಳ್ಳಾರಿ ಉತ್ತರ ಕರ್ನಾಟಕಗಳಲ್ಲಿದ್ದಂತೆ ಆಗಿನ ಮೈಸೂರು ಸಂಸ್ಥಾನದಲ್ಲಿಯೂ ಅದೇ ಸ್ವರೂಪದಲ್ಲಿದ್ದಿತು.

ಆಗಿನ ಕಾಲದ ಶಿಕ್ಷಣಾವಧಿಯು ಕೇವಲ ೩ ಅಥವಾ ೪ ವರ್ಷದ್ದು, ದನ ಕಾಯುವಷ್ಟು ದೊಡ್ಡವನಾದರೆ ಸಾಕು, ರೈತನು ತನ್ನ ಮಗನನ್ನು ಶಾಲೆ ಬಿಡಿಸುತ್ತಿದ್ದ. ಇತ್ತ ವ್ಯಾಪಾರಿಯು ಬೇರೀಜು ತೇರಿಜು ಮಾಡಬಂದರೆ ಸಾಕು ಎಂಬಷ್ಟರ ಮಟ್ಟಿಗೆ ಕಲಿತ ಕೂಡಲೇ ಶಾಲೆ ಬಿಡಿಸಿ ಕುಲಕಸಬಿಗೆ ಹಚ್ಚುತ್ತಿದ್ದನು! ಹಾಗೆಂದು ಬಂಕಾಪುರದಲ್ಲಿದ್ದ ಅಧಿಕಾರಿಯು ವರದಿ ಮಾಡಿ, ಈ ಬಗ್ಗೆ ತನ್ನ ತೀವ್ರ ಅಸಮಾಧಾನವನ್ನು ಹೇಳಿಕೊಂಡಿದ್ದಾನೆ.

ಇವೆಲ್ಲ ವಿವರಗಳಿಂದ, ಆಗಿನ ಮಕ್ಕಳ ವಿದ್ಯಾರ್ಜನೆಯು ತೀರ ಅಲ್ಪವೆಂದು ಅನಿಸದಿರದು. ಆದರೆ ಆ ದಿನಗಳಲ್ಲಿ ಅಷ್ಟು ವಿದ್ಯೆ ಸಾಕಾಗುತ್ತಿತ್ತು. ಅದು ವ್ಯಾಪಕವಾಗಿ ಇರದಿದ್ದರೂ ಸಾರ್ವತ್ರಿಕವಾಗಿ ಇದ್ದಿತು ಎಂಬುದು ವಿಶೇಷ ಮಹತ್ವದ್ದು. ಉಚ್ಚ ಶಿಕ್ಷಣವೇನೋ ಕೆಲವರಿಗೆ ಮೀಸಲಾಗಿದ್ದಿರಬಹುದು. ಆದರೆ ಅಕ್ಷರ - ಅಂಕಿಗಳ ಪ್ರಾರಂಭಿಕ ಶಿಕ್ಷಣವನ್ನು ಬಡವ ಬಲ್ಲಿದ ಭೇದವಿಲ್ಲದೆ ಎಲ್ಲ ವರ್ಗದವರೂ ಪಡೆಯಲು ಬಯಸುತ್ತಿದ್ದರು.

ಬ್ರಿಟಿಶ್ ಅಧಿಕಾರಿಗಳಿಗೆ ಮಾತ್ರ ಇಲ್ಲಿಯ ಶಿಕ್ಷಣವು ತೀರ ಕೆಳಮಟ್ಟದ್ದೆಂದು ಕಂಡಿತು. ಒಬ್ಬನಂತೂ 'Education is at the lowest web in this Collectorate" ಎಂದಿದ್ದಾನೆ. ಅವನೇ ರಾಣಿಬೆನ್ನೂರ ವಿಭಾಗದ ಅಸಿಸ್ಟೆಂಟ್ ಕಲೆಕ್ಟರನಾಗಿದ್ದ ಸ್ಟೀವನ್‌ಸನ್. ಇತರ ಅಧಿಕಾರಿಗಳಂತೆ ಸಂಖ್ಯಾನಿಷ್ಠವಾದ ವರದಿಯನ್ನೊಪ್ಪಿಸಿ ಆತನು ಸುಮ್ಮನೆ ಉಳಿಯಲಿಲ್ಲ. ಆಗಿನ ಶಿಕ್ಷಣಕ್ರಮದ ಪೂರ್ವಾಪರಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿದನು.

"ಇಡೀ ಜನಸಂಖ್ಯೆಯ ಪ್ರಮಾಣದಿಂದ ತೀರ ಕೆಲವು ಜನ ಹುಡುಗರು ಮಾತ್ರ ಶಾಲೆಗೆ ಹೋಗುತ್ತಾರೆ. ಈ ಕೆಲವೇ ಮಕ್ಕಳು ಕಲಿಯುವುದು ಮತ್ತಷ್ಟು ಅಲ್ಪ ಪ್ರಮಾಣದ್ದು. ಶಿಕ್ಷಣದ ಶೋಚನೀಯ ಅವಸ್ಥೆಗೆ ಇವೆರಡು ದೊಡ್ಡ ನಿದರ್ಶನಗಳಾಗಿವೆ. ಇಲ್ಲಿಯ ಜನರಿಗೆ ಶಿಕ್ಷಣ ಬೇಡವೆಂದೇನೂ ಅಲ್ಲ. ಜನತೆಯ ವಿಶೇಷತಃ ರೈತಾಪಿ ವರ್ಗದ ಬಡತನವೇ ಇದರ ಕಾರಣವಾಗಿದೆ.

ರೈತನು ಶಾಲಾ ಮಾಸ್ತರನಿಗೆ ಫೀ ಕೊಡಬೇಕಲ್ಲದೇ, ಚಿಕ್ಕ ವಯಸ್ಸಿನಲ್ಲಿ ತನ್ನ ಹೊಲಗೆಲಸಕ್ಕೆ ಉಪಯೋಗ ಬೀಳುವ ಹುಡುಗನ ಕೆಲಸವನ್ನು ಆತನು ಕಳೆದುಕೊಳ್ಳಬೇಕಾಗುತ್ತದೆ." (೧೮೨೪)

ಸ್ಟೀವನ್‌ಸನ್ ಹೇಳಿದ ಇವೇ ಮೊದಲಾದ ಅಂಶಗಳನ್ನು ಎತ್ತಿ ಹಿಡಿದು, ಧಾರವಾಡ ಸುಭೆಯಲ್ಲಿ ಆಗ ಪೊಲಿಟಿಕಲ್ ಏಜೆಂಟ್ ಆಗಿದ್ದ 'ಬೇಬರ್' ವಿದ್ಯಾರ್ಥಿಗಳಿಂದ ೪-೮ ಆಣೆಯ ಫೀ ವಸೂಲ ಮಾಡದೇ ಸರಕಾರೀ ಶಿಕ್ಷಕರಿಗೆ ಪಗಾರ ಕೊಡಬೇಕು; ಮಕ್ಕಳ ಶಿಕ್ಷಣವು ಹೀಗೆ ಸಂಪೂರ್ಣವಾಗಿ ಉಚಿತವಾಗಿರಬೇಕು ಎಂದು ಸೂಚಿಸಿದನು. ಸ್ಟೀವನ್‌ಸನ್ ಈ ವಿಷಯದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದನು. ರೈತರು ಸುಗ್ಗಿಯ ದಿನಗಳಲ್ಲಿ ಮಕ್ಕಳನ್ನು ಶಾಲೆ ಬಿಡಿಸಿ, ಹೊಲಗೆಲಸಕ್ಕೆ ಹಚ್ಚುತ್ತಿದ್ದರಷ್ಟೆ. ಅದೇನೂ ಸಹಜವೇ. ಆದರೆ ಹಾಗೆ ಮಕ್ಕಳನ್ನು ಶಾಲೆಗೆ ಕಳಿಸುವುದರಿಂದ ರೈತನಿಗೆ ಆಗುವ ಹಾನಿಯನ್ನು ತುಂಬಿಕೊಡುವ ದೃಷ್ಟಿಯಿಂದ ಸರಕಾರವು ಪರಿಹಾರ ರೂಪದ ಹಣವನ್ನು ಕೊಡಬೇಕು' ಎಂದನು.

ಈ ಪ್ರಗತಿಪರ ಸೂಚನೆಯು ಪ್ರಚಲಿತ ಕಾಲದಲ್ಲಿ ಕೂಡಾ ಅನುಷ್ಠಾನದಲ್ಲಿ ತರಲು ಅಸಾಧ್ಯವಾದುದು. ೧೮೦ ವರ್ಷಗಳ ಹಿಂದೆಯಂತೂ ಅದು ಅಶಕ್ಯವೇ ಆಗಿದ್ದಿತು.

ವರದಿ ಮಾಡಿದ ಎಲ್ಲ ಅಧಿಕಾರಿಗಳೂ ಒಕ್ಕೊರಲಿನಿಂದ ಸರಕಾರದ ಗಮನಕ್ಕೆ ತರಬಯಸಿದ್ದ ಒಂದು ಕೊರತೆಯೆಂದರೆ, ಓದಲಿಕ್ಕೆ ಪುಸ್ತಕಗಳೇ ಇಲ್ಲದಿರುವುದು. ಇಂದು ಮುದ್ರಿತ ಪುಸ್ತಕಗಳ ವಿಷಯವು ದಿನಬಳಕೆಯ ಮಾತಾಗಿ ಬಿಟ್ಟಿರುವುದರಿಂದ ಅವು ಇಲ್ಲದೇ ಇದ್ದಾಗಿನ ಕತ್ತಲೆಯ ಸ್ಥಿತಿಯನ್ನು ಊಹಿಸಿಯೇ ತಿಳಿಯಬೇಕು. ಪಾಠಕ್ಕೆ ಪುಸ್ತಕಗಳು ಅತ್ಯವಶ್ಯ ಎಂಬುದರ ಸ್ಪಷ್ಟ ತಿಳುವಳಿಕೆ ಅಧಿಕಾರಿಗಳಿಗಿದ್ದಿತು. ರೋಣ ವಿಭಾಗದ ಅಸಿಸ್ಟೆಂಟ್ ಕಲೆಕ್ಟರನ ಈ ಹೇಳಿಕೆಯನ್ನು (೧೮೨೪) ಗಮನಿಸುವುದು. 'The Circar..... should provide Canarese and Maratta books, by which every youth will receive a better education than at present."

ಬ್ರಿಟಿಶ್ ಅಧಿಕಾರಿಗಳು ಪಾಶ್ಚಿಮಾತ್ಯ ಶಿಕ್ಷಣದ ಬಗ್ಗೆ ಕ್ರಮ ಕೈಗೊಳ್ಳುವ ಮೊದಲೇ ಮಿಶನರಿಗಳು ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಿದ್ದರು. ಇಲ್ಲಿಯ ಜನರಿಗೆ ಯುರೋಪೀಯ ಶಿಕ್ಷಣವನ್ನು ಕೊಟ್ಟಲ್ಲಿ ಕ್ರೈಸ್ತಮತದ ಬಗ್ಗೆ ಅವರಿಗೆ ಹೆಚ್ಚು ತಿಳಿವಳಿಕೆ ಮಾಡಿಕೊಡುವುದು ಸುಲಭ ತಾನೇ. ಈ ಕಾರಣವಲ್ಲದೆ ಮತಾಂತರ ಹೊಂದಿದವರಿಗಾಗಿ ಇಂಥ ಶಾಲೆಗಳು ಅಗತ್ಯವೇ ಆಗಿದ್ದವು.

೧೮೧೩ರಲ್ಲಿ ಬ್ರಿಟಿಶ್ ಪಾರ್ಲಿಯಾಮೆಂಟ್ ಮಿಶನರಿಗಳಿಗೆ ಧರ್ಮಪ್ರಚಾರದ ಸ್ವಾತಂತ್ರ್ಯವನ್ನು ಕೊಟ್ಟಂದಿನಿಂದ ಮಿಶನರಿ ಸಂಸ್ಥೆಗಳು ವಿಶೇಷತಃ ಪ್ರೊಟೆಸ್ಟೆಂಟ್ ಮಿಶನರಿಗಳು ಹೆಚ್ಚು ಸಂಖ್ಯೆಯಲ್ಲಿ ಆಗಮಿಸಿ, ತಮ್ಮ ಮತಪ್ರಚಾರದ ಜೊತೆಗೆ ಶಾಲಾ ಸ್ಥಾಪನೆಗೂ ಮನಸ್ಸುಗೊಟ್ಟರು.

ಕರ್ನಾಟಕದಲ್ಲಿ ಶಾಲೆಗಳನ್ನು ಮೊದಲಿಗೆ ಸ್ಥಾಪಿಸಿದವರೆಂದರೆ ಲಂಡನ್ ಮಿಶನರಿ ಸೊಸೈಟಿಯವರು. ಬಳ್ಳಾರಿ ಮತ್ತು ಬೆಳಗಾವಿ ಅವರ ಮುಖ್ಯ ಠಾಣೆಗಳಾಗಿದ್ದುವು. ಅನಂತರ ಬಂದವರೆಂದರೆ ಬಾಸೆಲ್ ಮಿಶನ್ನಿನವರು (೧೮೩೪). ಅವರ ಮುಖ್ಯ ಕಾರ್ಯಕ್ಷೇತ್ರ ಮಂಗಳೂರು

ತಾನೇ, ಧಾರವಾಡದಲ್ಲಿ ಅವರ ಮೊದಲ ಶಾಲೆಯು ೧೮೩೬ರಲ್ಲಿ ಸ್ಥಾಪಿತವಾಯಿತು. ಹುಬ್ಬಳ್ಳಿ, ಗುಳೇದಗುಡ್ಡ, ಗದಗ ಈ ಊರುಗಳಲ್ಲಿಯೂ ಆ ಮುಂದೆ ಶಾಲೆಗಳನ್ನು ಸ್ಥಾಪಿಸಿದರು.

ಮಿಶನರಿ ಶಾಲೆಗಳಲ್ಲಿ ಓದು-ಬರಹ-ಗಣಿತ ಜ್ಞಾನದ ಜೊತೆಗೆ ಪ್ರಪಂಚ ಪರಿಚಯ, ಯುರೋಪದ ವೈಜ್ಞಾನಿಕ ವಿಷಯ ಜ್ಞಾನ ಇವುಗಳಿಗೆ ಪ್ರಾಶಸ್ತ್ಯ ಕೊಡಲಾಗುತ್ತಿತ್ತು. ಮತಪ್ರಸಾರವೇ ಅವರ ಮೂಲ ಉದ್ದೇಶ ತಾನೇ. ಆದುದರಿಂದ ಬೈಬಲ್ ವಾಚನ ಸ್ತೋತ್ರಗಳ ಪಠಣ ಹಾಗೂ ಬೈಬಲ್ಲಿನ ಕಥಾ ನಿರೂಪಣೆ ಇವು ಅವರ ಪಾಠಕ್ರಮದಲ್ಲಿ ತಪ್ಪದೇ ಇರುತ್ತಿದ್ದುವು. ಇದರಿಂದಾಗಿ ಸಾಮಾನ್ಯ ಜನತೆಯು ಇವರ ಶೈಕ್ಷಣಿಕ ಚಟುವಟಿಕೆಯ ಬಗ್ಗೆ ಅನಾಸ್ಥೆಯನ್ನು ತಾಳಿದ್ದಿತು.

ಸರಕಾರಕ್ಕೆ ಈ ವಿಷಯದಲ್ಲಿ ಧರ್ಮಸಂಕಟ! ಒಂದೆಡೆ ತಮ್ಮದೇ ಮತವನ್ನು ಪ್ರಚಾರ ಮಾಡಬಂದ ಸ್ವಬಾಂಧವರ ಬಗ್ಗೆ ಆಂತರ್ಯದ ಕಳಕಳಿ. ಹಾಗೆಂದು ಇವರಿಗೆ ಪ್ರೋತ್ಸಾಹ ಕೊಟ್ಟುದಾದರೆ, ಹಿಂದೂ-ಮುಸಲ್ಮಾನರಿಬ್ಬರೂ ಪ್ರಕ್ಷುಬ್ಧರಾಗಿ ದೇಶದಲ್ಲಿ ಅಶಾಂತಿ ಹಬ್ಬೀತಲ್ಲ ಎಂಬ ಹೆದರಿಕೆ ಇನ್ನೊಂದೆಡೆ.

ಈ ಹಿನ್ನೆಲೆಯಲ್ಲಿ ಸರಕಾರವು ಕ್ರಿಶ್ಚಿಯನ್ ಧರ್ಮಪ್ರಸಾರ ಕಾರ್ಯದಲ್ಲಿ ತನ್ನ ಅಲಿಪ್ತ ನೀತಿಯನ್ನು ಅಧಿಕೃತವಾಗಿ ಸಾರಿತು. ಆದರೆ ಕೆಲವು ಕಲೆಕ್ಟರ್ ಜನರು ಈ ಸರಕಾರೀ ಧೋರಣೆಗೆ ಬದ್ಧರಾಗಿದ್ದುಕೊಂಡೂ ಮಿಶನರಿಗಳ ಚಟುವಟಿಕೆಗಳನ್ನು ಅಪ್ರತ್ಯಕ್ಷವಾಗಿ ಪ್ರೋತ್ಸಾಹಿಸಿದುದು ಅದೆಷ್ಟೋ ಸಲ. ಎಲ್‌ಫಿನ್‌ಸ್ಟನ್‌ನಂತಹವರು ಮಾತ್ರ ಈ ಅಲಿಪ್ತನೀತಿಯನ್ನು ಚಾಕಚಕ್ಯತೆಯಿಂದ ಕಾಯ್ದುಕೊಳ್ಳಬಯಸಿದರು. ಇಷ್ಟೇ ಅಲ್ಲ, ಮಿಶನರಿಗಳ ಶಾಲೆಯ ಚಟುವಟಿಕೆಗಳು ಹೀಗೆ ಬೆಳೆದದ್ದಾದರೆ ಹಿಂದೂಗಳ ಅನಾಸ್ಥೆಯೂ ಆಮೇಲೆ ತೀವ್ರತರ ತಿರಸ್ಕಾರಕ್ಕೆ ಎಡೆಗೊಟ್ಟು, ಬ್ರಿಟಿಶರ ಆಡಳಿತದ ಭದ್ರತೆಗೆ ಪೆಟ್ಟು ತಗಲೀತೆಂದು ಅವನು ಭಾವಿಸಿದ್ದನು. ಅಂತೆಯೇ ಮಿಶನರಿಗಳು ಮುಂದುವರಿಯುವ ಮೊದಲೇ ಸರಕಾರವು 'ಜಾತ್ಯತೀತ' ಶಾಲೆಗಳನ್ನು ತೆರೆಯಬೇಕು ಎಂಬ ಧೋರಣೆಯನ್ನು ಅವನು ಇಟ್ಟುಕೊಂಡಿದ್ದನು.

ಸತ್ಕುಲಪ್ರಸೂತನಾದ ಈ ಮೇಧಾವಿಯು ಉಚ್ಚ ಸಂಸ್ಕಾರ ಹೊಂದಿದವನಾಗಿದ್ದನು. ಎರಡು ಬಾರಿ ಗವರ್ನರ್ ಜನರಲ್ ಹುದ್ದೆಯನ್ನು ನಿರಾಕರಿಸಿ ನಿಸ್ಪೃಹತೆಯನ್ನು ತೋರಿದ್ದ. ಈ ಮುತ್ಸದ್ದಿಯು ಉದಾರ ಮತವಾದಿಯೂ ಆಗಿದ್ದನು. ಪಶ್ಚಿಮ ಭಾರತದಲ್ಲಿ ಹೊಸ ಶಿಕ್ಷಣದ ಅಸ್ತಿವಾರವನ್ನು ಅವನೇ ಹಾಕಿದವ ಎಂಬ ಮಾತನ್ನು ಅವನ ಎಂಥ ಟೀಕಾಕಾರರೂ ಒಪ್ಪಿದ್ದಾರೆ.

(೯) ಗವರ್ನರ್ ಎಲ್‌ಫಿನ್‌ಸ್ಟನ್ನನ ಹೊಸ ಶಿಕ್ಷಣ ಸೂತ್ರಗಳು

ಕ್ರಿ.ಶ. ೧೮೧೫ರಷ್ಟು ಹಿಂದೆಯೇ ಮುಂಬಯಿಯಲ್ಲಿ ಬಾಂಬೆ ಎಜ್ಯುಕೇಶನ್ ಸೊಸೈಟಿಯು ಸ್ಥಾಪಿತವಾಗಿದ್ದಿತು. ಅದರ ಉದ್ದೇಶ ಕಡು ಬಡವರ ಹಾಗೂ ಯುದ್ಧದಲ್ಲಿ ಸತ್ತ ಸೈನಿಕರ ಮಕ್ಕಳಿಗೆ ಶಿಕ್ಷಣವನ್ನು ಕೊಡಲೆಂಬುದು. ಈ ಸಂಸ್ಥೆಯ ಕಾರ್ಯಕ್ಷೇತ್ರವು ಮುಂಬಯಿ ನಗರಕ್ಕೆ ಮಾತ್ರ ಸೀಮಿತವಾಗಿದ್ದಿತು. ಎಲ್‌ಫಿನ್‌ಸ್ಟನ್ ಅಧಿಕಾರ ವಹಿಸಿದ ಮರುವರ್ಷವೇ ಅದನ್ನು ವಿಸ್ತರಿಸಿ, ಆ ಸಂಸ್ಥೆಯ ಮೂಲಕ ತನ್ನ ಶಿಕ್ಷಣ ಯೋಜನೆಯನ್ನು ರೂಪಿಸತೊಡಗಿದನು. ದೇಶೀ

ಭಾಷೆಗಳಲ್ಲಿ ಪುಸ್ತಕಗಳನ್ನು ಒದಗಿಸಬೇಕು ಮತ್ತು ಹೆಚ್ಚು ಶಾಲೆಗಳನ್ನು ತೆರೆಯಬೇಕು ಎನ್ನುವ ಉದ್ದೇಶದಿಂದ ಇದರ ಅಂಗಸಂಸ್ಥೆಯೊಂದನ್ನು ಅಲ್ಲಿಯೇ ಸ್ಥಾಪಿಸಲಾಯಿತು. (೧೮೨೨) ಅದುವೇ ಮುಂದೆ ಬಾಂಬೆ ನೇಟಿವ್ ಎಜ್ಯುಕೇಶನ್ ಸೊಸೈಟಿ ಎಂಬ ನಿರ್ದಿಷ್ಟ ಸಂಸ್ಥೆಯಾಗಿ ಕೆಲಸ ಮಾಡತೊಡಗಿತು. (೧೮೨೭).

ಈ ಅರ್ಧ ಸರಕಾರಿ ಸಂಸ್ಥೆಗಳಿಗೆ ಎಲ್‌ಫಿನ್‌ಸ್ಟನ್ ಪೋಷಕನಾಗಿದ್ದನು; ದೇಶೀ ಮತ್ತು ಬ್ರಿಟಿಶ್ ಸದಸ್ಯರಿರುವ ಕಮಿಟಿಗಳು ಅವುಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದವು. ಈ ಸಂಸ್ಥೆಗಳ ಮೂಲಕ ಎಲ್‌ಫಿನ್‌ಸ್ಟನ್ ಸಾಧಿಸಬೇಕೆಂದಿದ್ದ ಯೋಜನೆಗಳು ಇಂತಿದ್ದುವು.

೧. ದೇಶೀ ಶಾಲೆಗಳಲ್ಲಿಯ ಶಿಕ್ಷಣ ಪದ್ಧತಿಯನ್ನು ಸುಧಾರಿಸಬೇಕು ಮತ್ತು ಶಾಲಾ ಸಂಖ್ಯೆಯನ್ನು ಹೆಚ್ಚಿಸಬೇಕು.

೨. ಶಾಲೆಗಳಿಗೆ ಪಠ್ಯಪುಸ್ತಕಗಳನ್ನು ಒದಗಿಸಬೇಕು.

೩. ಕೆಳಗಿನ ವರ್ಗದ ಜನರು ಈ ಶಾಲೆಗಳ ಪ್ರಯೋಜನ ಪಡೆಯುವಂತೆ ಅವರಿಗೆ ಉತ್ತೇಜನವೀಯಬೇಕು.

೪. ಉಚ್ಚ ಶಿಕ್ಷಣವನ್ನು ಕೊಡುವುದಕ್ಕಾಗಿಯೂ ಯುರೋಪದ ಶಾಸ್ತ್ರೀಯ ವಿಷಯಗಳನ್ನು ಕಲಿಸುವುದಕ್ಕಾಗಿಯೂ ಬೇರೆ ಶಾಲೆಗಳನ್ನು ಸ್ಥಾಪಿಸಬೇಕು.

೫. ದೇಶೀ ಭಾಷೆಗಳಲ್ಲಿ ನೀತಿಪರವಾದ ಮತ್ತು 'ದೇಹಾರೋಗ್ಯ' ವಿಷಯಕ ಪುಸ್ತಕಗಳನ್ನು ತಯಾರಿಸಿ, ಅನುವಾದಿಸಿ ಪ್ರಕಟಿಸಬೇಕು.

೬. ಇಂಗ್ಲಿಷ್ ಸಾಹಿತ್ಯವನ್ನೂ ವೈಜ್ಞಾನಿಕ ವಿಷಯಗಳನ್ನೂ ಅಭ್ಯಾಸ ಮಾಡಬೇಕೆನ್ನುವವರ ಸಲುವಾಗಿ ಉಚ್ಚಮಟ್ಟದ (ಕಾಲೇಜು) ವಿದ್ಯಾಲಯಗಳನ್ನು ಆರಂಭಿಸಬೇಕು.

೭. ಜ್ಞಾನ, ವಿಜ್ಞಾನದ ಮೇಲ್ಮಟ್ಟದ ವ್ಯಾಸಂಗ ಮಾಡಬೇಕೆನ್ನುವ ದೇಶೀಯರಿಗೆ ನೆರವನ್ನು ನೀಡಬೇಕು.

ಎಲ್‌ಫಿನ್‌ಸ್ಟನ್ ತನ್ನ ಈ ಸಪ್ತಸೂತ್ರಗಳನ್ನು ಕಾರ್ಯಾಚರಣೆಯಲ್ಲಿ ತರಬಹುದಿತ್ತು. ಆದರೆ ಅವನ ಆಡಳಿತದ ಕೌನ್ಸಿಲ್‌ನ (ಮಂತ್ರಿಮಂಡಳ) ಸದಸ್ಯರು ದೇಶೀಯರಿಗೆ ಈ ರೀತಿ ಶಿಕ್ಷಣ ಕೊಡುವ ವಿಚಾರದಲ್ಲಿ ವಿರೋಧಿಗಳಾಗಿದ್ದುದರಿಂದ ಅವನಿಗೆ ಬಹಳಷ್ಟು ಮುಂದುವರಿಯಲಾಗಲಿಲ್ಲ. ಅಲ್ಲದೆ ಕಂಪೆನಿ ಸರಕಾರವು 'ಶಿಕ್ಷಣ' ವೆಂಬ 'ಐಚ್ಛಿಕ' ಬಾಬತಿನಲ್ಲಿ ವ್ಯಾಪಕವಾಗಿ ಹಣವನ್ನು ವೆಚ್ಚ ಮಾಡಲು ಸಿದ್ಧವಿರಲಿಲ್ಲ.

ಆದರೂ ಎಲ್‌ಫಿನ್‌ಸ್ಟನ್ ಹೊಸ ಶಿಕ್ಷಣದ ತಳಹದಿಯನ್ನು ಈ ಸಂಸ್ಥೆಗಳ ಮೂಲಕ ಹಾಕಿದನೆಂಬುದು ನಿಸ್ಸಂದಿಗ್ಧವಾದ ಮಾತು. ಮುಂಬಯಿಯಲ್ಲಿಯ ಇಂಗ್ಲಿಷ್ ಶಾಲೆ ಎಲ್‌ಫಿನ್‌ಸ್ಟನ್ ಕಾಲೇಜಾಗಿ, ಪುಣೆಯ ಇಂಗ್ಲಿಷ್ ಶಾಲೆ ಡೆಕ್ಕನ್ ಕಾಲೇಜಾಗಿ ಬೆಳೆದು ನಿಂತವು.

ಎಲ್‌ಫಿನ್‌ಸ್ಟನ್ನನ ಇನ್ನೊಂದು ಮಹತ್ವದ ಕಾರ್ಯವೆಂದರೆ ಪಠ್ಯಪುಸ್ತಕದ್ದು. ಮರಾಠೀ, ಗುಜರಾಥೀ ಮುಂತಾದ ಭಾಷೆಗಳಲ್ಲಿ ಮೊತ್ತ ಮೊದಲಿಗೆ ಪಠ್ಯಪುಸ್ತಕಗಳು ಅನುವಾದಗೊಂಡು ಅವುಗಳ ಮುದ್ರಣಕಾರ್ಯವೂ ಪ್ರಥಮತಃ ನಡೆದುದು ಮಹತ್ವದ ಹೆಜ್ಜೆಯಾಗಿದೆ.

ಪಠ್ಯಪುಸ್ತಕಗಳ ರಚನೆಯಲ್ಲಿ ದೈಹಿಕ, ಮಾನಸಿಕ ಆರೋಗ್ಯವಿಷಯವೂ ಬಂದಿರಬೇಕೆನ್ನುವುದು ಎಲ್ಫಿನ್‌ಸ್ಟನ್ನನ ಮನೀಷೆಯಾಗಿದ್ದಿತಷ್ಟೆ. ಅದರಂತೆ ನೀತಿ ವಿಷಯ. ಹಾಗೆಂದ ಕೂಡಲೆ ಧಾರ್ಮಿಕ, ವಿಶೇಷತಃ ಕ್ರಿಶ್ಚಿಯನ್ ಮತದ ಕಡೆಗೆ ವಾಲಿದ ನೀತಿ ಬೋಧವು ಹಣಿಕಿಕ್ಕೀತೆಂದು ಅವನು ಸಾಕಷ್ಟು ಮುಂಜಾಗ್ರತೆ ವಹಿಸಿದನು.

ಬಾಂಬೆ ಎಜ್ಯುಕೇಶನ್ ಸೊಸೈಟಿ ಹಾಗೂ ನೇಟಿವ್ ಎಜ್ಯುಕೇಶನ್ ಸೊಸೈಟಿಗಳನ್ನು ಸ್ಥಗಿತಗೊಳಿಸಿ 'ಬೋರ್ಡ್ ಆಫ್ ಎಜ್ಯುಕೇಶನ್' ಎಂಬುದು ಸ್ಥಾಪಿತವಾಯಿತು. ಪುಸ್ತಕಗಳ ವಿತರಣೆ, ಪ್ರಸಾರ; ಶಿಕ್ಷಕರ ತರಬೇತಿಗಾಗಿ 'ನಾರ್ಮಲ್ ಸ್ಕೂಲ್' ಎಂಬ ಕೇಂದ್ರಗಳ ಸ್ಥಾಪನೆ ನಡೆಯಿತು.

ಇವೆಲ್ಲಕ್ಕಿಂತ ಮಹತ್ವದ ಸಾಧನೆಯೆಂದರೆ ಇಂಗ್ಲಿಷ್ ಭಾಷೆಯ ಶಿಕ್ಷಣ. ಭಾರತೀಯರಿಗೆ ಇಂಗ್ಲಿಷ್ ಶಿಕ್ಷಣವನ್ನು ಕೊಟ್ಟು, ಅವರನ್ನು 'ಉದ್ಧಾರ' ಮಾಡಬೇಕೆನ್ನುವ ಮೆಕಾಲೇನ ಪ್ರತಿಪಾದನೆಯು (೧೮೩೫) ಮೂರ್ತಸ್ವರೂಪವನ್ನು ತಾಳಿದ ದಿನಗಳವು!

ಈ ವೇಳೆಗೆ ಸರಕಾರವು ಶಿಕ್ಷಣ ವಿಚಾರದಲ್ಲಿ ಸಾಕಷ್ಟು ಹಣವನ್ನು ವೆಚ್ಚ ಮಾಡುತ್ತಿದ್ದುದರಿಂದಲೂ, ವರುಷ ವರುಷಕ್ಕೆ ಶಾಲೆಗಳ ಹೊಣೆಗಾರಿಕೆ ಮತ್ತು ಇತರ ಕೆಲಸಗಳು ಬೆಳೆಯುತ್ತ ನಡೆದುದರಿಂದಲೂ ಸರಕಾರವು ಶಿಕ್ಷಣಕ್ಕೆ ಸಂಬಂಧಿಸಿ, ನಿಯಮಿತವಾದ ಖಾತೆಯನ್ನೇ ಅಸ್ತಿತ್ವದಲ್ಲಿ ತಂದಿತು. ಅದುವೆ ಡಿಪಾರ್ಟ್‌ಮೆಂಟ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್. (೧೮೫೫)

ಸರಕಾರೀ ಕಾರ್ಯದ ಮೇಲಣ ವಿವರಣೆಯಲ್ಲಿ ನಾವು ಎಲ್ಲಿಯೂ ಕನ್ನಡ ಶಿಕ್ಷಣ ಕಾರ್ಯದ ಪ್ರಸ್ತಾಪ ಮಾಡಲಿಲ್ಲ. ಬಾಂಬೆ ಎಜ್ಯುಕೇಶನ್ ಸೊಸೈಟಿಗಂತೂ ಮರಾಠೀ-ಗುಜರಾಥೀ ಕ್ಷೇತ್ರವನ್ನು ಮೀರಿ ಮುಂದುವರಿದಾಗಲೇ ಇಲ್ಲ. ಅದರಾಡಳಿತದ ಅವಧಿಯಲ್ಲಿ ಕರ್ನಾಟಕದ ಭಾಗದಲ್ಲಿ ಆದ ಕೆಲಸವೆಂದರೆ, ಧಾರವಾಡ, ಹುಬ್ಬಳ್ಳಿ ಈ ಊರುಗಳಲ್ಲಿ ಸ್ಥಾಪಿಸಲಾದ ಎರಡು ಮರಾಠೀ ಪ್ರಾಥಮಿಕ ಶಾಲೆಗಳು (೧೮೨೬).

ಕ್ರಿ.ಶ. ೧೮೨೭ರಲ್ಲಿ ಅಸ್ತಿತ್ವದಲ್ಲಿ ಬಂದ ನೇಟಿವ್ ಎಜ್ಯುಕೇಶನ್ ಸಂಸ್ಥೆಯ ಅವಧಿಯಲ್ಲಿ ಮಾತ್ರ ಕನ್ನಡ - ಕರ್ನಾಟಕಕ್ಕೆ ಸಂಬಂಧಿಸಿದ ಎರಡು ಮಹತ್ವದ ಕಾರ್ಯಗಳು ಜರುಗಿದವು.

ಒಂದು, ಕನ್ನಡದಲ್ಲಿ ಪಠ್ಯಪುಸ್ತಕಗಳ ರಚನೆ ಮತ್ತು ಮುದ್ರಣ - ಇವು ೫-೬ ಪುಸ್ತಕಗಳು ಮಾತ್ರವೇ ಇದ್ದರೂ, ಆರಂಭದ ಹಾಗೂ ಕಷ್ಟಸಾಧ್ಯದ ತಯಾರಿಕೆಗಳಾಗಿದ್ದವು. ಅಲ್ಲದೆ ಸಮಗ್ರ ಕರ್ನಾಟಕದಲ್ಲಿಯೇ ಇವು ಮೊತ್ತಮೊದಲಿನ ಮುದ್ರಿತ ಪಠ್ಯಪುಸ್ತಕಗಳವು! ಹೀಗೆ, ಅವುಗಳಿಗೆ ಅಪೂರ್ವ ಸ್ಥಾನವಿದೆ.

ಎರಡನೆಯದು, ಈಗಾಗಲೇ ಪ್ರಸ್ತಾಪಿಸಿದಂತೆ, ಉತ್ತರ ಕರ್ನಾಟಕದಲ್ಲಿ ಶಿಕ್ಷಣ ಹಾಗೂ ಸರಕಾರೀ ವಲಯಗಳಲ್ಲಿ ಕನ್ನಡವೇ ಮಾಧ್ಯಮವಾಗತಕ್ಕದ್ದು ಎಂಬ ನಿರ್ಣಯವನ್ನು ಕೈಗೊಂಡದ್ದು. ಇದರಿಂದಾಗಿ ಕ್ರಾಂತಿಕಾರೀ ಮಾರ್ಪಾಟುಗಳಾದವು. ಕನ್ನಡದ ನೆಲದಲ್ಲಿ ಕನ್ನಡವು ನೆಲೆಯೂರುವುದಕ್ಕೆ ಇಂಬು ದೊರೆತುದು ಇದರಿಂದಲೇ.

ಖಾಸಗೀ ಶಾಲೆಗಳು ಸಾರ್ವತ್ರಿಕವಾಗಿ ಇದ್ದುವು ಎಂಬ ಮಾತನ್ನು ಈ ಹಿಂದೆ ತಿಳಿಸಿದೆ. ಪ್ರಕೃತ ಸರಕಾರವು ಹೊಸ ಶಾಲೆಗಳನ್ನು ಸ್ಥಾಪಿಸುವುದಕ್ಕೆ ಮಾಡಿದ ಪ್ರಯತ್ನಗಳನ್ನು ಇಲ್ಲಿ ವಿವರಿಸಬೇಕೆಂದಿದೆ. ಹಳ್ಳಿಗಳಲ್ಲಿಯ ಖಾಸಗೀ ಶಾಲೆಗಳು ಹೆಚ್ಚಾಗಿ ಕನ್ನಡವನ್ನು ಕಲಿಸುವವೇ ಆಗಿದ್ದರೆ, ದೊಡ್ಡ ಊರಲ್ಲಿಯ ಶಾಲೆಗಳು ಮರಾಠೀ ಮಾಧ್ಯಮದವಾಗಿದ್ದವು. ಇದರ ಕಾರಣ ಸ್ಪಷ್ಟವೇ ಇದೆ. ಅಂತೆಯೇ ೧೮೨೬ರಂದು ಸರಕಾರವು ಧಾರವಾಡ, ಹುಬ್ಬಳ್ಳಿಗಳಲ್ಲಿ ಮರಾಠೀ ಶಾಲೆಗಳನ್ನೇ ಆರಂಭಿಸಿದ್ದರಲ್ಲಿ ಅಚ್ಚರಿಯೇನೂ ಇಲ್ಲ. ಮರುವರ್ಷ ಬಾಗಲಕೋಟೆಯಲ್ಲಿಯೂ ಮರಾಠೀ ಶಾಲೆಯೊಂದು ಸ್ಥಾಪಿತವಾಯ್ತು.

(ಈ) ವಾಲ್ಟರ್ ಎಲಿಯೆಟ್

ಇಂಥ ಕಾಲದಲ್ಲಿ ಒಬ್ಬ ವ್ಯಕ್ತಿ ಮಾತ್ರ ಕನ್ನಡಕ್ಕಾಗಿ ಬಹಳಷ್ಟು ಪರಿಶ್ರಮ ಪಟ್ಟರು. ಅವನೇ ಪೂರ್ವೋಕ್ತ ವಾಲ್ಟರ್ ಎಲಿಯೆಟ್. ಇಲ್ಲಿಗೆ ಬಂದ ಒಂದೆರಡು ವರ್ಷಗಳಲ್ಲಿಯೇ ಎಲಿಯೆಟ್ ಜನರಾಡುವ ಕನ್ನಡವನ್ನು ಸ್ವಲ್ಪ ಮಟ್ಟಿಗೆ ಕಲಿಯಲೇಬೇಕಾಯಿತು. ಇಲ್ಲಿಯ ಜನರು ಮಾತನಾಡುವ ಭಾಷೆ ಕನ್ನಡ; ಆದರೆ ಶಾಲೆಗಳು ಮರಾಠಿಯಲ್ಲಿವೆ. ಇದೆಂಥ ವಿಚಿತ್ರ ಸ್ಥಿತಿ ಎಂಬುದಾಗಿ ಅವನಿಗೆ ತೋರಿತು. ಸರಕಾರಿ ಆಡಳಿತವು ಸರಿಯಾಗಿ ನಡೆಯಬೇಕಾದರೆ ಶಿಕ್ಷಣವೂ ಕನ್ನಡದಲ್ಲಿಯೇ ನಡೆಯಬೇಕು. ಅದಕ್ಕಾಗಿ ಸರಕಾರೀ ನೌಕರರೂ, ಜನತೆಯೂ ಕನ್ನಡವನ್ನು ಕಲಿತಿದ್ದರೆ ದೊರೆ-ಪ್ರಜೆ ಇವರಿಬ್ಬರಿಗೂ ಪ್ರಯೋಜನ ಎಂಬುದಾಗಿ ಯೋಚಿಸಿದನು. ತನಗೆ ಸರಿಕಂಡ ಒಂದು ವಿಚಾರವನ್ನು ಹಟದಿಂದ ಮುಂದುವರಿಸುವಲ್ಲಿ ಎಲಿಯೆಟ್ ಗಟ್ಟಿಗನು. ಕ್ರಿ.ಶ. ೧೮೩೦ರಲ್ಲಿ ನೇಟಿವ್ ಎಜ್ಯುಕೇಶನ್ ಸೊಸೈಟಿಗೆ ಒಂದು ಪತ್ರ ಬರೆದು ಧಾರವಾಡದಲ್ಲಿ ಒಂದು ಕನ್ನಡ ಶಾಲೆಯನ್ನು ಆರಂಭಿಸಬೇಕು ಎಂದು ಸೂಚಿಸಿ, ಅದರ ಔಚಿತ್ಯ ಮತ್ತು ಅಗತ್ಯವನ್ನು ವಿವರಿಸಿದನು. ಸೊಸೈಟಿಯು ಅದಕ್ಕೆ ಒಪ್ಪಿತು ಮತ್ತು ಒಬ್ಬ ಶಿಕ್ಷಕನನ್ನು ಹುಡುಕಬೇಕೆಂದು ಉತ್ತರ ಕೊಟ್ಟಿತು.

ಎಲಿಯೆಟ್ ಆ ಕೂಡಲೇ ಒಬ್ಬ ಮಾಸ್ತರನನ್ನು ಗೊತ್ತು ಮಾಡಿ ಶಾಲೆಯನ್ನು ಮರುತಿಂಗಳಲ್ಲೇ ಆರಂಭ ಮಾಡಿಬಿಟ್ಟನು. ಅವನ ಸಂಬಳ ತಿಂಗಳಿಗೆ ೯ ರೂಪಾಯಿ. ಆಗಿನ ಕಾಲದ ಖಾಸಗಿ ಶಿಕ್ಷಕರು ೫-೬ ರೂ. ಸಂಬಳವನ್ನು ಮಾತ್ರ ಪಡೆಯುತ್ತಿದ್ದರಷ್ಟೆ. ಹೊಸ ಶಾಲೆಗೆ (ಫೀ ಕೊಡುವ) ಕನ್ನಡ ಹುಡುಗರು ಬಾರದೇ ಹೋದರೆ ಮಾಸ್ತರನು ಶಾಲೆಯನ್ನು ಬಿಟ್ಟು ಹೋದಾನಲ್ಲ ಎಂಬ ವಿಚಾರದಿಂದ ಎಲಿಯೆಟ್ ಇಷ್ಟು ಸಂಬಳವನ್ನು ಕೊಡಮಾಡಿರಬೇಕು.

ಶಾಲೆಯೇನೋ ಆರಂಭವಾಯಿತು. ಸರಕಾರೀ ಮಂಜೂರಿಯು ಬರುವವರೆಗೆ ಎಲಿಯೆಟ್ ತನ್ನ ಗಳಿಕೆಯಿಂದಲೇ ಅವನಿಗೆ ಪ್ರತಿ ತಿಂಗಳು ಸಂಬಳವನ್ನು ಮುಟ್ಟಿಸುತ್ತಾ ಹೋದನು. ತನ್ನ ಈ ಹೊಸ ಪ್ರಯೋಗದ ಹುರುಪಿನಲ್ಲಿ ಅವನು ಈ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ.

ಹಣದ ಮಂಜೂರಿ ದೊರೆಯದೆ ೨ ವರ್ಷಗಳೇ ಕಳೆದವು! ಮದ್ರಾಸ್ ಸರಕಾರದವರು ಎಲಿಯೆಟ್ಟನನ್ನು ಮರಳಿ ಪಡೆಯಬಯಸಿರಬೇಕು. ಅಂತೆಯೇ ೧೮೩೩ರಲ್ಲಿ ಅವನಿಗೆ ನೇರವಾಗಿ ಮದ್ರಾಸಕ್ಕೆಯೇ ವರ್ಗವಾಯಿತು. ಹೋಗುವ ಮುನ್ನ ತಾನು ನೆಟ್ಟ ಈ ಕನ್ನಡ ಸಸಿಯು ಮುರುಟಿ ಹೋಗದಂತೆ ಅವನು ಜಾಗ್ರತೆ ವಹಿಸಿದನು. ಮುಂಬಯಿ ಪ್ರಾಂತ್ಯದ ಜ್ಯುಡಿಶಿಯಲ್ ಕಮೀಶನರ್ ಹೆಂಡರ್ಸನ್ ಹಾಗೂ ಧಾರವಾಡದ ಮುಖ್ಯ ಕಲೆಕ್ಟರನಿಗೆ ಈ ಶಾಲೆಗೆ ಮಂಜೂರಿ ದೊರಕಿಸುವಂತೆ ಬಿನ್ನವಿಸಿದನು.

ಕೊನೆಗೊಮ್ಮೆ ಸರಕಾರವು ಶಾಲೆಯನ್ನು ಮಂಜೂರು ಮಾಡಿತು. ಎಲಿಯೆಟ್ ಕೈಯಿಂದ ಹಾಕಿದ ಹಣವೇನೂ ಅವನಿಗೆ ಸಿಕ್ಕಲಿಲ್ಲ.

ಈ ಕನ್ನಡ ಶಾಲೆಯು ಕ್ರಮೇಣ ಪ್ರವರ್ಧಮಾನವಾಗುತ್ತಾ ನಡೆಯಿತು.

ಎಲಿಯೆಟ್‌ನ ಕನ್ನಡ ಪ್ರಜ್ಞೆಗೆ ಇನ್ನೊಂದು ನಿದರ್ಶನವನ್ನು ಇಲ್ಲಿ ಕೊಡಬೇಕು. ಹುಬ್ಬಳ್ಳಿಯಲ್ಲಿ ೧೮೨೬ರಿಂದ ಮರಾಠಿ ಶಾಲೆಯೊಂದು ನಡೆಯುತ್ತಿದ್ದಿತಲ್ಲದೆ, ಸರಕಾರೀ ಪ್ರಾಮುಖ್ಯವುಳ್ಳ ಧಾರವಾಡದಲ್ಲಿ ಮರಾಠೀ ಶಾಲೆಯೂ ನಡೆದಿತ್ತು. ಅದೇ, ವಾಣಿಜ್ಯ ನಗರವಾದ ಹುಬ್ಬಳ್ಳಿಯಲ್ಲಿಲ್ಲ. ಆ ಶಾಲೆಯ ನಿರುಪಯುಕ್ತತೆಯ ಬಗ್ಗೆ ಎಲಿಯೆಟ್ ಸ್ಪಷ್ಟವಾಗಿಯೇ ಮುಖ್ಯ ಕಲೆಕ್ಟರನಿಗೆ ಬರೆದನು; ಅದನ್ನು ಮುಚ್ಚಲು ಸೂಚಿಸಿದನು.

ಆಗ ಸರಕಾರವು ಅವನ ಸೂಚನೆಗೆ ತತ್ವಶಃ ಒಪ್ಪಿತಾದರೂ ಹುಬ್ಬಳ್ಳಿ ಮರಾಠೀ ಶಾಲೆಯನ್ನು ಹಾಗೆಯೇ ಇರಗೊಟ್ಟು, ಅದಕ್ಕೆ ಹೊಸ ಕನ್ನಡ ಶಾಲೆಯನ್ನು ಜೋಡಿಸಿತು... ಹೀಗೆ ಸರಕಾರೀ ಮಟ್ಟದಲ್ಲಿ ಧಾರವಾಡ, ಹುಬ್ಬಳ್ಳಿಗಳಲ್ಲಿ ಕನ್ನಡ ಶಿಕ್ಷಣದ ತಳಹದಿಯನ್ನು ಹಾಕಿದವನೆಂಬ ವಿಶೇಷ ಸ್ಥಾನವು ಎಲಿಯೆಟ್‌ನಿಗೆ ಸಲ್ಲುತ್ತದೆ.

ಅಲ್ಲದೆ ಉತ್ತರ ಕರ್ನಾಟಕ ಪ್ರದೇಶದಲ್ಲಿ ಅದರ ತಾಯ್ನುಡಿಯಲ್ಲಿಯೆ ಶಿಕ್ಷಣ ಪಡೆಯಬೇಕು ಎಂಬ ಸಿದ್ಧಾಂತವು ರೂಢವಾಗುವುದಕ್ಕೆ ಅವನೇ ಪ್ರೇರಕನಾದದ್ದನ್ನು ಹೀಗೆ ವಿವರಿಸಬಹುದು. ಸರಕಾರಕ್ಕೆ ಇಲ್ಲಿಯ ಜನರ ಭಾಷೆ ಕನ್ನಡವೆಂಬುದು ಗೊತ್ತಿರಲಿಲ್ಲ ವೆಂಬುದೇನೂ ಅಲ್ಲ. ಆದರೆ ಮರಾಠಿಯು ಪೇಶ್ವೆಯವರ ಹಾಗೂ ಅವರ ಅಧಿಕಾರಿಗಳ ಭಾಷೆಯಾಗಿದ್ದುದರಿಂದಲೂ ಮುಂಬಯಿಯ ಸೆಕ್ರೆಟರಿಯೇಟ್‌ನಲ್ಲಿ ಮರಾಠಿಯದೇ ಪ್ರಭಾವ ವಿದ್ದುದರಿಂದಲೂ ಆ ಭಾಷೆಯ ಶಾಲೆಗಳನ್ನೇ ತೆರೆಯುವುದು ಸೂಕ್ತವೆಂದು ಸುರುವಿಗೆ ಬ್ರಿಟಿಶ್ ಸರಕಾರದ ಭಾವನೆಯಾಗಿದ್ದಿತು.

ಆದರೆ ಆಡಳಿತ ನಡೆಸುವುದಕ್ಕೇ ಆಗಲಿ, ಕನ್ನಡದ ಪರಿಜ್ಞಾನ ಅತ್ಯವಶ್ಯ. ಅದಕ್ಕಾಗಿ ಕನ್ನಡ ಶಾಲೆಗಳು ಬೇಕು, ಎಂಬ ಅಂಶದತ್ತ ಎಲಿಯೆಟ್ ಸರಕಾರದ ಗಮನವನ್ನು ಸೆಳೆದನು. ಕನ್ನಡವೇ ಇಲ್ಲಿಯ ಸೊಲ್ಲು, ಮರಾಠಿಯು ಇಲ್ಲಿ ಸಲ್ಲದು - ಎಂಬುದಾಗಿ ಅವನು ಮಂಡಿಸಿದನು.

ಈ ಹಿಂದೆ ಉಲ್ಲೇಖಿಸಿದ ಮುಖ್ಯ ಕಲೆಕ್ಟರನ ಪತ್ರಕ್ಕೆ ಉತ್ತರ ಕೊಡುವಾಗ ಗವರ್ನರನ ಕಾರ್ಯದರ್ಶಿಯು ಈ ರೀತಿ ಬರೆದನು " You are further requested to state whether in your opinion it would be most advantageous to establish schools generally for teaching the Mahrattee languages or the Kanerese and which of these languages you conceive would be most useful, as connected with public and private business in the Districts under your charge (೨೭. ೧೧. ೧೮೩೪).

ಮುಖ್ಯ ಕಲೆಕ್ಟರನ ಉತ್ತರವು ಕನ್ನಡ ಪರವಾಗಿ ಇದ್ದಿತಾದ್ದರಿಂದ ಸರಕಾರವು ಈ ಭಾಗದಲ್ಲಿ ಕನ್ನಡ ಮಾಧ್ಯಮವುಳ್ಳ ಶಾಲೆಗಳನ್ನೇ ಸ್ಥಾಪಿಸಬೇಕು ಎಂಬ ಮಹತ್ವಪೂರ್ಣ ನಿರ್ಣಯವನ್ನು ೧೮೩೫ರಲ್ಲಿ ಸಾರಿತು.

◆

೧೪. ಅಂದಿನ ಶಾಲೆಗಳು ಮತ್ತು ಶಿಕ್ಷಕರು

ಗಾಂವಠೀ ಶಾಲೆಗಳು ದೇವಸ್ಥಾನ, ಧರ್ಮಶಾಲೆ ಮುಂತಾದ ಸ್ಥಳಗಳಲ್ಲಿ ನಡೆಯುತ್ತಿದ್ದುವು ಎಂದು ಹೇಳಿದೆನಷ್ಟೆ. ಸರಕಾರೀ ಶಾಲೆಗಳು ಕೂಡಾ ಇಂಥವೇ ಸ್ಥಳಗಳಲ್ಲಿ ನಡೆಯುತ್ತಿದ್ದುವು. ಹೊಸದಾಗಿ ಶಾಲೆಯನ್ನು ತೆರೆಯುವಲ್ಲಿ ತೋರುತ್ತಿದ್ದ ಉತ್ಸಾಹವನ್ನು, ಅದನ್ನು ನಡೆಸುವುದಕ್ಕೆ ಬೇಕಾಗುವ ಕಟ್ಟಡದ ಬಗ್ಗೆ ಸರಕಾರವು ಎಳ್ಳಷ್ಟೂ ತೋರಿಸಲಿಲ್ಲ! ಶಿಕ್ಷಕರಿಗೆ ಸಂಬಳ ಕೊಡುವ ವಿಷಯದಲ್ಲಿಯೂ ಸಾಧ್ಯವಾದಷ್ಟು ಪಾಲಕರ ಕಡೆಯಿಂದ ಪಡೆಯಬೇಕು ಎನ್ನುವ ಮನೋವೃತ್ತಿ ಇದ್ದಾಗ, ಹೊಸ ಕಟ್ಟಡಗಳನ್ನು ಶಾಲೆಗಳಿಗಾಗಿಯೇ ಕಟ್ಟಿಸುವ ವಿಚಾರ ಸರಕಾರದಿಂದ ಬಲು ದೂರವೇ ಉಳಿದಿದ್ದಿತು. ಹಾಗಿದ್ದರೆ ಸರಕಾರೀ ಶಾಲೆಗಳು ನಡೆಯುತ್ತಿದ್ದುವೆಲ್ಲಿ ?

೧. ದೇವಸ್ಥಾನದ ಪ್ರಾಕಾರ

೨. ಸರಕಾರೀ ಕಚೇರಿಗಳ ವ್ಹರಾಂಡಾ

೩. ಖಾಸಗಿ ಮನೆಗಳು

೪. ಧರ್ಮಶಾಲೆಗಳು

ಅಂತೂ ತಾನು ಸ್ಥಾಪಿಸಿದ ಶಾಲೆಗಳ ಬಗ್ಗೆ ಕಟ್ಟಡ ಕಟ್ಟಿಸುವುದೊತ್ತಟ್ಟಿಗಿರಲಿ, ನಿರ್ದಿಷ್ಟ ಜಾಗಕ್ಕಾಗಿಯೂ ಸರಕಾರವು ಪ್ರಯತ್ನ ಮಾಡುತ್ತಿದ್ದುದು ಕಡಿಮೆಯೇ!

ಆದರೆ ರತ್ನಾಗಿರಿ, ಪುಣೆ ಮುಂತಾದ ಊರುಗಳಲ್ಲಿ, ಶಾಲಾ ಕಟ್ಟಡಗಳನ್ನು ಬಾಡಿಗೆಗೆ ಹಿಡಿಯಲು ಸರಕಾರವು ಪೂರಕ ಭತ್ತೆಯನ್ನು ಕೊಡುತ್ತಿದ್ದಿತು. ಉತ್ತರ ಕರ್ನಾಟಕದ ಯಾವ ಶಾಲೆಗೂ ಇಂಥ ಭತ್ತೆಯು ಆಗ ದೊರೆಯುತ್ತಿದ್ದಿಲ್ಲ.

ಒಂದು ಸಂದರ್ಭದಲ್ಲಿ ಮಾತ್ರ ಸರಕಾರವು ನಮ್ಮ ಭಾಗದಲ್ಲಿ ಶಾಲಾ ಕಟ್ಟಡದ ಸಲುವಾಗಿ ಹಣವನ್ನು ವೆಚ್ಚ ಮಾಡಿದೆ. ಹುಬ್ಬಳ್ಳಿಯಲ್ಲಿ ಒಳ್ಳೆಯ ಜಾಗ ಸಿಗದಿದ್ದಾಗ, ಅಲ್ಲಿಯ ಅಸಿಸ್ಟೆಂಟ್ ಕಲೆಕ್ಟರನು ಹೊಸ ಕಟ್ಟಡವನ್ನು ಕಟ್ಟಿಸಲು ಉದ್ಯುಕ್ತನಾದನು (೧೮೨೭). ಅದಕ್ಕಾಗಿ

ಸ್ವತಃ ಆ ಯೂರೋಪಿಯನ್ ಅಧಿಕಾರಿಯು, ಈ ವಾಣಿಜ್ಯದ ನಗರದಲ್ಲಿ ಸಂಚರಿಸಿದಾಗ, ಅವನಿಗೆ ದೊರೆತ ಹಣ ಕೇವಲ ೧೩೪ ರೂ. ೮ ಆಣೆಗಳು. ಆಗ ಅವನು ಬೇಸರಪಟ್ಟನಾದರೂ, ಪ್ರಯತ್ನವನ್ನು ಮುಂದುವರಿಸಿ, ಸರಕಾರದಿಂದ ೧೫೦ ರೂ. ಮಂಜೂರು ಮಾಡಿಸಿಕೊಂಡನು. ಒಟ್ಟಿನ ೨೮೪ ರೂ. ೮ ಆಣೆಯಲ್ಲಿ ಅದೆಂಥ ಹೊಸ ಕಟ್ಟಡ ಸಿದ್ಧವಾದೀತು? ಅಂತೂ ಹಳೆಯ ಮನೆಯೊಂದನ್ನು ಕೊಂಡು, ಅದನ್ನೆ ರಿಪೇರಿ ಮಾಡಿಸಿದನು. ಆಗಿನ ದಿನಗಳಲ್ಲಿ ಸರಕಾರವು ಶಾಲಾ ಕಟ್ಟಡಕ್ಕಾಗಿ ಹೀಗೆ ವೆಚ್ಚ ಮಾಡಿದುದು ಒಂದು ಅಪೂರ್ವ ಸಂಗತಿಯೆಂಬುದಾಗಿ ಶಿಕ್ಷಣತಜ್ಞ ಶ್ರೀ ಪರುಳೇಕರರು ಈ ಕುರಿತು ಅಭಿಪ್ರಾಯಪಟ್ಟಿದ್ದಾರೆ.

ಯಾವುದೊಂದು ಊರಲ್ಲಿ ಸರಕಾರವು ಶಾಲೆಯನ್ನು ಸ್ಥಾಪಿಸಬೇಕಾದರೆ ಆ ಊರವರಿಂದ ಒಂದು ಮನವಿಯು ಮೊದಲಿಗೆ ಸರಕಾರಕ್ಕೆ ಸಲ್ಲಬೇಕಿತ್ತು. ಆ ಅರ್ಜಿಗೆ ಸಹಿ ಮಾಡಿದವರಲ್ಲಿ ಊರ ಪ್ರಮುಖರನ್ನೂ ಹಿರಿಯ ಅಧಿಕಾರಿಗಳನ್ನು ಸೇರಿಸಿ ಒಂದು ಕಮಿಟಿಯನ್ನು ನಿಯಮಿಸಲಾಗುತ್ತಿತ್ತು. ಈ ಕಮಿಟಿಯ ಸದಸ್ಯರೇ ಶಾಲಾ ಮಕ್ಕಳ ಪರೀಕ್ಷೆಯನ್ನು ತಗೊಳ್ಳುತ್ತಿದ್ದರು, ಮತ್ತು ಜಾಣ ಹುಡುಗರಿಗೆ ಪಾರಿತೋಷಕಗಳನ್ನು ಕೊಡುತ್ತಿದ್ದರು. ಶಾಲೆಯ ಆಡಳಿತ ವಿಚಾರದಲ್ಲಿ ಸರಕಾರವು ಈ ಕಮಿಟಿಯನ್ನು ಪ್ರಶ್ನಿಸುತ್ತಿದ್ದಿತು.

ಕ್ರಿ.ಶ. ೧೮೩೩ರಲ್ಲಿ ಧಾರವಾಡದಲ್ಲಿ ಅಸ್ತಿತ್ವದಲ್ಲಿದ್ದ ಒಂದು ಕಮಿಟಿಯನ್ನು ಇಲ್ಲಿ ಉಲ್ಲೇಖಿಸಬಹುದು. ಈ ಕಮಿಟಿಯಲ್ಲಿ ಕೆಳಗಿನವರು ಸದಸ್ಯರಾಗಿದ್ದರು. ಮುಖ್ಯ ಕಲೆಕ್ಟರ್, ಜಡ್ಜ್ ಮತ್ತು ಸೆಶನ್ಸ್ ಜಡ್ಜ್, ಜ್ಯುಡಿಶಿಯಲ್ ಕಮೀಶನರ್ ಹಾಗೂ ಕೆಲವು ದೇಶಿಯರು: ಜೀವಣರಾವ ದೇಶಪಾಂಡೆ, ಶೀನಪ್ಪ ಮುತಾಲಿಕ ದೇಶಪಾಂಡೆ, ತಿಮ್ಮಪ್ಪ ಮುತಾಲಿಕ, ಚನ್ನಬಸಪ್ಪನಾಯಕ, ಮತ್ತು ಜವಳಿ ಭೀಮಣ್ಣ ನಾಯಕ.

ಇವರು ೧೮೩೭ರ ಸಪ್ಟಂಬರ್ ತಿಂಗಳಿನಲ್ಲಿ ಧಾರವಾಡದಲ್ಲಿಯ ಮರಾಠೀ, ಕನ್ನಡ ಈ ಎರಡೂ ಶಾಲೆಗಳ ಪರೀಕ್ಷೆ (Inspection) ಗೆಂದು ಬಂದರು. ಈಗಿನಂತೆ ಕಟ್ಟುನಿಟ್ಟಾದ ಪರೀಕ್ಷಾ ವ್ಯವಸ್ಥೆ ಆಗ ಇರಲಿಲ್ಲ. ಮೇಲಿನ ವರ್ಗಕ್ಕೆ ಹೋಗಲು ಯಾರು ಅರ್ಹತೆ ಪಡೆದಿದ್ದಾರೆ ಎಂಬುದನ್ನು ಶಿಕ್ಷಕನೆ ಹೇಳುತ್ತಿದ್ದನು. ಆಗ ವಿದ್ಯಾರ್ಥಿಗಳ ಅಂತಿಮ ಪರೀಕ್ಷೆ ತೆಗೆದುಕೊಂಡು ಅದರಲ್ಲಿ ಯಶಸ್ವಿಯಾದವರಿಗೆ ನಗದು ಹಣ, ಪುಸ್ತಕ ಇಲ್ಲವೆ ಯಾವುದಾದರೂ ಶಾಲೋಪಯೋಗಿ ವಸ್ತುವನ್ನು ಬಹುಮಾನವಾಗಿ ಕೊಡುತ್ತಿದ್ದರು.

ಧಾರವಾಡದ ಕನ್ನಡ ಶಾಲೆಯಲ್ಲಿ ೮ ವರ್ಗಗಳಿದ್ದು ಒಟ್ಟಿಗೆ ೫೬ ಹುಡುಗರು ಕಲಿಯುತ್ತಿದ್ದರು. ೮ನೇ ಕ್ಲಾಸಿನ ೧೪ ಹುಡುಗರಲ್ಲಿ ಇಬ್ಬರು ಮಾತ್ರ ಜಾಣರೆಂದು ಕಂಡು ಬಂದಿತಂತೆ. ಅವರ ಹೆಸರು ಗುರುಬಸಪ್ಪ ಮೆಣಸಿನಕಾಯಿ ಮತ್ತು ಮಲ್ಲಣ್ಣ ದೊಡ್ಡವಾಡ ಅವರಿಗೆ ೪ ರೂ. ಮತ್ತು ೨ ರೂ. ಬಹುಮಾನ ದೊರೆಯಿತು. ೭ನೇ ಕ್ಲಾಸಿನ ೭ ಹುಡುಗರಲ್ಲಿ ಈರಯ್ಯ ಮೆಣಸಿನಕಾಯಿ ಎಂಬವನೊಬ್ಬನೇ ಯಶಸ್ವಿಯಾಗಿ ಕಂಡನು. ಉಳಿದ ಕ್ಲಾಸುಗಳಲ್ಲಿಯ

ವಿದ್ಯಾರ್ಥಿಗಳಲ್ಲಿ ಅಷ್ಟೊಂದು ಪ್ರಗತಿ ತೋರಿಬರಲಿಲ್ಲ. ಅದಕ್ಕೆ ಕೊಟ್ಟ ಕಾರಣ 'ಮಾಸ್ತರರು ಬಂದು ಒಂದೇ ವರುಷ ಕಳೆದಿದ್ದಿತು' ಎಂಬುದು.

ಮರಾಠೀ ಶಾಲೆಯ ಪರೀಕ್ಷೆಯು ಹಿಂದಿನ ದಿನವೇ ಮುಗಿದಿದ್ದಿತಾದರೂ ಅಲ್ಲಿಯ ಶಿಕ್ಷಕನು ಬಂದು, ಕನ್ನಡದಲ್ಲಿಯೂ ತನ್ನ ವಿದ್ಯಾರ್ಥಿಗಳ ಪರೀಕ್ಷೆ ತೆಗೆದುಕೊಳ್ಳಬಹುದೆಂದು ಸೂಚಿಸಿದನು. ಸರಿ, ಮರಾಠೀ ಶಾಲೆಯ ಶ್ರೀನಿವಾಸರಾವ್ ಹಾಗೂ ವಿರೂಪಾಕ್ಷ ಮೆಣಸಿನಕಾಯಿ ಇವರಿಗೆ ಕನ್ನಡದಲ್ಲಿದ್ದ ದಸ್ತಾವೇಜು, ಕೋರ್ಟ್ ಕೈಫಿಯತ್ ಇವುಗಳನ್ನು ಓದಲು ಕೊಟ್ಟಾಗ, ಅವರಿಬ್ಬರೂ ಚೆನ್ನಾಗಿ ವಾಚನ ಮಾಡಿ, ಅರ್ಥವನ್ನೂ ವಿವರಿಸಿದರಂತೆ. ಶ್ರೀನಿವಾಸನು ಮರಾಠಿಯಲ್ಲಿದ್ದ ಪ್ರಶ್ನೋತ್ತರ ಭೂಗೋಲವನ್ನು ಕನ್ನಡಕ್ಕೆ ಭಾಷಾಂತರ ಮಾಡಿ ತೋರಿಸಿದ್ದರ ಪ್ರಯುಕ್ತ ಅವನಿಗೆ ೪ ರೂ. ಬಹುಮಾನವನ್ನು ಕಮಿಟಿಯವರು ಕೊಟ್ಟರು. ವಿರೂಪಾಕ್ಷನ ವಿಶೇಷ ಕನ್ನಡ ಜ್ಞಾನ ಮತ್ತು ದುಂಡಾದ ಕನ್ನಡ ಬರಹ ಇವುಗಳಿಗಾಗಿ ಅವನಿಗೂ ಬಹುಮಾನ (೨ ರೂ.) ದೊರೆಯಿತು.

ಧಾರವಾಡದ ಈ ಕಮಿಟಿಯು ಶಿಕ್ಷಣ ಕ್ಷೇತ್ರದಲ್ಲಿ ಒಂದು ಹೊಸ ಉಪಕ್ರಮವನ್ನು ಆರಂಭಿಸಿತು. ಅದುವೆ ಮಾನಿಟರ್ ಪದ್ಧತಿ. ಶಿಕ್ಷಕರ ಕೊರತೆಯ ಮೂಲಕ ಈ ಪದ್ಧತಿಯು ಬಳಕೆಗೆ ಬಂದಿತು. ಒಬ್ಬನೇ ಮಾಸ್ತರನು ಆರೇಳು ವರ್ಗಗಳ ೬೦-೭೦ ಜನ ಹುಡುಗರಿಗೆ ಕಲಿಸುವುದು ಅದೆಂತು ಸಾಧ್ಯ? ಆದ್ದರಿಂದ ಮೇಲಿನ ಇಯತ್ತೆಯ 'ಜಾಣ' ವಿದ್ಯಾರ್ಥಿಯನ್ನು ಶಿಕ್ಷಕನ ಸಹಾಯಕ್ಕೆ ನಿಯಮಿಸುವುದೇ ಆಗಿನ 'ಮಾನಿಟರ್' ಪದ್ಧತಿಯ ಮೂಲೋದ್ದೇಶವಾಗಿತ್ತು. ಈ ಹೆಚ್ಚಿನ ಕೆಲಸಕ್ಕಾಗಿ ಮಾನಿಟರ್‌ನಿಗೆ ಮಾಸಿಕ ವೇತನವೂ ಇದ್ದಿತು! ಧಾರವಾಡದ ಎರಡೂ ಶಾಲೆಗಳಲ್ಲಿ ಇಂಥ ಮಾನಿಟರನನ್ನು ನಿಯಮಿಸಿ, ಅವರಿಗೆ ತಲಾ ೪ ರೂ. ಸಂಬಳವನ್ನು ಕೊಡಬೇಕೆಂದು ಸೂಚಿಸಿ, ಸರಕಾರದ ಮಂಜೂರಿಯನ್ನು ಪಡೆಯಲಾಯಿತು. ಹೀಗೆ ಮುಖ್ಯ ಶಿಕ್ಷಕನು ಇಲ್ಲದಾಗ ಮಾನಿಟರನೇ ಹಂಗಾಮಿ ಅವಧಿಯಲ್ಲಿ ಶಾಲೆಯನ್ನು ನಡೆಸಿಕೊಂಡು ಕೊಂಡುಹೋಗುವ ಉಪಕ್ರಮವು ರೂಢಿಯಲ್ಲಿ ಬಂದಿತು.

ಮ್ಯಾಕೇ ಎಂಬ ಅಧಿಕಾರಿ ಶಿಕ್ಷಕರ ಈ ಕೊರತೆಯನ್ನು ಪ್ರಸ್ತಾಪಿಸಿದ್ದ. ಎಲ್ಲ ಅಧಿಕಾರಿಗಳಿಗೂ ಇದು ತಲೆನೋವಿನ ವಿಷಯವೇ ಆಗಿದ್ದಿತು. ಈ ಭಾಗದ ಶಿಕ್ಷಣ ವಿಕಾಸವಾಗದೇ ಇರುವುದಕ್ಕೆ ಈ ಕೊರತೆಯೇ ಮುಖ್ಯ ಕಾರಣ ಎಂಬುದಾಗಿ ಇವರು ತಮ್ಮ ವರದಿಗಳಲ್ಲಿ ಕಾಣಿಸುತ್ತಲೇ ಇದ್ದರು. ಶಿಕ್ಷಕರನ್ನು 'ಟ್ರೇನಿಂಗ್'ಗೆಂದು ಕಳಿಸಿದ್ದಾಗ, ಬದಲೀ ಶಿಕ್ಷಕನನ್ನು ಎಲ್ಲಿಂದ ತರಬೇಕು? ಆದಕಾರಣ ಕೆಲವೆಡೆ ಶಾಲೆಗಳನ್ನೇ ಮುಚ್ಚಲಾಗುತ್ತಿತ್ತು. ೧೮೪೮ರಲ್ಲಿ ಬೆಳಗಾಂವ ಜಿಲ್ಲೆಯಲ್ಲಿ ಈ ಸಮಸ್ಯೆಯುಂಟಾದಾಗ ಅಲ್ಲಿದ್ದ ೨೨ ಶಾಲೆಗಳಲ್ಲಿ ನಾಲ್ಕನ್ನು ಮುಚ್ಚಲಾಯಿತು.

ಶಿಕ್ಷಕರ ಈ ಕೊರತೆಗೆ ಕಾರಣವೇನು? ಎಂದರೆ, ಗಳಿಕೆಯ ಅನಿಶ್ಚಿತತೆ. ಗಾಂವಠಿ ಶಾಲೆಯ ಶಿಕ್ಷಕನ ಉಪಜೀವನವು ಫೀ ಹಾಗೂ ವಸ್ತುಗಳ ರೂಪದಲ್ಲಿ ಹೇಗೂ ಸಾಗುತ್ತಿದ್ದಿತು. ತನಗೆ ಬೇಕಿದ್ದ ವರಮಾನವನ್ನು ಅವನು ಒತ್ತಾಯ ಮಾಡಿ ವಸೂಲು ಮಾಡಬಹುದಾಗಿತ್ತು. ಸರಕಾರಿ ಶಿಕ್ಷಕನಿಗೆ ತಿಂಗಳಿಗೆ ೫ ರೂ. ಸರಕಾರ ಕೊಡುತ್ತಿತ್ತು. ಮತ್ತೆ ಅಷ್ಟೇ ಹಣ ಶಿಕ್ಷಕನು ವಿದ್ಯಾರ್ಥಿಗಳಿಂದ ವಸೂಲು ಮಾಡುವನೆಂದು ನಂಬಲಾಗಿತ್ತು. ಅಂತೂ ಶಿಕ್ಷಕನ ಗಳಿಕೆಯ ಇಂತಹ ಸ್ಥಿತಿಯಿಂದಾಗಿ, ಈ ಉದ್ಯಮದತ್ತ ಆಕರ್ಷಣೆ ಇರಲಿಲ್ಲ ಎಂಬ ವಾತಾವರಣವಿದ್ದಾಗ, ಯೋಗ್ಯ ಶಿಕ್ಷಕರು ದೊರೆಯುವುದಾದರೂ ಹೇಗೆ?

ಶಿಕ್ಷಕರ ವರಮಾನದ ವಿಚಾರದಲ್ಲಿ ಇನ್ನೊಂದು ವೈಪರೀತ್ಯವಿದ್ದಿತು. ಬೆಳಗಾಂವಿ ಜಿಲ್ಲೆಯ ಶಿಕ್ಷಕರ ಸಂಬಳದ ಪ್ರಮಾಣವೇ ಬೇರೆ, ಧಾರವಾಡದವರದಷ್ಟೇ ಬೇರೆ! ೧೮೩೭ನೆಯ ವರುಷದ ಈ 'ಪಗಾರ' ಪಟ್ಟಿಯು ಪರಿಶೀಲನಾರ್ಹವಾಗಿದೆ.

ಧಾರವಾಡ ಜಿಲ್ಲೆ –

ಧಾರವಾಡ ನಗರದ ಮರಾಠೀ ಶಾಲೆಯ ಮುಖ್ಯ ಶಿಕ್ಷಕರಿಗೆ ರೂ. ೩೦, ಅಸಿಸ್ಟೆಂಟ್ ಶಿಕ್ಷಕರಿಗೆ ರೂ. ೨೦, ಕನ್ನಡ ಶಾಲಾ ಶಿಕ್ಷಕರಿಗೆ ರೂ. ೧೫, ಜಿಲ್ಲೆಯ ಇತರ ಊರುಗಳ ಶಿಕ್ಷಕರಿಗೆ ರೂ. ೧೦

ಬೆಳಗಾಂವ – ವಿಜಾಪೂರ ಜಿಲ್ಲೆ :-

ಮರಾಠೀ ಶಾಲಾ ಮಾಸ್ತರ	–	ತಲಾ	ರೂ. ೨೦
ಕನ್ನಡ ಶಾಲಾ ಮಾಸ್ತರ	–		ರೂ. ೫, ೬

ಮರಾಠೀ ಶಾಲೆಗಳ ಮಾಸ್ತರರಿಗೆ ಇಷ್ಟರ ಮಟ್ಟಿಗೆ ಸಂಬಳದ ಹೆಚ್ಚುವರಿ ! ಕನ್ನಡ ಶಾಲಾ ಮಾಸ್ತರರಿಗೆ ತೀರ ಕಡಿಮೆ ಸಂಬಳವಿದ್ದುದರ ಒಂದು ಕಾರಣವೆಂದರೆ ಆ ಶಾಲೆಗಳು ಹೊಸತಾಗಿ ಸ್ಥಾಪಿತವಾಗಿದ್ದುವು.

ಬೆಳಗಾಂವಿಯ ಮುಖ್ಯ ಕಲೆಕ್ಟರನಾಗಿದ್ದ ಟೌನ್‌ಸೆಂಡ್, ಬೋರ್ಡ್ ಆಫ್ ಎಜ್ಯುಕೇಶನ್ನಿಗೆ ಬರೆದು ತನ್ನ ವಿಭಾಗದ ಕನ್ನಡ ಶಿಕ್ಷಕರ ಸಂಬಳವನ್ನು ಧಾರವಾಡದವರ ಸಂಬಳಕ್ಕೆ ಸಮಾನವಾಗಿ ಏರಿಸಿದನಲ್ಲದೆ, ಹುಡುಗರಿಂದ ಒಂದಾಣೆಯ ಫೀಯನ್ನು ತಪ್ಪದೇ ವಸೂಲು ಮಾಡುವುದಕ್ಕೂ ಅನುಮತಿಯನ್ನು ಪಡೆದುಕೊಂಡನು.

ಶಾಲೆ ಅಥವಾ ಶಿಕ್ಷಕರ ಆರ್ಥಿಕ ವಿಷಯಕ್ಕೆ ಸಂಬಂಧಿಸಿದ ಒಂದು ಮಹತ್ವದ ಮಾತನ್ನು ಇಲ್ಲಿ ಗಮನಿಸತಕ್ಕುದು; ಅದೆಂದರೆ, ಹಿಂದುಸ್ತಾನದಲ್ಲಿಯ ಯಾವುದೇ ಪ್ರಾಂತೀಯ ಸರಕಾರಕ್ಕೆ ಶಿಕ್ಷಣಕ್ಕಾಗಿ ವೆಚ್ಚ ಮಾಡುವ ಅಧಿಕಾರವಿರಲಿಲ್ಲ! ಎಲ್ಲ ವೆಚ್ಚದ ಬಾಬುಗಳೂ ಕಲ್ಕತ್ತೆಯಲ್ಲಿದ್ದ ಗವರ್ನರ್ ಜನರಲ್ ಇನ್-ಕೌನ್ಸಿಲ್‌ನಿಂದ ಪಾಸಾಗಿ ಬರಬೇಕಿದ್ದಿತು. ಬೆಳಗಾಂವಿಯ ಕನ್ನಡ ಶಿಕ್ಷಕರ ಸಂಬಳದ ಹೆಚ್ಚಳವು ಕಲಕತ್ತೆಯನ್ನು ಕಂಡುಬಂದಿತು. ಈ ಹಿಂದೆ ಕಟ್ಟಡದ ಕೆಲಸಗಳಿಗಾಗಿ ೧೫೦ ರೂ. ಮಂಜೂರಿಯಾದ ವಿಷಯ ಹೇಳಿದೆಯಷ್ಟೆ. ಅದಕ್ಕೂ ಕೂಡಾ ಗವರ್ನರ್ ಜನರಲನ

'ತಥಾಸ್ತು' ಬೇಕಾಯಿತು. ಹೀಗೆ ಶಿಕ್ಷಣ ವಿಷಯಕ ವೆಚ್ಚವು ಕೇಂದ್ರ ಸರಕಾರದ ಸ್ವಾಧೀನವಾಗಿದ್ದಾಗ, ಶಿಕ್ಷಣ ಪ್ರಗತಿಯು ಅದೆಷ್ಟು ಮಂದಗತಿಯದಾಗಿತ್ತೆಂಬುದನ್ನು ಊಹಿಸಿಯೇ ತಿಳಿಯಬೇಕು.

ಆಗಿನ ಶಿಕ್ಷಣ ಪ್ರಗತಿಯ ನಿಧಾನಗತಿಗೆ ಇನ್ನೊಂದು ಕಾರಣವೆಂದರೆ ಶಿಕ್ಷಕರ ಅಯೋಗ್ಯತೆ. ಶಿಕ್ಷಣವು ಅತ್ಯಂತ ಪವಿತ್ರ ಕಾರ್ಯವೆಂಬುದಾಗಿ ಪರಿಭಾವಿಸಲಾಗುತ್ತಿದ್ದ ಪೂರ್ವಕಾಲದಲ್ಲಿ ಶಿಕ್ಷಕರು ವಿದ್ವಾಂಸರೂ, ನಿಷ್ಠಾವಂತರೂ ಆಗಿದ್ದರು. ಕಾಲ ಹೋದಂತೆ ನಾಡಿನ ಚೈತನ್ಯವು ಕುಗ್ಗುತ್ತ ನಡೆದಿರುವಾಗ ಶಿಕ್ಷಕನ ಯೋಗ್ಯತೆಯೂ ಇಳಿಮುಖವಾಯಿತು. ಹೆಚ್ಚಿನ ಶಿಕ್ಷಕರು 'ಓ-ಬ-ಗ' ವನ್ನಷ್ಟೇ ಬಲ್ಲವರಾಗಿ ಉಳಿದರು. ಅವರು ಕಲಿಸಬೇಕಾಗಿದ್ದ ವಿದ್ಯೆಯೂ ಸೀಮಿತವಾಗಿದ್ದುದರಿಂದ ಶಿಕ್ಷಣದ ಮಟ್ಟವು ಉಚ್ಚತರವಾದದ್ದಿರಲಿಲ್ಲ. 'ವರ್ಣಮಾತ್ರಂ ಕಲಿಸಿದಾತಂ ಗುರು' ಎಂಬುದು ಗುರುವಾದವನಿಗೆ ವಿದ್ಯಾರ್ಥಿಯು ಸಲ್ಲಿಸಬೇಕಾದ ಗೌರವದ ದೃಷ್ಟಿಯಿಂದ ಹೇಳಿದ ಮಾತಷ್ಟೆ. ಶಿಕ್ಷಕನ ಮಟ್ಟಿಗೆ ಹೇಳುವುದಾದರೆ, ಆಗಿನ ಕಾಲಕ್ಕೆ ವರ್ಣ ಮಾತ್ರಂ ಕಲಿಸಬಲ್ಲಾತನೂ ಗುರುವೆಂದೆನಿಸಿಕೊಳ್ಳುತ್ತಿದ್ದನು! ಇದಕ್ಕೆ ಕೆಲ ಅಪವಾದಗಳು ಇದ್ದುವೇನೋ ನಿಜ. ಆದರೆ ಒಟ್ಟಿನಲ್ಲಿ ಇದು ಸತ್ಯ.

ಬಾಳಶಾಸ್ತ್ರಿ ಜಾಂಭೇಕರ

ಬಾಳಶಾಸ್ತ್ರೀ ಜಾಂಭೇಕರರು ಆಗಿನ ಕಾಲದ ದೇಶೀಯರಲ್ಲಿ ಅತ್ಯಂತ ಪ್ರತಿಭಾನ್ವಿತರೆನಿಸಿಕೊಂಡಿದ್ದರು. ೧೮೦೨ರಲ್ಲಿ ಕೊಂಕಣದಲ್ಲಿ ಜನ್ಮವೆತ್ತಿದ ಅವರು ಮುಂಬಯಿ ಪ್ರಾಂತ್ಯಕ್ಕೆ ಸಲ್ಲಿಸಿದ ಶೈಕ್ಷಣಿಕ ಸೇವೆ ಅನುಪಮವಾದುದು. ಪೂರ್ವೋಕ್ತ ಬಿ.ಎನ್.ಇ.ಎಸ್. ಸಂಸ್ಥೆಯ ಕಾರ್ಯದರ್ಶಿಗಳಾಗಿ (೧೮೩೦-೧೮೩೪) ಇದ್ದಾಗ ಅವರ ವಿದ್ವತ್ತೆಯನ್ನು ಗಮನಿಸಿ ಸರಕಾರವು ಅವರನ್ನು ಎಲ್‌ಫಿನ್‌ಸ್ಟನ್ ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಎಂದು ನೇಮಿಸಿತು. (೧೮೩೪ - ೧೮೪೫) ಆಗಿನ ದಿನಗಳಲ್ಲಿ ಮುಂಬಯಿ ಶಿಕ್ಷಣರಂಗದಲ್ಲಿ ಇಷ್ಟು ದೊಡ್ಡ ಸ್ಥಾನಕ್ಕೆ ಏರಿದ ದೇಶೀಯರಾರೂ ಇರಲಿಲ್ಲ.

ದ್ವಾದಶ ಭಾಷಾ ತಜ್ಞರಾಗಿದ್ದ ಜಾಂಬೇಕರರು ಸಮಾಜ ಸುಧಾರಕರೂ ಆಗಿದ್ದರು. ಅವರ ಮರಾಠೀ ವಾಙ್ಮಯ ಸೇವೆಯೂ ಸುವಿಖ್ಯಾತವಿದೆ. ಮರಾಠಿಯಲ್ಲಿ ಕ್ರಮಿಕ ಪುಸ್ತಕಗಳ ರಚನೆಯ ತಳಹದಿಯನ್ನು ಹಾಕಿದುದಲ್ಲದೆ 'ದರ್ಪಣ' ಎಂಬ ಪ್ರಪ್ರಥಮ ಪತ್ರಿಕೆಯನ್ನು ಮರಾಠಿಯಲ್ಲಿ ಹೊರಡಿಸಿದರು.

ಕರ್ನಾಟಕದೊಡನೆ ಅವರ ಸಂಪರ್ಕ ಬಂದುದು ೧೮೪೧-೪೫ರ ಅವಧಿಯಲ್ಲಿ. ಅವರ ಜೀವನ ಚರಿತ್ರೆಯ ಪುಸ್ತಕದಲ್ಲಿ ಈ ಕುರಿತು ಹೀಗೆ ಹೇಳಿದ್ದಿದೆ.

'We know as a matter of fact that as Superintendent of the third Division, he not only inspected Kannada Schools but had also undertaken to prepare the first elementary books in Kannada for them'.

ಮರಾಠೀ ಭಾಷೆಯ ವಿಷಯದಲ್ಲಿ ಬಾಳಶಾಸ್ತ್ರಿ ಜಾಂಭೇಕರರಿಗೆ ಸ್ವಾಭಾವಿಕವಾಗಿಯೇ ಮೇಲ್ತನ ಭಾವವಿದ್ದಿತು. ಹಾಗೆಂದು ಕನ್ನಡ ಶಿಕ್ಷಣದ ಕಾರ್ಯದಲ್ಲಿ ತಾತ್ಸಾರ ವೃತ್ತಿಯೇನೂ ಇರಲಿಲ್ಲ. ಆದರೆ ಕನ್ನಡದ ಉದ್ಧಾರವಾಗಬೇಕಾದರೆ ಅದು ಮರಾಠಿಯಿಂದಲೇ ಸಾಧ್ಯ ಎಂಬುದು ಅವರ ನಿಲುಮೆಯಾಗಿದ್ದಿತು!

ಕನ್ನಡ ಶಾಲೆಗಳಲ್ಲಿ ಕನ್ನಡ ಮರಾಠೀ ಕಲಿಸಬೇಕೆಂದು ಸರಕಾರೀ ಆಜ್ಞೆ ಇದ್ದಿತಷ್ಟೆ. ಜನತೆಯು ಕನ್ನಡ ಶಾಲೆಗಳಲ್ಲಿ ಮರಾಠಿಯನ್ನೂ ಕಲಿಸಬೇಕೆಂದು ಅಪೇಕ್ಷಿಸಿದ್ದಾಗ, ಜಾಂಭೇಕರರು ಆ ಅಪೇಕ್ಷೆಗೆ ಸಾಕಷ್ಟು ಪ್ರೋತ್ಸಾಹವಿತ್ತರು.

ಮಕ್ಕಳಿಗೆ ಎರಡೂ ಭಾಷೆಗಳನ್ನು ಕಲಿಸಬೇಕಾದರೆ ಶಿಕ್ಷಕರಿಗೆ ಮೊದಲು ಆ ಪರಿಜ್ಞಾನವಿರಬೇಕು ತಾನೇ. ಅದಕ್ಕಾಗಿ ಶಿಕ್ಷಕರಿಗೆ ಎರಡೂ ಭಾಷೆಗಳಲ್ಲಿ ತರಬೇತು ಕೊಡಬೇಕು ಎಂದು ಜಾಂಭೇಕರರು ಅಪೇಕ್ಷಿಪಟ್ಟರು. ಶಿಕ್ಷಕರು ಮರಾಠಿ ಕಲಿಯಲೇಬೇಕೆಂದೂ ಅವರು ಸರಕಾರಕ್ಕೆ ಸೂಚನೆ ಕಳುಹಿಸಿದರು.

ಜಾಂಭೇಕರರು ಯಾವ ಸೂಚನೆಗಳನ್ನು ಮಾಡಿದರೂ ಸರಕಾರವು ಅದನ್ನು ಮಾನ್ಯ ಮಾಡುವಷ್ಟು ಮನ್ನಣೆಯನ್ನು ಪಡೆದಿದ್ದರೂ ಮರಾಠಿಗರಿಗೆ ಸಂಬಂಧಿಸಿದ ಅವರ ಈ ನಿಲುಮೆಯನ್ನು ಮಾತ್ರ ಸರಕಾರವು ಕೊನೆಗೂ ಒಪ್ಪಲಿಲ್ಲ!

ಆಗಿನ ಕನ್ನಡ ಶಿಕ್ಷಕರ ಅಯೋಗ್ಯತೆಯೇ ಇಷ್ಟೆಲ್ಲ ರಗಳೆಗೆ ನಿಮಿತ್ತವಾಯಿತು. ಈ ಅಯೋಗ್ಯತೆಯು ಮರಾಠೀ ಪ್ರಾಬಲ್ಯದ ಕಾಲದಲ್ಲಿ ಕನ್ನಡವೊಂದನ್ನೆ ನಂಬಿ ಕುಳಿತರೆ ನಡೆಯದೆಂಬ ಶಿಕ್ಷಕರ ಸಾಮಾನ್ಯ ಮನೋವೃತ್ತಿಯಿಂದಾಗಿ ಹೊರಹೊಮ್ಮಿತ್ತೆನ್ನಬಹುದು. ಹೀಗೆ ಕನ್ನಡ ಶಿಕ್ಷಕರು ಎರಡನ್ನು ಸಾಧಿಸಹೋಗಿ, ಎರಡರಲ್ಲೂ ಅರಬರೆಕೆಯ ಜ್ಞಾನವನ್ನು ಪಡೆದವರಾದರು. ಈ ಭಾಗದಲ್ಲಿಯ ಕನ್ನಡ ಶಿಕ್ಷಕರ ನೈಜಸ್ಥಿತಿಯನ್ನು ಮ್ಯಾಕೆ ಮಹಾಶಯನು ಹೀಗೆ ವಿವರಿಸಿದ್ದಾನೆ (೧೮೪೬):

"ಇಲ್ಲಿಯ ಶಿಕ್ಷಕರಲ್ಲಿ ಎರಡು ಬಗೆ, ಕನ್ನಡ ಮಾತೃಭಾಷೆಯಾಗಿರುವವರು, ಮರಾಠಿಯು ಮಾತೃಭಾಷೆಯಾಗಿದ್ದು, ಕನ್ನಡವನ್ನು ಕಲಿತವರು. ಇಬ್ಬರಿಗೂ ಆತಂಕಗಳಿವೆ. ಕನ್ನಡ ಶಿಕ್ಷಕರಿಗೆ ಹೆಚ್ಚಿನ ಜ್ಞಾನವನ್ನು ಸಂಪಾದಿಸಿ, ಇತರ ಭಾಗದ ಮರಾಠೀ ಮಾಸ್ತರರಿಗೆ ಸಮಾನವಾಗಿ ನಿಲ್ಲುವ ಅವಕಾಶವೇ ಇಲ್ಲ. ಇನ್ನು ಮರಾಠಿ ಮಾತೃಭಾಷೆಯ ಶಿಕ್ಷಕರು ಮರಾಠಿಯಲ್ಲಿಯೆ ಕಲಿತವರು. ಕನ್ನಡವನ್ನು ಅನುದಿನದ ವ್ಯವಹಾರದಲ್ಲಿ ಮಾತ್ರ ಬಳಸಿ, ರೂಢಿ ಮಾಡಿಕೊಂಡವರು. ಹೀಗಾಗಿ ಇವರೂ ಕನ್ನಡದಲ್ಲಿ ಚೆನ್ನಾಗಿ ಪಾಠ ಹೇಳಲು ಅಸಮರ್ಥರು".

ಅತ್ಯಂತ ಯಥಾರ್ಥವಾದ ಹೇಳಿಕೆಯಿದು.

ಕನ್ನಡ ಶಿಕ್ಷಕರನ್ನು ಈ ಕೆಳಮಟ್ಟದಿಂದ ಮೇಲೆತ್ತುವುದಕ್ಕೆ ಇದ್ದ ಒಂದೇ ಮಾರ್ಗವೆಂದರೆ ಅವರಿಗೆ 'ಟ್ರೇನಿಂಗ್' ಕೊಡುವುದು. ಜಾಂಭೇಕರರೇ ಈ ವಿಧಾಯಕ ಉಪಕ್ರಮದ ಬಗ್ಗೆ

ಬೋರ್ಡ್ ಆಫ್ ಎಜ್ಯುಕೇಶನ್‌ಗೆ ಬರೆದರು. ಹೊಸ ಕನ್ನಡ ಶಾಲೆಗಳಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ ವರುಷ ವರುಷಕ್ಕೆ ಹೆಚ್ಚಾಗುವುದರ ಬದಲು ಕಡಿಮೆಯಾಗುತ್ತ ನಡೆದುದು, ಬೋರ್ಡಿನ ಗಮನಕ್ಕೆ ಬಂದೇ ಇದ್ದಿತು. ಶಿಕ್ಷಕನೇ ಶಾಲೆಯ ಪ್ರಗತಿಗೆ ಮೂಲಾಧಾರ ಎಂಬ ತತ್ವ ಸಾರ್ವತ್ರಿಕವಾದುದು ತಾನೇ. ಶಿಕ್ಷಕನು 'ಅಯೋಗ್ಯ'ನೆಂಬ ಕಾರಣವೇ ವಿದ್ಯಾರ್ಥಿಗಳ ಹಾಜರಾತಿಯ ಇಳಿತಕ್ಕೆ ಕಾರಣವೆಂದು ನಿರ್ಣಯಕ್ಕೆ ಬರಲಾಯಿತು. ಅಂತೂ ನಮ್ಮ ಭಾಗದಲ್ಲಿ. ಶಿಕ್ಷಕರ 'ಟ್ರೇನಿಂಗ್' ಯೋಜನೆಗೆ ಚಾಲನೆ ಕೊಟ್ಟದಲ್ಲದೆ, ಆರಂಭದಲ್ಲಿ ಅದನ್ನು ಯಶಸ್ವಿಯಾಗಿ ಮುನ್ನಡೆಸಿದುದಕ್ಕೂ ಜಾಂಭೇಕರರೇ ಆದ್ಯರು ಎಂಬುದನ್ನು ಕೃತಜ್ಞತೆಯಿಂದ ನೆನೆಯಬೇಕು.

ಮೊತ್ತಮೊದಲಿನ ತರಬೇತಿ ಕೇಂದ್ರ

ಟ್ರೇನಿಂಗ್ ವರ್ಗಗಳನ್ನು ಧಾರವಾಡ, ಬೆಳಗಾವಿ ಹೀಗೆ ಎರಡೂ ಕಡೆಯಲ್ಲಿ ತೆರೆದು ಆ ಜಿಲ್ಲೆಗಳ ಶಿಕ್ಷಕರನ್ನು ಅಲ್ಲಿಗೆ ಕಳಿಸಬೇಕೆಂದು, ಅವರು ಮೊದಲಿಗೆ ಸೂಚನೆ ಮಾಡಿದರು. ಆದರೆ ಅದೇಕೊ ಬೆಳಗಾಂವಿ ಕೇಂದ್ರವನ್ನು ಬಿಟ್ಟುಕೊಡಲಾಯಿತು. ಅಂತೂ ೧೮೪೨ರಲ್ಲಿ ಈ ಟ್ರೈನಿಂಗ್‌ನ ಪ್ರಥಮ ಶಿಬಿರವು (ನಾರ್ಮಲ್ ಸ್ಕೂಲ್) ಧಾರವಾಡದಲ್ಲಿ ಆರಂಭವಾಯಿತು.

ಈ ತರಬೇತಿಗಾಗಿ ಯಾರನ್ನು ಆರಿಸಬೇಕು? 'ಅತ್ಯಂತ ನಾಲಾಯಖ್' ಎಂದು ನಿರ್ಣೀತರಾಗಿದ್ದ ಶಿಕ್ಷಕರನ್ನು! ಹಾಗೆ 'ಸಿಲೆಕ್ಶನ್' ಆದ ಶಿಕ್ಷಕರು ಯಾರು ಮತ್ತು ಯಾವ ಊರಿನಿಂದ ಬಂದವರೆಂಬುದನ್ನು ಕೆಳಗೆ ಕೊಟ್ಟಿದೆ.

ಬೆಳಗಾಂವ - ಬಿಜಾಪೂರ ಜಿಲ್ಲೆ :-

೧. ಪಾರ್ವಯ್ಯ ಬಿನ್ ಲಿಂಗಯ್ಯ (ಕಲಾದಗಿ)
೨. ಜನಾರ್ದನ ಪಂತ (ಗೋಕಾಕ)
೩. ತಮ್ಮಾಜಿ ಗೋವಿಂದ (ನೇಸರಗಿ)
೪. ರಂಗೋ ಕೃಷ್ಣಾಜಿ (ಬದಾಮಿ)
೫. ಜೀವಾಜಿ ಮಹಿಪತ (ಬಾಗಲಕೋಟ)
೬. ಭೀಮಾಜಿ ಹನುಮಂತ (ಬೀಡಿ)
೭. ರಾಮಜಿ ವೆಂಕಟೇಶ (ಹುನಗುಂದ)

ಧಾರವಾಡ ಜಿಲ್ಲೆ :

೮. ಸಿದ್ಧಲಿಂಗಯ್ಯ (ಧಾರವಾಡ)
೯. ವೀರಯ್ಯ (ಹಾವೇರಿ)

ಇವೆಲ್ಲ ಏಕ ಶಿಕ್ಷಕ ಶಾಲೆಗಳು, ಮೇಲಾಗಿ ಹುಡುಗರ ಸಂಖ್ಯೆಯೂ ಯಥಾತಥಾ! ಆದ್ದರಿಂದ ಬಾಗಲಕೋಟ, ಬೀಡಿ, ಹಾವೇರಿ ಮತ್ತು ಹುನಗುಂದ ಈ ಊರುಗಳಲ್ಲಿಯ ಶಾಲೆಗಳನ್ನು ತಾತ್ಪೂರ್ತಿಕವಾಗಿ ಮುಚ್ಚಿಬಿಡಲಾಯಿತು.

ಈ ತರಬೇತಿಯ ಕೇಂದ್ರಕ್ಕೆ ಸಂಬಂಧಿಸಿದ ಒಂದು ಮೋಜಿನ ಸಂಗತಿಯೆಂದರೆ ಕೆಲವು ಶಿಕ್ಷಕರು ಇದಕ್ಕಾಗಿ ಹೋಗಲು ನಿರಾಕರಿಸಿದ್ದುದು. ಕಾರಣ? 'ಟ್ರೇನಿಂಗ್'ಗೆ ಹೋಗುವುದೆಂದರೆ 'ನಾಲಾಯಖಿ'ಯ ಪಟ್ಟಿಯನ್ನು ಹಣೆಗೆ ಕಟ್ಟಿಕೊಂಡಂತೆಯೇ! ಅಂತಲೇ ಬೆಳಗಾಂವಿಯ ಕನ್ನಡ ಶಾಲೆಯ ಸಿದ್ಧಯ್ಯ, ಬೈಲಹೊಂಗಲದ ಸ್ವಾಮಿರಾವ ಅಣ್ಣಾಜಿ ಮತ್ತು ಪಾಚ್ಛಾಪುರದ ಮುಪ್ಪಯ್ಯ – ಈ ಮೂವರು ಹಾಗೆ ನಿರಾಕರಿಸಿದುದಲ್ಲದೇ ನೌಕರಿಗೆ ರಾಜಿನಾಮೆಯಿತ್ತರು.

ಆಯ್ಕೆಯಾದ ಈ ಶಿಕ್ಷಕರಿಗೆ ಕೊಟ್ಟ ತರಬೇತಿಯ ಸ್ವರೂಪವು ನಿಶ್ಚಿತವಾಗಿ ತಿಳಿದು ಬಂದಿಲ್ಲ.

ಟ್ರೇನಿಂಗ್‌ಗೆ ಹೋಗಿದ್ದ ೯ ಜನರ ಹಣೆಬರಹವೇನಾಯಿತೋ ನೋಡುವ. ಸುಮಾರು ಒಂದು ವರ್ಷಕಾಲ ತರಬೇತಿಯು ಮುಗಿದ ಮೇಲೆ ಗೋಕಾಕ, ನೇಸರಗಿ ಮತ್ತು ಕಲಾದಗಿ ಈ ಊರುಗಳ ಮಾಸ್ತರರಷ್ಟೇ ಯಶಸ್ವಿಯಾಗಿ ಹೊರಬಂದರು. ಬಾಗಲಕೋಟ ಮತ್ತು ಹುನಗುಂದದಿಂದ ಬಂದಿದ್ದ ಶಿಕ್ಷಕರು ತೀರ ನಿರುಪಯೋಗಿ ಎಂದು ಕಂಡುಬಂದದ್ದರಿಂದ ಅವರನ್ನು ನೌಕರಿಯಿಂದ ನಿವೃತ್ತಗೊಳಿಸಲಾಯಿತು. ಉಳಿದವರನ್ನು ಮುಂದಾದರೂ ಸುಧಾರಿಸುವುದು ಸಾಧ್ಯವೆನಿಸಿದ್ದರಿಂದ ಅವರು ಇನ್ನು ಕೆಲಕಾಲ (೬ ತಿಂಗಳು) ತಮ್ಮ ಟ್ರೇನಿಂಗ್ ಮುಂದುವರಿಸಬೇಕೆಂದು ನಿರ್ಣಯಿಸಲಾಯಿತು!

ನಾರ್ಮಲ್ ಸ್ಕೂಲನ್ನು ಪ್ರಥಮತಃ ಆರಂಭಿಸಿದಾಗ ಪ್ರತಿ ವರ್ಷವೂ ಅದನ್ನು ನಿಯತವಾಗಿ ಮುಂದುವರಿಸಬೇಕೆಂಬ ವಿಚಾರವು ಇರಲಿಲ್ಲ. ಆದರೆ ಮೇಲೆ ಅರೆ ಸುಧಾರಿಸಿದ ಶಿಕ್ಷಕರಿಗಾಗಿಯೂ ಇನ್ನು ಕೆಲವು ಹೊಸ ಶಿಕ್ಷಕರಿಗಾಗಿಯೂ, ಧಾರವಾಡದಲ್ಲಿ ತರಗತಿಯ ಎರಡನೆಯ ಶಿಬಿರವನ್ನು ನಡೆಸಲಾಯಿತೆಂದು ತೋರುತ್ತದೆ.

ಕೆಲವು ಕಾಲದ ಅನಂತರ 'ನಾರ್ಮಲ್ ಸ್ಕೂಲ'ನ್ನು ಒಂದು ವಾರ್ಷಿಕ ಆವಶ್ಯಕತೆಯಾಗಿ ಗಣಿಸಿರಬೇಕು. ಆದ್ದರಿಂದ ೧೮೬೨ರಿಂದ ಶಿಕ್ಷಕರ ಟ್ರೈನಿಂಗ್ ಎಂಬುದು ನಿಯಮಿತವಾಗಿ ಮುಂದುವರಿಯಿತು. ಧಾರವಾಡದಲ್ಲಿ ಅಲ್ಲ; ಬೆಳಗಾಂವಿಯಲ್ಲಿ. ೧೯ನೇ ಶತಮಾನದ ಕೊನೆಗೆ ಅದು ಮತ್ತೆ ಧಾರವಾಡಕ್ಕೆಯೇ ಸ್ಥಳಾಂತರ ಹೊಂದಿ, ಇಂದಿಗೂ ಗವರ್ನಮೆಂಟ್ ಟ್ರೇನಿಂಗ್ ಕಾಲೇಜ್ (ಗಂಟ್ರೇಕಾ) ಎಂಬುದಾಗಿ ನಡೆದುಕೊಂಡು ಬಂದಿದೆ.

ಈ ಪ್ರಥಮ ತರಬೇತಿ ಕೇಂದ್ರದ ಸೂತ್ರಧಾರರಾಗಿದ್ದ ಜಾಂಭೇಕರರು ಮುಂದೆ ಇಡೀ ಮುಂಬಯಿ ಪ್ರಾಂತ್ಯಕ್ಕೆ ಅನ್ವಯಿಸುವಂತಹ ಶಿಕ್ಷಕರ ಟ್ರೇನಿಂಗ್‌ನ ಯೋಜನೆಯನ್ನು ರೂಪಿಸಿದರು! ೧೮೪೫ರಲ್ಲಿ ಅವರನ್ನು ಇಲ್ಲಿಯ ಸೂಪರಿಟೆಂಡೆಂಟ್ ಹುದ್ದೆಯಿಂದ ವರ್ಗಮಾಡಿ, ಮುಂಬಯಿಯಲ್ಲಿ ತೆರೆಯಲಾದ 'ನಾರ್ಮಲ್ ಕಾಲೇಜಿ'ನ ಸಂಚಾಲಕರನ್ನಾಗಿ ನಿಯಮಿಸಲಾಯಿತು. ಶಿಕ್ಷಕರ ತರಬೇತಿಯ ವಿಚಾರದಲ್ಲಿ ಆಗಿನ ಸರಕಾರವೂ ತೀವ್ರ ಆಸ್ಥೆಯನ್ನು ವಹಿಸಿದ್ದುದಕ್ಕೆ ಇದು ಪರ್ಯಾಯದ ನಿದರ್ಶನವಾಗಿದೆ.

ಪ್ರಾಂತೀಯ ಮಟ್ಟದ ಈ ಕೇಂದ್ರ ತರಬೇತಿಯ ವಿವರಗಳನ್ನು ತುಸು ಗಮನಿಸೋಣ. ಇದಕ್ಕಾಗಿ ೧೫ ಜನ ಮರಾಠಿ, ೧೫ ಜನ ಗುಜರಾಥೀ ಮತ್ತು ೧೦ ಜನ ಕನ್ನಡ ಶಿಕ್ಷಕರನ್ನು ಆರಿಸಬೇಕು ಎಂದು ಗೊತ್ತಾಗಿದ್ದಿತು. ಆದರೆ ದೊರೆತವರು ೨೫ ಜನ ಮಾತ್ರ. ಕನ್ನಡ ಶಿಕ್ಷಕರಲ್ಲಿ ಐವರು ಮಾತ್ರ ಹಾಜರಾದರು. ದೂರದ ಮುಂಬಯಿ! ಮೇಲಾಗಿ ಪ್ರವಾಸದ ಅನುಕೂಲತೆಗಳಿಲ್ಲದ ದಿನಗಳವು. ಐದು ಜನರಾದರೂ ಹೋಗಬೇಕೆಂದು ಅಪೇಕ್ಷಿಸಿದುದು ಅಭಿನಂದನೀಯವೇ ಸೈ.

ತರಬೇತಿಗೆಂದು ಬಂದ ಎಲ್ಲ ಶಿಕ್ಷಕರಿಗೆ ೫ ರೂ. ಸ್ಟೈಪೆಂಡ್ ಮತ್ತು ೧೨ ಆಣೆ ಕೋಣೆಯ ಬಾಡಿಗೆ ಮಂಜೂರಾಗಿದ್ದಿತು.

ಜಾಂಭೇಕರರ ಸ್ವಂತದ ನೇತೃತ್ವದಲ್ಲಿ ಕಾಲಬಾ ದೇವಿಯ ಒಂದು ನಿವಾಸದಲ್ಲಿ ಆ ತರಬೇತಿ ಕೇಂದ್ರವು ಆರಂಭವಾಯಿತು(೧೮೪೫). ಅದು ಅತ್ಯಂತ ಸಮರ್ಪಕವಾಗಿ ಸಾಗಿದೆಯೆಂದು, ಕೇಂದ್ರಕ್ಕೆ ಭೆಟ್ಟಿಯಿತ್ತ ಬ್ರಿಟಿಶ್ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದರು. ಆದರೆ ಅನಿರೀಕ್ಷಿತ ಆಘಾತವೊಂದು ಒದಗಿಬಂತು. ಬಾಳಶಾಸ್ತ್ರಿ ಜಾಂಭೇಕರರು ಬೇನೆಗೆ ತುತ್ತಾಗಿ ಮರಣ ಹೊಂದಿದರು. ಅವರ ಸಾವಿನೊಂದಿಗೆ ಈ ತರಬೇತಿ ಕೇಂದ್ರವೂ ನಿಂತುಹೋಯಿತು.

ಬಾಳಕೃಷ್ಣ ಮಾಸ್ತರರು

ಆಗಿನ ಶಿಕ್ಷಕರ ಅಯೋಗ್ಯತೆಯನ್ನು ಪ್ರಸ್ತಾಪಿಸುವಾಗ ಕೆಲವು ಅಪವಾದಗಳಿವೆಯೆಂದಿದ್ದೆವಷ್ಟೆ. ಅದಕ್ಕೆ ಅತಿ ದೊಡ್ಡ ನಿದರ್ಶನವೆಂದರೆ ಬಾಳಕೃಷ್ಣ ಮಹಾದೇವ ಮಾಸ್ತರರು. ಶಿಕ್ಷಣರಂಗದಲ್ಲಿ ಅವರು ಧ್ರುವನಕ್ಷತ್ರದಂತೆ ಇನ್ನೂ ಹೊಳೆಯುವವರಾಗಿ ಕಾರ್ಯವನ್ನೆಸಗಿದ್ದರು.

ಧಾರವಾಡದಲ್ಲಿ ೧೮೨೬ರಲ್ಲಿ ಸ್ಥಾಪಿತವಾದ ಮರಾಠೀ ಶಾಲೆಯ ಮಾಸ್ತರರಾಗಿ ಇವರು ಶಿಕ್ಷಣ ರಂಗವನ್ನು ಪ್ರವೇಶಿಸಿದರು. ಉತ್ತರ ಕರ್ನಾಟಕದಲ್ಲಿ ಹೊಸ ಶಿಕ್ಷಣ ಕ್ರಮದ ಪ್ರಥಮ ಶಿಕ್ಷಕರೆಂದರೆ ಇವರೇ, ೧೮೫೫ನೇ ಇಸವಿಯ ಒಂದು ವರದಿಯಲ್ಲಿ ಬಾಳಕೃಷ್ಣ ಮಾಸ್ತರರು ಧಾರವಾಡದ ಅದೇ ಶಾಲೆಯಲ್ಲಿ ಇದ್ದರು. ಮತ್ತು ಅವರು ೨೮ ವರ್ಷ ಸರ್ವಿಸ್‌ನಲ್ಲಿ ಇದ್ದವರು – ಎಂಬ ಉಲ್ಲೇಖಗಳಿರುವುದರಿಂದ ಒಂದೇ ಶಾಲೆಯಲ್ಲಿ ಅವರು ಏಕಪ್ರಕಾರದ ಸೇವೆ ಸಲ್ಲಿಸಿದ್ದಾರೆ ಎಂದು ಹೇಳಬೇಕು. ನಿವೃತ್ತಿಕಾಲದಲ್ಲಿ ಅವರಿಗೆ ४೦ ರೂ. ಸಂಬಳವಿದ್ದಿತು. ಇಷ್ಟು ಹೆಚ್ಚು ಸಂಬಳವನ್ನು ಪಡೆದ ಬೇರಾವ ಮಾಸ್ತರನೂ ಆ ಕಾಲದಲ್ಲಿ ಇದ್ದಿಲ್ಲ.

ಬಾಳಕೃಷ್ಣ ಮಾಸ್ತರರು ಮೂಲತಃ ಧಾರವಾಡದವರೇ ಇರಬೇಕು. ಆದರೆ ಅವರ ಅಡ್ಡಹೆಸರು ತಿಳಿಯದು. ಧಾರವಾಡದ ಜನಕ್ಕೆ ಅವರು ಸಲ್ಲಿಸಿದ ಸೇವೆ ಮಾತ್ರ ಅಪ್ರತಿಮವಾದುದು. ಅವರ ವಿದ್ವತ್ತೆಯೂ ಸ್ನೇಹಪರ ವೃತ್ತಿಯೂ ಇಷ್ಟೊಂದು ಮೇಲ್ಮಟ್ಟದ್ದಾಗಿತ್ತಲ್ಲ ಅದರಿಂದಾಗಿ ಊರವರು ಅವರನ್ನು ಬೇರೆ ನೌಕರಿಗೆ ಅಥವಾ ಬೇರೆ ಊರಿಗೆ ಹೋಗಗೊಡಲಿಲ್ಲ.

ಅವರ ಕೈಯಲ್ಲಿ ಕಲಿಯುತ್ತಲಿದ್ದ ಹುಡುಗರ ಸಂಖ್ಯೆಯೂ ಸದಾ ದೊಡ್ಡದು. ಇಷ್ಟೊಂದು ಹುಡುಗರು ಬೇರಾವ ಶಾಲೆಯಲ್ಲಿಯೂ ಇರಲಿಲ್ಲ. ಅವರ ಕಲಿಸುವ ಪದ್ಧತಿಯು ಅತ್ಯಂತ ಆಕರ್ಷಕವಾಗಿದ್ದಿರಬೇಕು. ಏಕೆಂದರೆ ಅವರ ಕೈಯಲ್ಲಿಯೇ ಶಿಕ್ಷಣ ಪಡೆಯಲೆಂದು ಬೇರೆ ಬೇರೆ ಊರುಗಳಿಂದ ಹುಡುಗರು ಬರುತ್ತಿದ್ದರಂತೆ. ಹಾಗೆ ಬರಲು ಅವರ ಹತ್ತಿರ ದುಡ್ಡು ಇಲ್ಲದಾಗ ಅಂಥ ವಿದ್ಯಾರ್ಥಿಗಳು "ನಾವು ಬಾಳಕೃಷ್ಣ ಮಾಸ್ತರರ ಹತ್ತಿರ ಕಲಿಯಲು ಹೋಗಬೇಕೆಂದಿದ್ದೇವೆ" ಎಂದು ಹೇಳಿ ತಮ್ಮ ಊರಲ್ಲಿ ವಂತಿಗೆ ಕೂಡಿಸಿಕೊಂಡು ಧಾರವಾಡಕ್ಕೆ ಬರುತ್ತಿದ್ದರು. ಧಾರವಾಡದಲ್ಲಿ ಊಟದ ವಾರ ಹಚ್ಚಿಕೊಂಡು, ಯಾರಾದರೊಬ್ಬರ ಮನೆಯಲ್ಲಿ ಉಳಿದುಕೊಂಡು, ಅಭ್ಯಾಸವನ್ನು ಮಾಡುತ್ತಿದ್ದರು. ೧೮೨೬ರಲ್ಲಿ ೧೨-೧೩ ಜನ ಹುಡುಗರು ಈ ರೀತಿ ಬಾಳಕೃಷ್ಣ ಮಾಸ್ತರರ ಶಿಷ್ಯರಾಗಿದ್ದುಕೊಂಡು, ಊರಲ್ಲಿಯ ಏಳೆಂಟು ಜನ ಅನುಕೂಲಸ್ಥರ ಮನೆಯಲ್ಲಿ ವಾರಾನ್ನವನ್ನು ಸ್ವೀಕರಿಸುತ್ತಿದ್ದರೆಂದೂ ಮುಖ್ಯ ಕಲೆಕ್ಟರ್ ಡನ್‌ಲಪ್ ಒಂದೆಡೆ ಉಲ್ಲೇಖಿಸಿದ್ದಾನೆ.

ಅದೇ ವರದಿಯ ಪ್ರಕಾರ, ಹಿಂದಿನ ಹತ್ತು ವರ್ಷಗಳಲ್ಲಿ (೧೮೨೬-೧೮೩೫) ಸುಮಾರು ೯೦೦ ಜನ ಅವರಿಂದ ಶಿಕ್ಷಣ ಪಡೆದಿದ್ದಾರೆಂತಲೂ, ಅವರಲ್ಲಿ ೮೬ ಜನ ಸರಕಾರಿ ನೌಕರಿಯಲ್ಲಿಯೂ ಇನ್ನು ೨೫ ಜನ ಶಿಕ್ಷಕರಾಗಿಯೂ, ಉಳಿದವರು ತಮ್ಮ ಮನೆತನದ ಹೋರೆಗಳಲ್ಲಿಯೂ ತೊಡಗಿದ್ದಾರೆಂದು ತಿಳಿದು ಬರುತ್ತದೆ.

ಬಾಳಕೃಷ್ಣ ಮಾಸ್ತರರಿಗೆ ೨೦ ರೂ. ಸಂಬಳವಿದ್ದಾಗ ಡನ್‌ಲಪ್ ತಾನಾಗಿ ಅವರ ಸಂಬಳವನ್ನು ೩೦ ರೂ.ಗಳಿಗೇರಿಸಬೇಕೆಂಬ ಬಗ್ಗೆ ಮೇಲಧಿಕಾರಿಗಳಿಗೆ ಪತ್ರ ಬರೆದನು.

'ಬೇರಾವುದಾದರೂ ಸರಕಾರೀ ನೌಕರಿಯಲ್ಲಿ ಅವರು ಸೇರಿದ್ದರೆ, ರೂ. ೨೦ ಏಕೆ ಅದಕ್ಕೂ ಹೆಚ್ಚು ಸಂಬಳ ದೊರೆಯಬಹುದಿತ್ತು" ಎಂದು ಡನ್‌ಲಪ್ ಅಭಿಮಾನಪುರಸ್ಸರವಾಗಿ ತಿಳಿಸಿದ್ದನು. ಕಲೆಕ್ಟರನೇ ಇಷ್ಟರ ಮಟ್ಟಿಗೆ ಅವರಲ್ಲಿ ಆಸ್ಥೆವಹಿಸಿದರೆ ಗವರ್ನರನು ಅದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ, ಅವರಿಗೆ ನಗದು ಬಹುಮಾನವನ್ನೂ ಪುರಸ್ಕಾರ ರೂಪದಲ್ಲಿ ಕೊಡಬಹುದೆಂದು ಶಿಫಾರಸು ಮಾಡಿದನು!

ಸಾರ್ವಜನಿಕ ಗೌರವ

ಈ ಬಹುಮಾನವನ್ನು ಹೇಗೆ ಸಲ್ಲಿಸಬೇಕು ಎಂಬುದಕ್ಕೂ ಗವರ್ನರರ ಆಫೀಸಿನಿಂದ ಸೂಚನೆಗಳು ಬಂದುವು. ಯೂರೋಪದಲ್ಲಾದರೊ, ಒಂದು ಕಛೇರಿ ಕೋಣೆಯಲ್ಲಿ ಬಹುಮಾನಿತನಿಗೆ ಹಣ ಕೊಟ್ಟು ಅವನಿಂದ ಒಂದು ರಸೀದಿಯನ್ನು ಪಡೆಯುವ ಪರಿಪಾಠವಿದ್ದಿತಂತೆ. ಹಾಗೇನೂ ಇಲ್ಲಿ ಮಾಡದೇ ನಗರದ ಒಂದು ಪ್ರಮುಖ ಸಾರ್ವಜನಿಕ ಸ್ಥಳದಲ್ಲಿ ಪ್ರತಿಷ್ಠಿತ ಜನರ ಸಮ್ಮುಖದಲ್ಲಿ ಬಾಳಕೃಷ್ಣ ಮಾಸ್ತರರಿಗೆ ಕೊಡಬೇಕು ಎಂದು ತಿಳಿಸಲಾಯಿತು. ಸರಕಾರೀ ಔದಾರ್ಯವು ಜನಕ್ಕೆ ಈ ರೀತಿ ಗೊತ್ತಾಗಬೇಕಿತ್ತು! ಅಂತೂ ಈ ಸಮಾರಂಭ ಜರುಗಿತು. ಬಾಳಕೃಷ್ಣ ಮಾಸ್ತರರ ಯೋಗ್ಯತೆಯು ಇನ್ನಷ್ಟು ಪ್ರಕಟಗೊಂಡಿತು. ಅವರ ಸಂಬಳ ಬಡತಿಯು ಈ ಹಿಂದೆ ಹೇಳಿದ ಕಾರಣದಿಂದಾಗಿ ಕಲ್ಕತ್ತೆಯಲ್ಲಿದ್ದ ಗವರ್ನರ್ ಜನರಲ್‌ನಿಂದ ಮಂಜೂರಾಗಿ ಬಂದಿತು.

ಬಾಳಕೃಷ್ಣ ಮಾಸ್ತರರಿಗೆ ಮತ್ತೊಮ್ಮೆ ಎಂದರೆ ೧೮೪೧ರಲ್ಲಿ ಸಾರ್ವಜನಿಕ ಸತ್ಕಾರವು ಜರುಗಿತೆಂದು ಬೋರ್ಡ್ ಆಫ್ ಎಜ್ಯುಕೇಶನ್ನಿನ ಆ ವರ್ಷದ ವರದಿಯಿಂದ ತಿಳಿದು ಬರುತ್ತದೆ.

ಬಾಳಕೃಷ್ಣ ಮಾಸ್ತರರಲ್ಲಿ ಭಾಷಿಕ ಸಂಕುಚಿತ ಮನೋವೃತ್ತಿ ಇರಲಿಲ್ಲ. ೧೮೩೭ರಲ್ಲಿ ಧಾರವಾಡದ ಸ್ಥಾನಿಕ ಕಮಿಟಿಯು ಮರಾಠೀ, ಕನ್ನಡ ಎರಡೂ ಶಾಲೆಗಳ 'ತಪಾಸಣೆ' ಮಾಡಿದುದನ್ನು ಈ ಹಿಂದೆ ಹೇಳಿದ್ದಿದೆ. ಆಗ ಮರಾಠೀ ಶಾಲೆಯ ಹುಡುಗರ ಕನ್ನಡ ಪರಿಜ್ಞಾನದ ಪರೀಕ್ಷೆಯೂ ನಡೆದದ್ದನ್ನು ಉಲ್ಲೇಖಿಸಿದ್ದಿದೆ. ಆ ರೀತಿ ಹುಡುಗರಿಗೆ ಕನ್ನಡ ಶಿಕ್ಷಣ ಕೊಟ್ಟುದಲ್ಲದೆ, ಅವರ ಪರೀಕ್ಷೆ ನಡೆಯಬೇಕೆಂದು ಕೇಳಿಕೊಂಡವರು ಬಾಳಕೃಷ್ಣ ಮಾಸ್ತರರೇ.

ಅವರ ಪ್ರಾಮಾಣಿಕ ವೃತ್ತಿಗೂ ಒಂದು ದೃಷ್ಟಾಂತವಿದೆ. ಇದೇ ಕಮಿಟಿಯವರು ತಮ್ಮಲ್ಲಿ ಪರೀಕ್ಷೆಗೆಂದು ಬಂದಾಗ ೧೩ ಹುಡುಗರಿರುವ ತಮ್ಮದೊಂದು ಕ್ಲಾಸಿನಲ್ಲಿ ಸದ್ಯಕ್ಕೆ ಒಬ್ಬ ಮಾತ್ರ ಮೇಲಿನ ವರ್ಗಕ್ಕೆ ಹೋಗಲು ಅರ್ಹತೆ ಪಡೆದಿದ್ದಾನೆಂದು ಹೇಳಿ ಅವನೊಬ್ಬನದೇ ಪರೀಕ್ಷೆಯನ್ನು ನಡೆಸಲು ಸೂಚಿಸಿದ್ದರು.

ಕನ್ನಡ ಶಿಕ್ಷಕರ ಮಟ್ಟವನ್ನು ಸುಧಾರಿಸಲೋಸುಗ ೧೮೪೨ರಲ್ಲಿ ಏರ್ಪಟ್ಟ ತರಬೇತಿ ಕೇಂದ್ರವನ್ನು ಧಾರವಾಡದಲ್ಲಿಯೇ ತೆರೆಯಬೇಕೆಂದಿದ್ದರ ಮುಖ್ಯ ಕಾರಣ ಬಾಳಕೃಷ್ಣ ಮಾಸ್ತರರು! ಅವರೂ ಗಾಡಗೀಳ ಎಂಬ ಸ್ಥಳೀಯ ಇನ್‌ಸ್ಪೆಕ್ಟರರೂ ಸೇರಿ, ಶಿಕ್ಷಕರಿಗೆ ತರಬೇತಿಯನ್ನು ಕೊಟ್ಟರು.

ಆ ವೇಳೆಗೆ ಬಾಳಕೃಷ್ಣ ಮಾಸ್ತರರು ಮಧ್ಯ ವಯಸ್ಸನ್ನು ದಾಟಿದ್ದರು. ಈ ಹೆಚ್ಚಿನ ಕೆಲಸದ ಶ್ರಮವೂ ಸಾಕಷ್ಟು ಬಿದ್ದಿತು. ಆದುದರಿಂದ ಈ ಪ್ರಥಮ ತರಬೇತಿ ಕೇಂದ್ರದ ಕಾರ್ಯ ಮುಗಿದೊಡನೆಯೇ ಅವರು ವಿಶ್ರಾಂತಿಯನ್ನು ಪಡೆಯುವುದು ಸಾಧ್ಯವಾಯಿತು. ಆಗ ಅವರಿಗೆ ೧೮೪೩ರಲ್ಲಿ ಒಂದೂವರೆ ವರ್ಷದ ದೀರ್ಘಾವಧಿಯ ರಜೆಯನ್ನು ಕೊಡಲಾಯಿತು.

ಶಿಕ್ಷಣ ವಿಷಯಕವಾದ, ಯಾವ ವರ್ಷದ ಸರಕಾರೀ ವರದಿಯನ್ನು ತೆರೆದು ನೋಡಿದರೂ ಅದರಲ್ಲಿ ಧಾರವಾಡದ ಮರಾಠೀ ಶಾಲೆಯು ಅತ್ಯಂತ ಪ್ರಗತಿಪರವಾಗಿ ಸಾಗಿದೆ ಎಂಬುದಾಗಿ ಹೇಳುತ್ತ ಮೇಲಧಿಕಾರಿಗಳು ತಮ್ಮ ಮೆಚ್ಚಿಕೆಯನ್ನು ವ್ಯಕ್ತಮಾಡಿದ್ದು ಕಂಡುಬರುತ್ತದೆ. ೧೮೪೮ರ ವರದಿಯಲ್ಲಿ ಈ ಶಾಲೆಯಲ್ಲಿ ಮೊದಲಿನಿಂದ ಇದುವರೆಗೆ ಶಿಕ್ಷಣ ಪಡೆದವರಲ್ಲಿ ೨೫೮ ಜನರು ಮುನ್ಸೀಫ, ಮಾಮಲೇದಾರ, ದಿವಾಣ, ದಫ್ತರದಾರ, ವಕೀಲ ಮುಂತಾದ ದೊಡ್ಡ ದೊಡ್ಡ ಕ್ಷೇತ್ರಗಳಲ್ಲಿ ಹೆಸರುವಾಸಿಯಾಗಿದ್ದಾರೆ ಎಂದೂ, ಅದರ ಶ್ರೇಯಸ್ಸೆಲ್ಲಾ ಬಾಳಕೃಷ್ಣ ಮಾಸ್ತರರಿಗೇ ಹೊಗತಕ್ಕುದು ಎಂದೂ ಕಾಣಿಸಲಾಗಿದೆ.

ಹೀಗೆ ಎಲ್ಲ ದೃಷ್ಟಿಯಿಂದಲೂ ಪರಿಪೂರ್ಣವಾದ ಸೇವೆಯನ್ನು ಸಲ್ಲಿಸಿದ್ದ ಬಾಳಕೃಷ್ಣ ಮಹಾದೇವರು ಆದರ್ಶ ಶಿಕ್ಷಕರೇ ಸೈ. ಯಾವ ಕಾಲದಲ್ಲಿಯೂ ಇಂಥ ಶಿಕ್ಷಕರ ಸಂಖ್ಯೆ ಸಾವಿರಕ್ಕೊಂದು ಎನ್ನಬಹುದು.

●

೧೫. ಮುಲ್ಕೀ ಶಾಲೆಗಳ ವಿಸಿಟ್-ಬುಕ್

ಗಣ್ಯವ್ಯಕ್ತಿಗಳು ಸಾರ್ವಜನಿಕ ಸಂಸ್ಥೆಯೊಂದಕ್ಕೆ ಭೆಟ್ಟಿ ಇತ್ತರೆ ಅವರ ಅಭಿಪ್ರಾಯವನ್ನು ಬರೆಯಿಸಿಕೊಳ್ಳುವುದಕ್ಕೆ ವಿಸಿಟ್‌ಬುಕ್ಕನ್ನು ನಾವು ಇಂದು ಬಳಸುತ್ತಿದ್ದೇವಷ್ಟೆ. ಕಳೆದ ೧೮೭೭ರಿಂದ ೧೯೩೮ರವರೆಗೆ ಇಂಥ ವಿಸಿಟ್‌ಬುಕ್‌ಗಳು ಆಗಿನ ಮುಲ್ಕೀ ಶಾಲೆಗಳಲ್ಲಿ (ಪ್ರಾಥಮಿಕ ಶಾಲೆಗಳಲ್ಲಿ) ಬಳಕೆಯಲ್ಲಿದ್ದುವು. ಅವುಗಳಿಂದ ಆಗಿನ ಶಿಕ್ಷಣದ ಸ್ಥಿತಿಗತಿಯನ್ನು ಅಧಿಕೃತವಾಗಿ ತಿಳಿಯಬಹುದಾದರೂ ಇತಿಹಾಸ ಸಂಶೋಧನೆಯ ಸಂದರ್ಭದಲ್ಲಿ ಇದೊಂದು ನಗಣ್ಯವಾದ ಸಾಧನ. ಆದರೆ ಈ 'ವಿಸಿಟ್-ಬುಕ್'ನಲ್ಲಿಯ ಅಭಿಪ್ರಾಯಗಳನ್ನು ವಿಶ್ಲೇಷಿಸಿದಾಗ ಶಿಕ್ಷಣ ವಿಚಾರ ಮಾತ್ರವಲ್ಲದೆ, ಆಗಿನ ಗ್ರಾಮಜೀವನದ ಅಂಶಗಳು ತಿಳಿದುಬರುವುವು. ಮುಂಬಯಿ ಕರ್ನಾಟಕದ ಪೂರ್ವಾಧುನಿಕ ಕಾಲದ (೧೮೦೦-೧೯೨೦) ಸಾಮಾಜಿಕ ಅಧ್ಯಯನದ ಯೋಚನೆಯ ನಿಮಿತ್ತ, ಇಂಥ 'ವಿಸಿಟ್-ಬುಕ್'ಗಳು ನನಗೆ ಅಲ್ಲಲ್ಲಿ ನೋಡದೊರೆತವು. ಅವುಗಳಿಂದ ತಿಳಿದುಬಂದ ಕೆಲವು ವಿಚಾರಗಳನ್ನು ಈಗ ಪ್ರಸ್ತುತ ಪಡಿಸುವೆ.

ಮುಂಬಯಿ ಸರಕಾರವು ಕ್ರಿ.ಶ. ೧೮೭೭ರಲ್ಲಿ ಒಂದು ಪರಿಪತ್ರವನ್ನು ಹೊರಡಿಸಿ, ಪ್ರತಿಯೊಂದು ಮುಲ್ಕೀ ಶಾಲೆಯವರು 'ವಿಸಿಟ್ ಬುಕ್' ಇರಿಸಬೇಕು ಎಂದು ವಿಧಿಸಿದರು.

ಸರಕಾರಕ್ಕೆ ಇದರ ಅವಶ್ಯಕತೆ ಅನ್ನಿಸಿದ್ದರ ಹಿನ್ನೆಲೆ ಹೀಗಿದೆ. ೧೮೭೦ರ ದಶಕದಲ್ಲಿ ಸರಕಾರೀ ಶಾಲೆಗಳ ಜೊತೆಗೆ ಖಾಸಗಿ ಅಥವಾ ಗಾವಠೀ ಶಾಲೆಗಳೂ ಇದ್ದವು. ಸರಕಾರವು ಸಹಾಯಕ ಅನುದಾನವನ್ನು ಕೊಡತೊಡಗಿತು. ಆದರೆ ಶಿಕ್ಷಕರ ಸಂಬಳ, ಫೀ ಹಣ, ವಿದ್ಯಾರ್ಥಿ ಹಾಜರ ಪರೀಕ್ಷೆ ಇವಾವುವೂ ಸರಿಯಾಗಿಸದಿದ್ದರಿಂದ ಪರ್ಯಾಯ ರೀತಿಯಲ್ಲಿ ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ಸರಕಾರಕ್ಕೆ ಅನಿಸಿತು. ಜಿಲ್ಲೆಗೆ ಒಬ್ಬ ಡೆಪ್ಯೂಟಿ ಎಜ್ಯು. ಇನ್‌ಸ್ಪೆಕ್ಟರ್; ಅವರ ಕೈಯಲ್ಲಿ ಒಬ್ಬಿಬ್ಬ ಅಸಿಸ್ಟೆಂಟರು ಇರುತ್ತಿದ್ದರು, ಶಾಲೆಗಳಿಗೆ ಭೆಟ್ಟಿ ಕೊಡುತ್ತಿದ್ದರು. ಆದರೆ ಎರಡು ಬಗೆಯ ಶಾಲೆಗಳಿರುತ್ತವಷ್ಟೆ, ಅವುಗಳ ಸಂಖ್ಯೆ ಸ್ವಾಭಾವಿಕವಾಗಿಯೇ ಹೆಚ್ಚುತ್ತಿರುವಾಗ ಈ ಶಿಕ್ಷಣಾಧಿಕಾರಿಗಳಿಗೆ ಎಲ್ಲ ಶಾಲೆಗಳ ಉಸ್ತುವಾರಿಯನ್ನು ಸಮರ್ಪಕವಾಗಿ ಮಾಡುವುದು ಅದೆಂತು ಸಾಧ್ಯ?

ಅದಕ್ಕೇನೆ ಈ ವಿಸಿಟ್-ಬುಕ್‌ಗಳಲ್ಲಿ ಶಿಕ್ಷಣಖಾತೆಯವರಲ್ಲದೆ ಆ ಊರಿನ ಗಣ್ಯ ನಾಗರಿಕರು, ಸ್ಕೂಲ್ ಕಮಿಟಿ ಮೆಂಬರರು, ರೆವಿನ್ಯೂ ಅಥವಾ ಸರಕಾರೀ ಖಾತೆಯ (ಅಂಚೆ, ಆರೋಗ್ಯ, ಯಾವುದೂ!) ಅಧಿಕಾರಿಗಳು ಶಾಲೆಯ ವಿಸಿಟ್-ಬುಕ್‌ನಲ್ಲಿ ಬರೆಯಬೇಕು ಎಂದು ಸರಕಾರವು ಅಪೇಕ್ಷಿಸಿತು.

ಏನನ್ನು ಬರೆಯಬೇಕು? ಇದಕ್ಕಾಗಿ ಶಿಕ್ಷಣ ಖಾತೆಯು ಒಂದು ಸೂಚಿಕೆಯನ್ನು (format) ತಯಾರಿಸಿತು. ಸುರುವಿಗೆ ವಿದ್ಯಾರ್ಥಿ ಸಂಖ್ಯೆ; ಅದರಲ್ಲಿ ಹಾಜರಿದ್ದವರ ಸಂಖ್ಯೆ ಕೊಡಬೇಕು. ಅನಂತರ "ವೇಳಾಪತ್ರಕದಂತೆ ಕೆಲಸ ನಡೆದಿದೆಯೋ ಹೇಗೆ?', 'ಕಾಗದ ಪತ್ರಗಳನ್ನು ಸರಿಯಾಗಿ ಇಟ್ಟಿದ್ದಾರೆಯೋ ಹೇಗೆ?' 'ಶಾಲಾಕಟ್ಟಡ ಸುಸ್ಥಿತಿಯಲ್ಲಿ ಅದೆಯೊ ಹೇಗೆ?' ಇವಿಷ್ಟಕ್ಕೆ ಉತ್ತರಿಸಿ "ಒಟ್ಟಿನ ಸ್ಥಿತಿ ಹೇಗೆ" ಎಂಬುದಕ್ಕೆ ಅಭಿಪ್ರಾಯ ಬರೆಯಬೇಕಾಗುತ್ತಿತ್ತು.

ಹತ್ತು ವರ್ಷಗಳ ಅನಂತರ (೯-೮-೧೮೮೯) ಸರಕಾರವು ಈ ಸಂಬಂಧದ ನಿಯಮಗಳಲ್ಲಿ ಸುಧಾರಣೆ ಮಾಡಿತು. ಅವುಗಳಲ್ಲಿ "ಮಾಸ್ತರರು ವರ್ಗವಾಗಿ ಎರಡನೇ ಕಡೆಗೆ ಹೋಗುವಾಗ್ಗೆ ಈ ಪುಸ್ತಕವನ್ನು ತಮ್ಮ ಕೂಡ ಒಯ್ಯಬಾರದು" ಎಂಬ ನಿಯಮವೂ ಒಂದಾಗಿದ್ದಿತು! ಕಾರಣವನ್ನು ಯಾರೂ ಊಹಿಸಬಹುದು.

ಅನೇಕ ಹಳೆಯ ಶಾಲೆಗಳಲ್ಲಿ ಇಂಥ ವಿಸಿಟ್-ಬುಕ್‌ಗಳು ಈಗಲೂ ಉಳಿದು ಕೊಂಡಿವೆ. ಆ ಪೈಕಿ ಈಗಿನ ಹಾವೇರಿ ಜಿಲ್ಲೆಯ, ಹಾವೇರಿ ತಾಲೂಕಿನ ಎರಡು ಊರುಗಳ (ಗುತ್ತಲ ಮತ್ತು ಹಾವನೂರು) ಶಾಲೆಗಳ ಇಂಥ ಬುಕ್‌ಗಳನ್ನು ಮಾದರಿಗಾಗಿ ಎತ್ತಿಕೊಳ್ಳುವೆ. ಅವುಗಳ ಒಟ್ಟಿನ ಪರಿಶೀಲನೆಯಿಂದ ಆಗ ಪ್ರಾಥಮಿಕ ಶಿಕ್ಷಣದ ಪದ್ಧತಿ, ಪರೀಕ್ಷೆಗಳು, ಶಿಕ್ಷಕರ ಯೋಗ್ಯತೆ-ಅಯೋಗ್ಯತೆ, ಸರಕಾರದ ಧೋರಣೆ, ಶಿಸ್ತಿನ ಪಾಲನೆ, ಊರವರಿಗೂ ಮಾಸ್ತರರಿಗೂ ಇರುವ ಸಂಬಂಧ - ಇವನ್ನು ಸುಲಭವಾಗಿ ಗುರುತಿಸಬಹುದು.

ಈ ಎರಡು ಶಾಲೆಗಳ ಕ್ರಿ.ಶ. ೧೮೭೭ರಿಂದ ೧೯೧೯ರವರೆಗಿನ, ಎಂದರೆ ಸುಮಾರು ೪೦ ವರ್ಷಗಳಲ್ಲಿ ಬರೆಯಲಾದ ಅಭಿಪ್ರಾಯಗಳು ಬಹಳವೇನೂ ಇಲ್ಲ. ಅವುಗಳ ಧೋರಣೆಯಲ್ಲಿ ಕೆಲವು ಬಿಚ್ಚು ನುಡಿಯವು, ಇನ್ನು ಹಲವು ವಿಧಾಯಕ ಸ್ವರೂಪದವು. ಮತ್ತೆ ಕೆಲವು ಮಾಸ್ತರ ಜನರು ಹೇಳಿ ಬರೆಯಿಸಿದವುಗಳು. ಇದು ೧೯-೧-೧೮೭೭ರ ಒಂದು ಶರಾ:

"ಸಾಲಿಯು ಸಾಧಾರಣ ಸ್ಥಿತಿಯಲ್ಲಿ ಅದೆ. ಹುಡುಗರು ಕಡಿಮೆ ಇದ್ದಾರೆ. ಮೇಲಿನ ವರ್ಗಗಳ ಹುಡುಗರು ಶಾಲಾಕ್ಕೆ ಬರುವದಿಲ್ಲಾ. ಮಾಸ್ತರರು ಮುದುಕರಿದ್ದಾಗ್ಯೂ ಇವರಿಗೆ ಪೆನ್ಶನ್ ದೊರೆಯಲಿಕ್ಕೆ ಇನ್ನೂ ೧೧ ವರ್ಷ ಬೇಕು. ಇವರನ್ನು ಸ್ವತಂತ್ರ ಶಾಲೆಯ ಮಾಸ್ತರರಾಗಿ ಇಡುವುದಕ್ಕಿಂತಲೂ ದೊಡ್ಡ ಶಾಲೆಯಲ್ಲಿ ಇಷ್ಟೇ ಪಗಾರದ ಶಿಕ್ಷಕರಾಗಿ ಇಡುವದು ನೆಟ್ಟಗೆ."

ಇದೇ ರೀತಿಯಲ್ಲಿ ಬೇರೆ ಸಂದರ್ಶಕ - ಅಧಿಕಾರಿಗಳು ತಮ್ಮ ಸ್ಪಷ್ಟವಾದ ಅಭಿಪ್ರಾಯಗಳನ್ನು ಲಿಖಿಸಿದ್ದಾರೆ:

"ಗಣಿತ ವಿಷಯದಲ್ಲಿ ಹುಡುಗರು ಕಚ್ಚಾ ಇದ್ದಾರೆ... ವ್ಯಾಕರಣ ನೆಟ್ಟಗೆ ಕಲಿಸಬೇಕು"

- "ಕವಿತೆಯ ಅರ್ಥ, ವ್ಯಾಕರಣ ಇವು ಚೆನ್ನಾಗಿ ಬರುವುದಿಲ್ಲ. ನಾಲ್ಕನೆಯ ಇಯತ್ತೆಯ ಹುಡುಗರು ಅನೇಕ ವಿಷಯಗಳಲ್ಲಿ 'ಕಡಿಮೆಯಿದ್ದಾರೆ' (ಕಚ್ಚಾ ಇದ್ದಾರೆ)".

ಆಗಿನ ಮುಲ್ಕೀ ಶಾಲೆಗಳಲ್ಲಿ ವಾರ್ಷಿಕ ಪರೀಕ್ಷೆಗಳು ಡಿಸೆಂಬರದಿಂದ ಮಾರ್ಚ್ ವರೆಗಿನ ಅವಧಿಯಲ್ಲಿ ಒಂದು ದಿನ ಜರುಗುತ್ತಿದ್ದವು. ಈ ದೀರ್ಘ ಕಾಲಾವಧಿಯ ಕಾರಣವೆಂದರೆ ಅವನ್ನು ಇನ್ಸ್‌ಪೆಕ್ಟರರೇ ಸ್ವಯಂ ಬಂದು ತೆಗೆದುಕೊಳ್ಳಬೇಕಿತ್ತು. ಆಗ ಶಾಲಾ ಕಮಿಟಿಯ ಸದಸ್ಯರು ಹಾಜರಿರಬೇಕಿತ್ತಲ್ಲದೆ, ಊರಿನ ಸದ್ಗೃಹಸ್ಥರಿಗೂ ಆಮಂತ್ರಣ ಕೊಡಬೇಕು ಎಂಬ ನಿಯಮವಿದ್ದಿತು. ಹೀಗೆ ಪರೀಕ್ಷೆಗಳೆಂದರೆ ಆ ಊರಿನಲ್ಲಿ ಒಂದು ಸಡಗರದ ಸಮಾರಂಭವೇ ಆಗಿರುತ್ತಿತ್ತು. ಪರೀಕ್ಷೆ ತೆಗೆದುಕೊಂಡ ಮೇಲೆ ಇನ್ಸ್‌ಪೆಕ್ಟರರು 'ವಿಸಿಟ್-ಬುಕ್'ನಲ್ಲಿ ಫಲಿತಾಂಶದ ಸಾರವನ್ನು ಬರೆಯುತ್ತಿದ್ದರು.

ಹಾವನೂರಿನ ಹೆಡ್‌ಮಾಸ್ತರರು

ಆಗಿನ ಯಾವುದೇ ಪ್ರಾಥಮಿಕ ಶಾಲೆಯ ಏಳ್ಗೆ ಅಥವಾ ಇಳಿವು ಅಲ್ಲಿಯ ಶಿಕ್ಷಕರ ವಿಶೇಷತಃ ಹೆಡ್‌ಮಾಸ್ತರರ ಮೇಲೆ ಅವಲಂಬಿಸಿತ್ತು. ವಿದ್ಯಾದಾನವು ಒಂದು ಪವಿತ್ರ ಕಾರ್ಯವೆಂದು ಪರಿಭಾವಿಸಿ, ನಿಷ್ಠೆಯಿಂದ ತಮ್ಮ ವೃತ್ತಿಯಲ್ಲಿ ತೊಡಗಿದ್ದ ಅನೇಕ ಶಿಕ್ಷಕರು ಹಿಂದಿನ ಎರಡು-ಮೂರು ತಲೆಮಾರಿನಲ್ಲಿ ಆಗಿಹೋದರು. ಅದಕ್ಕೆ ಈ ವಿಸಿಟ್-ಬುಕ್‌ಗಳಲ್ಲಿ ಸ್ಪಷ್ಟವಾದ ನಿದರ್ಶನಗಳು ದೊರೆಯುತ್ತವೆ. ಅಂಥ ಇಬ್ಬರು ಹೆಡ್ ಮಾಸ್ತರರನ್ನು ಉಲ್ಲೇಖಿಸುವೆ. ಒಬ್ಬರು ಹಾವನೂರಿನಲ್ಲಿ ೧೯೦೧ರಿಂದ ೧೯೨೯ರವರೆಗೆ ಇದ್ದ **ವಿನಾಯಕ ಪಾಠಕ** ಎಂಬುವರು. ಇನ್ನೊಬ್ಬರ ಗುತ್ತಲದಲ್ಲಿ ೧೯೦೫ರಿಂದ ೧೯೦೮ರವರೆಗೆ ಇದ್ದ **ವೆಂ.ತಿ. ಕುಲಕರ್ಣಿ** - ಅರ್ಥಾತ್ ಸುಪ್ರಸಿದ್ಧ ಕಾದಂಬರಿಕಾರ **ಗಳಗನಾಥರು.**

ವಿನಾಯಕ ಪಾಠಕರ ಬಗ್ಗೆ ೧೯೦೧ರಲ್ಲಿ ವಿ.ಕ. ಜೋಗಳೇಕರ ಎಂಬ ಬೇರೊಂದು ಖಾತೆಯ (ಅಂಚೆ?) ಅಧಿಕಾರಿಗಳು ಹೀಗೆ ಬರೆದಿದ್ದಾರೆ:

"The school is showing signs of improvement under the new Headmaster, who is a painstaking teacher. The Head-master tells me that he is in need of a trained hand. And if provided, he assures that he would be able to increase the attendance and improve the state of the school in all respects."

ಈ ಹೇಳಿಕೆಯ ಹಿಂದಿರುವ ಹೆಡ್-ಮಾಸ್ತರರ ಶಿಕ್ಷಣದ ಬಗ್ಗೆ ಕಾಳಜಿ ಮತ್ತು ಪ್ರಗತಿಪರ ದೃಷ್ಟಿಯನ್ನು ಗಮನಿಸಬೇಕು. ಒಬ್ಬ 'ಟ್ರೇಂಡ್' ಅಸಿಸ್ಟೆಂಟ್‌ನನ್ನು ಬೇಡಿದ್ದಾರೆ.

ಕಾರಣವೆಂದರೆ, ಅವರೇ ಟ್ರೇನಿಂಗ್ ಪಡೆದಿರಲಿಲ್ಲ! ಕ್ರಿ.ಶ. ೧೯೦೫ರಲ್ಲಿ ಅವರು ಟ್ರೇಂಡ್ ಆಗಿ ಬಂದರೆಂದು ವಿಸಿಟ್ ಬುಕ್‌ನಿಂದ ಪರೋಕ್ಷವಾಗಿ ತಿಳಿದುಬರುತ್ತದೆ. ಮರುವರ್ಷದ ಒಂದು ಶರಾ ಹೀಗಿದೆ:

"ಈ ಶಾಲೆಯು ಕ್ರಮೇಣ ಸುಧಾರಿಸುತ್ತ ನಡೆದಿದೆ. ಮತ್ತೂ ಎರಡನೇ ಅಸಿಸ್ಟೆಂಟರು ಮಿ| ಕುಲಕರ್ಣಿ - ಇವರ ಸಹಾಯದಿಂದಲೂ ಉತ್ಸಾಹದಿಂದಲೂ ತಾಲೀಮು ಮತ್ತು ಹೂದೋಟ ಇವೆರಡರ ಕೆಲಸ ಚೆನ್ನಾಗಿ ನಡೆದಿದೆ.... ಶಿಕ್ಷಣದಲ್ಲಿ ಉಪಯೋಗುವಾಗುವಂಥ ಕೆಲವು ಚಿತ್ರಪಟಗಳು ನೋಡಿ ಸಂತೋಷವಾಯಿತು.... ಊರ ಪ್ರಮುಖ ಜನರೂ ಗೌಡರೂ ಶಾಲೆಯ ಹತ್ತಿರ ಒಂದು ಬಾವಿಯನ್ನು ಅಗೆಸಿದ್ದಾರೆ. ಅದರಿಂದ ಶಾಲೆಯ ಹೂದೋಟಕ್ಕೆ ಬಹಳ ಉಪಯೋಗವಾಗುತ್ತದೆ."

ಮುಂದೆ ೨೧ನೇ ಡಿಸೆಂಬರ್ ೧೯೦೭ರಲ್ಲಿ ಈ ಮಾತಿದೆ:

"ಶಾಲೆಯು ತಪಾಸು ಮಾಡಿತು. ಅಭ್ಯಾಸ, ಶಿಕ್ಷಣ ಪದ್ಧತಿ, ಹುಡುಗರ ಸಂಖ್ಯೆ ಇವುಗಳನ್ನು ಕುರಿತು ಬಹಳ ಸುಧಾರಣೆ ತೋರಿಬರುತ್ತದೆ. ಹೆಡ್ ಮಾಸ್ತರರು ಕೈಕೆಳಗಿನ ಅಸಿಸ್ಟೆಂಟರನ್ನು ಒಳ್ಳೆ ಮನಸಿನಿಂದ ನಡೆಸಿಕೊಂಡಿರುವುದರಿಂದ ಅವರಿಗೆ ಮಾನ್ಯರೂ ಆಗಿರುತ್ತಾರೆ. ಎಲ್ಲರಲ್ಲಿ ಸಾಲೆಯು ಮಾದರಿ ಸಾಲೆಯಂತಾ ಹೆಸರು ಪಡಬೇಕೆಂಬ ಆಕಾಂಕ್ಷೆ ಕಂಡುಬರುವುದು."

ಮೇಲೆ ಹೇಳಿದ ಜೋಗಳೇಕರರು ೧೯೧೯ರಲ್ಲಿ, ತಮ್ಮ ಖಾತೆಯ ಕೆಲಸಕ್ಕೆಂದು ಹಾವನೂರಿಗೆ ಬಂದಾಗ ಮತ್ತೊಮ್ಮೆ ಶಾಲೆಗೆ ಭೆಟ್ಟಿ ಕೊಡಬಯಸಿದರು. ಆದರೆ ಅಂದು ರವಿವಾರ! ಆದಾಗ್ಯೂ ಹೆಡ್-ಮಾಸ್ತರರು ತಮ್ಮ ಬಗ್ಗೆ ಹಾಗೂ ಶಾಲೆಯ ಬಗ್ಗೆ ಸದ್ಭಾವನೆಯನ್ನು ಇರಿಸಿಕೊಂಡಿದ್ದ ಆ ಅಧಿಕಾರಿಗಳಿಗಾಗಿ ರವಿವಾರವಾಗಿದ್ದರೂ ಕೆಲ ವಿದ್ಯಾರ್ಥಿಗಳನ್ನು ಜಮಾಯಿಸಿದರು. ಹಾಜರಿದ್ದವರ ಸಂಖ್ಯೆಯನ್ನು ವಿಸಿಟ್‌ಬುಕ್‌ನಲ್ಲಿ ಕಾಣಿಸಬೇಕು? ಹೌದು. ಆದರೆ ಜೋಗಳೇಕರರು ಹಿಂದಿನ ದಿನದ ಹಾಜರಿ ಸಂಖ್ಯೆಯನ್ನು ಕಾಣಿಸಿದ್ದಾರೆ. ಎಂದಿನಂತೆ ಶಾಲಾ ಪ್ರಗತಿಯ ಬಗ್ಗೆ ಅಭಿಪ್ರಾಯ ಕೊಟ್ಟಿದ್ದಾರೆ. ಅಲ್ಲದೆ ಇನ್ನೂ ಒಂದು ಮಾತನ್ನು ಸೇರಿಸಿದ್ದಾರೆ: "ಈ ಸುಯೋಗ್ಯ ಹೆಡ್‌ಮಾಸ್ತರರನ್ನು ಇನ್ನೂ ಹತ್ತು ವರ್ಷ ಅಲ್ಲಿಯೇ ಇರಿಸಬೇಕು"[1] - ಎಂದು.

ಹೆಡ್‌ಮಾಸ್ತರ್ ಗಳಗನಾಥರು

ಗುತ್ತಲ ಶಾಲೆಗೆ ಬರೋಣ. ಆ ಶಾಲೆಯಲ್ಲಿ ಗಳಗನಾಥರು ನಾಲ್ಕು ವರ್ಷಗಳ ಕಾಲ ಮಾತ್ರವೇ, ಪಾಠಕರಂತೆ ಹೆಡ್‌ಮಾಸ್ತರರಾಗಿಯೇ ಕೆಲಸ ಮಾಡಿದರು. ಹಾವನೂರ ಶಾಲೆಯ ಬಳಿ ಒಂದು ಬಾವಿಯನ್ನು ತೋಡಿಸಿದ್ದಂತೆ ಗಳಗನಾಥರೂ ೧೯೦೭ರಲ್ಲಿ ಹಾಗೇನೇ ಗುತ್ತಲದಲ್ಲಿ ಮಾಡಿದ್ದಾರೆ. ಅವರಿಗೂ ಓರ್ವ ಸಮರ್ಥ ಅಸಿಸ್ಟೆಂಟ್ ಇದ್ದರು. 'He has a good assistant in Mr. P.N. Patil who makes good models' ಎಂಬುದಾಗಿ ಸ್ವತಃ ಕಲೆಕ್ಟರನೇ ಶಾಲೆಗೆ ಭೆಟ್ಟಿಕೊಟ್ಟಾಗ (೧೧-೩-೧೯೦೭) ವಿಸಿಟ್-ಬುಕ್‌ನಲ್ಲಿ ಬರೆದಿದ್ದಾನೆ.

ಗಳಗನಾಥರ ಸಹೋದ್ಯೋಗಿಗಳನ್ನು ಹೊಗಳುವ ವಿಚಾರದಲ್ಲಿ ಜಿ.ವಿ. ಕೇತಕರ ಎಂಬ ಶಿಕ್ಷಣಾಧಿಕಾರಿಯು ಒಂದು ಹೆಜ್ಜೆ ಮುಂದೆ ಹೋಗಿದ್ದಾನೆ:

"The assistants instead of disliking the vigorous discipline appear well pleased and show their appreciation of it even in the absence of the Head-Master (Oct. 1905).

ಗಳಗನಾಥರ ಕಾಲದ ವಿಸಿಟ್-ಬುಕ್‌ನಲ್ಲಿ ಅವರ ಶಿಕ್ಷಣ ಪದ್ಧತಿಯ ಬಗ್ಗೆ ಒಂದು ವಿಶಿಷ್ಟ ಒಕ್ಕಣಿಕೆಯಿದೆ. ಆ ಶಾಲೆಯಲ್ಲಿ ಎರಡು ಬಗೆಯ ಬಜೆಟ್ ಇತ್ತಂತೆ. ಒಂದು ಸರಕಾರಿ ಹಣದ ಜಮಾ ಮತ್ತು ವೆಚ್ಚದ್ದು. ಇನ್ನೊಂದು ಪಾಠಕ್ರಮದ್ದು! ಮುಂಬರುವ ತಿಂಗಳಲ್ಲಿ ಯಾರು ಯಾರು ಎಷ್ಟೆಷ್ಟು ಅಭ್ಯಾಸ-ಭಾಗವನ್ನು(Portion) ಮಾಡಿ ಮುಗಿಸಬೇಕೆಂದು ಮುಂಗಡ ಗೊತ್ತುಪಡಿಸಿದ್ದರು. ಹೆಡ್‌ಮಾಸ್ತರರು ಕಾಲಕಾಲಕ್ಕೆ ಆ ಬಗ್ಗೆ ವಿಚಾರಿಸುತ್ತಿದ್ದರು.[2]

ಇದಾಗಿ ೧೦-೧೨ ವರ್ಷಗಳ ಅನಂತರದ (೮-೩-೧೯೧೯) ಒಂದು ಶರಾವನ್ನು ಇದ್ದುದ್ದಿದ್ದಂತೆ ನಿವೇದಿಸಿ, ಮುಗಿಸುವೆ:

"Visited the school at 8.00 a.m. The second Assistant - Master had not come and his students were idle. Such dereliction of duty on the part of Asst. Master is intolerable."

P. S. The Second Assistant came to the school at 8.20 a.m., when I was leaving.

(3cd Asst. D.E.I.)

ಪಶ್ಚಾತ್ ಟಿಪ್ಪಣಿ (Post-Script)

ಕ್ರಿ.ಶ. ೧೯೩೮ರಲ್ಲಿ ಮುಂಬಯಿ ಸರಕಾರವು ಪ್ರಾಥಮಿಕ ಶಿಕ್ಷಣವನ್ನು ಪೂರ್ಣವಾಗಿ ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿತು. ಶಿಕ್ಷಕನಿಗೆ ಆ ಹಿಂದೆ ಶಾಲಾಪ್ರಗತಿಗೆ ಅನುಗುಣವಾಗಿ ವರಮಾನ ದೊರೆಯುತ್ತಿದ್ದದ್ದು ಹೋಗಿ ನಿಯಮಿತವಾಗಿ ತಿಂಗಳು ತಿಂಗಳು ಪಗಾರ ಬರತೊಡಗಿದಾಗ, ಹಳ್ಳಿಯ ಶಾಲೆಗಳಲ್ಲಿ ಮಾಸ್ತರರು, ರಜಾಚೀಟಿ ಬರೆದಿಟ್ಟು ಹೋಗಿಬಿಡುವುದು, ಆ ಕಾಲಕ್ಕೆ ಇನ್‌ಸ್ಪೆಕ್ಟರರು ಬಂದಿಲ್ಲವಾದರೆ, ಅದನ್ನು ಹರಿದುಹಾಕಿ ಬಿಡುವುದು ಮುಂತಾದ ಉಪಕ್ರಮಗಳು ಕ್ರಮೇಣ ಆರಂಭವಾದುವು.

●

---

1. ಬೇರೆ ಜಿಲ್ಲೆಯ ಅಧಿಕಾರಿಯೊಬ್ಬರು ರಜೆಯಲ್ಲಿ ಒಂದು ಹಳ್ಳಿಗೆ ಬಂದಿದ್ದಾಗ ಶಾಲೆಗೆ ಭೆಟ್ಟಿಕೊಟ್ಟು ಷರಾ ಬರೆದ ಉದಾಹರಣೆಯೂ ಇದೆ.
2. ವಿಸಿಟ್ ಬುಕ್‌ನಿಂದಲೇ ಹೆಚ್ಚಾಗಿ ತೆಗೆದುಕೊಂಡ ಗಳಗನಾಥರ ಬಗೆಗಿನ ಇನ್ನು ಕೆಲವು ಅಭಿಪ್ರಾಯಗಳನ್ನು ನನ್ನ 'ಗಳಗನಾಥ ಮಾಸ್ತರರು' (ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟನೆ ೧೯೭೨) ಗ್ರಂಥದಲ್ಲಿ ಕೊಟ್ಟಿದ್ದಿದೆ.

೧೬. ಇಂಗ್ಲಂಡಿನ ಬಡ ಕೂಲಿಕಾರರು - ನಮ್ಮಲ್ಲಿಯ ಶ್ರೀಮಂತ ರೈತರು!

ಕ್ರಿ.ಶ. ೧೮೬೨ರಲ್ಲಿ ಬೆಳಗಾವಿಯ ಕಲೆಕ್ಟರ್ ಜಾನ್ ಗಾರ್ಡನ್ ಒಂದು ಮನವಿಯನ್ನು ಹೊರಡಿಸಿ, 'ಲ್ಯಾಂಕ್ಯಾಶಾಯರಿನ (ಇಂಗ್ಲಂಡ್) ಬಟ್ಟೆಯ ಗಿರಣಿಗಳ ಹತ್ತು ಲಕ್ಷ ಕೆಲಸಗಾರರು ಉದ್ಯೋಗವಿಲ್ಲದೆ ಇದ್ದಾರೆ. ಅಲ್ಲಿಯ ಗಿರಣಿಗಳಿಗೆ ಬೇಕಾದ ಕಚ್ಚಾ ಸರಕಾದ - ಹತ್ತಿಯ ಮಾರಾಟದಿಂದ ಉತ್ತರ ಕರ್ನಾಟಕದವರು ತುಂಬಾ ಲಾಭ ಮಾಡಿಕೊಂಡಿದ್ದಾರೆ; ನಮ್ಮೀ ರೈತರು ಅಲ್ಲಿಯವರಿಗೆ ಆರ್ಥಿಕ ಸಹಾಯವನ್ನು ಒದಗಿಸಬೇಕು'. ಈ ಆಶಯದ ವಿನಂತಿಪತ್ರವನ್ನು ಕಲೆಕ್ಟರ್ ಸಾಹೇಬ ಮಾಡಿದ್ದಾನೆ. ಅದುವೆ "Lancashire In Distress", "ಕರ್ನಾಟಕ ದೇಶದೊಳಗಿನ ಶೆಟ್ಟಿ, ಸಾವಕಾರ, ರೈತ ಮೊದಲಾದವರಿಗೆ ಮನವಿಪತ್ರ".

ಇಂಗ್ಲಂಡ್ ಶ್ರೀಮಂತ ದೇಶವೆನ್ನುವುದು ಸುವಿಖ್ಯಾತವಾದುದು. ನಮ್ಮದು ಹೇಳಿ ಕೇಳಿ ಪಾರತಂತ್ರ್ಯದ ಮತ್ತು ದಟ್ಟ ದಾರಿದ್ರ್ಯದ ದೇಶ. ಹೀಗಿರುತ್ತ ಅಲ್ಲಿಯ ಗಿರಣಿ ಕಾಮಗಾರರು ಬಡವರಾದದ್ದೆಂತು? ಮತ್ತೆ ಅವರ ಈ ಸ್ಥಿತಿಗೆ ನಾವು ಕಾರಣರಾದೆವಂತೆ! ಈ ವಿಚಿತ್ರ ಸನ್ನಿವೇಶ ಏನೆಂಬುದನ್ನು ಗಮನಿಸುವ ಹಾಗಿದೆ.

ಇಂಗ್ಲಂಡಿನ ಗಿರಣಿಗಳಿಗೆ ಅಮೆರಿಕೆಯಿಂದ ನಿಯಮಿತವಾಗಿ ಹತ್ತಿಯ ಪೂರೈಕೆಯಾಗುತ್ತಿತ್ತು. ಬ್ರಿಟಿಶರು ಕರ್ನಾಟಕದಲ್ಲಿ ಕಾಲಿಟ್ಟಂದಿನಿಂದ ನಮ್ಮಲ್ಲಿಂದಲೂ ಹತ್ತಿಯ ರವಾನೆಯಾಗುತ್ತಿತ್ತು. (೧೮೨೦ರ ದಶಕದಿಂದ). ಅಮೇರಿಕೆಯ ಹತ್ತಿ ಉದ್ದ ಎಳೆಯದು; ನಮ್ಮದು ಗಿಡ್ಡ ಎಳೆಯ ಹತ್ತಿ. ಹೀಗಾಗಿ ನಮ್ಮದರ ಬೆಲೆ ತೀರ ಕಡಿಮೆ. ಅಲ್ಲದೆ ನಮ್ಮದು ಅಧೀನ ರಾಷ್ಟ್ರವಾದುದರಿಂದ ಇಲ್ಲಿಯ ಬೆಳೆಯನ್ನೇ ಸುಧಾರಿಸಿ, ಆಗ ಇನ್ನಷ್ಟು ಕಡಿಮೆ ಬೆಲೆಗೆ ಅರಳೆಯನ್ನು ಪಡೆಯಬಹುದಲ್ಲವೆ? ಈ ದೀರ್ಘಾಲೋಚನೆಯಿಂದ ನಮ್ಮ ಹತ್ತಿಯ ತಳಿಯನ್ನು ಸುಧಾರಿಸಬೇಕೆಂದು ಅಮೆರಿಕೆಯಿಂದ ಬೀಜಗಳನ್ನು ತರಿಸಿದರು. ಅಲ್ಲಿಯ ತಜ್ಞರನ್ನೂ ಕರೆಯಿಸಿದರು. ಈ ಅಮೇರಿಕನ್ ತಳಿಯ ಹತ್ತಿಯನ್ನು ಅನೇಕ ವರ್ಷಗಳವರೆಗೆ ನಮ್ಮ ರೈತರು

ಬೆಳೆದರು. ನಾನು ಚಿಕ್ಕವನಿದ್ದಾಗ ನ್ಯೂ ಆರ್ಲಿನ್ಸ್ ಹತ್ತಿ ಮುಂತಾಗಿ ಅಮೆರಿಕನ್ ಬೆಳೆಯ ಹೆಸರನ್ನು ನಮ್ಮ ಹಳ್ಳಿಯಲ್ಲಿ ಕೇಳುತ್ತಿದ್ದದ್ದು ನೆನಪಿದೆ.

ಅಮೆರಿಕೆಯಲ್ಲಿ ಬೆಳೆದ ಹತ್ತಿ ಅಟ್ಲಾಂಟಿಕ ಸಾಗರವನ್ನು ದಾಟಿ ನೇರವಾಗಿ ಇಂಗ್ಲಂಡಿಗೆ ತಲುಪುತ್ತಿತ್ತು. ನಮ್ಮದು ಹಾಗಿರಲಿಲ್ಲ. ನಮ್ಮ ಭಾಗದಲ್ಲಿ ಆಗಿನ್ನೂ ರೈಲಿನ ಸಂಚಾರವಿರಲಿಲ್ಲ. ಹತ್ತಿಯ ಅಂಡಿಗೆಗಳು ಹುಬ್ಬಳ್ಳಿಯಿಂದ ಚಕ್ಕಡಿಗಳಲ್ಲಿ ಕುಮುಠಾಕ್ಕೆ, ಅಲ್ಲಿಂದ ನಾವೆಗಳಲ್ಲಿ ಮುಂಬಯಿಗೆ, ಮುಂಬಯಿಯಿಂದ ಹಡಗಿನಲ್ಲಿ ಇಂಗ್ಲಂಡ್ - ಹೀಗಿತ್ತು ಸಾಗಾಟ! ಹಾಗೆ ಮುಂಬಯಿಗೆ ರವಾನೆಯಾದ ಹತ್ತಿಯನ್ನು ಇಳಿಸುತ್ತಿದ್ದ ರಸ್ತೆಗೆ 'ಕುಮಠಾ ಸ್ಟ್ರೀಟ್' ಎಂಬ ಹೆಸರು ಬಿತ್ತು. ಈಗಲೂ ಆ ರಸ್ತೆ ಅದೇ ಹೆಸರಿನಲ್ಲಿದೆ. ಈ ಸುತ್ತಾಟದಲ್ಲಿ ಹತ್ತಿಯ ಕಳವಾಗುವುದು, ಕಸಕಡ್ಡಿ ಸೇರಿಕೊಳ್ಳುವುದು ಸಾಮಾನ್ಯವಾಗಿದ್ದಿತು. ಮುಂಬಯಿಯಲ್ಲಿ ತುಸು ಶುದ್ಧೀಕರಣವಾಗಿ, ಮುಂಬಯಿಯ ದಲ್ಲಾಳಿಗಳು ಅಲ್ಲಿಯೇ ಇದ್ದ ವಿದೇಶೀ ಏಜೆಂಟರುಗಳಿಗೆ ಅದರ ಮಾರಾಟ ಮಾಡುತ್ತಿದ್ದರು. ಈ ಸುತ್ತಿನ ವ್ಯವಹಾರದಲ್ಲಿ ನಮ್ಮ ರೈತರಿಗೆ ಸಲ್ಲುತ್ತಿದ್ದ ಲಾಭಾಂಶ ಕಡಿಮೆಯೇ ಎಂಬುದನ್ನು ತಿಳಿದಿರಬೇಕು.

ಇಂಥ ಸಮಯದಲ್ಲಿ ಹೆಚ್ಚಿನ ಹತ್ತಿಯನ್ನು ಪೂರೈಸುತ್ತಿದ್ದ ಅಮೆರಿಕೆಯಲ್ಲಿ ಯಾದವಿ ಯುದ್ಧ ಸುರುವಾಯಿತು(೧೮೬೦-೧೮೬೨). ಆಗ ಇಂಗ್ಲೆಂಡಿಗೆ ಹೋಗುತ್ತಿದ್ದ ಹತ್ತಿಯ ಪ್ರಮಾಣ ಕಡಿಮೆಯಾಯಿತು. ಗಾರ್ಡನ್ ಸಾಹೇಬನು ಹೇಳುತ್ತಾನೆ :

"ಅಮೆರಿಕ ದೇಶದಲ್ಲಿ ಲಡಾಯಿ ನಡೆದ ಕಾರಣ ಅಲ್ಲಿ ಹತ್ತಿ ಬಿತ್ತುವುದು ಬಂದು ಆಗೆದೆ. ಅಲ್ಲಿಂದ ಇಂಗ್ಲಂಡಿಗೆ ವರ್ಷಕ್ಕೆ ೨೫ ಲಕ್ಷ ನಗಗಳು ಹೋಗುತ್ತಿದ್ದವು. ಆದರೆ ಈಗ ಆರೇಳು ಲಕ್ಷ ನಗಗಳು ಸುದ್ದಾ ಹೋಗದೆ ಇರುವದರಿಂದ ಲಕ್ಷಾವಧಿ ಜನರ ಉದ್ಯೋಗ ನಿಂತುಹೋಗೆದೆ. ಇಂಗ್ಲಂಡ್ ದೇಶದೊಳಗೆ ಉಪಜೀವನಕ್ಕೆ ಬೇಕಾದ ಜೀನಸುಗಳು ಅಂದರೆ ಕಾಳುಕಡಿ, ಮನೆಬಾಡಿಗೆ, ಉಣ್ಣೆ ಅರಿವೆ ಬಹಳ ತುಟ್ಟಿಯಾದುದರಿಂದ ಜನರು ಹೊಟ್ಟೆಗಿಲ್ಲದೆ ಸಾಯುತ್ತಾರೆ. ಮುಂಚೆ ಆದರೆ ಒಬ್ಬನಿಗೆ ದಿನ ಒಂದಕ್ಕೆ ಕನಿಷ್ಠ ೧-೧/೪ ರೂಪಾಯಿ ಕೂಲಿ ದೊರೆಯುತ್ತಿತ್ತು. ಈಗ ಅವರ ಸಂಕಟವು ಪರಿಹಾರವಾಗುವಂತೆ ಅಲ್ಲಿಯ ದೊಡ್ಡ ದೊಡ್ಡ ಸರದಾರರು ಮತ್ತು ರಾಣೀ ಸಾಹೇಬರು ಸುದ್ದಾ (ವಿಕ್ಟೋರಿಯಾ ರಾಣಿ) ವರ್ಗಣೆ ಕೊಟ್ಟಿರುತ್ತಾರೆ. ಆದರೂ ಅದರಿಂದ ಪ್ರತಿಯೊಬ್ಬನಿಗೆ ದಿನ ಒಂದಕ್ಕೆ ಒಂದೂವರೆ ಆಣೆ ಸಿಗುವದು ಸಹ ಬಹು ಕಠಿಣವಾಗೆದೆ. ಅವರು ಈ ದೇಶದೊಳಗಿನ ಕೂಲಿಯ ಜನರಂತೆ ಗುಜರಾಣಿ (ದಿನಗೂಲಿ) ಮಾಡಿಕೊಂಡು ಇರಲಾರರು. ಆ ದೇಶದೊಳಗೆ ಛಳಿ ಬಹಳವಾದ ಕಾರಣ ಅದರಿಂದಲೇ ಸತ್ತುಹೋಗುವರು."

ಅಲ್ಲಿಯ ಜನರು ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರಂತೆ! ಒಂದು ಕಾಲದಲ್ಲಿ ಹಿಂದುಸ್ತಾನದ ನೆಯ್ಗೆಯ ಉದ್ಯಮವು ಪ್ರವರ್ಧಮಾನವಾಗಿತ್ತಲ್ಲದೆ, ನೆಯ್ದ ರೇಷ್ಮೆ ಬಟ್ಟೆಯೊಂದನ್ನು ಉಂಗುರದೊಳಗೆ ಹಾಯಿಸಿ ಹೊರತೆಗೆಯುವಷ್ಟು ಉತ್ಕೃಷ್ಟ ಮಟ್ಟದ್ದಾಗಿತ್ತು. ಬ್ರಿಟಿಷರು ನಾನಾ ಬಗೆಯಲ್ಲಿ ಅದನ್ನು ಹಾಳುಗೆಡವಿ ನಮ್ಮ ನೇಕಾರರನ್ನು ನಿರ್ಗತಿಕರನ್ನಾಗಿ ಮಾಡಿದ್ದು ಗಾರ್ಡನ್

ಸಾಹೇಬನಿಗೆ ಗೊತ್ತಿದ್ದಿಲ್ಲವೆಂದೇನೂ ಅಲ್ಲ. ಇಷ್ಟಕ್ಕೂ ನಮ್ಮ ಹತ್ತಿಯನ್ನು ಕೊಂಡೊಯ್ದು ಇಂಗ್ಲಂಡಿನ ಗಿರಣಿಗಳಲ್ಲಿ ಬಟ್ಟೆ ಮಾಡಿ ಅದನ್ನೇ ಇಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರಲ್ಲ! ಅದೀಗ ಕಡಿಮೆ ಆಯಿತೆಂದು, ಅದನ್ನು ತುಂಬಿ ಕೊಡಲೆಂಬಂತೆ ನಾವು ದೇಣಿಗೆ ಕೊಡಬೇಕು – ಎನ್ನುತ್ತಾನೆ. ಇಷ್ಟೇ ಅಲ್ಲ, ಅಲ್ಲಿಯವರ ಸಂಕಟ ಪರಿಸ್ಥಿತಿಯಿಂದ ನಾವು ಲಾಭ ಪಡೆಯುತ್ತಿದ್ದೇವಂತೆ!

"ಇಂಥ ಸಂಕಟವನ್ನು ಆ ಬಡ ಜನರ ಮೇಲೆ ಬೀಳ ಮಾಡಿದಂಥ ಪ್ರಸಂಗವೇ ಇಲ್ಲಿಯ ಜನರಿಗೆ ಬಹು ಲಾಭಕ್ಕೆ ಕಾರಣವಾಗಿದೆ. ಹ್ಯಾಗಂದರೆ ಮುಂಚೆ ಒಂದು ನಗ ಅರಳಿಗೆ ೩೦ ರೂಪಾಯಿ ಧಾರಣೆ ಇತ್ತು. ಈಗ ಅದೇ ಒಂದು ನಗಕ್ಕೆ ೧೫೦ ರೂಪಾಯಿ ಧಾರಣೆ ಏರಿ ಅದೆ. ಅದರಿಂದ ಈ ದೇಶದೊಳಗಿನ ರಯಿತ ಜನರಿಗೆ ವಿವರಿಸಕೂಡದಷ್ಟು ಲಾಭವಾಗುತ್ತ ನಡೆದದೆ."

ಹತ್ತಿಯ ಧಾರಣೆ ಏರಿದ್ದುದೇನೋ ನಿಜ. ಆದರೆ ಅದರ ಲಾಭ ಯಾರಿಗೆ? ಆಗಿನ ನಮ್ಮ ರೈತರು ದೂರದ ಆರ್ಥಿಕ ಆಗುಹೋಗುಗಳನ್ನು ಅರಿತವರಲ್ಲ. ಆ ಹೆಚ್ಚಿನ ಲಾಭ ಮುಂಬಯಿಯ ದಲ್ಲಾಳಿಗಳಿಗೆ ಆಗುತ್ತಿತ್ತಲ್ಲದೆ ಹತ್ತಿಯನ್ನು ಬೆಳೆದ ಹಳ್ಳಿಗರಿಗೆ ದೊರೆಯುತ್ತಿದ್ದ ಲಾಭ ಅತ್ಯಲ್ಪ. ಕಲೆಕ್ಟರ್ ಸಾಹೇಬನು ಇದೇ ಧಾಟಿಯಲ್ಲಿ ಮುಂದುವರಿಸುತ್ತಾನೆ.

"ಈ ದೇಶದೊಳಗೆ ಈಗ ಎಲ್ಲೆಲ್ಲಿ ನೋಡಿದರೂ ಸುಖ ಸಮೃದ್ಧಿ ಆಗೆದೆ. ಕಾಳುಕಡಿ, ಮನೆಬಾಡಿಗೆ, ಅರಿವೆ ಯಾವತ್ತು ಅಗ್ಗವಾಗೆದೆ. ಹಸಿವಿನಿಂದ ಬಡವರು ಮರುಗುತ್ತಾರೆಂಬ ಮಾತಿನ ಸುದ್ದಿ ಇಲ್ಲ. ಛಳಿಯಿಂದ ಯಾರೂ ಸಾಯುವರೆಂಬ ಭಯವಿಲ್ಲ."

ಛಳಿಯಿಂದ ಸಾಯುವುದು ನಮ್ಮೀ ಉಷ್ಣಕಟಿಬಂಧ ಪ್ರದೇಶದಲ್ಲಿ ಯಾವ ಕಾಲಕ್ಕಾದರೂ ಉಂಟೆ? ಎಲ್ಲೆಲ್ಲಿ ನೋಡಿದರೂ ಸುಖ ಸಮೃದ್ಧಿ ಇದೆಯಂತೆ. ಕಲೆಕ್ಟರ್ ಬಂಗಲೆಯಲ್ಲಿ ಐಷಾರಾಮದಿಂದಲೂ ದಿನಗಳೆಯುವ ಸಾಹೇಬನಿಗೆ ಹಳ್ಳಿಗಳಲ್ಲಿಯ ದಟ್ಟ ದಾರಿದ್ರ್ಯದ-ಕಲ್ಪನೆ ಹೇಗೆ ಬರಬೇಕು? ನಮ್ಮ ಜನರಿಂದ ಹಣ ಕೇಳುವಲ್ಲಿ ಗಾರ್ಡನ್ ಒಂದಿಷ್ಟು ದಾಕ್ಷಿಣ್ಯಪರತೆಯನ್ನೂ ವ್ಯಕ್ತಮಾಡಿದ್ದಾನೆ.

"ನೀವು ರಯಿತರೂ, ಸಾವಕಾರರೂ ವರ್ಗಣಿ ಕೊಡಿರಿ ಎಂದು ಸರಕಾರದವರಿಗೆ ಕೇಳಲು ಬರುವದಿಲ್ಲ. ಯಾಕೆಂದರೆ ಹಾಗೆ ಕೇಳಿದರೆ ಸರಕಾರದವರು ನಮಗೆ ಹುಕುಂ ಮಾಡುತ್ತಾರೆ ಎಂದು ತಿಳಿದುಕೊಂಡೀರಿ. ಅಪ್ಪಣೆಯ ಮೇಲಿಂದ ಧರ್ಮ ಮಾಡಿದರೆ ಪುಣ್ಯ ಯಾತರದು? (ವ್ಹಾ!) ಆದಾಗ್ಯೂ ಈ ಘೋರ ಸಂಕಟವನ್ನು ನೋಡಿ ಆ ಬಡವರಿಗೆ ಸ್ವಲ್ಪ ಆದರೂ ಸಹಾಯ ಮಾಡಬಾರದೆಂಬುವ ಕಠಿಣ ಮನಸ್ಸನ್ನು ದೇವರು ನಿಮಗೆ ಕೊಟ್ಟಿರಲಿಕ್ಕಿಲ್ಲ. ಹೆಚ್ಚಿಗೆ ಬರೆಯುವದೇನಿದೆ? ಪರಮೇಶ್ವರನು ನಿಮ್ಮ ಮನಸ್ಸಿನಲ್ಲಿ ಹ್ಯಾಗೆ ಹುಟ್ಟಿಸುತ್ತಾನೋ ಹಾಗೆ ಮಾಡಿದರೆ ಸಾಕು"

ಮೇಲಿನ ಕಾರಣದಿಂದಾಗಿ ದೇಣಿಗೆ ಕೊಡುವವರು ನೇರವಾಗಿ ಸರಕಾರಕ್ಕೆ ಕೊಡದೇ ಗದಗಿನಲ್ಲಿರುವ ಏಜಂಟರಾದ 'ರಾಬರ್ಟಸನ್ ಮತ್ತು ಎವರ್ಟನ್' ಕಂಪನಿಯವರ ಕಡೆಗೆ

ಕಳಿಸಬೇಕು ಮತ್ತು ಅವರು ಇಂಗ್ಲಂಡಿನಲ್ಲಿ ಸೂಕ್ತ ರೀತಿಯಿಂದ ಆ ಹಣದ ವಿಲೇವಾರಿ ಮಾಡುತ್ತಾರೆ, ಎಂಬ ಮಾತೂ ಇದೆ.

ಈ ಮನವಿ ಪತ್ರಕ್ಕೆ ಮನ್ನಣೆಯಿತ್ತು ರೈತರು ದೇಣಿಗೆ ಕೊಟ್ಟರೆಂಬುವದಕ್ಕೆ ಆಧಾರವೇನೂ ಇಲ್ಲ. ಸಾಧ್ಯವೂ ಇರಲಿಲ್ಲ. ಸರಕಾರದ ಕೃಪೆಯನ್ನು ಅವಲಂಬಿಸಿದ್ದ ಕೆಲವು ಇನಾಮದಾರರು ಮತ್ತು ಜಮೀನುದಾರರು ಕೊಟ್ಟಿರಲೂ ಸಾಕು. ಅಂತೂ ಬ್ರಿಟಿಷರು ಇಲ್ಲಿಯ ತಮ್ಮ ಆಡಳಿತಾವಧಿಯ ೧೫೦ ವರ್ಷಗಳಲ್ಲಿ ನಾನಾ ರೀತಿಯ ಕುಟಿಲ ಉಪಾಯಗಳನ್ನು ಅನುಸರಿಸುತ್ತಿದ್ದರೆನ್ನುವುದಕ್ಕೆ ಇದೂ ಒಂದು ಉದಾಹರಣೆ.

ಈ ಹತ್ತಿಯ ವ್ಯವಹಾರದಲ್ಲಿ ಕರಾವಳಿ ಕರ್ನಾಟಕದ ಮೇಲಾದ ಒಂದು ದುಷ್ಪರಿಣಾಮವನ್ನು ಹೇಳಬೇಕು. 'ಹತ್ತಿಯ ಸಾಗಾಣಿಕೆಯನ್ನು ಕುಮಠಾ, ಅಲ್ಲಿಂದ ಮುಂಬಯಿ ಆಮೇಲೆ ಇಂಗ್ಲಂಡ್; ಹೀಗೆ ಸುತ್ತು ದಾರಿಯಿಂದ ಮಾಡುವುದಕ್ಕಿಂತ, ಕರಾವಳಿಯ ಒಂದು ಬಂದರದಿಂದ ನೇರವಾಗಿ ಏಕೆ ಮಾಡಬಾರದು? ಅದರಿಂದ ತುಂಬಾ ಸಮಯ ಉಳಿಯುವುದು. ಇಂಗ್ಲಂಡಿನ ಗಿರಣಿಗಳಿಗೆ ಅರಳಿಯು ಬೇಗ ಒದಗುವುದು ಎಂದು ಆಲೋಚಿಸಿದರು. ಅದಕ್ಕಾಗಿ ಸರ್ವಋತು ಬಂದರವೇ ಆಗಬೇಕಲ್ಲವೆ. ಸದಾಶಿವಗಡ (ಕಾರವಾರ) ಅದಕ್ಕೆ ಸೂಕ್ತವೆಂದು ತೋರಿತು. ಸರಿ, ಆ ಕೂಡಲೇ ಬಂದರದ ಅಭಿವೃದ್ಧಿಗೆ ತೊಡಗಿದರು. ಮುಂಬಯಿ ದಲ್ಲಾಳಿಗಳು ಅಲ್ಲಿಗೆ ಬಂದು ಜಾಗ ಖರೀದಿ ಮಾಡಿದರು! ಆಗ ಇಡೀ ಕರಾವಳಿ ಮದ್ರಾಸ ಅಧಿಪತ್ಯದಲ್ಲಿ ಇದ್ದಿತಷ್ಟೆ. ಆದರೆ ಅಲ್ಲಿಯ ಗವರ್ನರ್ ಇದರ ಅಭಿವೃದ್ಧಿಯಿಂದ ಮುಂಬಯಿ ಪ್ರಾಂತದವರಿಗೆ ಲಾಭ; ಅಪ್ಪರಿಂದ ಬಂದರದ ಸುಸಜ್ಜಿತ ನಿರ್ಮಾಣಕ್ಕೆ ನಾವೇಕೆ ಹಣ ವೆಚ್ಚ ಮಾಡಬೇಕು? ಎಂದು ಯೋಚಿಸಿದ; ಹಿನ್ನೇಟು ಹಾಕತೊಡಗಿದ. ಇತ್ತ ಲಂಡನ್ನಿನಲ್ಲಿ ರಾಜಕೀಯ ಪ್ರಭಾವ ಬೀರಬಲ್ಲಂಥ 'ಕಾಟನ್‌ಲಾಬಿ' ಯವರು ಅಲ್ಲಿಯ 'ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ' ಅಧಿಕಾರಿಯನ್ನು ದಬಾಯಿಸತೊಡಗಿದರು. ಹಾಗಿದ್ದರೆ ಕರಾವಳಿಯ ಉತ್ತರ ಭಾಗವನ್ನು ಮುಂಬಯಿ ಪ್ರಾಂತಕ್ಕೆ ಸೇರಿಸಿದರಾಯಿತು ಎಂದು ಆ ಅಧಿಕಾರಿಯು ನಿರ್ಧರಿಸಿ ಭಟ್ಕಳದ ಬಳಿ ಆ ಇಬ್ಭಾಗದ ಗಡಿಯನ್ನು ಹಾಕಿಸಿಬಿಟ್ಟ. ದ.ಕ. ಜಿಲ್ಲೆ, ಉ. ಕ. ಜಿಲ್ಲೆಗಳಾದದ್ದು ಹೀಗೆ! (೧೮೬೨). ಎರಡೂ ಕಡೆಯ ನಿಸರ್ಗ ಸಂಪತ್ತು, ಜನಜೀವನ ಒಂದೇ. ಈಗಲೂ ಹಾಗಿದೆ. ಆದರೂ ಮದ್ರಾಸಿಗೆ ಹತ್ತಿರವಿದ್ದ ದ.ಕ. ಜಿಲ್ಲೆ ಭರದಿಂದ ಅಭಿವೃದ್ಧಿ ಹೊಂದಿತು. ರಾಜಧಾನಿಯಾದ ಮುಂಬಯಿಯಿಂದ ದೂರವಿದ್ದ ಉತ್ತರ ಕನ್ನಡ ಜಿಲ್ಲೆ ಅಷ್ಟೇ ಭರದಿಂದ ಹಿಂದುಳಿಯಿತು!

ಮುಂದೆ ಕೇಳಿರಿ! ಈ ಇಬ್ಭಾಗವಾದ ಕೆಲವೇ ತಿಂಗಳಲ್ಲಿ ಅಮೆರಿಕೆಯ ಯಾದವೀ ಯುದ್ಧ ನಿಂತಿತು. ಅಲ್ಲಿಂದ ಹತ್ತಿ ಬರತೊಡಗಿತು. ಪರಿಣಾಮವಾಗಿ ಸದಾಶಿವಗಡ - ಕಾರವಾರದ ಅಭಿವೃದ್ಧಿಯ ಕಾರ್ಯ ನಿಂತುಹೋಯಿತು. ಮುಖ್ಯವಾಗಿ 'ದೇಣಿಗೆ'ಯ ವಸೂಲು ಮಾಡಹೊರಟಿದ್ದ ಗಾರ್ಡನ್ ಸಾಹೇಬನ ಯೋಜನೆ ಗೋಡೆ ಪಾಲಾಯಿತು!

೧೭. ಯೂರೋಪಿಯನ್ನರು ಕಂಡ ಧಾರವಾಡ

ಧಾರವಾಡ - ಇದು ಜಿಲ್ಲೆಯ ಮುಖ್ಯ ಪಟ್ಟಣ; ಸಾಹಿತ್ಯಿಕ ಹಾಗೂ ಶೈಕ್ಷಣಿಕವಾಗಿಯೂ ಪ್ರಸಿದ್ಧವಾದದ್ದು. ಇದಕ್ಕೆ ಮಹತ್ವಪೂರ್ಣವಾದ ಹಿಂದಿನ ಇತಿಹಾಸವೇನೂ ಇಲ್ಲ. ಕ್ರಿ.ಶ. ೧೪೦೩ರಲ್ಲಿ ಧಾರಾರಾವ ಎಂಬ ಮಹಾರಾಷ್ಟ್ರೀಯನು ವಿಜಯನಗರದಲ್ಲಿ ಸೇನಾನಿಯಾಗಿದ್ದವ ಇಲ್ಲಿ ಭವ್ಯ ಹಾಗೂ ಭದ್ರವಾದ ಕೋಟೆಯನ್ನು ಕಟ್ಟಿಸಿದ; ಟೀಪೂ ಸುಲ್ತಾನನು ಸವಣೂರನ್ನು ಮುತ್ತಿದ ಕಾಲಕ್ಕೆ ತನ್ನ ಉತ್ತರದ ಗಡಿ ಧಾರವಾಡ - ಎಂದು ಗುರುತಿಸಿ; ಹತ್ತು ಸಾವಿರದಷ್ಟು ಸೈನ್ಯವನ್ನು ಇರಿಸಿ, ಜಮಾಲ್ ಬದ್ರುದ್ದೀನಖಾನ್ ಎಂಬ ತನ್ನ ಸಂಬಂಧಿಯೊಬ್ಬನನ್ನು ಅಲ್ಲಿ ಅಧಿಪತಿಯಾಗಿ ನಿಯಮಿಸಿದ್ದ. ೧೭೯೦-೯೧ರಲ್ಲಿ ಮರಾಠರು ಪರಶುರಾಮಪಂತ ಪಟವರ್ಧನನ ನೇತೃತ್ವದಲ್ಲಿ ಧಾರವಾಡದ ಕೋಟೆಗೆ ಮುತ್ತಿಗೆ ಹಾಕಿದರು. ಆಗ ಬ್ರಿಟಿಶರು, ಮೊದಲು ಕ್ಯಾಪ್ಟನ್ ಲಿಟಲ್, ಅನಂತರ ಕರ್ನಲ್ ಫೆಡ್ರಿಕ್ಸ್ ಎನ್ನುವವರ ನೇತೃತ್ವದಲ್ಲಿ ಸೈನ್ಯದ ಒಂದು ತುಕಡಿಯನ್ನು ಕಳುಹಿಸಿ ನೆರವಾದರು.

ಏಳು ತಿಂಗಳ ಕಾಲ ಭಾರೀ ಸೈನ್ಯದೊಂದಿಗೆ ಸತತವಾಗಿ ಪ್ರಯತ್ನಪಟ್ಟರೂ ಕೋಟೆಯು ಅವರ ಸ್ವಾಧೀನವಾಗಲಿಲ್ಲ. ಪ್ರಚಂಡ ತೋಪುಗಳನ್ನು ಹಾರಿಸಿದಾಗ ಕೋಟೆ ಬಿರುಕು ಬಿಟ್ಟರೂ ಬೆಳಗಾಗುವುದರೊಳಗಾಗಿ ರಿಪೇರಿ ಮಾಡಿಬಿಡುತ್ತಿದ್ದರು! ಕೊನೆಗೆ ಕೋಟೆಯಲ್ಲಿ ಆಹಾರ ಇತರ ವಸ್ತುಗಳ ಕೊರತೆಯಿಂದಾಗಿ ಬದ್ರುದ್ದೀನ್ ಖಾನನು ಕೋಟೆಯನ್ನು ಗೌರವಾನ್ವಿತ ರೀತಿಯಲ್ಲಿ ಒಪ್ಪಿಸಿ ಶರಣಾಗತನಾಗಬೇಕಾಯಿತು.

ಈ ಯುದ್ಧದಲ್ಲಿ ಸ್ಟೂಅರ್ಟ್, ಫಾಸ್ಟರ್, ಮ್ಯಾಕ್ಸ್‌ವೆಲ್, ಪ್ರೈಸ್, ಚಾಮರ್ ಇವರೇ ಮೊದಲಾದವರು, ಮುಖ್ಯಸ್ಥನಾಗಿದ್ದ ಫೆಡ್ರಿಕ್ಸ್ ಮತ್ತು ಪೇಶ್ವೆಯವರ ಸೈನ್ಯದಲ್ಲಿಯೇ ಅಧಿಕಾರಿಯಾಗಿದ್ದ ಯೆವನ್ (Yvon) ಎಂಬ ಶೂರನೂ ಯುದ್ಧದಲ್ಲಿ ಮರಣವನ್ನಪ್ಪಿದರು. ಅಲ್ಲದೆ ನೂರಕ್ಕೆ ಮೇಲ್ಪಟ್ಟು ಯುರೋಪಿಯನ್ ಸೈನಿಕರನ್ನೂ ಆಹುತಿ ತೆಗೆದುಕೊಂಡೇ ಧಾರವಾಡವು ಬ್ರಿಟಿಶರಿಗೆ ಒಳಗೆ ಪ್ರವೇಶ ಕೊಟ್ಟಿತೆನ್ನಬಹುದು. ಆದರೂ ಕೋಟೆಯು

೧೭೯೧ರಿಂದ ೧೮೧೭ರವರೆಗೆ ಮರಾಠರ ವಶದಲ್ಲಿಯೆ ಇದ್ದಿತು. ೧೭೯೯ರ ಕೊನೆಯ ಮೈಸೂರು ಯುದ್ಧದಲ್ಲಿ ಟೀಪೂ ಸುಲ್ತಾನನನ್ನು ಸೋಲಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದ ವೆಲ್ಲೆಸ್ಲಿಯು ಧಾರವಾಡದ ಮತ್ತು ಅದರ ಕೊಟೆಯ ಆಯಕಟ್ಟಿನ ಮಹತ್ವವನ್ನರಿತು ಕೋಟೆಯ ಸುತ್ತಲೂ ತಿರುಗಾಡಿ ಗುಟ್ಟಾಗಿ ಅದರ ಸ್ವರೂಪವನ್ನು ಅರಿತುಕೊಂಡಿದ್ದನು. ಪ್ರಸಂಗ ಬಂದರೆ ಮರಾಠರಿಂದ ಹೇಗೆ ವಶಪಡಿಸಿಕೊಳ್ಳಬೇಕೆಂದು ತಿಳಿಯುವುದಾಗಿತ್ತು. ನೈಋತ್ಯ ದಿಕ್ಕಿನಿಂದ ಕೋಟೆಯ ಮೇಲೆ ಲಗ್ಗೆಯೇರಬಹುದೆಂದು ತನ್ನೊಂದು ವರದಿಯಲ್ಲಿ ತಿಳಿಸಿದ್ದನು. ಅದಕ್ಕೆ ಸಮಯ ಒದಗಿ ಬರಲಿಲ್ಲ. ಕ್ರಿ.ಶ. ೧೮೦೩ರಲ್ಲಿ ಕೋಟೆಯನ್ನು ಪ್ರವೇಶಿಸಲು ಮಾತ್ರ ಅವನಿಗೆ ಒಪ್ಪಿಗೆ ಸಿಕ್ಕಿತು. ಹೀಗೆ ಅವನು ಅಧಿಕೃತವಾಗಿ ಧಾರವಾಡದಲ್ಲಿ ಕಾಲಿಟ್ಟ ಮೊದಲ ಬ್ರಿಟನಿಗನೆಂದು ಹೇಳಬಹುದೇನೊ.

ಆ ಮುಂದೆ ೧೮೧೭ರಲ್ಲಿ ಮರಾಠರು ತಮ್ಮ ಅಧೀನದಲ್ಲಿದ್ದ ಈ ಭಾಗದ ಕೆಲವು ಪ್ರದೇಶಗಳನ್ನು ಬಿಟ್ಟುಕೊಡಬೇಕಾಗಿ ಬಂತು. ಕಾರಣ? ಬ್ರಿಟಿಶರು ಮರಾಠರಿಗಾಗಿ ಮಾಡಿದ್ದ ಸೈನಿಕ ವೆಚ್ಚದ ಭರಪಾಯಿಯೆಂದು! ಪ್ರಾಯಶಃ ಧಾರವಾಡದ ಆಯಕಟ್ಟಿನ ಜಾಗ. ಊರಲ್ಲಿಯ ಶಾಂತ ಪರಿಸರ ಅವರಿಗೆ ಹಿಡಿಸಿ (ಈ ಹಿಂದೆ ಬೆಂಗಳೂರನ್ನು ಆಯ್ದುಕೊಂಡಂತೆ) ಕೇಳಿರಬೇಕು.

ಬ್ರಿಟಿಶರು ಊರೊಳಗೆ ಪ್ರವೇಶಿಸಿದಾಗ ಪೇಟೆ, ಜನರ ವಾಸ್ತವ ಯಾವುದೂ ಹೇಳಿಕೊಳ್ಳುವಂಥದಿರಲಿಲ್ಲವಂತೆ. ಜನರು ಸದೃಢರೂ, ಚಟುವಟಿಕೆಯುಳ್ಳವರೂ ಆಗಿ ಕಂಡು ಬರಲಿಲ್ಲವಂತೆ. ಅದರ ಒಂದು ಕಾರಣ, ಏಳು ತಿಂಗಳ ಮುತ್ತಿಗೆಯಲ್ಲಿ ಅನೇಕ ವೀರರ ಮರಣ. ಕೋಟೆಯು ಇನ್ನೂ ಸುಭದ್ರವಾಗಿಯೇ ಉಳಿದಿತ್ತು. ಈ ಹಿಂದೆ ಸೂಚಿಸಿದ್ದಂತೆ ೧೮೫೭ರ ವಿಪ್ಲವದಲ್ಲಿ ನರಗುಂದದ ಬಾಬಾ ಸಾಹೇಬ, ಮುಂಡರಗಿಯ ಭೀಮರಾಯ ಮೊದಲಾದ 'ದಂಗೆಖೋರರು' ಇಲ್ಲಿ ಆಶ್ರಯ ಪಡೆದರು – ಎಂಬ ಅಳುಕಿನಿಂದ ಕೋಟೆಯ ಒಂದು ಭಾಗವನ್ನು ಪೂರ್ಣವಾಗಿ ಕೆಡವಿ, ನೆಲಸಮ ಮಾಡಿದ್ದಾದರೆ ಯಾರೇ ಆಗಲಿ ನಿರಾತಂಕವಾಗಿ ಓಡಾಡಬಹುದು ಎಂದು ಬ್ರಿಟಿಶರು ಲೆಕ್ಕ ಹಾಕಿದರು. ಹಾಗೆ ಮಾಡಿಬಿಟ್ಟರು.

ಅದೇನೇ ಇರಲಿ, ಯೂರೋಪಿಯನ್ ವಸತಿಯು ಪಟ್ಟಣದಲ್ಲಿ ಬೆಳೆಯುತ್ತ ನಡೆಯಿತು. ಗೋವೆ, ಮದ್ರಾಸ ಕಡೆಗಳಿಂದ ದೇಶೀ ಕ್ರೈಸ್ತರೂ ಬಂದರು. ಈ ಕ್ರೈಸ್ತರ ಆಗಮನದಿಂದ ಧಾರವಾಡದ ಆಗಿನ ವಾತಾವರಣ ಎದ್ದು ಕಾಣುವಂತೆ ಬದಲಿಸಿತು. ೧೯ನೆಯ ಶತಮಾನದ ಕೊನೆಯಲ್ಲಿ ಎರಡು ಸಾವಿರದಷ್ಟು ಜನ, ಮತ್ತು ವಿವಿಧ ಬ್ರಿಟಿಶ್ ಅಧಿಕಾರಿಗಳೂ ಸೇರಿದಂತೆ ಧಾರವಾಡದಲ್ಲಿ ನೆಲೆ ನಿಂತಿದ್ದರು.

ಬ್ರಿಟಿಶರ ಮೊದಲ ಅಧಿಕಾರಿಯಾಗಿ ಬಂದ ಥಾಮಸ್ ಮನ್ರೋಗೆ ಧಾರವಾಡವು ತುಂಬಾ ಹಿಡಿಸಿದ್ದಿತೆಂಬುದು ವಿವಿಧ ದಾಖಲೆಗಳಲ್ಲಿ ಅವನು ಪ್ರಾಸಂಗಿಕವಾಗಿ ಪ್ರಸ್ತಾಪಿಸಿದ್ದುದರಿಂದ ತಿಳಿದುಬರುತ್ತದೆ. 'ಧಾರವಾಡ ಸುಭಾ' ಎಂದೇ ಅವನು ಹೆಸರಿಸಿದ ಈ ಭಾಗದಲ್ಲಿ ಬ್ರಿಟಿಶ್

ಅಧಿಕಾರಶಾಹಿಯ ಭವಿಷ್ಯ, ವಿಸ್ತರಣ ಮುಂತಾದ ಅಂಶಗಳ ಬಗ್ಗೆ ಶಾಂತವಾಗಿ ಯೋಚನೆ ಮಾಡಿ ಗವರ್ನರ್ ಜನರಲ್‌ನಿಗೆ ಇಲ್ಲಿಂದಲೇ ಪತ್ರ ಬರೆದನು (೧೨.೮.೧೯೧೭).

ಮರುವರ್ಷವೇ ಎಂದರೆ ೧೮೧೮ರಲ್ಲಿ ಸೇಂಟ್ ಜಾನ್ ಥ್ಯಾಕರೆಯನ್ನು 'ಧಾರವಾಡ ಸುಭಾ'ದ ಕಲೆಕ್ಟರನಾಗಿಯೂ ದಕ್ಷಿಣ ಮರಾಠಾ ಸಂಸ್ಥಾನಗಳ ಪೋಲಿಟಿಕಲ್ ಏಜಂಟ್ ಎಂಬುದಾಗಿಯೂ ನೇಮಿಸಲಾಯಿತಷ್ಟೇ. ಇವನು ಕಿತ್ತೂರ ಯುದ್ಧದಲ್ಲಿ ಮಡಿದ ಸಂಗತಿ (೧೮೨೪) ತಿಳಿದದ್ದೇ ಇದೆ. ಆತನ ಸಮಾಧಿ ಮಾತ್ರ ಧಾರವಾಡದ ಕ್ರೈಸ್ತರ ಸಮಾಧಿ ಸ್ಥಳದಲ್ಲಿ ಒಂದೆಡೆ ಅಜ್ಞಾತವಾಗಿ ಉಳಿದುಕೊಂಡಿದೆ (ಈಗಿನ ಕಿತ್ತೂರ ಚೆನ್ನಮ್ಮ ಉದ್ಯಾನದಲ್ಲಿ ಅಲ್ಲ).

ಥ್ಯಾಕರೇನ ಬಗ್ಗೆ ಕೆಲವೊಂದು ವಿಷಯಗಳು ಹೆಚ್ಚು ಜನರಿಗೆ ತಿಳಿದಿಲ್ಲ. ಅವನು ಸುಪ್ರಸಿದ್ಧ ಆಂಗ್ಲ ಕವಿ ವಿಲಿಯಮ್ ಥ್ಯಾಕರೇನ ಐದನೆಯ ಮಗನು. ಈ ಕುರಿತು, ಹಲವು ದಶಕಗಳು ಸಂದ ಮೇಲೆ 'ಬಾಂಬೆ ಗಜೆಟ್' ಎಂಬ ಪತ್ರಿಕೆಯಲ್ಲಿ ಪತ್ರ ವ್ಯವಹಾರವೇ ನಡೆದು ಹಲವು ಊಹಾಪೋಹಗಳಿಗೆ ಎಡೆಕೊಟ್ಟಿತು. ಕೊನೆಗೆ ಸಂಪಾದಕರು ಇಂಗ್ಲಂಡಿನ ಅವನ ಕುಟುಂಬದವರಿಗೆ ಪತ್ರ ಬರೆದು ಸ್ಥಿರೀಕರಿಸಿದರು!

ಧಾರವಾಡದಲ್ಲಿ ಈತನ ಸಮಾಧಿಯ ಬಳಿಗೇ ಬ್ಲ್ಯಾಕ್, ಡೈಟನ್ ಮತ್ತು ಸೆವಲ್ ಎಂಬ ಮೂರು ಜನ ಸೈನಿಕರ - ಕಿತ್ತೂರಿನಲ್ಲಿಯೇ ಮಡಿದವರ - ಸಮಾಧಿಗಳೂ ಇವೆ. ಇನ್ನೊಂದೆಂದರೆ ಧಾರವಾಡದಿಂದ ನಾಲ್ಕು ಮೈಲಿಗಳ ದೂರದಲ್ಲಿರುವ ಒಂದು ಗೊಲ್ಲರ ಹಳ್ಳಿಗೆ ಥ್ಯಾಕರೆಪುರವೆಂದು ನಾಮಕರಣ ಮಾಡಲಾಗಿದ್ದಿತು. ಆದರೆ ಅದು ಚಲಾವಣೆಗೆ ಬರಲೇ ಇಲ್ಲ.

ಕ್ರಿ.ಶ. ೧೮೨೨-೧೮೩೩ರ ವರೆಗೆ ವಾಲ್ಟರ್ ಎಲಿಯೆಟ್ ಸಹಾಯಕ ಅಧಿಕಾರಿಯಾಗಿ ಇದ್ದನಷ್ಟೆ. ಅವನ ಕನ್ನಡ ಶಿಕ್ಷಣ ಯೋಜನೆಯ ವಿವರಗಳನ್ನು ನೋಡಿದ್ದೇವೆ. ಅವನ ಇನ್ನೊಂದು ಮಹತ್ವಪೂರ್ಣ ಕೆಲಸವೆಂದರೆ, ಈ ಪ್ರದೇಶದಲ್ಲಿರುವ ಸುಮಾರು ಐದುನೂರು ಶಾಸನಗಳನ್ನು ಮೊಟ್ಟ ಮೊದಲ ಬಾರಿಗೆ ಬೆಳಕಿಗೆ ತಂದದ್ದು. ಆ ಕಾಲದಲ್ಲಿ, ಶಾಸನಶಾಸ್ತ್ರವು ತೀರ ಶೈಶವಾವಸ್ಥೆಯಲ್ಲಿದ್ದಿತು. ಅವುಗಳನ್ನು ಅಭ್ಯಸಿಸಿ, ಅನೇಕ ಐತಿಹಾಸಿಕ ವಿಷಯಗಳನ್ನು ಪ್ರಥಮವಾಗಿ ಬೆಳಕಿಗೆ ತಂದು, ರಾಯಲ್ ಏಶಿಯಾಟಿಕ್ ಸೊಸೈಟಿಯಲ್ಲಿ 'ಹಿಂದೂ ಇನ್‌ಸ್ಕ್ರಿಪ್ಶನ್ಸ್' ಎಂಬ ಪ್ರಬಂಧವನ್ನು ಮಂಡಿಸಿ ಪ್ರಕಟಿಸಿದ್ದನು. ಈತನ ಈ ಶಾಸನಗಳ ಅಧ್ಯಯನವು ಮುಂದೆ ಪ್ರಖ್ಯಾತ ಶಾಸನತಜ್ಞರಾದ ಜೆ. ಎಫ್. ಫ್ಲೀಟ್ ಮುಂತಾದವರ ಕೆಲಸಕ್ಕೆ ನಾಂದಿಯಾಯಿತು.

ಅವನು ತನ್ನ 'ನೆನಪುಗಳನ್ನು' ಬರೆದಿದ್ದಾನೆ. ಆ ಗ್ರಂಥವು ಆ ಕಾಲದ ಮುಂಬಯಿ ಕರ್ನಾಟಕದ ಸಮಾಜದ ಮೇಲೆ ಬೆಳಕನ್ನು ಚೆಲ್ಲುತ್ತದೆ. ಅಷ್ಟೇ ಅಲ್ಲದೆ ಧಾರವಾಡದ ಸ್ಥಳೀಯ ಜನರೊಂದಿಗೆ ಆತನಿಗಿದ್ದ ನಿಕಟ ಸಂಪರ್ಕವನ್ನು ಅದು ಎತ್ತಿ ತೋರಿಸುತ್ತದೆ.

ಆತನು ಧಾರವಾಡದಲ್ಲಿದ್ದಾಗ, ಆತನಿಗೆ ಸಂಬಂಧಿಸಿದ ಮತ್ತೊಂದು ವಿಷಯವು ಮಹತ್ವದ್ದಾಗಿದೆ. ಆ ಕಾಲದಲ್ಲಿ ಧಾರವಾಡದ ಸುತ್ತಮುತ್ತ ದಟ್ಟವಾದ ಕಾಡಿತ್ತು. ಅದರಲ್ಲಿ

ಯಥೇಷ್ಟವಾಗಿ ಹುಲಿಗಳಿದ್ದುವು. ಎಲಿಯಟನಿಗೆ ಬೇಟೆಯಾಡುವುದರಲ್ಲಿ ಬಹಳ ಆಸಕ್ತಿ. ಆದ್ದರಿಂದ ಅವನಿಗೆ ವನ್ಯಜೀವಿಗಳ ಬಗ್ಗೆ ತಿಳಿಯಲು ಬಹಳ ಅನುಕೂಲವಾಗಿದ್ದಿತು. ಜೀವ ವಿಕಾಸದ ಬಗ್ಗೆ ಅಧ್ಯಯನ ನಡೆಸುತ್ತಿದ್ದ ಅವನ ಸ್ನೇಹಿತನಾದ ಚಾರ್ಲ್ಸ್ ಡಾರ್ವಿನ್‌ನ ಪ್ರಾರ್ಥನೆಯ ಮೇರೆಗೆ, ಇವನು ಧಾರವಾಡ ಹಾಗೂ ಸುತ್ತಮುತ್ತಲಿನ ಕಾಡುಗಳಲ್ಲಿಯ ಸಸ್ತನಿ ವನ್ಯಜೀವಿಗಳ ಚಟುವಟಿಕೆಗಳ ಬಗ್ಗೆ ಮಾಹಿತಿಗಳನ್ನು ಅವನಿಗೆ ರವಾನಿಸುತ್ತಿದ್ದನು. (ಈ ಕುರಿತು ವ್ಯವಹರಿಸಿದ ಪತ್ರಗಳು ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಸುರಕ್ಷಿತವಾಗಿವೆ).

ಜಾನ್ ಕ್ಯಾಂಬೆಲ್ ಎಂಬ ಒಬ್ಬ ತರುಣ ೧೮೩೧ರಲ್ಲಿ ಧಾರವಾಡಕ್ಕೆ ಬಂದು, ಒಂದು ತಿಂಗಳವರೆಗೆ ಎಲಿಯಟನ ಜೊತೆಗೆ ವಾಸವಾಗಿದ್ದನು. ಇಲ್ಲಿ ಬಂದ ನಂತರ, ಸುತ್ತಮುತ್ತಲಿನ ಕುರಚಲು ಕಾಡುಗಳು, ವಿಶಾಲವಾದ ಬಯಲು ಪ್ರದೇಶ, ಸಣ್ಣ ಪುಟ್ಟ ಕೆರೆಗಳು, ಸರೋವರಗಳು, ಧಾರವಾಡದ ಸೌಂದರ್ಯವನ್ನು ಹೆಚ್ಚಿಸಿರುವುದನ್ನು ಕಂಡನು. ಇದಕ್ಕೆ ಮೊದಲು ಮದ್ರಾಸ್ ಹಾಗೂ ಬೇರೆ ಊರುಗಳಲ್ಲಿ ಆಂಗ್ಲ ಸಮುದಾಯವನ್ನು ಕಂಡಿದ್ದನು. ಅವರಲ್ಲಿ ಬೇಟೆಗಾರರೆಂದು ಹೇಳಿಕೊಳ್ಳುತ್ತಿದ್ದವರು, ರಾವುತರಂತೆ ಉಡುಪು ಧರಿಸಿ, ಗೂಳಿನಾಯಿ ಮತ್ತು ಹೊಡೆದಾಡುವ ಹುಂಜಗಳನ್ನು ಸಾಕಿಕೊಂಡು ಕಾಸ್ತಾರರಂತೆ ಮಾತನಾಡುವುದನ್ನು ಕಂಡಿದ್ದನು. ಆದರೆ, ಇಂತಹ ಯಾವ ಲಕ್ಷಣವನ್ನೂ ಅವನು ಧಾರವಾಡದಲ್ಲಿ ಕಾಣಲಿಲ್ಲವಂತೆ. ಈ ಕುರಿತು ಅವನು ಈ ರೀತಿ ಅಭಿಪ್ರಾಯಪಟ್ಟಿದ್ದಾನೆ.

"ಧಾರವಾಡದ ಸಮಾಜವು ನಿಶ್ಚಿತವಾಗಿ ಪ್ರಗತಿಪರವಾದದ್ದು. ಸಾರ್ವಜನಿಕರು ಸಾಕಷ್ಟು ವಿಷಯ - ಪರಿಜ್ಞಾನವುಳ್ಳವರೂ, ಸುಶೀಲರೂ, ಅಸಂಸ್ಕೃತ ಹಾಗೂ ದರ್ಪದ ಭಾಷೆಗಳನ್ನು ಉಪಯೋಗಿಸದವರೂ, ಒಳ್ಳೆಯ ಕ್ರೀಡಾಮನೋಭಾವವುಳ್ಳವರೂ ಆಗಿದ್ದಾರೆ. ಇತ್ತೀಚೆಗೆ ಎಲ್ಲೆಲ್ಲೂ ಕಾಣಬರುವ ಅಸಂಸ್ಕೃತ ಭಾಷೆಯ ಬದಲಿಗೆ, ಬೆಡಗು ಬಿನ್ನಾಣಗಳಿಲ್ಲದ, ಸ್ಥಳೀಯ ಸೊಗಡಿರುವ ಆಂಗ್ಲ ಭಾಷೆಯಲ್ಲಿ ಅವರು ವ್ಯವಹರಿಸುವುದು ಸಂತಸದ ವಿಷಯ."

೧೯ನೆಯ ಶತಮಾನದ ಪೂರ್ವದಲ್ಲಿ ಬ್ರೂಸ್‌ಪುಟ್ ಎಂಬ ಭೂವಿಜ್ಞಾನಿ, ಧಾರವಾಡ ಸುಭಾದ ಪ್ರದೇಶಗಳ ಶಿಲಾಶಾಸ್ತ್ರರೀತ್ಯಾ ಪರಿಶೀಲನೆ ಮಾಡಿ, ಇಲ್ಲಿನ ಶಿಲೆ ತುಂಬಾ ಅಪರೂಪವಾದದ್ದು ಎಂದು ಅಭಿಪ್ರಾಯಪಟ್ಟು, ಅದಕ್ಕೆ 'ಧಾರವಾಡ ಸಿಸ್ಟ್' ಎಂದು ಹೆಸರಿಸಿದ್ದಾನೆ.

ಯೂರೋಪಿಯನ್ನರು ವಿಶೇಷವಾಗಿ ಆಕರ್ಷಿಸಿದ್ದುದೆಂದರೆ ಇಲ್ಲಿಯ ಹತ್ತಿ. ಇಂಗ್ಲಂಡಿನ ಹತ್ತಿ ಗಿರಣಿಗಳು, ಅಮೇರಿಕಾದಿಂದ ಹತ್ತಿಯನ್ನು ತರಿಸಿಕೊಳ್ಳುತ್ತಿದ್ದುವೆಂಬುದು ತಿಳಿದ ವಿಷಯ. ಗುಣಮಟ್ಟವನ್ನು ಉತ್ತಮಗೊಳಿಸಿದರೆ, ಪಶ್ಚಿಮ ಭಾರತದಲ್ಲಿ ಬೆಳೆಯುವ ಹತ್ತಿಯನ್ನು ಉಪಯೋಗಿಸಿಕೊಳ್ಳಬಹುದೆಂಬುದನ್ನು ಅವರು ಕಂಡುಕೊಂಡರು. ಮುಂಬಯಿ ಸರಕಾರವು ಉತ್ತಮ ಮಟ್ಟದ ಬೀಜಗಳನ್ನು ಅಮೇರಿಕಾದಿಂದ ತರಿಸತೊಡಗಿತು. ಈ ಕ್ಷೇತ್ರದಲ್ಲಿ ಅನುಭವಶಾಲಿಗಳಾದ ಲಷ್(೧೮೨೯) ಮತ್ತು ಮರ್ಸರ್ (೧೮೪೪) ಎಂಬ ಕೃಷಿತಜ್ಞರನ್ನು

ಭಾರತಕ್ಕೆ ಆಹ್ವಾನಿಸಿತು. ಅವರು ಧಾರವಾಡವನ್ನು ಕೇಂದ್ರವಾಗಿಟ್ಟುಕೊಂಡು, ತಮ್ಮ ಪ್ರಯೋಗ ನಡೆಸಲು ಸುತ್ತಮುತ್ತಲಿನ ಅನೇಕ ಹಳ್ಳಿಗಳಿಗೆ ಭೇಟಿಯಿತ್ತರು. ಮುಂದಿನ ಹೆಜ್ಜೆಯಾಗಿ ಹತ್ತಿಯಿಂದ ಬೀಜವನ್ನು ಬೇರ್ಪಡಿಸುವ ಗಿರಣಿಯನ್ನು ಧಾರವಾಡದಲ್ಲಿ ನಿರ್ಮಿಸುವ ಯೋಜನೆಯಾಗಿತ್ತು - ಅವರದು.

ಇದೇ ಸುಮಾರಿಗೆ ಬಾಸೆಲ್‌ನಿಂದ ರೆವರೆಂಡ್ ಮೋವ್‌ಗ್ಲಿಂಗ್ ಇಲ್ಲಿಗೆ ಬಂದನು (೧೮೩೬). ಅವನು ಪ್ರಾರಂಭಿಸಿದ ಆಂಗ್ಲ ಪ್ರಾಥಮಿಕ ಶಾಲೆಗೆ ಊರಿನ ಪ್ರಮುಖ ಬ್ರಾಹ್ಮಣರು ತಮ್ಮ ಮಕ್ಕಳನ್ನು ಗುಟ್ಟಾಗಿ ಕಳುಹಿಸಲಾರಂಭಿಸಿದರು. ಹೀಗೆ ಬಾಸೆಲ್ ಮಿಶನ್ ಧಾರವಾಡದಲ್ಲಿ ಪಾಶ್ಚಿಮಾತ್ಯ ಶಿಕ್ಷಣಕ್ಕೆ ಎಡೆ ಮಾಡಿಕೊಟ್ಟಿತು. ಕ್ರಿ.ಶ. ೧೮೬೧ರಲ್ಲಿ ಸ್ಥಾಪಿಸಲಾದ ಇಂದಿನ ಬಾಸೆಲ್ ಮಿಶನ್ ಹೈಸ್ಕೂಲ್ ಅದಕ್ಕೆ ಸಾಕ್ಷಿಯಾಗಿದೆ. ಮೋವ್‌ಗ್ಲಿಂಗ್ ಅಲ್ಲದೆ ಕಿಟೆಲ್ ಕೂಡ ಇಲ್ಲಿ ಸ್ವಲ್ಪಕಾಲದ ವರೆಗೆ ಇದ್ದನು. ಈತ ಪ್ರಸಿದ್ಧ ಭಾಷಾವಿಜ್ಞಾನಿ ಎಂಬುದಕ್ಕೆ ಈತನ ಕನ್ನಡ - ಇಂಗ್ಲಿಷ್ ನಿಘಂಟು ಸಾಕ್ಷಿಯಾಗಿದೆ. ಇವನಿಗಿಂತ ಧಾರವಾಡದಲ್ಲಿ ಹೆಚ್ಚು ಕಾಲ ವಾಸಿಸಿ ಅದನ್ನು ಪ್ರೀತಿಸಿದವನು ರೆ| ತ್ರಿಗ್ಲರ್ ಎಂಬಾತ. ಧಾರವಾಡದಲ್ಲಿ ಈತನ ಖ್ಯಾತಿ ಶಿಕ್ಷಣತಜ್ಞ ನೆಂಬುದಾಗಿ ಇದ್ದಿತು. ಧಾರವಾಡದ ಆಗಿನ ಸಾಹಿತಿಗಳು ಆತನನ್ನು ಎಷ್ಟು ಮೆಚ್ಚಿದ್ದರೆಂದರೆ, ಕರ್ನಾಟಕ ವಿದ್ಯಾವರ್ಧಕ ಸಂಘವು ಪ್ರಾರಂಭವಾದ ಮೂರನೆಯ ವರ್ಷದಲ್ಲಿಯೇ (೧೮೯೩-೯೪) ಆತನನ್ನು ಒಮ್ಮತದಿಂದ ಅಧ್ಯಕ್ಷನನ್ನಾಗಿ ಆರಿಸಿದ್ದರು.

೧೯ನೆಯ ಶತಮಾನದ ಮಧ್ಯಭಾಗದ ವೇಳೆಗೆ ಧಾರವಾಡಕ್ಕೆ ಬರತೊಡಗಿದ್ದ ಯೂರೋಪಿಯನ್ನರ ಸಂಖ್ಯೆ ಹೆಚ್ಚತೊಡಗಿತು. ಜಿಲ್ಲಾ ಅಧಿಕಾರಿಗಳು, ನ್ಯಾಯಾಧೀಶರು, ಸೇನಾ ಸಿಬ್ಬಂದಿಗಳು ಮತ್ತು ಇತರ ಅಧಿಕಾರಿಗಳಲ್ಲದೆ, ವೈದ್ಯರೂ ಸಿವಿಲ್ ಎಂಜಿನಿಯರ್‌ಗಳೂ ಗುತ್ತಿಗೆದಾರರೂ ಹೀಗೆ ವಿವಿಧ ಹುದ್ದೆ-ವೃತ್ತಿಗಳ ಜನರು ಧಾರವಾಡದಲ್ಲಿದ್ದರು. ಧಾರವಾಡವು ಮೊದಲು ಕಾರಾಗೃಹ; ಅನಂತರ ರೈಲಿನ ವಿಭಾಗಕ್ಕೂ ಕೇಂದ್ರವಾಗಿತ್ತು. ಸರಕಾರಿ ಹಾಗೂ ಖಾಸಗೀ ಕಟ್ಟಡಗಳು ಪಾಶ್ಚಿಮಾತ್ಯ ಶೈಲಿಯಲ್ಲಿ ನಿರ್ಮಿತವಾದುವು. ೧೮೩೯ರಿಂದ ಧಾರವಾಡದಲ್ಲಿಯೇ ವಾಸವಾಗಿದ್ದ ಜ್ಯೂಕ್ಸ್ ಎಂಬಾತನು ಇಂತಹ ಹೊಸ ಕಟ್ಟಡಗಳ ಲೆಕ್ಕ ಇಟ್ಟಿದ್ದನು. ಆತನ ಪ್ರಕಾರ ಮುಖ್ಯ ಅಂಚೆ ಕಚೇರಿಯು ೬೩ನೆಯ ಕಟ್ಟಡವಾಗಿತ್ತು. ಆತನ 'ಧಾರವಾಡದ ನೆನಪುಗಳು ಒಬ್ಬ ಹಳೆಯ ನಿವಾಸಿಯಿಂದ' ಎಂಬ ೧೮೯೦ರಲ್ಲಿ ಪ್ರಕಾಶಗೊಂಡ ಪುಸ್ತಕದಲ್ಲಿ ಇಂತಹ ಅನೇಕ ಮಾಹಿತಿಗಳು ದೊರಕುತ್ತವೆ. ಎಷ್ಟೇ ಪ್ರಯತ್ನಪಟ್ಟರೂ ದುರದೃಷ್ಟದಿಂದ ಆ ಪುಸ್ತಕ ನನಗೆ ದೊರಕಲಿಲ್ಲ. ಆದರೆ ಅದರ ಪುರವಣಿ ಪುಸ್ತಕ ಮಾತ್ರ ದೊರಕಿದೆ. ೩೦ ಪುಟಗಳಷ್ಟಾದರೂ ದೊರಕಿದ್ದು ಪ್ರಯೋಜನಕಾರಿಯಾಗಿದೆ.

ಈ ಪುರವಣಿಯಲ್ಲಿ, ಆ ಕಾಲದಲ್ಲಿದ್ದ ಯೂರೋಪಿಯನ್ನರ ಜನನ, ಮರಣ (ಕೂಸುಗಳದ್ದೂ) ಹಾಗೂ ಮದುವೆಗಳ ದಾಖಲೆಗಳಿವೆ, ಮನರಂಜನಾ ಕಾರ್ಯಕ್ರಮಗಳ ವರದಿ

ಕೂಡಾ ಇದೆ. (ಅಂತಹ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಯೂರೋಪಿಯನ್ನರೇ ಭಾಗವಹಿಸುತ್ತಿದ್ದರು.) ಒಂದೊಂದು ಸಂಜೆ ಒಬ್ಬೊಬ್ಬರ ಮನೆಯಲ್ಲಿ ಪ್ರತಿನಿತ್ಯ ಸೇರುವ ಪದ್ಧತಿಯಿತ್ತು (Evenings at Home). ೧೮೮೬ರಲ್ಲಿ 'ಜಿಮಖಾನಾ ಕ್ಲಬ್' ಪ್ರಾರಂಭಿಸಲ್ಪಟ್ಟಿತು. ಅಂದು ಜಿಲ್ಲಾ ನ್ಯಾಯಾಧೀಶರ ಪತ್ನಿ ಅಲ್ಲಿಯ ಜನರ ಮನೆಯಲ್ಲಿ ತಯಾರಿಸಿದ ಕರಕುಶಲ ವಸ್ತುಗಳ ಪ್ರದರ್ಶನವನ್ನು ಏರ್ಪಡಿಸಿ, ಹರಾಜು ಹಾಕಿದರಂತೆ.

ಜೂಕ್ಸ್ ಮುಂದೆ ಬರೆಯುವುದೇನೆಂದರೆ :

'ಆ ದಿನ' ವ್ಯಾಪಾರವು ಎಷ್ಟು ಬಿರುಸಾಗಿತ್ತೆಂದರೆ, ಸಂಜೆ ಆರರೊಳಗೆ ಪ್ರದರ್ಶನದ ಎಲ್ಲಾ ಮಳಿಗೆಗಳೂ ಖಾಲಿಯಾದುವು. ಮರುದಿನ, ಅದೃಷ್ಟದ ಆಯ್ಕೆ (Lottery) ನಡೆಯಿತು. ಅದರಲ್ಲಿ ನಮ್ಮ ಧರ್ಮಶೀಲನಾದ ಪಾದ್ರಿಗೆ ಮಕ್ಕಳು ತೊಡುವ ಅಂಗಿ ದೊರೆಯಿತು! (ಅವನಿಗೆ ಅದರಿಂದ ಯಾವ ಪ್ರಾಪಂಚಿಕ ಉಪಯೋಗವಿದೆ?) ಅದನ್ನವನು ತಕ್ಷಣವೆ ಒಬ್ಬ ತಾಯಿಗೆ ಅವಳ ಮಗುವಿಗಾಗಿ ಕೊಟ್ಟುಬಿಟ್ಟನಂತೆ.

ಹರಾಜಿನ ಹಣವನ್ನೆಲ್ಲ ಒಂದು ಕಟ್ಟಡಕ್ಕಾಗಿ ಗೊತ್ತಾಗಿ Y.M.C.A.ಗೆ ಕೊಡಲಾಯಿತು. ಈ ರೀತಿಯ ಅನೇಕ ದಾನಗಳ ದೃಷ್ಟಾಂತಗಳಿವೆ. ಶಿಕೋನ ಎಂಬ ಒಬ್ಬ ಗ್ರೀಕ್ ಗುತ್ತಿಗೆದಾರ, ತನ್ನ ಕೆಲಸಗಳು ಪೂರೈಸಿದ ನಂತರ ಸ್ಥಳೀಯ ಚರ್ಚಿಗೆ ಧಾರಾಳವಾಗಿ ದಾನವನ್ನು ಕೊಟ್ಟನು (೧೮೮೮). ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ಸಂಭವಿಸುತ್ತಿದ್ದ ಕ್ಷಾಮಕ್ಕೆ ಸ್ಥಳೀಯ ಯೂರೋಪಿಯನ್ನರು ಯಥಾಶಕ್ತಿ ಸಹಾಯವನ್ನು ಮಾಡುತ್ತಿದ್ದರು.

ಇಲ್ಲಿ ಗಮನಿಸತಕ್ಕ ಮತ್ತೊಂದು ವಿಷಯವೆಂದರೆ, ಅವರಲ್ಲಿ ಬಹುಮಂದಿ ಒಂದಕ್ಕಿಂತ ಹೆಚ್ಚು ವೃತ್ತಿಗಳಲ್ಲಿ ಪ್ರಾವೀಣ್ಯವನ್ನು ಪಡೆದಿದ್ದರು. ಉದಾಹರಣೆಗೆ ಫೋರ್ಬ್ಸ್. ಮೂಲತಃ ಅವನು ವೈದ್ಯ ಹಾಗೂ ಜಿಲ್ಲಾ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ. ಆದರೆ ಅವನೊಬ್ಬ ಸಿವಿಲ್ ಇಂಜಿನಿಯರನೂ ಆಗಿದ್ದ! ಊರಿನ ಮಾರುಕಟ್ಟೆಯಿಂದ ಸಲಕಿನಕೊಪ್ಪ ಎಂಬ ಹಳ್ಳಿಯವರೆಗೆ ಈಗಿರುವ ರಸ್ತೆಯನ್ನು ಅವನೇ ನಿರ್ಮಿಸಿದನಂತೆ. ಇದಲ್ಲದೆ, ನಂತರ ಹತ್ತಿ ಬೆಳೆಯ ವಿಷಯದಲ್ಲಿ ತಜ್ಞನಾಗಿ ೧೮೬೦ರಲ್ಲಿ ಹತ್ತಿ ಬೀಜ ಬೇರ್ಪಡಿಸುವ ಕಾರ್ಖಾನೆಯಲ್ಲಿ ವ್ಯವಸ್ಥಾಪಕನಾಗಿ ನೇಮಕಗೊಂಡನು. ಮುಂದೆ ಹತ್ತಿ ಬೆಳೆ ಯೋಜನೆಯ ಮುಖ್ಯ ಅಧಿಕಾರಿಯಾಗಿ ಇಡೀ ಪ್ರಾಂತಕ್ಕೇ ಪ್ರಮುಖ ಅಧಿಕಾರಿಯಾಗಿ ನೇಮಿಸಲ್ಪಟ್ಟನು.

ಶಿಯರರ್ ಎಂಬ ಹತ್ತಿ ವಿಷಯದ ತಜ್ಞನು ಬಂದು ಧಾರವಾಡದ ನೆರೆಯಲ್ಲಿಯ ನವಲೂರು ಎಂಬ ಹಳ್ಳಿಯಲ್ಲಿ ಮಾದರಿ ತೋಟವನ್ನು ಬೆಳೆಸಿ ಪ್ರಖ್ಯಾತ ಉದ್ಯಾನ ತಜ್ಞನೆನಿಸಿಕೊಂಡನು. ಆ ಅನುಭವದಿಂದಾಗಿ ಮುಂದೆ ಪುಣೆಯಲ್ಲಿ 'ಎಂಪ್ರೆಸ್ ಗಾರ್ಡನ್' ಎಂಬ ಹೆಸರಿನ ಬೃಹತ್ ಉದ್ಯಾನಕ್ಕೆ ನಿರ್ವಾಹಕನಾಗಿ ನೇಮಿಸಲ್ಪಟ್ಟನು.

೧೯೧೧ರಲ್ಲಿ, ಕ್ಲೆಮೆಂಟ್ಸ್ ಎಂಬ ಜಿಲ್ಲಾ ನ್ಯಾಯಾಧೀಶನು 'ಧಾರವಾಡ ಗಾಯನ

ಸಮಾಜ'ವನ್ನು ಸ್ಥಾಪಿಸಿ ಭಾರತೀಯ ಸಂಗೀತ ಪರಂಪರೆಯ ಅಧ್ಯಯನಕ್ಕೆ ಅನುವು ಮಾಡಿಕೊಟ್ಟನು. ತಂಜಾವೂರು ಹಾಗೂ ಕರ್ನಾಡಿನಿಂದ ಸಂಗೀತಗಾರರನ್ನು ಕರೆಯಿಸಿ, ಎರಡೂ ಪದ್ಧತಿಗಳ ಸಂಗೀತಾಭ್ಯಾಸ ಮಾಡಲು ಪ್ರಯತ್ನಿಸಿದನು. ಅನಂತರ ೧೯೨೦ರಲ್ಲಿ ಲಂಡನ್ನಿನಲ್ಲಿ 'The Ragas of Tanjore' ಎಂಬ ಸಂಗೀತಕ್ಕೆ ಸಂಬಂಧಿಸಿದ ಅಪರೂಪದ ಪುಸ್ತಕವನ್ನು ಹೊರತಂದನು.

ಲಂಚಗುಳಿತನದ ಹತ್ತಾರು ಕೇಸುಗಳನ್ನು ಜ್ಯೂಕ್ಸ್ ದಾಖಲಿಸಿದ್ದಾನೆ. ಕೆಲವು ಬಾರಿ ಕೆಳಕೋರ್ಟಿನ ಶಿಕ್ಷೆಯನ್ನು ಮೇಲಿನವರು ರದ್ದುಪಡಿಸಿದ ಸಂದರ್ಭಗಳೂ ಇವೆ. ಇದೊಂದು ಕೇಸು ತುಸು ಮೋಜಿನದಿದೆ. ಮುತ್ತುಕುಮಾರ ಎಂಬವನು ಕೋರ್ಟಿನಲ್ಲಿ ನಾಝರ್. ಅವನ ಮೇಲೆ ಕೇಸು ದಾಖಲಾದ್ದರ ಕಾರಣ ಕರ್ತವ್ಯಚ್ಯುತಿ. ಏನದು? ಅವನು ಕೈಕೆಳಗಿನ ಕಾರಕೂನನೊಬ್ಬ ಲಂಚ ತಿಂದದ್ದನ್ನು ಅಲಕ್ಷ್ಯ ಮಾಡಿದ್ದೇ ಮುತ್ತುಕುಮಾರನ ತಪ್ಪು! ಅಂತೂ ಅವನಿಗೆ ಎರಡು ವರ್ಷ ಜೇಲು ವಾಸ. ಆದರೆ ಮೇಲು ಕೋರ್ಟಿನ ಸಾಹೇಬರು ಮುತ್ತುಕುಮಾರನು ನಿರ್ದೋಷಿ ಎಂದು ನಿರ್ಣಯಿಸಿದರು. ಅಷ್ಟರಲ್ಲಿ ಆತ ರಾಜೀನಾಮೆ ಕೊಟ್ಟುಬಿಟ್ಟಿದ್ದ. ಕೆಲವು ವರ್ಷಗಳಾದ ಮೇಲೆ ಮುತ್ತುಕುಮಾರ ಧಾರವಾಡವನ್ನು ಬಿಟ್ಟು ಬೆಳಗಾಂವಿಗೆ ಹೋಗಿ ಅಲ್ಲಿ ಪೋಲೀಸ ಇಲಾಖೆಯನ್ನು ಸೇರಿ ಪ್ರಸಿದ್ಧಿಗೆ ಬಂದ.

ಧಾರವಾಡದ ಜೈಲು, ಠಾಣಾ ಜೇಲಿನ ಅನಂತರ ಪ್ರಾಂತದಲ್ಲೇ ದೊಡ್ಡ ಜೇಲು ಎನಿಸಿಕೊಂಡಿತ್ತು. ಒಳ್ಳೆಯ ಹೆಸರು ಗಳಿಸಿತ್ತು. ಒಮ್ಮೆ ಠಾಣಾ ಜೇಲಿನ ೨೦೦ ಕೈದಿಗಳನ್ನು (ಅವರೆಲ್ಲ ಚೀನಾ, ಮಲಯ ದೇಶಗಳಿಂದ ಬಂದವರು) ಧಾರವಾಡದ ಜೇಲಿಗೆ ವರ್ಗಾಯಿಸಲಾಯಿತು. ಕಾರಣವೆಂದರೆ ಠಾಣಾ ಜೇಲಿನಲ್ಲಿ ತುಂಬಾ ಗಲಾಟೆ ಮಾಡುತ್ತಿದ್ದರಂತೆ. ಧಾರವಾಡಕ್ಕೆ ಸ್ಥಳಾಂತರಿಸಿದ ಮೇಲೆ, ಇಲ್ಲಿಯ ಜೇಲರನ ಹಾಗೂ ದೇಶೀ ಕೈದಿಗಳ ಸಹವಾಸದಲ್ಲಿ ಸೌಮ್ಯರಾಗಿ ವರ್ತಿಸತೊಡಗಿದ್ದರಂತೆ.

೧೮೫೦ರ ದಶಕದಲ್ಲಿ, ಎರಡು ಹೊಸ ಪ್ರಯೋಗಗಳು ಧಾರವಾಡದಲ್ಲಿ ನಡೆದುವು. ಒಂದನೆಯದು ಗೋಲ್ಫ್ ಆಟ. ಕಲೆಕ್ಟರ್ ಕಚೇರಿಯ ಹಿಂದಿನ ಬಯಲು ಜಾಗವನ್ನು ಅದಕ್ಕಾಗಿ ಸಜ್ಜುಗೊಳಿಸಲಾಯಿತು. ಆಡುವವರು ಕೇವಲ ವಿದೇಶಿಗಳೆಂದು ಬೇರೆ ಹೇಳಬೇಕಾಗಿಲ್ಲ. ಇನ್ನೊಂದು ಡಮಣಿ ಗಾಡಿಗಳದ್ದು. ೧೮೫೫ರಲ್ಲಿ ಯಾವನೊ ಒಬ್ಬ ಯೂರೋಪಿಯನ್ ಅಹಮ್ಮದನಗರದಿಂದ ಅದನ್ನು ಮೊದಲು ತಂದುದಂತೆ. ಅದರ ಮಾಡೆಲ್ ಮೇಲೆ ಪೂರ್ವೋಕ್ತ ಫೋರ್ಬ್ಸ್ ಇನ್ನೊಂದನ್ನು ತಯಾರಿಸಿಕೊಟ್ಟ.

ಧಾರವಾಡದಲ್ಲಿ ೧೮೧೮ರಿಂದ ೧೯೪೭ರವರೆಗೆ ಮೂವತ್ತಕ್ಕೂ ಹೆಚ್ಚು ಜಿಲ್ಲಾಧಿಕಾರಿಗಳು ಆಳಿದರು. ಥ್ಯಾಕರೆ ಹಾಗೂ ಪೇಂಟರ ರಂಥ ಒಂದಿಬ್ಬರು ಸಾಮ್ರಾಜ್ಯಶಾಹೀ ಸ್ವಪ್ರತಿಷ್ಠೆಯ ಅಧಿಕಾರಿಗಳನ್ನು ಬಿಟ್ಟರೆ ಉಳಿದ ಬ್ರಿಟಿಷ್ ಅಧಿಕಾರಿಗಳು ಸಾಮಾನ್ಯ ಜನರ ಸುಖದುಃಖದೊಳಗೆ

ಸ್ಪಂದಿಸಿ ಹೆಸರು ಮಾಡಿದರು. ೧೯೨೧ರಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಗೋಳೀಬಾರಿನ ಆಜ್ಞೆಯನ್ನು ಕೊಟ್ಟವ ಈ ಪೇಂಟರ್. ಈ ರೀತಿ ನಡೆದ ಪ್ರಸಂಗವೆಂದರೆ ಇದೊಂದೇ.

ಧಾರವಾಡದಲ್ಲಿ ಮಾಳಮಡ್ಡಿ ಎಂಬ ಪರಿಚಿತ ವಿಭಾಗವಿದೆಯಷ್ಟೆ. ಅದರ ಒಂದು ಬದಿಯನ್ನು ಗಿಬ್‌ಟೌನ್ ಎಂದು ಕರೆಯುತ್ತಿದ್ದರು. ಗಿಬ್ ಎಂಬವನು ಓರ್ವ ಜನಪ್ರಿಯ ಕಲೆಕ್ಟರ್ ಎನಿಸಿದ್ದ. ಊರಲ್ಲಿ ನಿಸ್ಪತ್-ದೇಸಾಯಿ ಎಂಬ ಮನೆತನದವರಿದ್ದಾರೆ. ದೇಸಾಯರಿಗೆ ನಿಸ್ಪತ್ ಎಂಬ ಉಪಾಧಿ ಏಕೆ ಎಂದು ಯೋಚಿಸುತ್ತಿದ್ದೆ. ನಿಸ್ಬತ್ ೧೯ನೆಯ ಶತಮಾನದ ಮಧ್ಯದಲ್ಲಿ ಇಲ್ಲಿ ಜಿಲ್ಲಾಧಿಕಾರಿಯಾಗಿದ್ದ (೧೮೨೮). ವಿಷಯ ಈ ಹಿಂದೆ ಬಂದಿದೆ. ಪ್ರಾಯಶಃ ಧಾರವಾಡದ ತಂಪು ಹವೆ, ನಾಗರಿಕರ ಸುಧಾರಿತ ನಡತೆ ಇದರಿಂದಾಗಿ ಯೂರೋಪದಿಂದ ಬಂದವರು ಸೌಹಾರ್ದತೆಯಿಂದ ನೆಲಸುವಂತಾಗಿರಬೇಕು.

ಮೇಜರ್ ಗುಡ್‌ಫೆಲೊ ಎಂಬವನು ೧೮೬೦ರ ದಶಕದಲ್ಲಿ, ಕರ್ನಾಟಕ ಕಾಲೇಜಿಗೆ ಹೋಗುವ ದಾರಿಯಲ್ಲಿ ಸಾಲಾಗಿ ಕಾಣುವ ಟ್ರೇನಿಂಗ್ ಕಾಲೇಜ್, ಇಂಗ್ಲಿಷ್ ಸ್ಕೂಲ್ ಮತ್ತಿತರ ಕಟ್ಟಡಗಳನ್ನು ಕಟ್ಟಿಸಿದವನು. ನಿವೃತ್ತನಾದ ಮೇಲೆ ಸ್ವದೇಶಕ್ಕೆ ಹಿಂದಿರುಗಬೇಕಿತ್ತು. ಇಲ್ಲ; ಸಪತ್ನೀಕನಾಗಿ ಕೆಲವು ವರ್ಷ ಇಲ್ಲಿ ಕಳೆದು ಆಮೇಲೆ ಹೋದನಂತೆ. ಈ ಮಾತು ಪ್ರಿನ್ಸಿಪಲ್ ಎ. ಸಿ. ಫ್ಯಾರನ್ನರಿಗೂ ಅನ್ವಯಿಸುತ್ತದೆ. ಕರ್ನಾಟಕ ಕಾಲೇಜಿನ ಬೆಳವಣಿಗೆಗೆ ಅವರ ಸಕ್ರಿಯ ಸಹಾಯ ಅನುಪಮವಾದದ್ದು. ೧೯೪೭ರಲ್ಲಿ ಸ್ವಾತಂತ್ರ್ಯ ಬಂದ ಮೇಲೆಯೂ ಕೆಲಕಾಲ ಪ್ರಿನ್ಸಿಪಾಲರಾಗಿ ಮುಂದುವರಿದರು. ಕಾಯಂ ವಿಧುರರಾಗಿದ್ದ ಅವರು ಇಲ್ಲಿಯೇ ಒಂದು ಮನೆಯಲ್ಲಿ ವಾಸವಾಗಿದ್ದು ಪ್ರಕೃತಿ ತೀರ ಹಣ್ಣಾದ ಮೇಲೆ ತಮ್ಮ ಸ್ಕಾಟ್‌ಲಂಡಿಗೆ ಮರಳಿದರು.

ಹೀಗಿತ್ತು ಯೂರೋಪಿಯನ್ನರು ವಾಸವಾಗಿ ಸಂತೃಪ್ತಿಯಿಂದಿದ್ದ ಧಾರವಾಡ.

●

೧೮. ಧಾರವಾಡ ಕರ್ನಾಟಕ ಕಾಲೇಜಿನ 'ಪ್ರಸವ ವೇದನೆ'

ಶಿಕ್ಷಣ ಸಂಸ್ಥೆಯೊಂದನ್ನು ಆರಂಭಿಸಲು ಮೊದಲು ಹಣ ಬೇಕು. ಅಲ್ಲಿಂದ ಪ್ರಶಸ್ತ ಸ್ಥಳ ಹುಡುಕಬೇಕು. ಆಮೇಲೆ ಶಿಕ್ಷಕವೃಂದ; ಕೊನೆಯದಾಗಿ ಸರಕಾರದ / ವಿಶ್ವವಿದ್ಯಾಲಯದ ಅನುಮತಿ ಪಡೆಯಬೇಕು. ಈಗಿನ ದಿನಗಳಲ್ಲಿ ದುಡ್ಡಿನ ಅನುಕೂಲತೆ ಇರುವ ಹಾಗೂ ತುಸು ಪ್ರತಿಷ್ಠೆ ಹೊಂದಿರುವ ಯಾವುದೇ ವ್ಯಕ್ತಿ, ತಿಂಗಳೊಪ್ಪೊತ್ತಿನಲ್ಲಿಯೆ ನಿರಾಯಾಸವಾಗಿ ಶಾಲೆ-ಕಾಲೇಜನ್ನು ಸ್ಥಾಪಿಸಿಬಿಡಬಹುದು.

ಕರ್ನಾಟಕ ಕಾಲೇಜು ೨೦ ಜೂನ್ ೧೯೧೭ರಂದು ಧಾರವಾಡದಲ್ಲಿ ಅಸ್ತಿತ್ವದಲ್ಲಿ ಬಂದಿತಷ್ಟೆ. ಅದಕ್ಕೂ ಹಿಂದೆ ಸುಮಾರು ಎಂಟು-ಹತ್ತು ವರ್ಷಗಳ ಕಾಲ ಕಾಲೇಜನ್ನು ಹುಟ್ಟು ಹಾಕಲು ಅವ್ಯಾಹತ ಪ್ರಯತ್ನ ನಡೆಯಿತು. ಎಲ್ಲ ವರ್ಗದ ಜನರನ್ನು ಒಲಿಸಿಕೊಳ್ಳುವುದು, ಮನೆಮನೆಗೆ, ಅಲೆದಾಡಿ ದುಡ್ಡು ಕೂಡಿಸುವುದು, ಅನುಮತಿಗಾಗಿ ಸರಕಾರೀ ಅಧಿಕಾರಿಗಳ ಮನವೊಲಿಸುವುದು ಏನೆಲ್ಲ ಪರಿಶ್ರಮ ಪಡಬೇಕಾಗಿ ಬಂದಿತು!

ಪೂರ್ವ ಸಿದ್ಧತೆ

ಮುಂಬಯಿ ವಿಶ್ವವಿದ್ಯಾಲಯವು ಎಂದು ಅಸ್ತಿತ್ವದಲ್ಲಿ ಬಂತೋ, ಅಂದಿನಿಂದ ನಮ್ಮವರಲ್ಲಿ ಉಚ್ಚ ಶಿಕ್ಷಣದ ವಿಚಾರ ಮೂಡಿ ಬಂದುದು ಸಹಜ. ಆಗಿನ ದಿನಗಳಲ್ಲಿ ಮೆಟ್ರಿಕ್ ಎಂದರೆ, ಹೈಸ್ಕೂಲಿನ ಅಂತಿಮ ಪರೀಕ್ಷೆಯನ್ನು ವಿಶ್ವವಿದ್ಯಾಲಯವೇ ನಡೆಸುತ್ತಿದ್ದಿತು. ಅಲ್ಲಿ ಪಾಸಾದವರಿಗೆ ಮುಂಬಯಿ ಪ್ರಾಂತದಲ್ಲಿ ಎರಡೇ ಕಡೆಗೆ (ಮುಂಬಯಿ ಮತ್ತು ಪುಣೆ) ಕಾಲೇಜುಗಳಿದ್ದುವು. ಧಾರವಾಡ, ಬೆಳಗಾವಿ, ಬಿಜಾಪುರ ಇಲ್ಲಿಯ ಹೈಸ್ಕೂಲುಗಳಿಂದ ಮೆಟ್ರಿಕ್ ಪಾಸಾದವರು ಅಲ್ಲಿಗೇ ಹೋಗಬೇಕು; ಹೋಗುತ್ತಿದ್ದರು. ಹಾಗೆ

ಎಲ್ಫಿನ್‌ಸ್ಟನ್, ಡೆಕ್ಕನ್, ಫರ್ಗ್ಯುಸನ್ ಕಾಲೇಜುಗಳಿಗೆ ಹೋಗುತ್ತಿದ್ದವರು ನಮ್ಮಲ್ಲಿಯ ಮಧ್ಯಮ ವರ್ಗದ ಅನುಕೂಲಸ್ಥರು ಮಾತ್ರ. ರಾ. ಹ. ದೇಶಪಾಂಡೆ, ಆಲೂರ ವೆಂಕಟರಾವ ಮೊದಲಾದವರು - ರೊದ್ದ ಅವರಂತೂ ಸರಿಯೇ - ಗ್ರ್ಯಾಜುಯೇಟ್ ಆದದ್ದು ಹೀಗೆ. ಡೆಪ್ಯುಟಿ ಚೆನ್ನಬಸಪ್ಪನವರಂಥ ಕಡು ಬಡವರೂ ಆದರೆ ವಿದ್ಯೆಯ ದಾಹವುಳ್ಳವರು ಪುಣೆಗೆ ಹೇಗೆ ಧಾವಿಸಿದರೆಂಬುದನ್ನೂ ನಾವು ಬಲ್ಲೆವು.

ಇವೆರಡೂ ಅಡಚಣೆಗಳಿಂದಾಗಿ, ತಮ್ಮ ಭಾಗದಲ್ಲಿಯೂ ಒಂದು ಕಾಲೇಜು ಸ್ಥಾಪನೆಯಾಗಬೇಕೆಂಬ ವಿಚಾರ ಟ್ರೇನಿಂಗ್ ಕಾಲೇಜಿನ ಅಧ್ಯಾಪಕ - ಪ್ರಾಧ್ಯಾಪಕರಲ್ಲಿ ಹಾಗೂ ವಕೀಲಿ ವೃತ್ತಿಯವರಲ್ಲಿ ತುಡಿಯುತ್ತಿತ್ತು. ಮುಂಬಯಿ ಪ್ರಾಂತದ ಇತರ ಸ್ಥಳಗಳಲ್ಲಿಯೂ ಹೊಸ ಕಾಲೇಜಿನ ಬೇಡಿಕೆಯಿರುತ್ತಿತ್ತು. ಗುಜರಾತದವರು, ಅದರಂತೆ ಮುಸಲ್ಮಾನರು ಏಳೆಂಟು ಲಕ್ಷ ರೂ.ಗಳ ವರೆಗೆ ಹಣವನ್ನು ನಿರಾಯಾಸವಾಗಿ ಕೂಡ್ರಿಸಿ ಸರಕಾರದ ಮುಂದೆ ಚಾಚಿ 'ನಮಗೊಂದು ಕಾಲೇಜು ಬೇಕು' ಎಂದು ಹಕ್ಕಿನಿಂದ ಕೇಳುತ್ತಿದ್ದರು. ಕರ್ನಾಟಕದವರಾದ ನಾವು? ನಮ್ಮದು ಬಾಯ್ದೆರೆದ ಯಾಚನೆ! ಗವರ್ನರ್, ಕಮಿಶನರ್ ಮುಂತಾದ ಮೇಲಧಿಕಾರಿಗಳು ಬಂದಾಗ, 'ಪಾನಸುಪಾರಿ' ಮಾಡಿ ಕಾಲೇಜಿಗಾಗಿ ಯಾಚಿಸುವುದು ನಮ್ಮ ಕ್ರಮವಾಗಿದ್ದಿತು. ಕಾರಣ ಇಷ್ಟೇ; ಸ್ಥಳೀಯರು ಹಣ ಸಂಗ್ರಹಿಸಿ ಕೊಡದೇ ಸರಕಾರವು ಏನೂ ಮಾಡಹೋಗುತ್ತಿರಲಿಲ್ಲ.

ಇಂಥ 'ಪಾನಸುಪಾರಿ' ಕಾರ್ಯಕ್ರಮಗಳು ಧಾರವಾಡದಲ್ಲಿ ಮೇಲಿಂದ ಮೇಲೆ ಜರುಗುತ್ತಿದ್ದವು. ಅವುಗಳಲ್ಲಿ ಎದ್ದು ಕಾಣುವ ಒಂದು ಕಾರ್ಯಕ್ರಮ ೧೮೭೭ರಲ್ಲಿ ಆದದ್ದನ್ನು ಉಲ್ಲೇಖಿಸುವೆ. ಯಾಕೆಂದರೆ ಆ ದಿನ ಧಾರವಾಡದ ಕೆಲವು ಗಣ್ಯ ನಾಗರಿಕರನ್ನು ಮುದ್ದಾಂ ಕಲೆ ಹಾಕಿ, ಗವರ್ನರ್ ಮಹಾಶಯನಿಗೆ ಕಾಲೇಜಿನ ವಿಚಾರವನ್ನು ಸೂಚಿಸಲಾಗಿದ್ದಿತು. ಆ 'ಶಿಷ್ಟ ಮಂಡಲ'ದಲ್ಲಿ ಕೆಲವು ತರುಣರೂ ವಯೋವೃದ್ಧ ಶ್ರೀನಿವಾಸರಾಯರೂ ಇದ್ದರು. ಇಂಥದೇ ಪಾನಸುಪಾರಿ ಹಾಗೂ ಮನವಿಗಳ ಪರಿಣಾಮವೆಂಬಂತೆ ಪ್ರಾಂತದ ವಿದ್ಯಾಧಿಕಾರಿಯಾದ (ಡಿ.ಪಿ.ಐ.) ಎಗ್ಲೈಲ್ಸ್ ತನ್ನ ೧೯೦೨-೩ರ ವಾರ್ಷಿಕ ವರದಿಯಲ್ಲಿ ಕಾಲೇಜಿನ ನಾಸ್ತಿತ್ವವನ್ನು ಎತ್ತಿ ತೋರಿಸಿದ್ದನು. ಮೆಚ್ಚಬೇಕಾದ ಸಂಗತಿಯೆಂದರೆ ಅದರ ಮರುವರ್ಷ ಎಂದರೆ ೧೯೦೪ರಲ್ಲಿ ಧಾರವಾಡದ ಆಗಿನ ನಗರಸಭೆಯವರು ಗವರ್ನರ್ ಲ್ಯಾಮಿಂಗ್ಟನ್ ತಮ್ಮಲ್ಲಿಗೆ ಬಂದಾಗ ಬಿಚ್ಚು ನುಡಿಗಳಲ್ಲಿ ಕಾಲೇಜ್ ಬೇಡಿಕೆಯನ್ನು ಮುಂದಿರಿಸಿದ್ದರು. ಅದಕ್ಕೆ ಗವರ್ನರ್ ಸಾಹೇಬರು "ಈಗಾಗಲೇ ಎರಡು ಕಾಲೇಜುಗಳಿವೆಯಲ್ಲ? ಇಲ್ಲಿಯವರು ಅಲ್ಲಿಗೆ ಹೋಗ್ತಾನೇ ಇದ್ದಾರೆ. ಹೊಸ ಕಾಲೇಜ ಎಂದರೆ ತುಂಬಾ ವೆಚ್ಚದ್ದು. ಆದರೂ ನೋಡುವಾ" ಎಂಬ ಧರತಿಯಲ್ಲಿ ಉತ್ತರವಿತ್ತರಂತೆ.

೧೯೦೮ರ ಜುಲೈ ತಿಂಗಳಲ್ಲಿ ರೊದ್ದರ ಶೈಕ್ಷಣಿಕ ಸೇವಾ ನಿವೃತ್ತಿ. ಅದೇ ವರ್ಷ ಬೆಳಗಾವಿಗೆ ಹೋಗಿ, ಅಲ್ಲಿಗೆ ಬಂದಿದ್ದ ಗವರ್ನರರೊಂದಿಗೆ, ಎರಡು ತಾಸು ಸಂವಾದಿಸಿದ್ದರು. ಅದರ ಎಳೆಯನ್ನು ಎತ್ತಿಕೊಂಡು ೧೯೦೯ರ ಫೆಬ್ರವರಿ ೨೭ನೆಯ ತಾರೀಖಿನ ದಿವಸ ಕಾಲೇಜು ಸ್ಥಾಪನೆಯ ಬಗ್ಗೆ ಅಧಿಕೃತವಾದ ಮನವಿಯನ್ನು ಎಂದು ಮುಂದಿರಿಸಿದರೋ ಅಂದೇ ಕಾಲೇಜಿನ ಬೀಜಾಂಕುರವಾಯಿತೆನ್ನಬಹುದು. ಆ ಸುದೀರ್ಘ ಮನವಿಯಲ್ಲಿ ಅವರು ಕಾಲೇಜಿನ ಬೇಡಿಕೆಯ ಪೂರ್ವಾಪರಗಳನ್ನು ಕೊಟ್ಟಿದ್ದಾರೆ. ಮುಂಬಯಿ ಕರ್ನಾಟಕದ ನಾಲ್ಕೂ ಜಿಲ್ಲೆಗಳಲ್ಲಿ ೧೦ ಹೈಸ್ಕೂಲುಗಳಿದ್ದುದನ್ನೂ, ನಮ್ಮವರು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪುಣೆ, ಮುಂಬಯಿಗಳಿಗೆ ಹೋಗುವುವರ ತೊಂದರೆಗಳನ್ನೂ ಕೊಟ್ಟಿದ್ದಾರೆ. ಕಾಲೇಜು ಸ್ಥಾಪನೆಗೆ ಧಾರವಾಡದ ಪ್ರಾಶಸ್ತ್ಯವನ್ನು ತೋರಿಸಿ ಕೊಟ್ಟಿದ್ದಾರೆ. ಹೈಸ್ಕೂಲು ದಾಟಿದ ಮೇಲೆ ಉನ್ನತ ಶಿಕ್ಷಣವಿಲ್ಲದಿದ್ದರೆ, ಕನ್ನಡ ಮಕ್ಕಳ ಸ್ಥಿತಿ ಏನಾಗುವುದೆಂಬುದನ್ನೂ ವಿವರಿಸಿದ್ದಾರೆ. ಕಾಲೇಜ್ ಸ್ಥಾಪನೆಗೆ ದುಡ್ಡು ಬೇಕಲ್ಲವೆ? ರೊದ್ದ ಅವರು ಆ ಬಗ್ಗೆಯೂ ಹೇಳಿದ್ದಾರೆ: "ಸರಕಾರದವರೇ ನಮ್ಮ ಸಲುವಾಗಿ ಎಲ್ಲ ಕಾರ್ಯಗಳನ್ನು ಜರುಗಿಸಬೇಕೆಂದು ನಾನು ಇಚ್ಛಿಸುವುದಿಲ್ಲ. ಅದಕ್ಕಾಗಿ ಕರ್ನಾಟಕದ ಜನರು ವರ್ಗಾವಣೆಯಿಂದ ಒಂದು ಲಕ್ಷ ರೂಪಾಯಿಗಳನ್ನು ಕೂಡಿಸಿಕೊಡುವೆವೆಂದು ಈ ಪ್ರಾಂತದೊಳಗಿನ ಕನ್ನಡ ಪ್ರಜೆಗಳ ಪ್ರತಿನಿಧಿಯಾಗಿ ಹೇಳುತ್ತೇನೆ."

ಆ ಮನವಿಗೆ ನಾಲ್ಕು ತಿಂಗಳಾದ ಮೇಲೆ ಸರಕಾರದಿಂದ ಉತ್ತರ ಬಂದಿತು:

"ಒಂದು ಲಕ್ಷ ಸಾಲುವುದಿಲ್ಲ. ಹಣ ಕೂಡಿಸುವ ಸಂಘವನ್ನು ಸ್ಥಾಪಿಸಿರಿ. ದ್ರವ್ಯ ಸಹಾಯವು ನಿಶ್ಚಿತವಾಗಿ ಎಷ್ಟು ಸಿಗುವುದೆಂದು ತಿಳಿದ ಮೇಲೆ ಕಾಲೇಜಿನ ಯೋಜನೆಯೊಡನೆ ಅರ್ಜಿ ಕೊಡಿರಿ. ಈ ಯೋಜನೆಯನ್ನು ಸಿದ್ಧಪಡಿಸಲಿಕ್ಕೆ ಅವಶ್ಯವಾದ ಸಹಾಯ ಮಾಡಲು ವಿದ್ಯಾಖಾತೆಯ ಡೈರೆಕ್ಟರರಿಗೆ ತಿಳಿಸಿರುವೆವು.

"ಮುಂದೆ ಸ್ಥಾಪಿತವಾಗಲಿರುವ ಕಾಲೇಜಿನಲ್ಲಿ ಲಿಂಗಾಯತ ವಿದ್ಯಾರ್ಥಿಗಳೂ ಸೇರುವುದರಿಂದ, ಲಿಂಗಾಯತ ಎಜ್ಯುಕೇಷನ್ ಫಂಡಿಗೆ ಒಪ್ಪಿಸಿಕೊಟ್ಟ ಸಿರಸಂಗಿ ದೇಸಾಯರ ಆಸ್ತಿಯೊಳಗಿಂದ ಕೆಲ ಭಾಗವು ದೊರೆಯಲೂ ಬಹುದು. ಆ ಫಂಡಿನ ವ್ಯವಸ್ಥಾಪಕರನ್ನು ಕೇಳಿ ನೋಡಿರಿ"

ಇದರ ಅರ್ಥ ಸರಕಾರವು ಕಾಲೇಜನ್ನು ತೆರೆಯುವುದನ್ನು ತತ್ವತಃ ಒಪ್ಪಿಕೊಂಡಂತೆಯೇ ಆಯಿತಲ್ಲವೆ. ನಮ್ಮವರ ಮುಂದಿನ ಹೆಜ್ಜೆ ಇದಕ್ಕೂ ಹೆಚ್ಚು ಗುಣಾತ್ಮಕವಾಗಿದ್ದಿತು. ಎಂದರೆ, ಶಿಷ್ಟ ಮಂಡಳಿಯೊಂದು ಅಕ್ಟೋಬರ್ ೧೯೦೯ರಲ್ಲಿ, ಧಾರವಾಡದಿಂದ ಹೊರಟು, ಬೆಳಗಾವಿಗೆ ಬಂದಿದ್ದ ಪ್ರಾಂತಮಟ್ಟದ ವಿದ್ಯಾಧಿಕಾರಿಯನ್ನು ಕಂಡಿತು. ಆ ಶಿಷ್ಟ ಮಂಡಲದಲ್ಲಿ ರೆವರೆಂಡ್ ಬೀಲ್ ಹಾಗೂ ಅರಟಾಳ ರುದ್ರಗೌಡರು ಇದ್ದರೆನ್ನುವುದನ್ನು ವಿಶೇಷವಾಗಿ ಕಾಣಿಸಬೇಕು.

ಒಂದು ಕಾಲೇಜು ನಡೆಸುವುದಕ್ಕೆ ಸುಮಾರು ಎಷ್ಟು ಹಣ ಬೇಕು? ಆ ಬಗ್ಗೆ ಚರ್ಚೆ ನಡೆದು ವಾರ್ಷಿಕ ವೆಚ್ಚ ೨೫ ಸಾವಿರ ರೂ. ಎಂದು ಲೆಕ್ಕ ಹಾಕಿದರು. ಅದರಲ್ಲಿ ೧೦ ಸಾವಿರ ರೂ. ಸರಕಾರವು ಭರಿಸಬೇಕು. ಫೀ ಹಣ ೮ ಸಾವಿರ ಬರಬಹುದು. ಇನ್ನುಳಿದ ೭ ಸಾವಿರ? ಪ್ರತಿ ವರ್ಷ ಅಷ್ಟು ಬಡ್ಡಿ ಬರುವ ಮೂಲಧನವನ್ನು ಕೂಡಿಸಬೇಕು. ಆಗಿನ ಕಾಲದ ಬಡ್ಡಿಯ ದರ ೩.೫% ಮಾತ್ರ. ಎಂದರೆ ೨ ಲಕ್ಷ ರೂಪಾಯಿ! ಅಷ್ಟು ಹಣ ಬೇರೆ ಮೂಲಗಳಿಂದ ಎಂದರೆ ಸಾರ್ವಜನಿಕರಿಂದ ಬರತಕ್ಕುದು. ರೊದ್ದ, ಅರಟಾಳ ಪ್ರಭೃತಿಗಳು ಕೂಡಿಸಬೇಕಾಗಿದ್ದ ೨ ಲಕ್ಷ ರೂ. ಲೆಕ್ಕ ಈ ರೀತಿಯದು.

ಕರ್ನಾಟಕ ಕಾಲೇಜ್ ಅಸೋಸಿಯೇಶನ್

ಸರಕಾರವೇ ಇಂಥ ಅಸೋಸಿಯೇಶನ್ ಸ್ಥಾಪಿಸಬೇಕೆಂದು ಸೂಚಿಸಿದ್ದುದು ಒಂದು ಚೋದ್ಯವೇ ಸರಿ. ಅಂತೂ ೧೯೦೦ರ ಆರಂಭದಲ್ಲಿಯೇ ಈ ಅಸೋಸಿಯೇಶನ್ ಅಸ್ತಿತ್ವದಲ್ಲಿ ಬಂತು. ಒಂಬತ್ತು ಜನರಿದ್ದ ಆ ಸಂಸ್ಥೆಗೆ ರೊದ್ದ ಅವರು ಕಾರ್ಯಾಧ್ಯಕ್ಷರು. ಕರಗುದರಿ ನಾರಾಯಣರಾಯರು ಕಾರ್ಯದರ್ಶಿಯಾದರೆ ಜಠಾರ ಬಳವಂತರಾಯರು ಕೋಶಾಧಿಕಾರಿಗಳಾದರು. ಓರ್ವ ಗೌರವಾನ್ವಿತ ಅಧ್ಯಕ್ಷರಿರುವುದು ಒಳಿತೆಂದು ಆ ಸ್ಥಾನಕ್ಕೆ ಸರ್ ನಾರಾಯಣ ರಾವ ಚಂದಾವರಕರರನ್ನು ವಿನಂತಿಸಲಾಯಿತು. ಆಗ ಅವರು ಮುಂಬಯಿ ವಿಶ್ವವಿದ್ಯಾಲಯದ ವೈಸ್‌ಚಾನ್ಸಲರ್ ಆಗಿದ್ದರು.

ಇತ್ತ ಮುಂಬಯಿ ಪ್ರಾಂತದ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಕರ್ನಾಟಕದಿಂದ ಹೋದ ಸಭಾಸದರು ಮೇಲಿಂದ ಮೇಲೆ ಕಾಲೇಜಿನ ಪ್ರಸ್ತಾಪ ಮಾಡುತ್ತಿದ್ದರು. ಅವರಲ್ಲಿ ದತ್ತಾತ್ರೇಯ ವೆಂಕಟೇಶ ಬೆಳವಿ ಅವರ ಭಾಷಣಗಳು ಮನನೀಯವಾಗಿದ್ದವು. ಒಂದು ಸಲ ಬೆಳವಿಯವರು "ಧಾರವಾಡದಲ್ಲಿ ಸರಕಾರದವರು ಬೇಗನೆ ಆರ್ಟ್ಸ್ ಕಾಲೇಜನ್ನು ಸ್ಥಾಪಿಸಬೇಕೆಂದು ಗವರ್ನರ್-ಇನ್-ಕೌನ್ಸಿಲ್ಲನವರಿಗೆ, ಈ ಕೌನ್ಸಿಲ್ ಸೂಚಿಸುತ್ತದೆ" ಎಂಬ ನಿಲುವಳಿಯನ್ನು ತಂದರು. ಅದನ್ನು ಸಮರ್ಥಿಸುತ್ತ ಅವರು ಕೊಟ್ಟ ಕೆಲವು ಶೈಕ್ಷಣಿಕ ಮಾಹಿತಿ ಪರಿಣಾಮಕಾರಿ ಯಾಗಿದ್ದಿತು.

"ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಲೆಗಳು ಸೇರಿ, ಸರಕಾರದ ನಾಲ್ಕು, ಖಾಸಗಿ - ಏಡೆಡ್ ಆರು – ಹೀಗೆ ೧೦ ಹೈಸ್ಕೂಲುಗಳಿದ್ದು, ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಮೂರು ಸಾವಿರ ಆಗುತ್ತದೆ. ಅವರಲ್ಲಿ ಮೆಟ್ರಿಕ್ ಪಾಸಾದವರು ಮುಂಬಯಿ - ಪುಣೆ ಕಾಲೇಜುಗಳಿಗೆ ಹೋಗಬಯಸುತ್ತಾರೆ. ಆದರೆ ಅಲ್ಲಿಯೂ ದಟ್ಟಣೆ ಹೆಚ್ಚಾಗುತ್ತಲಿದೆಯಾದ್ದರಿಂದ ಅತ್ಯಂತ ಹುಶಾರೀ ಹುಡುಗರಿಗಷ್ಟೇ ಪ್ರವೇಶ ದೊರೆತೀತು. ಉಳಿದ ಮಧ್ಯಮ ದರ್ಜೆಯವರು ಏನು ಮಾಡಬೇಕು?"

ಆಮೇಲೆ ಬೆಳವಿಯವರು, ಮುಂಬಯಿ - ಪುಣೆಗಳಲ್ಲಿಯ ಐದು ಕಾಲೇಜುಗಳಲ್ಲಿ ಒಟ್ಟಿಗೆ ೧೪೨೮ ಹುಡುಗರಿದ್ದು ಅವರಲ್ಲಿ ೩೦೦ ಜನ ಕರ್ನಾಟಕದಿಂದ ಬಂದವರೆಂದು ತಿಳಿಸಿ,

ಇವರೆಲ್ಲರಿಗಾಗಿ ಕರ್ನಾಟಕದಲ್ಲಿಯೇ ಒಂದು ಕಾಲೇಜು ಹೇಗೆ ಅವಶ್ಯವಾಗುತ್ತದೆಂಬುದನ್ನು ಒತ್ತಿ ಹೇಳಿದರು.

ರೊದ್ದ ಅವರು ತಮ್ಮ ಅನುಮೋದನ ಭಾಷಣದಲ್ಲಿ ಮುಸ್ಲಿಮ್ ವಿದ್ಯಾರ್ಥಿಗಳಿಗೂ ಈ ಕಾಲೇಜು ಹೇಗೆ ಅವಶ್ಯವೆಂಬುದನ್ನು ಪ್ರತಿಪಾದಿಸಿದರು. ಅದರ ಪರಿಣಾಮವಾಗಿ ಮೌಲ್ವಿ ರಫಿ ಉದ್ದೀನ ಎಂಬವರು ಮಾತನಾಡಿ "ರೊದ್ದ - ಬೆಳವಿಯವರಿಗೆ ಪೂರ್ಣ ಹಣ ಸಂಗ್ರಹ ಸಾಧ್ಯವಾಗದಿದ್ದರೂ ಕಡಿಮೆ ಬಿದ್ದ ಹಣವನ್ನು ಸರಕಾರವೇ ಭರತಿ ಹಾಕಬೇಕು" ಎಂದರು. ಇದಕ್ಕೆ ಪ್ರತಿಯಾಗಿ ಲಾಲುಭಾಯಿ ಸಾಮಳದಾಸ ಎಂಬವರು, ಕರ್ನಾಟಕಸ್ಥರು ಮೂರು ಲಕ್ಷ ರೂ. ಕೊಡಿಸಬೇಕು ಎಂದರು. ಖ್ಯಾತಿವೆತ್ತ ಫಿರೋಜಶಹಾ ಮೆಹತಾ ಹಾಗೂ ಸೆಟಲವಾಡರು "ಅದೇನಿದ್ದರೂ ಕಾಲೇಜು ಸ್ಥಾಪನೆಯಾಗಬೇಕು" ಎಂದು ಮುಕ್ತ ಮನದಿಂದ ಅನುಮೋದಿಸಿದರು.

ಇವರೆಲ್ಲ "ನಾಮದಾರ' ಜನರ ಭಾಷಣ ಮುಗಿದ ಮೇಲೆ ಕೌನ್ಸಿಲಿನ ಸಭಾಪತಿಯು, "ಬೆಳವಿಯವರು 'ಬೇಗನೆ' ಎಂಬ ಶಬ್ದವನ್ನು ಹಿಂತೆಗೆದುಕೊಳ್ಳಬೇಕು" ಎಂದರು. ಬೆಳವಿಯವರು ಹಟ ಹಿಡಿದರು. ಆಗ ಫಿರೋಜ ಶಹಾ ಬೆಳವಿಯವರಿಗೆ 'ಒಪ್ಪಿಕೊಂಡುಬಿಡಿರಿ' ಎಂಬ ಕಿವಿಮಾತು ಹೇಳಬೇಕಾಗಿ ಬಂತು!

ಅಸೋಸಿಯೇಶನ್ನಿನ ಮುಖ್ಯ ಉದ್ದೇಶ ಹಣ ಕೂಡಿಸುವುದೊಂದೇ ಆಗಿದ್ದಿತು. ಊರಲ್ಲಿ ಇದ್ದಷ್ಟು ಕಾಲ ಮತ್ತು ಹೊರಗೆ ಹೋದಾಗಲೂ ರೊದ್ದ ಅವರಿಗೆ ಒಂದೇ ಕೆಲಸ - ಹಣ ಯಾಚನೆಯ ಜೋಳಿಗೆಯನ್ನು ಮುಂದೆ ಮಾಡುವುದು. ಜೊತೆಗೆ ವಿವಿಧ ಜಿಲ್ಲೆಗಳಿಗೆ ಹೋಗಿ ಹಣ ಸಂಗ್ರಹಿಸುವುದಕ್ಕಾಗಿ ಜಿಲ್ಲಾ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು. ಅವರಲ್ಲಿ ಶಾಂತವೀರಪ್ಪ ಮೆಣಸಿನಕಾಯಿ, ಇಬ್ರಾಹಿಮಖಾನ ಪಠಾಣ ಹಾಗೂ ಸಾಹಿತ್ಯ ವೃಂದಕ್ಕೆ ಹೆಚ್ಚು ಆಪ್ಯಾಯಮಾನವಾಗಿರುವ ಫ.ಗು. ಹಳಕಟ್ಟಿಯವರೂ ಇದ್ದರೆಂಬುದು ಗಣನೀಯ.

ಧನ ಸಂಗ್ರಹಕ್ಕೆ ಗಟ್ಟಿಮುಟ್ಟಾದ ಪ್ರಯತ್ನ ನಡೆದದ್ದು ೧೯೧೩ರಿಂದ. ಆದರೆ ಮರುವರ್ಷದಷ್ಟೊತ್ತಿಗೆ ಹಲವು ವಿಘ್ನಗಳು ತಲೆದೋರಿದುವು. ಒಂದನೆಯದು ೧೯೧೪ರಲ್ಲಿ ಆರಂಭವಾದ ಮಹಾಯುದ್ಧ. ಎರಡನೆಯದು, ಆಗಿನ ಲಿಂಗಾಯತ ಸಮಾಜದ ಗಣ್ಯರು, ತಮ್ಮ ವಿದ್ಯಾರ್ಥಿಗಳಿಗಾಗಿ ಮುಂಬಯಿಯಲ್ಲಿ ಒಂದು ಹಾಸ್ಟೆಲ್ ತೆರೆಯಬೇಕೆಂದು ನಿಧಿ ಸಂಗ್ರಹಿಸತೊಡಗಿದ್ದುದು. ಕಾಲೇಜ್ ಶಿಕ್ಷಣಕ್ಕೆಂದು ಆ ವಿದ್ಯಾರ್ಥಿಗಳು ಮುಂಬಯಿಗೆ ಹೋದಾಗ ಅನುಕೂಲವಾಗಬೇಕು ಎಂಬುದು ಅವರ ಅಪೇಕ್ಷೆಯಾಗಿದ್ದಿತು.

ಈ ಪ್ರಸಂಗದಲ್ಲಿ, ಆಡಳಿತದ ಕೌನ್ಸಿಲಿನ ಸದಸ್ಯರಾದ (ಮಂತ್ರಿಸ್ಥಾನ) ಕ್ಲಾಡ್ ಹಿಲ್ ಮಹತ್ವದ ಪಾತ್ರ ವಹಿಸಿದರು. ತಮ್ಮನ್ನು ಕಂಡು ಮಾನಪತ್ರವನ್ನು ಸಮರ್ಪಿಸಿದ ಆ ಲಿಂಗಾಯತ ಮುಂದಾಳುಗಳಿಗೆ ಅವರು ಹೇಳಿದ್ದೇನೆಂದರೆ, "ನಿಮ್ಮ ವಿದ್ಯಾರ್ಥಿಗಳಿಗೆ ನೀವು

ನೆರವಾಗಬೇಕೆನ್ನುವುದು ನ್ಯಾಯವಾದದ್ದೇ. ಆದರೆ ದೂರದ ಅಪರಿಚಿತ ಮುಂಬಯಿಗೆ, ತಮ್ಮ ಮನೆಮಾರು, ಬಂಧು ಬಳಗದವರನ್ನು ಬಿಟ್ಟು ನಿಮ್ಮ ಮಕ್ಕಳನ್ನು ಕಳಿಸುವ ವ್ಯವಸ್ಥೆ ಉಚಿತವೊ, ಅದೇ ಹಣವನ್ನು ನಿಮ್ಮ ಬಾಗಿಲ ಬಳಿಯಲ್ಲಿಯೇ ಒದಗಲಿರುವ ಕಾಲೇಜ್ ಸ್ಥಾಪಿಸುವುದಕ್ಕೆ ವೆಚ್ಚ ಮಾಡುವುದು ಉಚಿತವೊ, ವಿಚಾರ ಮಾಡಿರಿ. ಇಂದಲ್ಲ ನಾಳೆ ಧಾರವಾಡದಲ್ಲಿ ಕಾಲೇಜ್ ಸ್ಥಾಪನೆಯಾಗುವುದು ಖಂಡಿತ. ಆಗ ನೀವು ಅಲ್ಲಿಗೇ ನಿಮ್ಮ ಮಕ್ಕಳನ್ನು ಕಳಿಸುವವರು ತಾನೇ. ಅಂದಾಗ ಆ ಹಾಸ್ಟೆಲ್ಲಿಂದ ಏನು ಪ್ರಯೋಜನ ? ಅಲ್ಲದೆ ಇಲ್ಲಿಯ ಕಾಲೇಜ್ ಸ್ಥಾಪನೆಯಲ್ಲಿ ನಿಮ್ಮ ಸಕ್ರಿಯ ಸಹಾಯವೂ ಸಂದಿದೆ - ಎಂದರೇನೇ ಸಾರ್ಥಕವಲ್ಲವೆ?"

ಅವರ ಯುಕ್ತಿಯುಕ್ತವಾದ ಸಲಹೆ ಒಳ್ಳೆಯ ಪರಿಣಾಮ ಮಾಡಿತು. ನಿಧಿ ಸಂಗ್ರಹಕ್ಕೆ ಜೋರು ಬಂದಿತು. ಅರಟಾಳ, ರೊದ್ದ ದ್ವಯರು ತಲಾ ಒಂದೊಂದು ಲಕ್ಷದ ಜವಾಬ್ದಾರಿ ಹೊತ್ತಿದ್ದು ಈ ಘಟ್ಟದಲ್ಲಿ.

ಆದರೆ ಅವರಿಬ್ಬರ ನಿಧಿ ಸಂಗ್ರಹದ ರೀತಿಯೇ ಬೇರೆ. ರೊದ್ದರು ಮನೆಮನೆಗೆ ಹೋಗಿ, ದೂರ ಇದ್ದವರಿಗೆ ಉದ್ದುದ್ದ ಪತ್ರ ಬರೆದು, "ಯಾರು ಕೊಟ್ಟಾರು, ಕೊಡಲಿಕ್ಕಿಲ್ಲ" ಎಂಬ ವಿಚಾರವನ್ನೇ ತಾರದೆ ಕೇಳುವುದು, ಕೇಳುವುದು - ಎಂಬ ಧೋರಣೆಯಿಂದ ಮುಂದುವರಿದು, ಆ ಲೆಕ್ಕದಿಂದ, ಸ್ವತಹ ಅಧಿಕಾರಿಗಳನ್ನೂ - ಯಾರು ಕಾಲೇಜ್ ಸ್ಥಾಪನೆಗೆ ಸರಕಾರೀ ಮಟ್ಟದಲ್ಲಿ ನೆರವಾಗುತ್ತಿದ್ದರೋ ಅವರನ್ನೂ ಬಿಡದೆ ವಂತಿಗೆಯನ್ನು ಪಡೆದಿದ್ದಾರೆ! ಮುಂದೆ ಪ್ರಿನ್ಸಿಪಾಲ್ ಆಗಿ ಬರಲಿದ್ದ ರಾಲಿನ್ಸನ್ನ ಕಡೆಯಿಂದಲೂ ೧೫ ರೂ. ವಸೂಲು ಮಾಡಿದ್ದಾರೆ. ಇದೀಗ ಪ್ರಸ್ತಾಪಿಸಿದ ಹಿಲ್ ಅವರು ಕೂಡ! (ಕೊಟ್ಟದ್ದು ೨೫ ರೂ.)

ರೊದ್ದ ಅವರ ಮತ್ತೊಂದು ರೀತಿಯ ಸಂಗ್ರಹ - ನಾಟಕ ಕಂಪನಿಗಳವರಿಂದ ನಾಟಕವಾಡಿಸಿ ಆ ದಿನದ ಗಳಿಕೆಯನ್ನು ಪಡೆಯುವುದು. ಇಂಥ ೫-೬ ನಾಟಕ ಪ್ರಯೋಗಗಳ ಹೆಸರಿದೆ, ಅವರ ಯಾದಿಯಲ್ಲಿ, ಎಲ್ಲಕ್ಕೂ ಹೆಚ್ಚು ಹಣ ಕೊಟ್ಟವರು ಕಿರ್ಲೊಸ್ಕರ ನಾಟಕ ಕಂಪನಿಯವರು (ರೂ. ೧೨೬೭). ರೊದ್ದ ಅವರು ಸಂಗ್ರಹಿಸಿದ್ದ ದೊಡ್ಡ ಪ್ರಮಾಣಗಳ ಕೊಡುಗೆಗಳ ಒಂದು ಪಟ್ಟಿಯಿದ್ದು, ಅದರಲ್ಲಿ ಉತ್ತರಾದಿಮಠದ ಆಗಿನ ಸ್ವಾಮಿಗಳಾದ ಶ್ರೀ ಸತ್ಯಧ್ಯಾನತೀರ್ಥರು ಒಂದು ಸಾವಿರ ರೂ.ಗಳನ್ನು ಕೊಟ್ಟದ್ದು ವಿಶೇಷವೆನಿಸೀತು. ಇತ್ತ ಅರಟಾಳ ಅವರು ಏನೇನೂ ಗದ್ದಲವಿಲ್ಲದೆ ಹಾಗೂ ಅಲ್ಪಾವಧಿಯಲ್ಲಿ ನಿಧಿ ಕೂಡಿಸಿದರಂತೆ. (ಹಾಗೆಂದು ಕಾಲೇಜ್ ಮಿಸಲೆನಿಯ ಮೊದಲ ವರ್ಷದ ಸಂಪಾದಕರು ಮೆಚ್ಚುಗೆಯನ್ನೂ ಆಶ್ಚರ್ಯವನ್ನು ವ್ಯಕ್ತಪಡಿಸಿದ್ದಾರೆ). ಅರಟಾಳರ ಸಂಗ್ರಹ ಪಟ್ಟಿಯೂ ಲಭ್ಯವಿದ್ದು, ಅದರಲ್ಲಿ ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ಐದು ಸಾವಿರ ರೂ.ಗಳನ್ನೂ, ಒಂಟಮುರಿ ದೇಸಾಯಿಯವರು ಏಳು ಸಾವಿರ ರೂ.ಗಳನ್ನೂ ಕೊಟ್ಟದ್ದು, ಎದ್ದು ಕಾಣುವಂತಿದೆ.

ಈ ಮಧ್ಯೆ (೧೯೧೬ರಲ್ಲಿ) ಇನ್ನೊಂದು ಅಡೆತಡೆ ತಲೆದೋರಿತು. ಎ.ಬಿ. ಲಠ್ಠೆ ಮುಂತಾದ ಬೆಳಗಾವಿಯ ಗಣ್ಯರು ಬೆಳಗಾವಿಯಲ್ಲಿಯೆ ತಾವು ಒಂದು ಕಾಲೇಜ್ ಸ್ಥಾಪಿಸಬೇಕೆಂದು ನಿರ್ಧರಿಸಿ ಹಣ ಸಂಗ್ರಹಕ್ಕೆ ಉದ್ಯುಕ್ತರಾದರು. ಸರಕಾರದ ಗಮನಕ್ಕೂ ತಂದರು. ಈ ಸಂದರ್ಭದಲ್ಲಿ ತೆರೆಮರೆಯಲ್ಲಿ ಕೆಲಸ ಮಾಡಿ ಆ ಎತ್ತುಗಡೆಯನ್ನು ತಡೆದು ನಿಲ್ಲಿಸಿದವರು ನಾಮದಾರ ಮಹದೇವ ಚೌಬಳ ಎಂಬವರು. ಇವರೂ ಮಂತ್ರಿಸ್ಥಾನದಲ್ಲಿದ್ದವರೇ. ಕರ್ನಾಟಕ ಕಾಲೇಜಿನ ಸ್ಥಾಪನೆಯ ಪ್ರತಿಯೊಂದು ಘಟ್ಟದಲ್ಲಿಯೂ ಅವರು ಅನಸ್ಯೂತ ದಾರದಂತೆ ತೆರೆಯಲ್ಲಿ ಶ್ರಮಿಸಿದ್ದಾರೆ. ಎಷ್ಟರಮಟ್ಟಿಗೆ ಎಂದರೆ ರೊದ್ದ ಅವರು ಒಂದಿಷ್ಟು ಹೆಚ್ಚೇ ಹಣ ಕೂಡಿಸಿ, ಚೌಬಳರ ಹೆಸರಿನಲ್ಲಿ ಒಂದು ಸ್ಕಾಲರ್‌ಶಿಪ್ ಇಟ್ಟರು.

೧೯೧೭ನೆಯ ಇಸವಿ ಆರಂಭವಾಯಿತು. ಆ ವರ್ಷದ ಅಕಡೆಮಿಕ್ ಅವಧಿಯಿಂದ (ಜೂನ್) ಕಾಲೇಜ್ ಆರಂಭವಾಗಲೇ ಬೇಕು ಎಂದು ಎಲ್ಲರ ಮನೀಷೆಯಾಗಿತ್ತು. ಆ ಒತ್ತಡಕ್ಕೆ ಮಣಿದು ರೊದ್ದ ಅವರು ಒಂದು ಲಕ್ಷ ರೂ. ಹಣವನ್ನು ಫೆಬ್ರುವರಿಯಲ್ಲಿ ಟ್ರೆಜರಿಗೆ ಜಮೆ ಮಾಡಿಬಿಟ್ಟರು. ಇನ್ನು ಅರಟಾಳ ಅವರ ಸಂಗ್ರಹ ಎಲ್ಲಿದೆ? ಎಂದು ಅಂದುಕೊಳ್ಳುವಾಗಲೇ ಅದೂ ಬಂದುಬಿಟ್ಟಿತು.

ಅಂತೂ ಪೂರ್ಣವಾಗಿ ಎರಡು ಲಕ್ಷ ರೂ. ಸಿದ್ಧವಾಯಿತು. ಅದರ ವಿವರಗಳು ಇಲ್ಲಿವೆ:

ಬಂದ ಮೂಲ	ರೂಪಾಯಿ
ಅರಟಾಳ ರುದ್ರ ಗೌಡರಿಂದ ಬಂದ ಪ್ರಾಮಿಸರಿ ನೋಟುಗಳು	೯೨,೦೦೦
ಒಂಟಮುರಿ ದೇಸಾಯಿಯವರಿಂದ	೭,೦೦೦
ರೊದ್ದ ಅವರು ಸಂಗ್ರಹಿಸಿ ಜಮ ಮಾಡಿದ್ದು	೧,೦೦,೦೦೦
ಇತರರಿಂದ ಸಂಗ್ರಹಿಸಿದ್ದು	೮೫೦
ಅದುವರೆಗೆ ಕೂಡಿಸುತ್ತ ಇದ್ದ ಹಣಕ್ಕೆ ಬಂದ ಬಡ್ಡಿ	೧೫೦
ಒಟ್ಟು .	ರೂ. ೨,೦೦,೦೦೦

ಟ್ರೇಜರಿಗೆ ಹಣ ಸಂದಾಯವಾದ ಮೇಲೆ, ಮುಂದಿನ ಕೆಲಸ ತ್ವರಿತಗತಿಯಿಂದ ಸಾಗುವುದು ಅನಿವಾರ್ಯವಾಗಿದ್ದಿತು.

ಪ್ರಥಮತಃ ಪ್ರಾಧ್ಯಾಪಕ ವರ್ಗವು ಬೇಕಲ್ಲವೆ. ಹಾಗೆ ನೇಮಕರಾದವರೆಂದರೆ :

ಎಚ್. ಜಿ. ರಾಲಿನ್‌ಸನ್ (ಪ್ರಾಂಶುಪಾಲ – ಇತಿಹಾಸ, ಇಂಗ್ಲಿಷ್ ಪ್ರಾಧ್ಯಾಪಕರು) ಜಿ. ಬಿ. ಜಠಾರ (ಕೇಂಬ್ರಿಜ್, ಎಡಿನ್ಬರೋ ಪದವೀಧರ; ತರ್ಕಶಾಸ್ತ್ರ, ರಾಜ್ಯ ಶಾಸ್ತ್ರಗಳ ಪ್ರಾಧ್ಯಾಪಕರು), ಆರ್.ಡಿ. ಕರ್ವೆ (ಉಪಪ್ರಾಧ್ಯಾಪಕರು, ಗಣಿತ ವಿಷಯ), ದೇವಲಾಲಕರ (ಉಪಪ್ರಾಧ್ಯಾಪಕರು, ಭೌತಶಾಸ್ತ್ರ).

ಉಳಿದಿದ್ದ ಕೆಲಸವೆಂದರೆ ಮುಂಬಯಿ ವಿಶ್ವವಿದ್ಯಾಲಯದ ಮಂಜೂರು. ಅದಕ್ಕಾಗಿ ಬಂದ ಸಮಿತಿಯು, ಲೈಬ್ರರಿ, ಪ್ರಯೋಗಶಾಲೆಯ ಉಪಕರಣ, ಹಾಸ್ಟೆಲ್ ಫೀ ದರ, ಮುಂತಾದವುಗಳ ಬಗ್ಗೆ ಉದಾರವಾದ ಅಭಿಪ್ರಾಯವನ್ನೇ ಹೇಳಿತಲ್ಲದೆ, ಕೊಲ್ಹಾಪುರವೊಂದನ್ನು ಬಿಟ್ಟರೆ ಸಮೀಪದಲ್ಲಿ ಯಾವ ಕಾಲೇಜೂ ಇಲ್ಲವಾದ್ದರಿಂದ ಮನ್ನಣೆ ಕೊಡುವುದರಲ್ಲಿ ಯಾವ ಅಭ್ಯಂತರವೂ ಇಲ್ಲ ಎಂದು ಅಭಿಪ್ರಾಯಪಟ್ಟಿತು.

ಸ್ಥಾಪನೆಯ ಆ ದಿನ

ಆ ದಿನವನ್ನು ಎಂದರೆ '೧೯೧೭ ಜೂನ್ ೨೦' ಎಂಬುದನ್ನು ಸುವರ್ಣಾಕ್ಷರದಲ್ಲಿ ಮಾತ್ರವಲ್ಲ, ಅದನ್ನು ವಜ್ರಾಕ್ಷರದಲ್ಲಿ ಚಿರಂತನವಾಗಿ ಉಳಿಯುವಂತೆ ಬರೆದಿಡಬೇಕಾಗಿದೆ. ಕಾರ್ಯಕ್ರಮ ನಡೆದದ್ದು ಟ್ರೇನಿಂಗ್ ಕಾಲೇಜಿನ ಸಭಾಗೃಹದಲ್ಲಿ. ಈಗೂ ಆ ಕಾಣಸಿಗುವ ಸ್ಥಳವನ್ನು ನೀವು ನೋಡಿದ್ದೀರೋ ಇಲ್ಲವೋ ಅದರ ಸ್ಥಳಮಿತಿ ಹೆಚ್ಚೆಂದರೆ ೫೦೦. ಆದರೆ ಆ ದಿನ ನೆರೆದ ಜನ ಸಮ್ಮರ್ದ ೪ ಸಾವಿರವನ್ನು ಮಿಕ್ಕಿತ್ತಂತೆ!

ಕರ್ನಾಟಕ ಕಾಲೇಜಿಗೆ ನೆರಳನ್ನು ಕೊಟ್ಟದ್ದು ಟ್ರೇನಿಂಗ್ ಕಾಲೇಜು. ಅದು ದಾದಿಯ ಕಾರ್ಯವನ್ನು ಮನಃಪೂರ್ವಕವಾಗಿ ಮಾಡಿತೆನ್ನಬೇಕು. ಸಮಾರಂಭದಲ್ಲಿ 'ಸ್ವಾಗತವೀ ಸುಜನ ವೃಂದಕೆ' ಎಂಬ ಸ್ವಾಗತ ಗೀತೆಯನ್ನು ಹಾಡಿದವರು ಟ್ರೇ. ಕಾ. ದ. ವಿದ್ಯಾರ್ಥಿಗಳೇ. ಸಮಾರಂಭದ ಅಧ್ಯಕ್ಷತೆಯನ್ನು ಗವರ್ನರ್ ವಿಲಿಂಗ್ಡನ್ ವಹಿಸಬೇಕಾಗಿದ್ದಿತು. ಅನಾರೋಗ್ಯದ ಮೂಲಕ ಬರಲಾಗಲಿಲ್ಲ. ಆಗ ಅವರ ಪರವಾಗಿ ನಾಮದಾರ ಚೌಬಳರು ಅಧ್ಯಕ್ಷರಾಗಿ ಹೇಳಿದ ಈ ಕೆಳಗಿನ ಮಾತು ಉಲ್ಲೇಖನೀಯವಾದದ್ದು.

"ವಿದ್ಯಾರ್ಥಿಗಳೇ, ಈ ಕಾಲೇಜು ನಿಶ್ಚಯವಾಗಿ ರಾಷ್ಟ್ರೀಯ ಕಾಲೇಜು ಎಂದು ತಿಳಿಯಿರಿ. ನಿಮ್ಮ ಪ್ರದೇಶದ ವಿವಿಧ ಜಾತಿಯ ಜನರು ದುಡ್ಡು ಕೊಟ್ಟಿದ್ದಾರೆ. ಹೊರಗಿನವರೂ ಸಹಾಯ ಮಾಡಿದ್ದರಿಂದಲೇ ಅದನ್ನು ಸ್ಥಾಪಿಸುವುದು ಶಕ್ಯವಾಯಿತು. ಯಾರು ಹೆಚ್ಚಿಗೆ ಹಣ ಕೊಟ್ಟರು, ಯಾರು ಕಡಿಮೆ ಕೊಟ್ಟರು ಎಂಬುದು ಮಹತ್ವದ್ದಲ್ಲ. ಸ್ವಲ್ಪ ಇದ್ದವನು ಆ ಸ್ವಲ್ಪದರಲ್ಲಿಯೇ ಶಿಕ್ಷಣದಂಥ ಪವಿತ್ರ ಕಾರ್ಯಕ್ಕೆಂದು ಕೊಟ್ಟರೆ, ಅವನು ಶ್ರೀಮಂತನಿಗಿಂತಲೂ ಹೆಚ್ಚು ಕೊಟ್ಟಿದ್ದಾನೆಂದು ತಿಳಿಯಬೇಕು."

ಆ ಸಮಾರಂಭದ ಸಂಭ್ರಮ ಹಾಗೂ ನೆರೆದವರಲ್ಲಿ ಅದು ಮೂಡಿಸಿದ ಗಾಢ ಪರಿಣಾಮ ಅಷ್ಟಿಷ್ಟೆಂದು ಹೇಳುವಂತಿಲ್ಲ. ಸಮಾರಂಭದ ಕೊನೆಯಲ್ಲಿ ಅರಟಾಳ ರುದ್ರಗೌಡರು ಸಾರಿದರು:

"ಈ ಜಿಲ್ಲೆಯ ಸಂಗೂರ ಗ್ರಾಮದ ರುದ್ರವ್ವ ಹೊಳಿಯಪ್ಪನವರ ಎಂಬ ಹೆಣ್ಣುಮಗಳು ಈಚೆಗೆ, ಬಡ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಇಡಬೇಕೆಂದು ೩,೦೦೦ ರೂ.ಗಳನ್ನು ಕೊಟ್ಟಿದ್ದಾಳೆಂದು ಸಾರಲು ಸಂತೋಷಿಸುತ್ತೇನೆ.'' ಶಿಕ್ಷಣ ಪ್ರೇಮದ ಈ ಪರಿಗೆ

ಯಾರೂ ಮೂಕವಿಸ್ಮಿತರಾಗಬೇಕು. ಆಗಿನ ಕಾಲದ ಮೂರು ಸಾವಿರ ರೂ! ಅದೂ ಒಬ್ಬ ಹಳ್ಳಿಯ ಅನಕ್ಷರಸ್ಥ (ಪ್ರಾಯಶಃ) ಹೆಣ್ಣು ಮಗಳಿಂದ.

ಅಂತೂ ಕಾಲೇಜು ಆರಂಭವಾಯಿತು. ಶಿಲಾನ್ಯಾಸ ಒಂದೆಡೆ; ತರಗತಿಯ ಕಟ್ಟಡ ಇನ್ನೊಂದೆಡೆ ಎಂಬ ವಿಚಿತ್ರ ಪರಿಸ್ಥಿತಿ ಬೇರೆ ಎಲ್ಲಿಯೂ ಕಾಣಸಿಗದು! 'All great things have humble beginnings' ಎನ್ನುವ ಮಾತು ಸಾರ್ವತ್ರಿಕವಾದುದು. ೭೫-೮೦ ವರ್ಷಗಳ ಹಿಂದಿನ ಕರ್ನಾಟಕ ಕಾಲೇಜು ಹೇಗಿದ್ದಿತು ಎಂಬುದು ತಿಳಿದರೆ ನಗೆ ಬರುವಂತಿದೆ. ಮೂರೇ ಕೋಣೆಗಳು. ಎರಡೇ ವರ್ಗಗಳು - ಫಸ್ಟ್ ಇಯರ್ ಮತ್ತು ಇಂಟರ್ಮೀಡಿಯೇಟ್. ಇಂತಿಷ್ಟೇ ಎಂಬ ನಿರ್ದಿಷ್ಟ ವಿಷಯಗಳು. ಸಂಸ್ಕೃತದ ಜೊತೆಗೆ ಫಿಜಿಕ್ಸ್ ಅನ್ನೂ ಅಭ್ಯಸಿಸಬೇಕು! ಲೈಬ್ರರಿ? ಅವರಿವರು ತಮಗೆ ಬೇಕೆಂದು ಕೊಂಡುಕೊಂಡು ಮನೆಯಲ್ಲಿಟ್ಟಿದ್ದ ಪುಸ್ತಕಗಳಿಂದ ಕೂಡಿದ್ದಿತು. ಏನಿದ್ದರೂ ಶಿಕ್ಷಣ ಇಲಾಖೆಯು ಪುಸ್ತಕ ಖರೀದಿಗಾಗಿ ೫೦೦ ರೂ.ಗಳ ವಾರ್ಷಿಕ ಅನುದಾನವನ್ನು ಕೊಡಲಿದ್ದಿತು.

ವಿದ್ಯಾರ್ಥಿಗಳು? ವಿಶ್ವವಿದ್ಯಾಲಯವು ೧೨೫ + ೭೫ ಎಂದು ಸಂಖ್ಯೆಯನ್ನು ನಿಗದಿ ಪಡಿಸಿದ್ದಿತು. ಆದರೇನು? ಮೊದಲ ವರ್ಗಕ್ಕೆ ಅರ್ಜಿ ಸಲ್ಲಿಸಿದವರ ಸಂಖ್ಯೆ ೨೦೦ನ್ನು ಮೀರಿತ್ತು. ಅರ್ಜಿ ಸಲ್ಲಿಸದೆಯೂ ಇದ್ದ ಭಾವೀ ವಿದ್ಯಾರ್ಥಿಗಳೂ ಸಾಕಷ್ಟು ಜನ ಇದ್ದರಂತೆ. ಅವರೆಲ್ಲ 'ಆಯ್ತು ಮುಂದಿನ ವರ್ಷದವರೆಗೆ ಕಾಯೋಣ' ಎಂದೇ ಬಗೆದಿದ್ದರು. ಮುಂಬಯಿ, ಪುಣೆಗಳಿಗೆ ಹೋಗುವ ವಿಚಾರವೇನೂ ಅವರಿಗಿರಲಿಲ್ಲ.

ಈ ಕುರಿತು ಒಂದು ಕವಿತೆ ಕಾಲೇಜ್ ಮಿಸಲೆನಿಯಲ್ಲಿ ಪ್ರಕಟವಾಗಿದ್ದು, ನೋಡುವ ಹಾಗಿದೆ.

> "ಪರನಾಡಿನೊಳೆಡರುಗಳಂ
> ಪರಿಪರಿಯಿಂ ಸೋಸುತೆಮ್ಮ ಕನ್ನಡ ಮಿತ್ರರ್
> ವರವಿದ್ಯೆಯನಾರ್ಜಿಸುತಿರೆ
> ಪರಮೇಶ್ವರನುಮಿತ್ತನೆಮಗೆ ಮುದದಿಂದ ವರವಂ ||
> -ಏನೆಂದು ವರವಿತ್ತ?
> ಎಲೆ ಮಗುವೆ ಸಾಕು ಕಷ್ಟವು ಭಲೆ ನಿನ್ನಯ ತಪಕೆ ಮೆಚ್ಚಿ
> ವರವಿತ್ತೆನು ನಾ
> ಸಲೆ ತಂತುಪುರದೊಳೆಂತೆನೆ
> ನಲಿದಾಡುವುದೀಗ ನಿನಗಭೀಪ್ಸಿತ ಕಾಲೇಜ್!!"

ಬರೆದವರು? ಆ ಮುಂದೆ 'ವಿದ್ಯಾರತ್ನ' ಎನಿಸಿಕೊಂಡ ಆರ್. ಎಸ್. ಪಂಚಮುಖಿಯವರು!

ಮುಂದಿನ ಮೂರು ವರ್ಷಗಳಲ್ಲಿ

ಈ ಅವಧಿಯಲ್ಲಿ ಎಷ್ಟೊಂದು ಹೊಸ ಕಲ್ಪಗಳು! ಮೊದಲ ಟರ್ಮಿನಲ್ಲಿಯೇ ಕಾಲೇಜ್. Miscellany ಪ್ರಕಟವಾಯಿತು. ಇಷ್ಟೇ ಅಲ್ಲ; ಮರು ಟರ್ಮಿನಲ್ಲಿಯೂ (ಎಂದರೆ ವರ್ಷಕ್ಕೆ ಎರಡು ಸಂಚಿಕೆಗಳೆಂದಾಯಿತು). ಮುಖ್ಯವೆಂದರೆ ಜಮುಖಾನಾ ಚಟುವಟಿಕೆಗಳು ಮರುತಿಂಗಳಲ್ಲಿಯೇ ಆರಂಭವಾದದ್ದು. ಕ್ರಿಕೆಟ್, ಹಾಕಿ ಇವು ಮುಖ್ಯವಾಗಿ ಬಳಕೆಯಲ್ಲಿದ್ದುವು. ಆಟಗಳು, ಸ್ಪರ್ಧೆಗಳು - ಇವು ವರ್ಷಾದ್ಯಂತ ನಡೆಯುತ್ತಿದ್ದುವು. ಯಾರೊಂದಿಗೆ? ಹೈಸ್ಕೂಲ್ ಗುಂಪಿನವರೊಂದಿಗೆ. ಆಟಗಾರರು ಒಮ್ಮೆ ಬೆಳಗಾವಿಯ ತನಕ ಹೋದದ್ದುಂಟು. ಆದರೆ ಎಲ್ಲ ಆಟಗಳಲ್ಲಿಯೂ ಸೋಲು ಕಟ್ಟಿಟ್ಟದ್ದಾಗಿತ್ತು!

ಲೆಬೋರೇಟರಿಗಾಗಿ ಸಣ್ಣ ಆದರೆ ಪ್ರತ್ಯೇಕ ಕೋಣೆ ಸಿದ್ಧವಾಯಿತು. ಇತ್ತ ಹೊರಗಿನ ವಿದ್ಯಾರ್ಥಿಗಳ ವಸತಿಗಾಗಿ ಓರ್ವ ಪ್ರಾಧ್ಯಾಪಕರೇ ತಮ್ಮ ಮನೆಯ ಹೆಚ್ಚಿನ ಭಾಗವನ್ನು ಬಿಟ್ಟುಕೊಟ್ಟರಂತೆ.

ಆ ಮೂರು ವರ್ಷಗಳಲ್ಲಿಯ, ಎದ್ದು ಕಾಣುವ ಒಂದು ಕಾರ್ಯಕ್ರಮವೆಂದರೆ ಡಿಬೇಟಿಂಗ್. ವರ್ಷದಲ್ಲಿ ಹಲವಾರು ಪರವಿರೋಧೀ ಚರ್ಚೆಗಳು ನಡೆಯುತ್ತಿದ್ದುವು. ಕೆಲವೊಂದು ಚರ್ಚಾ ವಿಷಯಗಳನ್ನು ಹೇಳಲೆ?

"ದೇಶಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು"

ಕನ್ನಡ ಎಂಬುದಕ್ಕೆ ಮಹತ್ವ ಬಂದಿರದ ಕಾಲದಲ್ಲಿಯೂ ಈ ವಿಷಯ ಬಹುಮತದಿಂದ ಪಾಸಾಯಿತು.

"ವಿಧವೆಯರು ಮರಳಿ ಮದುವೆಯಾಗಬೇಕು"

- ಬಿದ್ದುಹೋಯಿತು!

"ಮದುವೆ ಆಗದವರೇ ಸುಖಿಗಳು"

- ಇದೂ ಬಿದ್ದುಹೋಯಿತು.

"ಜಾತೀಯ ಭೇದವು ಅಳಿಯಬೇಕು"

- ಇದಾದರೂ ಪಾಸಾಯಿತು ಎನ್ನುತ್ತೀರಾ? ಇಲ್ಲ. ಬಿದ್ದುಹೋಯಿತು! ಮತ್ತೊಂದು ಕಾರ್ಯಕ್ರಮ ಸೋಶಿಯಲ್ ಗ್ಯಾದರಿಂಗಿನದು. ಮೊದಲ ವರ್ಷದ ಎಲ್ಲ ವಿದ್ಯಾರ್ಥಿಗಳು ಮೊದಲ ಸಲ ಒಂದೆಡೆ ಸೇರಿ ಇಡೀ ದಿನ ಮೋಜು ಮಾಡಿದರು (ಆ ದಿನ ಮಧ್ಯಾಹ್ನದ ಊಟಕ್ಕೆ ತುಪ್ಪದಲ್ಲಿ ಮಾಡಿದ ಉಂಡಿ, ಜಿಲೇಬಿ ಇತ್ತಂತೆ. ಕೇಳಿದಷ್ಟು; ತಿಂದಷ್ಟು!) ಅದೊಂದೇ ವರ್ಷ ಈ ಕಾರ್ಯಕ್ರಮ ನಡೆಯಿತು ಎಂದು ದಿ|| ಮಂಗಳವೇಢೆ ಶ್ರೀನಿವಾಸರಾಯರು ಒಮ್ಮೆ ನನಗೆ ಹೇಳಿದ್ದುದು ನೆನಪಿದೆ.

ಅಂದ ಹಾಗೆ, ಮಂಗಳವೇಢೆಯವರಂತೆ ಮುಂದಿನ ಸಾರ್ವಜನಿಕ ಜೀವನದಲ್ಲಿ ಬೆಳಗಿದ ಇನ್ನು ಕೆಲವು ವ್ಯಕ್ತಿಗಳೂ, ಈ ಮೊದಲ ಘಟ್ಟದ ಅವಧಿಯಲ್ಲಿಯೇ ಕಾಲೇಜಿನ ವಿದ್ಯಾರ್ಥಿಗಳಾಗಿದ್ದರು. ಎಂ.ಆರ್. ಯಾರ್ದಿ, ಆರ್. ಎಂ. ಬೋಂಗಾಳೆ, ಡಿ.ವಿ. ಫೈಸಾಸ್, ಎಂ. ಬಿ. ಹುರಳಿಕೊಪ್ಪಿ, ಡಿ.ಪಿ. ಕರಮರಕರ ಮುಂತಾದವರು. ಕಾಲೇಜಿನ ಪ್ರಗತಿಯತ್ತ ಎಷ್ಟರ ಮಟ್ಟಿಗೆ ಗಮನವೆಂದರೆ, ಮರುವರ್ಷವೇ ಡಿಗ್ರಿ ಕಾಲೇಜಿನ ಮನ್ನಣೆಗಾಗಿ ಅರ್ಜಿಯನ್ನು ಸಲ್ಲಿಸಲಾಯಿತು.

ಆ ವರ್ಷ ಎಂದರೆ ೧೯೧೮ರಲ್ಲಿ ಮೂರು ವಿಶೇಷ ಘಟನೆಗಳು ಧಾರವಾಡದಲ್ಲಿ ಘಟಿಸಿದವು. ಒಂದು – ಕರ್ನಾಟಕ ಎಜ್ಯುಕೇಷನ್ ಬೋರ್ಡ್ ಎಂಬುದು ಅಸ್ತಿತ್ವದಲ್ಲಿ ಬಂದು ೧೯೧೯ರಿಂದ ಈಗಿನ ಸುಪ್ರಸಿದ್ಧ 'ಕರ್ನಾಟಕ ಹೈಸ್ಕೂಲ್' ಆರಂಭವಾದದ್ದು. ಇನ್ನೊಂದು – ಸದರ್ನ್ ಮರಾಠಾ ರೇಲ್ವೆದವರು, ತಮ್ಮ ಆಫೀಸ್ ಸಂಕೀರ್ಣವನ್ನು ಮದ್ರಾಸಿಗೆ ಸ್ಥಳಾಂತರಿಸತೊಡಗಿದ್ದು, ಮೂರನೆಯದು – ಧಾರವಾಡದಲ್ಲಿ ಇನ್ನೊಂದು ಕಾಲೇಜನ್ನು ಖಾಸಗಿಯಾಗಿ ಆರಂಭಿಸುವ ಎತ್ತುಗಡೆ ನಡೆದದ್ದು.

ಇಲ್ಲಿ ಪ್ರಿನ್ಸಿಪಾಲ್ ರಾಲಿನ್ಸನ್ ಬಗ್ಗೆ ಒಂದೆರಡು ಮಾತು ಹೇಳಬೇಕು. ಕಾಲೇಜಿಗೆ ಏನೇನು ಬೇಕೊ ಅವನ್ನು ಮಾಡಿಸಬೇಕು ಎನ್ನುವ ಬಾಬತಿನಲ್ಲಿ ಅವರಿಗೆ ಅತೀವ ಕಾಳಜಿ.

ಕರ್ನಾಟಕ ವಿಶ್ವವಿದ್ಯಾಲಯ ಈಗ ನೆಲೆಗೊಂಡಿರುವ ಜಾಗದಲ್ಲಿ – ಆಗ ಅದಕ್ಕೆ ಛೋಟಾ ಮಹಾಬಳೇಶ್ವರ ಎಂದು ಹೆಸರು – ಶಂಕುಸ್ಥಾಪನೆ ಬೇಗ ಮಾಡಿಸಬೇಕು. ಅಲ್ಲಿ ಕಟ್ಟಡವನ್ನು ಕಟ್ಟಿಸಬೇಕು; ಡಿಗ್ರಿ ಕಾಲೇಜ್ ಆಗಿ ಪರಿವರ್ತಿಸಬೇಕು, ಹೀಗೆ ಏನೆಲ್ಲ! ಮಾಡಬೇಕು – ಎನ್ನುವ ಧಾವತಿಯ ಮನುಷ್ಯ – ಈ ರಾಲಿನ್ಸನ್. ಅದರಂತೆ ಶಂಕುಸ್ಥಾಪನೆ ನೆರವೇರಿಬಿಟ್ಟಿತು. ೧೯೧೯ರ ಜುಲೈ ೨೮ರಂದು ಗವರ್ನರ್ ಲಾಯಿಡ್ ಬಂದಿದ್ದರು. ಮಳೆಯ ದಿನಗಳವು. ಆದರೂ 'ದೂರದ' ಆ ಸ್ಥಳಕ್ಕೆ ಧಾರವಾಡದ ಜನ ಧಾವಿಸಿದ್ದರು. ಕಾಲೇಜಿನ ಯಾವುದೇ ಪ್ರಸಕ್ತಿ ಧಾರವಾಡದವರ ಹೃದಯಕ್ಕೆ ಅಷ್ಟೊಂದು ತಾಗಿದುದಾಗಿತ್ತು. ಈ ಕುರಿತ ಕವನವೊಂದು ಕಾಲೇಜ್ ಮಿಸಲೆನಿಯಲ್ಲಿ ಪ್ರಕಟವಾಗಿದೆ :

"The day as rainy, but the Sun
The cloudy curtain oft did shun
At noon along the roads that led
To the bleak moor the people sped
The stone is laid! The seed is sown
Let God's blessing be by the own
May the vast marble halls create
Great Newton's peers and poets great!

ಆದರೇನು, ಆ ಜಾಗದಲ್ಲಿ ಕಾಲೇಜಿನ ಸಂಗಮುವರಿಶಿಲೆಯು ಕೋಣೆಗಳು ನಿರ್ಮಾಣವಾಗಲಿಲ್ಲ. ಆ ಶಂಕುಸ್ಥಾಪನೆಯ ದಿವಸ ರಾಲಿನ್ಸನ್ ಮುದ್ದಾಂ ರೇಲ್ವೆ ಕಟ್ಟಡ ಸಮುದಾಯದತ್ತ ಲಾಯಿಡ್ ಅವರ ಗಮನವನ್ನು ಸೆಳೆದರು. ಇದನ್ನೇ 'ಈಗಿನ ಕಾಲೇಜ್ ಕಟ್ಟಡವು ಗವರ್ನರ್ ಸಾಹೇಬನ ಕಣ್ಣಿಗೆ ಅಕಸ್ಮಾತ್ ಬಿದ್ದಿತು' ಎಂದು ರೋಚಕವಾಗಿ ಹೇಳುವುದೂ ಇದೆ.

ಇದು ಅರ್ಧ ಸತ್ಯದ ಮಾತು. 'ಕರ್ನಾಟಕ ಕಾಲೇಜ್ ಅಸೋಸಿಯೇಷನ್' ಎಂಬುದು ಸ್ಥಾಪನೆಯಾದಾಗ, ಅದರ ಒಬ್ಬ ಸದಸ್ಯರೂ, ಜಿಲ್ಲೆಯ ಎಕ್ಸಿಕ್ಯೂಟಿವ್ ಎಂಜನಿಯರರೂ ಆಗಿದ್ದ ನಂಜುಂಡಯ್ಯ ಬೆಳವಡಿ - ಎಂಬವರು ಆ ರೇಲ್ವೆ ಕಟ್ಟಡವನ್ನು ಕಾಲೇಜಿಗೆಂದು, ಕೆಲವು ಬದಲಾವಣೆಗಳನ್ನು ಮಾಡಿಕೊಂಡು ಬಳಸಬಹುದು - ಎಂದು ರೊದ್ದ ಮುಂತಾದವರಿಗೆ ಸೂಚಿಸಿದ್ದರು. "ಹಾಗಿದ್ದರೆ ಪ್ಲ್ಯಾನ್ ಕೊಡಿರಿ" ಎಂದಿದ್ದರು ರೊದ್ದರು. ಇದು ಬಹುಶಃ ೧೯೧೬-೧೭ರ ಕಾಲದ್ದು ಇರಬೇಕು. ಆಗಿನ ಟೈಮ್ಸ್ ಆಫ್ ಇಂಡಿಯಾದ ಧಾರವಾಡದ ಸುದ್ದಿಗಾರನು-

'I have in my posssession a draft of rules drawn by this gentleman in his own handwriting for the Karnataka College Association and plans drawn up showing how the building could be altered to suit the requirements of a college.'

ಆ ರೇಲ್ವೆ ಜಾಗದಲ್ಲಿ ಬೇರೆ ಕೆಲವು ಕಟ್ಟಡಗಳೂ ಇದ್ದುವೆನ್ನುವುದು ಗಮನಿಸ ಬೇಕಾದ ಅಂಶ. ಎಂದರೆ ರೇಲ್ವೆ ಅಧಿಕಾರಿಗಳು ವಾಸವಾಗಿರುವುದಕ್ಕೆ ಬಂಗಲೆ ಗಳಿದ್ದುವು. ಮುದ್ರಣಾಲಯಕ್ಕೆಂದು ಪ್ರತ್ಯೇಕ ಕಟ್ಟಡವಿದ್ದಿತು. 'ರೇಲ್ವೆ ಇನ್ಸ್ಟಿಟ್ಯೂಟ್' ಎಂಬ ಕ್ಲಬ್ಬಿನ ಕಟ್ಟಡವೂ ಇತ್ತು (ಅದೇ ಮುಂದೆ ಕಾಲೇಜಿನ ಜಿಮಖಾನಾ ಆದದ್ದು).

ರಾಲಿನ್ಸನ್ ರೇಲ್ವೆ ಕಟ್ಟಡವನ್ನು ದೊರಕಿಸಿಕೊಡಲೆಂದು ಗವರ್ನರನಿಗೆ ದುಂಬಾಲು ಬೀಳಲು ಇನ್ನೊಂದು ಕಾರಣವಿತ್ತು. ಅದೆಂದರೆ, ಧಾರವಾಡದಲ್ಲಿಯೇ ಇನ್ನೊಂದು ಖಾಸಗಿ ಕಾಲೇಜ್ ಆಗುವುದಿತ್ತು. ಭೋಟಾ ಮಹಾಬಳೇಶ್ವರದಲ್ಲಿ ಶಂಕುಸ್ಥಾಪನೆಯಾದ ಕೆಲವೇ ತಿಂಗಳುಗಳ ಮೇಲೆ ಅದರ ಆರಂಭವೂ ಆಯಿತು - ಈಗಿನ ವಿದ್ಯಾರಣ್ಯ ಹೈಸ್ಕೂಲಿನ ಕಟ್ಟಡದಲ್ಲಿ. ರಾಲಿನ್ಸನ್ನನಿಗೆ ಗಾಬರಿ! ಮೇಲು ಮಾತಿನಲ್ಲಿ ಆ ಕಾಲೇಜನ್ನು ಸ್ವಾಗತಿಸಿದರಾದರೂ, ಕರ್ನಾಟಕ ಕಾಲೇಜಿನ ಬೆಳವಣಿಗೆಗೆ ಪೆಟ್ಟು ಬೀಳಬಾರದಲ್ಲವೆ? ಆದ್ದರಿಂದ ಲಾಯಿಡರಿಗೆ ಶಬ್ದಶಃ ದುಂಬಾಲುಬಿದ್ದು ಒಪ್ಪಿಸಿದರು. ಅವರು ಮುಂಬಯಿಗೆ ಹಿಂತಿರುಗಿದೊಡನೆಯೇ ತಾವು ಮದ್ರಾಸಿಗೆ ಹೊರಟರು!

ರೇಲ್ವೆ ಕಟ್ಟಡದ ಹಸ್ತಾಂತರ, ಅದರಲ್ಲಿ ಬದಲಾವಣೆ ಹಾಗೂ ಕಾಲೇಜಿನ ವರ್ಗಗಳ ಆರಂಭ - ಇವು ಮೂರೂ ಸುಸೂತ್ರದ ಕೆಲಸಗಳೇನಾಗಿರಲಿಲ್ಲ. ಅಲ್ಲದೆ ಎಲ್ಲವೂ ೮-೯

ತಿಂಗಳುಗಳಲ್ಲಿ ಮುಗಿಯಬೇಕು. ಮೊದಲು ಖರೀದಿಯ ಕಾಗದ ಪತ್ರಗಳು ಲಂಡನ್, ಕಲ್ಕತ್ತ, ಮದ್ರಾಸ, ಮುಂಬಯಿ ಧಾರವಾಡಗಳಲ್ಲಿ ಸುತ್ತಾಡಿದುವು. ಅಂತೂ ಕಟ್ಟಡವು ೧೯೨೦ರ ಜನವರಿಯಲ್ಲಿ ಮುಂಬಯಿ ಸರಕಾರಕ್ಕೆ ಹಸ್ತಾಂತರವಾಯಿತು. ಖರೀದಿಗಾಗಿ ಮುಂಬಯಿ ಸರಕಾರವು ರೇಲ್ವೆ ಕಂಪನಿಗೆ ಕೊಟ್ಟ ಹಣ ಎಷ್ಟು ಗೊತ್ತೆ? ರೂ. ೬,೦೪,೧೨೬! ಅದೇ ದಿನದಿಂದ ಕೂಪರ್ ಎಂಬ ಎಂಜಿನಿಯರ್ ಪುರುಕಟ್ಟೋಣದ ಕೆಲಸ ಕೈಕೊಂಡ. ಅವಿಶ್ರಾಂತವಾಗಿ ಶ್ರಮಿಸಿದ. ಅವನು ಆಯ್ದುಕೊಂಡಿದ್ದ ಗುತ್ತಿಗೆದಾರನೂ ಒಬ್ಬ ಪಾರ್ಸಿ ಸದ್ಗೃಹಸ್ಥನೇ. ೧೯೨೦ರ ಜೂನ್ ತಿಂಗಳಿನಿಂದ ಕಾಲೇಜಿನ ಹೊಸ ವರ್ಷವು ಅಲ್ಲಿಯೇ ಮೊದಲಾಗಬೇಕು ಎಂದಿತ್ತಲ್ಲವೆ? ಹಾಗೇ ಆಯಿತು. ಹೊರಗೆ ಕಟ್ಟಡದ ಉದ್ಘಾಟನೆ ನಡೆದಾಗಲೂ, ಒಳಗೆ ಕೆಲಸ (Finishing touches ಸ್ವರೂಪದ್ದು) ನಡೆದೇ ಇತ್ತು. ಆ ದಿನದ ಭಾಷಣಕಾರರು ಕೂಪರ್ ಎಂಜಿನಿಯರನನ್ನು ಬಾಯ್ತುಂಬ ಹೊಗಳಿದ್ದರ ದಾಖಲೆ ಇದೆ - ಮಹಾರಾಷ್ಟ್ರದ Archivesನಲ್ಲಿ. ಅದರಂತೆ ರಾಲಿನ್ಸನ್ನರ ಸುದೀರ್ಘ ಭಾಷಣದ ಪ್ರತಿಯೂ ಅಲ್ಲಿ ನನಗೆ ನೋಡಲು ದೊರೆಯಿತು. ಅವರು ಹೇಳಿದ್ದ ಒಂದೆರಡು ಅಂಶಗಳನ್ನು ಇಲ್ಲಿ ಉದ್ಧರಿಸುವುದು ಅಗತ್ಯವಾದದ್ದು.

"ಕರ್ನಾಟಕ ಕಾಲೇಜು ಬಿ.ಎ. ಪದವಿಯ ಜನರನ್ನು ಸಿದ್ಧಪಡಿಸುವ ಯಂತ್ರಾಲಯವಾಗದೇ, ಧೈರ್ಯ, ಸ್ವಾವಲಂಬನ, ದೇಶಭಕ್ತಿ ಮುಂತಾದ ಸದ್ಗುಣಗಳಿಂದ ಮಂಡಿತರಾದ ನಾಗರಿಕರು ಈ ಕಾಲೇಜಿನಲ್ಲಿ ಸಿದ್ಧರಾಗಬೇಕೆಂಬುದು ನನ್ನ ಉತ್ಕಟವಾದ ಅಪೇಕ್ಷೆಯಿರುತ್ತದೆ."

"ಶಾರೀರಿಕ ಶಿಕ್ಷಣದಲ್ಲಿಯೂ ವಿದ್ಯಾರ್ಥಿಗಳು ಪಾಲುಗೊಳ್ಳಬೇಕು. ಆಟಗಳ ಫೀಯನ್ನು ಪ್ರತಿಯೊಬ್ಬನಿಂದ ಕಡ್ಡಾಯವಾಗಿ ತೆಗೆದುಕೊಳ್ಳಲಾಗುತ್ತಿದೆಯಷ್ಟೆ. ಇದರರ್ಥ ಪ್ರತಿಯೊಬ್ಬ ವಿದ್ಯಾರ್ಥಿಯೂ ಆಟಗಳಲ್ಲಿ ಪಾಲ್ಗೊಳ್ಳಬೇಕು. ಶಿಕ್ಷಣ ಸಂಸ್ಥೆಯೊಂದರ ಯಶಸ್ವಿಯ ಮಾನದಂಡವೇನು? ಹೆಚ್ಚು ಜನ ವಿದ್ಯಾರ್ಥಿಗಳಿದ್ದರೆ, ಅವರಲ್ಲಿ ಹೆಚ್ಚು ಜನ ಪಾಸಾದರೆ ಸಾಕೆ? ಅಲ್ಲ. ಅವರ ಸರ್ವತೋಮುಖ ಪ್ರಗತಿಯಾಗಿರಬೇಕು. ಆದ್ದರಿಂದ ಪಾಲಕರೇ, ನಿಮ್ಮ ಮಗ ನಾಲ್ಕು ವರ್ಷ ಕಲಿತು, ಬಿ.ಎ. ದಲ್ಲಿ ಮೇಲ್ದರ್ಜೆಯಲ್ಲಿ ಪಾಸಾಗಿ, ದೊಡ್ಡ ಸರಕಾರೀ ನೌಕರಿ ದೊರಕಿಸಬೇಕು - ಎಂದಿಷ್ಟೇ ನಿಮ್ಮ ವಿಚಾರ ಇದ್ದರೆ, ನಿಮ್ಮ ಹುಡುಗನನ್ನು ನಮ್ಮ ಕಾಲೇಜಿಗೆ ಕಳಿಸಬೇಡಿರಿ!"

ಅಂತೂ ಮೂರನೆಯ ವರ್ಷವಾದ ೧೯೨೦ರ ಜೂನ್ ತಿಂಗಳಿನ ಆ ದಿನದಿಂದ ಕರ್ನಾಟಕ ಕಾಲೇಜಿನ ಅಸ್ತಿವಾರದ ಕೆಲಸ ಮುಗಿದಿತ್ತು. ಗಾಡಿ ಹಳಿಯ ಮೇಲೆ ಬಂದಂತಾಯಿತು. ಕಾಲೇಜಿನ ಮುಂದಿನ ಚಟುವಟಿಕೆಗಳಿಗೆ ಉತ್ಸಾಹದ ವಾತಾವರಣ ಸೃಷ್ಟಿಯಾಯಿತು.

೧೯. ಹಾವನೂರಲ್ಲಿ ವಿನೋಬಾಜಿ ಹೆಜ್ಜೆ ಗುರುತು

ಕೆಲವೊಂದು ಚಾರಿತ್ರಿಕ ಘಟನೆಗಳು ಚಿರಂತನವಾಗಿ ಉಳಿಯುತ್ತವೆ. ಅಷ್ಟೇ ಮಹತ್ವದ ಇನ್ನು ಕೆಲವು ಹಾಗೆ ಉಳಿಯುತ್ತವೆ; ಆದರೆ ಮಸಳಿಸುತ್ತವೆ. ಎಂದರೆ ಅವುಗಳ ಅಭಿಯೋಗವು ಎದ್ದು ಕಾಣುವುದಿಲ್ಲ. ಉದಾಹರಣೆಗೆ ೧೯೫೦ರ ದಶಕದಲ್ಲಿ ಆಚಾರ್ಯ ವಿನೋಬಾ ಅನುಷ್ಠಾನದಲ್ಲಿ ತಂದ ಭೂದಾನ - ಗ್ರಾಮದಾನ ಚಳವಳಿ. ಅದಕ್ಕಾಗಿ ಅವರು ದೇಶಾದ್ಯಂತ ಪಾದಯಾತ್ರೆ ಕೈಗೊಂಡರು. ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಆಂದೋಲನದಷ್ಟೇ ಇದು ಕ್ರಾಂತಿಕಾರಿಯಾಗಿದ್ದರೂ ಇಂದಿನವರ ಪಾಲಿಗೆ ಅದು 'ಏನೊ ಒಂದು ಘಟನೆ' ಎಂಬಂತಾಗಿಬಿಟ್ಟಿದೆ.

ಈ ಸಂಬಂಧವಾಗಿ ೧೯೫೭ರಲ್ಲಿ ಒಂದು ಅತ್ಯಂತ ಮಹತ್ವಪೂರ್ಣ ಘಟನೆ ಮೈಸೂರಿನ ನೆರೆಯ ಎಲಿವಾಳ ಗ್ರಾಮದಲ್ಲಿ ಜರುಗಿತು. ವಿನೋಬಾಜಿ ಅಲ್ಲಿ ಶಿಬಿರ ಹೂಡಿದ್ದಾಗ ಗ್ರಾಮೀಣ ಜನತೆಯ ಸರ್ವತೋಮುಖ ಅಭಿವೃದ್ಧಿಯ ಯೋಜನೆಗಾಗಿ ನಡೆದ ರಾಷ್ಟ್ರಮಟ್ಟದ ಸಮ್ಮೇಳನವದು. ದೂರದ ಆ ಹಳ್ಳಿಗೆ ದಿಲ್ಲಿಯ ಪ್ರಭೃತಿಗಳೂ ಧಾವಿಸಿ ಬಂದರು. ಅವರಿವರಲ್ಲ; ಪ್ರಧಾನ ಮಂತ್ರಿ ನೆಹ್ರೂ, ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದ್. ಸಮಾಜವಾದೀ ನೇತಾರ ಜಯಪ್ರಕಾಶ ನಾರಾಯಣ ಮುಂತಾದವರು ಮಾಮೂಲಿಯ ಪಂಚವಾರ್ಷಿಕ ಯೋಜನೆಗಳಿಗಿಂತ ವಿನೋಬಾ ಆ ಹಿಂದಿನ ಆರು ವರ್ಷಗಳಲ್ಲಿ ತಮ್ಮ ಗ್ರಾಮ ಸ್ವರಾಜ್ಯದ ವಿನೂತನ ಪ್ರಣಾಳಿಯನ್ನು ಮಂಡಿಸಿದ್ದು ದೇಶದ ನಾಯಕರನ್ನು ಆ ವಿಷಯದತ್ತ ದಿಗ್ಭ್ರಮೆಯಿಂದ ಗಮನ ಕೊಡುವಂತಾಗಿತ್ತು. ಆದ್ದರಿಂದ ಅದರ ಬಗ್ಗೆ ರಾಷ್ಟ್ರಮಟ್ಟದಲ್ಲಿ ಯೋಜನಾಬದ್ಧವಾಗಿ ಮತ್ತು ಅಧಿಕೃತವಾಗಿ ಕಾರ್ಯಪ್ರವೃತ್ತವಾಗುವಂತೆ ಕ್ರಮ ಕೈಗೊಳ್ಳಲು ಸೇರಿದ್ದರು. ಎಲ್ಲವೂ ವಿನೋಬಾಜಿಯವರ ನೇತೃತ್ವದಲ್ಲಿ.

ಇದು ನಡೆದದ್ದು ೧೯೫೭ರ ಸೆಪ್ಟೆಂಬರ್ ೧೮ರಂದು. ಆ ವರ್ಷದ ಆಗಸ್ಟ್

೨೪ರಿಂದಲೇ ವಿನೋಬಾ ದ.ಕ. ಜಿಲ್ಲೆಯ ಮಾರ್ಗವಾಗಿ ಕರ್ನಾಟಕದಲ್ಲಿ ಪಾದಯಾತ್ರೆಯನ್ನು ಕೈಗೊಂಡಿದ್ದರು. ಅವರು ಶಿವಮೊಗ್ಗ ಜಿಲ್ಲೆಯ ಸಂಚಾರದಲ್ಲಿದ್ದಾಗ ದಿ. ಖಾದ್ರಿ ಶಾಮಣ್ಣ ಜೊತೆಗಿದ್ದರಲ್ಲದೆ ಅದರ ವಿವರಗಳನ್ನು ಪುಸ್ತಕ ರೂಪದಲ್ಲಿ ಆ ಕೂಡಲೇ ದಾಖಲಿಸಿದರು. ಮರುವರ್ಷದ ಮಾರ್ಚ್ ೨೨ರವರೆಗೆ ನಮ್ಮಲ್ಲಿದ್ದು ನಿಪ್ಪಾಣಿ ಮಾರ್ಗವಾಗಿ ಮಹಾರಾಷ್ಟ್ರಕ್ಕೆ ಪಯಣ ಬೆಳೆಸಿದರು. ಈ ಏಳು ತಿಂಗಳಲ್ಲಿ ಅವರು ಅದೆಷ್ಟೋ ಹಳ್ಳಿಗಳನ್ನು ಸಂದರ್ಶಿಸಿದರು. ಲಕ್ಷಾವಧಿ ಜನರೊಡನೆ ಬೆರೆತು ಮಾತನಾಡಿದರು; ತಿಳಿ ಹೇಳಿದರು.

ಇತ್ತೀಚೆಗೆ ನಾನು ಬೇರೊಂದು ಕೆಲಸಕ್ಕಾಗಿ ಧಾರವಾಡ ಜಿಲ್ಲೆಯ ಕೆಲವು ಹಳ್ಳಿಗಳಿಗೆ ಹೋದಾಗ. ಅಲ್ಲಿಯ ಜನರು ತಮ್ಮ ಊರಿಗೆ ವಿನೋಬಾಜಿ ಬಂದುಹೋದದ್ದನ್ನು ಅಲ್ಲಲ್ಲಿಯವರು ಜ್ಞಾಪಿಸಿಕೊಂಡರು: "ನಮ್ಮ ಹಳ್ಳಿಗೆ ಇನ್ನಾವ ರಾಷ್ಟ್ರ ನಾಯಕನೂ ಕಾಲಿರಿಸಿಲ್ಲ. ವಿನೋಬಾಜಿ ಇಲ್ಲಿ ಕೆಲವೇ ಗಂಟೆಗಳನ್ನು ಕಳೆದಿದ್ದರೂ ಅವರು ಬಂದು ಹೋದದ್ದು ಚೆನ್ನಾಗಿ ನೆನಪಿದೆ. ನಮ್ಮ ಊರು ಧನ್ಯವಾಯಿತು" ಎಂಬೀ ಬಗೆಯ ಉದ್ಗಾರಗಳನ್ನು ಅಲ್ಲಿ ಇಲ್ಲಿ ಕೇಳಿದೆ.

ಮಹಾತ್ಮಾಜೀಯವರಂತೆ ಕಾಲ್ನಡಿಗೆಯ ಮೂಲಕವೇ ಪರಮಾವಧಿ ಪಾಮರ ಜನತೆಯ ಸಂಪರ್ಕವನ್ನು ಇಟ್ಟುಕೊಂಡು ಅವರಲ್ಲಿ ಜಾಗೃತಿಯನ್ನು ಮೂಡಿಸಿದ ವಿನೋಬಾಜಿಯ ಈ ಕಾರ್ಯವನ್ನು ದಾಖಲಿಸುವ ಅವಶ್ಯಕತೆ ಇದೆ - ಎಂದೆನಿಸಿತು. ಆ ನೆನಪುಳ್ಳ ಇಂದಿನ ಹಿರಿಯ ತಲೆಮಾರಿನವರ ಕಾಲ ಮುಗಿಯಿತೆಂದರೆ, ವಿನೋಬಾಜಿಯ ಕಾರ್ಯವು ಹೇಳ ಹೆಸರಿಲ್ಲದಂತಾಗುವುದು. ಇಡೀ ಕರ್ನಾಟಕದಲ್ಲಿಯ ವಿನೋಬಾ ಯಾತ್ರೆಯನ್ನು ದಾಖಲಿಸುವುದಕ್ಕೆ ವ್ಯಾಪಕವಾಗಿ ಅನ್ವೇಷಣೆ ನಡೆಸಬೇಕು. ಆದ್ದರಿಂದ ಸದ್ಯ ಧಾರವಾಡ ಜಿಲ್ಲೆಗೆ ಅನ್ವಯಿಸಿ ಕೆಲ ಅಂಶಗಳನ್ನು ನಮೂದಿಸುತ್ತಿದ್ದೇನೆ.

ಧಾರವಾಡ ಜಿಲ್ಲೆಯಲ್ಲಿ ಪ್ರವೇಶ ಮಾಡುವುದಕ್ಕಾಗಿ ಅವರು ಆಯ್ದುಕೊಂಡದ್ದು ಹಾವೇರಿ ಜಿಲ್ಲೆಯ ಹಾವನೂರ ಗ್ರಾಮವನ್ನು. ಊರಿನ ಬದಿಗೆ ತುಂಗಭದ್ರಾ ನದಿ. ಅದರಾಚೆಗೇ ಬಳ್ಳಾರಿ ಜಿಲ್ಲೆ "ಹಾವನೂರೇ ಏಕೆ?" ಎಂದು ಯಾತ್ರೆಯ ಸಂಯೋಜಕರು ವಿನೋಬಾಜಿಯವರನ್ನು ಕೇಳಿದಾಗ "ಆ ಊರಲ್ಲಿ ನಾನು ಬಾಲ್ಯದ ಕೆಲ ದಿನಗಳನ್ನು ನನ್ನ ತಾಯಿಯೊಂದಿಗೆ ಕಳೆದಿದ್ದೇನೆ" ಎಂದರು. ಮುಂದುವರಿದು "ಅಲ್ಲಿಯ ಜೋಗ ಮನೆತನದವರು ನನ್ನ ತಾಯಿಗೆ ಹತ್ತಿರದ ಸಂಬಂಧಿಕರು. ಅವರಿಗೆ ಹೇಳಿ ಕಳುಹಿಸಿರಿ" ಎಂದೂ ತಿಳಿಸಿದರು.

ಹಾವನೂರಲ್ಲಿ ಐದು ಜೋಗ ಮನೆತನಗಳಿವೆ. ಪಾವೆಯಲ್ಲಿ ಅವು ಅಣ್ಣ ತಮ್ಮಕೆಯವು. ಇತ್ತ ವಿನೋಬಾಜಿಯ ಬಾಲ್ಯಕಾಲವೆಂದರೆ. ಅವರ ಪಾಲಿಗೆ ಅರ್ಧ ಶತಮಾನದಷ್ಟು ಹಿಂದಿನದು. ಹೀಗಾಗಿ ಅವರುಗಳಾರಿಗೂ ವಿನೋಬಾರ ತಾಯಿಯ ಹಾವನೂರ ತವರಿನ ಸುಳಿವು ಹತ್ತಲಿಲ್ಲ. ಹಾಗೆಂದು ಪ್ರಾಂಜಲವಾಗಿ ವಿನೋಬಾಜಿಗೆ ಸುದ್ದಿ ಮುಟ್ಟಿಸಿದಾಗ "ಇಲ್ಲ, ಇಲ್ಲ; ನನಗೆ ಗೊತ್ತಿದೆ. ಹಾವನೂರಿಗಂತೂ ಹೋಗೋಣ" ಎಂದರಂತೆ.

ಬಳ್ಳಾರಿ ಜಿಲ್ಲೆಯ ದಿಕ್ಕಿನಿಂದ ಹೊರಟಿದ್ದ ವಿನೋಬಾಜಿ ೧೯೫೭ರ ಡಿಸೆಂಬರ್ ೧೨ರಂದು ಆ ತುಂಗಭದ್ರಾ ನದಿಯ ದಂಡೆಗೆ ಬಂದರು. ಅವರನ್ನು ನದಿಯ ಈ ದಂಡೆಯಲ್ಲಿ ಸ್ವಾಗತಿಸಲು. ಜಿಲ್ಲೆಯ ಅನೇಕ ಕಾಂಗ್ರೆಸ್ ಮುಖಂಡರು, ಸರಕಾರೀ ಅಧಿಕಾರಿಗಳು, ಸರ್ವೋದಯ ಕಾರ್ಯಕರ್ತರು ಹಾಗೂ ರಾಜ್ಯದ ಆಗಿನ ಮುಖ್ಯಮಂತ್ರಿ ನಿಜಲಿಂಗಪ್ಪನವರೇ ಸ್ವಯಂ ಹಾಜರಿದ್ದರು. ಆ ಕಡೆಯ ದಂಡೆಯಲ್ಲಿ ದೋಣಿ ಹತ್ತಲೆಂದು ಉಸುಕಿನಲ್ಲಿ ನಡೆಯುತ್ತಿರುವಾಗಲೇ ವಿನೋಬಾಜಿ ಏನೋ ನೆನಪಾದವರಂತೆ ಥಟ್ಟನೆ ನಿಂತು ಚಪ್ಪಲಿಯನ್ನು ಕಳಚಿದರು. ಜೊತೆಗಿದ್ದ ಕಾರ್ಯಕರ್ತರಿಗೆ ಅದರ ಅರ್ಥವಾಗದೇ ಒಬ್ಬರೊಬ್ಬರ ಮುಖ ನೋಡಿಕೊಳ್ಳುವಂತಾಯಿತು.

ನದಿ ದಾಟಿ ಇತ್ತ ಕಡೆ ಬಂದೊಡನೆ ಹಾವನೂರಿನ ಸುವಾಸಿನಿಯರು ಅವರಿಗೆ ಆರತಿ ಬೆಳಗಿ ಬರಮಾಡಿಕೊಂಡರು. ಊರ ಮಧ್ಯದ ಈಶ್ವರ ದೇವರ ಗುಡಿಯ ಪ್ರಾಂಗಣದಲ್ಲಿ ಕುಳಿತಾಗ ಅವರು ಅಲ್ಲಿಯ ತಮ್ಮ ಬಾಲ್ಯದ ಕೆಲ ದಿನಗಳನ್ನು ಪ್ರಸ್ತಾಪಿಸಿದರು. ಅವರು ಕುಳಿತಿದ್ದ ಗುಡಿಯ ಎದುರಿಗೆ ನದಿಯ ಕಡೆಗೆ ಹೋಗುವ ದಾರಿಯಲ್ಲಿ ಆಲದ ಮರದ ಸಾಲುಗಳಿವೆ. ಅವುಗಳ ಬಿಳಲನ್ನು ಹಿಡಿದು ತಾವು ಜೀಕುತ್ತಿದ್ದುದನ್ನೂ ನೆನೆಸಿಕೊಂಡರು.

ಅನಂತರ ಅಲ್ಲಿ ನೆರೆದಿದ್ದ ಜೋಗ ಪರಿವಾರವನ್ನು ಉದ್ದೇಶಿಸಿ "ನಿಮ್ಮ ಮನೆಗಳ ಕಡೆಗೆ ನನ್ನನ್ನು ಕರೆದುಕೊಂಡು ನಡೆಯಿರಿ. ನಾನೇ ಗುರುತು ಹಿಡಿಯುವೆ" ಎಂದು ನುಡಿದವರೆ ಹೊರಟರು. ಆ ದಾರಿಯಲ್ಲಿ ಸಾಗಿದಾಗ ಅವರಿಗೆ ಒಂದು ಹಳೆಯ ಬಾವಿ ಕಂಡಿತು. "ಹಾಂ, ಇದೇ! ಆ ಮನೆ" ಎನ್ನುತ್ತ ಒಳಕ್ಕೆ ಹೋದರು. ಅದು ಪರಶುರಾಮ ಜೋಗ ಕುಟುಂಬದವರ ಮನೆ. ಅಲ್ಲಿಯ ಅಡುಗೆಯ/ದೇವರ ಮನೆಯಲ್ಲಿ ಒಂದು ಕಂಬಕ್ಕೆ ಒರಗಿ ತಮ್ಮ ತಾಯಿ ಭಜನೆ ಮಾಡುತ್ತ ಕುಳಿತಿರುತ್ತಿದ್ದ ಜಾಗವನ್ನು ತೋರಿಸಿದರು. ತಾವು ಅದಕ್ಕೆ ನಮಸ್ಕರಿಸಿ ಎದುರು ಕುಳಿತು ಧ್ಯಾನಸ್ಥರಾದರು. ತಾಯಿಯ ಒಂದೊಂದೇ ನೆನಹುಗಳು ಅವರ ಮನದಲ್ಲಿ ಮೂಡಿರಲು ಸಾಕು. ಆ ಭಾವತನ್ಮಯತೆಯಲ್ಲಿ ಅವರು ಅರ್ಧ ತಾಸನ್ನಾದರೂ ಕಳೆದಿರಬೇಕು – ಎಂದು ಅಲ್ಲಿಯ ಸದ್ಯದ ನಿವಾಸಿಗಳಾದ ಶ್ರೀ ಮನಮೋಹನ ಜೋಗರು ನನಗೆ ತಿಳಿಸಿದರು. ಅಲ್ಲಿಂದ ಜೋಗ ಪರಿವಾರದೊಡನೆ ಫೋಟೋ ತೆಗೆಯಿಸಿಕೊಂಡು ಹೊರಟರು. ಅವರು ಬಂದು ಹೋದ ದಿನವೇ ಒಂದು ಕುಟುಂಬದಲ್ಲಿ ಗಂಡುಮಗು ಜನಿಸಿತ್ತು. ಅದಕ್ಕೆ ಅವರಿಟ್ಟ ಹೆಸರು 'ವಿನೋಬಾ' (ಆರೇರ) ಎಂದು!

ಅಲ್ಲಿಂದ ವಿನೋಬಾಜಿಯವರ ಧಾರವಾಡ ಜಿಲ್ಲೆಯ ಯಾತ್ರೆ ಮುಂದುವರಿಯಿತು. ಆಗ ಅವರೊಂದಿಗೆ ಸಾಕಷ್ಟು ದಿನ ಜೊತೆಗಿದ್ದು 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ ಆ ಬಗ್ಗೆ ಆಗಾಗ ವರದಿ ಮಾಡಿದ್ದ ಶ್ರೀ ಸುರೇಂದ್ರ ದಾನಿಯವರೊಂದಿಗೆ ಈಚೆಗೆ ನಾನು ಮಾತನಾಡಿದ್ದೇನೆ. ಅವರ ಪ್ರಕಾರ ಈ ಯಾತ್ರೆಯ ದೈನಂದಿನ ಸ್ವರೂಪ ಹೀಗಿದ್ದಿತು:

"ಬೆಳಿಗ್ಗೆ ಮೂರು ಗಂಟೆಗೆ ವಿನೋಬಾಜಿ ಏಳತಿದ್ರು ಹಾಗೆ ಎಲ್ಲರೂ ಎದ್ದು ಪ್ರಾತರ್ವಿಧಿ ಮುಗಿಸಿ ಬಾಬಾರ ಕೋಣೆಗೆ ಬಂದು ಕುಳಿತ ಸ್ಥಳದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸತಿದ್ರು. ಐದು ಗಂಟೆಗೆ ಪಾದಯಾತ್ರೆಯ ಆರಂಭ. ಚುಮುಚುಮು ಬೆಳಗಾಗುವವರೆಗೆ ಎಲ್ಲರೂ ಮೌನ. ಆಮೇಲೆ ಒಬ್ಬೊಬ್ಬರಾಗಿ ಮಾತಿನ ಗಂಟು ಬಿಚ್ಚಬೇಕು. ಬಾಬಾ ನಡೆಯುತ್ತಲೇ ಆಡುತ್ತಿದ್ದ ಮಾತಿನ ಸೊಲ್ಲನ್ನು ಕೇಳುವುದೇ ಒಂದು ಸೊಗಸು. ಸೂರ್ಯೋದಯ ಆದಾಗ ಪ್ರಾರ್ಥನೆ. ಅದಕ್ಕೆ ದಾರಿಯ ಬಳಿಯ ಹೊಲವೂ ಆದೀತು. ಎಂಟು ಗಂಟೆಯ ಸುಮಾರಿಗೆ ಮೊದಲೇ ಗೊತ್ತುಪಡಿಸಿದ್ದ ಹಳ್ಳಿಯನ್ನು ತಲುಪುತ್ತಿದ್ದರು. ಅಲ್ಲಿ ಯಾವುದೊಂದು ದೇವಸ್ಥಾನ ಇಲ್ಲವೆ ಪ್ರಾಥಮಿಕ ಶಾಲೆಯಲ್ಲಿ ವಸತಿ, ಭೂದಾನ, ಗ್ರಾಮ ಸ್ವರಾಜ್ಯ ಇವುಗಳ ಬಗ್ಗೆ ಬಂದವರೊಡನೆ ಮಾತುಕತೆ. ೧೧.೩೦ರ ಸುಮಾರಿಗೆ ತುಳಸೀ ರಾಮಾಯಣದ ಪಠನ. ಆಗಿನ ಬಾಬಾರವರ ತನ್ಮಯತೆ ಅದ್ಭುತವಾಗಿರುತ್ತಿತ್ತು. ಆಮೇಲೆ ಊಟ. ಅಪರಾಹ್ನದ ವಿಶ್ರಾಂತಿ, ವಾಚನ ಮುಗಿದ ಮೇಲೆ ಅಪರಾಹ್ನದ ವಿಶ್ರಾಂತಿ. ಐದು ಗಂಟೆಗೆ ಬಾಬಾರವರ ಪ್ರವಚನ ಕೇಳಲು ಪುನಃ ಜನ ಸೇರುತ್ತಿದ್ದರು. ದಿನವೂ ಹೊಸ ಹೊಸ ವಿಚಾರಗಳ ಮಂಡನೆ. ಅದಾದ ಬಳಿಕ ಬಾಬಾ ಸ್ಥಳೀಯ ಮುಖಂಡರೊಡನೆ ಚರ್ಚೆ ನಡೆಸುತ್ತಿದ್ದರು. ರಾತ್ರಿ ೯ಕ್ಕೆ ಊಟ ಮುಗಿದು ಕಾರ್ಯಕರ್ತರು ಮಲಗಿದರೂ ಅವರಿವರೊಡನೆ ಆಪ್ತ ಮಾತುಕತೆಯನ್ನು ಬಾಬಾ ನಡೆಸುತ್ತಲೇ ಇರುತ್ತಿದ್ದರು."

ಈ ಯಾತ್ರೆಯ ಕಾಲದಲ್ಲಿ ಸುಮಾರು ೩೦-೪೦ ಜನ ಇರತಿದ್ರು. ಹೊರಗಿನವರು, ಒಮ್ಮೊಮ್ಮೆ ವಿದೇಶೀಯರೂ ಸೇರಿಕೊಳ್ಳತಿದ್ರು. ಇಡೀ ತಂಡದ ಉಸ್ತುವಾರಿಯನ್ನು ಗುಂಡಾಚಾರಿ ಅನ್ನುವವರು ನೋಡಿಕೊಳ್ಳುತಿದ್ರು. ಇನ್ನಿಬ್ಬರು ಸಂಚಾಲಕರು ಕನ್ನಡಿಗರೇ ಇದ್ದರು.

ಧಾರವಾಡ ಜಿಲ್ಲೆಯಲ್ಲಿ ವಿನೋಬಾಜಿ ಸುಮಾರು ಎರಡು ತಿಂಗಳು ಕಳೆದರು. ಮೂವತ್ತರಷ್ಟು ಹಳ್ಳಿಗಳಲ್ಲಿ ಸಂಚರಿಸಿದರು. ಹಾವನೂರಿಂದ ಹೊರಟಿದ್ದ ಅವರು ನೆಗಳೂರು; ಹೊಸರಿತ್ತಿಗಳು: ಅಲ್ಲಿಂದ ದಕ್ಷಿಣದಲ್ಲಿ ಹಿರೇಕೆರೂರ, (ಡಿ. ೨೫), ಹಂಸಭಾವಿ (ಜ. ೨), ಪೂರ್ವದಿಕ್ಕಿನಲ್ಲಿ ಕಲಘಟಗಿ (ಜ. ೨೪); ಅನಂತರ ಹುಬ್ಬಳ್ಳಿಗೆ (ಜ. ೨೬) ಬಂದರು. ಅಲ್ಲಿ ಸಾಕಷ್ಟು ದಿನ ಕಳೆದು, ಉತ್ತರಕನ್ನಡ ಜಿಲ್ಲೆಗೆ ಪಯಣ ಹೊರಟರು(ಫೆ. ೩). ಆ ಜಿಲ್ಲೆಯಲ್ಲಿ ಇಡೀ ತಿಂಗಳು ಅವ್ಯಾಹತ ಪಾದಯಾತ್ರೆ. ಸ್ವತಃ ಸಂದರ್ಶಿಸಿದ ಅನೇಕ ಹಳ್ಳಿಗಳಲ್ಲದೆ, ಬೇರೆಡೆಯಿಂದಲೂ ಗ್ರಾಮದಾನ. 'ಸಂಯುಕ್ತ ಕರ್ನಾಟಕ'ದ ಒಂದು ಮಧ್ಯವರ್ತಿ ವರದಿಯ ಪ್ರಕಾರ ಈ ಎರಡು ಜಿಲ್ಲೆಗಳಲ್ಲಿ ಸುಮಾರು ಮೂವತ್ತು ಇಡೀ ಗ್ರಾಮಗಳು ದಾನವಾಗಿ ದೊರೆತವು. ಭೂಮಿ ದಾನದ ಲೆಕ್ಕ ಬೇರೆಯೇ. ಈ ದಾನಕ್ಕಿಂತ ನನಗೆ ಹೆಚ್ಚು ಅರ್ಥಗರ್ಭಿತ ವಾಗಿ ತೋರಿದ್ದೆಂದರೆ ಈ ಎರಡೂ ಜಿಲ್ಲೆಗಳಲ್ಲಿ ಉಂಟುಮಾಡಿದ ಜನಜಾಗೃತಿ - ಉತ್ತರ ಕರ್ನಾಟಕದ ಒಟ್ಟಿನ ಆಂದೋಲನವನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಲು ೩೦

ಜನರ ಒಂದು 'ಶಾಂತಿ ಪಥಕ' ನಿಯುಕ್ತವಾಗಿತ್ತು. (ಪಥಕದ ಮೂಲ ಕಲ್ಪನೆ ಇಲವಾಲದಲ್ಲಿಯೆ ರೂಪುಗೊಂಡಿತ್ತು). ಈ ಪಥಕದಲ್ಲಿ ಸರದಾರ ವೀರನಗೌಡ ಪಾಟೀಲರಂತಹ ಒಂದೆರಡು ಪ್ರಸಿದ್ಧ ಹೆಸರುಗಳನ್ನು ಬಿಟ್ಟರೆ ಉಳಿದವರೆಲ್ಲ ಬಾಬಾರವರಿಂದ ಸ್ಫೂರ್ತಿ ಪಡೆದ ಸಾಮಾನ್ಯ ಕಾರ್ಯಕರ್ತರು. ಇವರಲ್ಲದೆ ವಿನೋಬಾರ ಪಾದಯಾತ್ರೆಯ ಯಶಸ್ಸಿನ ಹಿಂದೆ ಹಳ್ಳಿ ಹಳ್ಳಿಗಳಿಂದ ಸ್ವಯಂ ಮುಂದೆ ಬಂದ ಸಹಸ್ರಾರು ಜನರ ಸೇವೆ ಸಂದಿದೆ.

ಈ ಲೇಖದ ಉದ್ದೇಶ ಆ ಯಶಸ್ವಿತೆಯನ್ನು ಅಂಕಿಸಂಖ್ಯೆಗಳಿಂದ ಅಳೆಯುವುದಲ್ಲ. ಅದರ ಪರಿಣಾಮ ಏನಾಯಿತೆಂಬುದನ್ನು ಇಂದಿನವರ ಗಮನಕ್ಕೆ ತರಬೇಕೆನ್ನುವುದಾಗಿದೆ. ಈ ಲೇಖದ ಸುರುವಿಗೆ, ವಿನೋಬಾಪ್ರಣೀತ ಗ್ರಾಮ ಸ್ವರಾಜ್ಯದ ಆಂದೋಲನದ ಮಹತ್ವ ಮಸಳಿಸಿದೆ ಎಂದೆನಷ್ಟೆ. ಅದರ ಅರ್ಥ ಲುಪ್ತವಾಯಿತು ಎಂದಲ್ಲ. 'ಗಾಂಧೀಜಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು' ಎಂದು ನಾವು ಸ್ಪುಟವಾಗಿ ತಿಳಿದಿರುವಷ್ಟು, ವಿನೋಬಾ ಚಳುವಳಿಯ ಗಾಢತೆ ಉಳಿದಿಲ್ಲ ಎಂದಷ್ಟೆ ತಿಳಿಯತಕ್ಕುದು. ಸ್ವಾತಂತ್ರ್ಯ ಬಂದ ನಂತರ ನಡೆದ ಈ ಚಳವಳಿಯೂ ಇಡೀ ದೇಶವನ್ನು ವ್ಯಾಪಿಸಿತ್ತು. ಮುಖ್ಯತಃ ಶಾಂತಿ, ಅಹಿಂಸೆಗಳ ಶೇ. ನೂರಕ್ಕೆ ನೂರು ಅನುಷ್ಠಾನವನ್ನು ಹೊಂದಿತ್ತು. ಭೂಮಿಯ ಪರಸ್ಪರ ಕೊಡುಪಡೆ, ಅದರ ಸಾಮೂಹಿಕ ಒಡೆತನ. ಆ ಕಾರಣದಿಂದ ದಾನ ಅಪರಿಗ್ರಹಗಳ ಸ್ವಯಂಪ್ರೇರಿತ ಆಚರಣೆ - ಗಾಂಧೀಜಿಯ ಸತ್ಯ ಅಹಿಂಸೆಗಳಷ್ಟೇ ಅರಗಿಸಿಕೊಳ್ಳಲು ಕಠಿಣಸಾಧ್ಯವಾದ ಇಂಥ ಪರಿಕಲ್ಪನೆ ಗಳನ್ನು ಜನಮನದಲ್ಲಿ ಬಿತ್ತಿದರು. ಈ ಕಾಲಕ್ಕೆ ವಿವಿಧ ಸರಕಾರಗಳು ಭೂ ಸುಧಾರಣೆಗೆ ಸಂಬಂಧಿಸಿದ ಟೆನನ್ಸಿ ಮುಂತಾದ ಕಾಯಿದೆಗಳನ್ನು ಪಾಸು ಮಾಡಿಕೊಂಡು, ಅನುಷ್ಠಾನದಲ್ಲಿ ತರಬೇಕೆನ್ನುವಾಗ, ಸ್ವಾಭಾವಿಕವಾಗಿಯೇ, ಭೂಮಾಲೀಕರು, ಉಳುವವರ (ಮತ್ತು ಭೂರಹಿತರ) ನಡುವೆ ಸಂಘರ್ಷವುಂಟಾಯಿತು. ಅದು ಉಲ್ಬಣಿಸಿ ರಕ್ತಪಾತದತ್ತ ತಿರುಗಲೂ ಬಹುದಿತ್ತು. ಆಗ ಕೋರ್ಟುಗಳಲ್ಲಿ ಅದೆಷ್ಟೊಂದು ಹಕ್ಕಿನ ಸಂಬಂಧದ ಕೇಸುಗಳು! ಆದರೆ ಮುಂದಿನ ವರ್ಷಗಳಲ್ಲಿ ಬೆಟ್ಟದಂತೆ ಬಂದದ್ದು ಮಂಜಿನಂತೆ ಕರಗತೊಡಗಿತು. ರೈತ ಶ್ರೀ ಪುರುಷೋತ್ತಮ ಗಲಗಲಿ ಅವರ ಪ್ರಕಾರ 'ಹಳ್ಳಿ ಹಳ್ಳಿಗಳಲ್ಲಿ ಹುಟ್ಟಿಕೊಂಡಿದ್ದ ಇಂಥ ಕೇಸುಗಳಲ್ಲಿ ಶೇ. ೯೯ ನಿಕಾಲೆ ಆಗಿವೆ. ಹಳೆಯ ಮಾಲಿಕ ಮತ್ತು ಇಂದಿನ ರೈತಾಪಿಗಳಲ್ಲಿಯ ತಿಕ್ಕಾಟವೇ ಇಲ್ಲ. ಹೆಚ್ಚಿನ ಭೂಮಿಯನ್ನು ಹೊಂದಿದವರಿಂದ. ಕಾಯದೆಯ ಬಲ ಪ್ರಯೋಗದಿಂದ. ಕಸಿದುಕೊಂಡು ಭೂರಹಿತರಿಗೆ ಕೊಡಬೇಕೆನ್ನುವ ಪರಿಸ್ಥಿತಿಯೂ ಉಳಿದಿಲ್ಲ. ಆ ಭೇದವೇ ಅಳಿದು ಬಿಟ್ಟು, ಭೂಮಿಯನ್ನು ಉಳುವ ಎಲ್ಲ ರೈತರೂ ತಂತಮ್ಮ ಮಿತಿ-ಯೋಗ್ಯತೆಗಳಲ್ಲಿ ಮಾಲಿಕರೇ ಆಗಿಬಿಟ್ಟಿದ್ದಾರೆ."

ಈ ಸುಸೂತ್ರ ಹಸ್ತಾಂತರದ ಮೂಲ ಕಾರಣ ವಿನೋಬಾರವರ ಭೂದಾನ/ ಗ್ರಾಮದಾನ ಚಳವಳಿ. ಅದರಿಂದ ಉಳುವವರಲ್ಲಿ ಅದರಂತೆ ಭೂರಹಿತರಲ್ಲಿ ತಮ್ಮ ಹಕ್ಕಿನ ಬಗ್ಗೆ ಎಚ್ಚರ ಮೂಡಿತು. ಇತ್ತ ಭೂಮಾಲಿಕರಲ್ಲಿ "ಇಂದಲ್ಲ, ನಾಳೆ ಅವರುಗಳಿಗಾಗಿ ನಮ್ಮ

ಹಕ್ಕನ್ನು ಬಿಟ್ಟುಕೊಡಬೇಕಾಗುವುದು" ಎಂಬ ಮಾನಸಿಕ ಸಿದ್ಧತೆಯನ್ನೂ ಮೂಡಿಸಿತು. ಎಲ್ಲವೂ ಸಹಕಾರಯುತವಾಗಿ. ಆಗಿನ ಸರಕಾರಗಳು ತನ್ನ ಭೂ ಸುಧಾರಣಾ ಎತ್ತುಗಡೆಗಾಗಿ ಇದರ ಪರಮಾವಧಿ ಪ್ರಯೋಜನ ಮಾಡಿಕೊಂಡವು. (ಶ್ರೀ ದಾನಿಯವರ ಶಬ್ದದಲ್ಲಿ ಹೇಳಬೇಕೆಂದರೆ simply exploited) ಇದೊಂದು ಬಹು ದೊಡ್ಡ ಸಾಧನೆ. ವಿನೋಬಾ ಚಳವಳಿಯು ಕರ್ನಾಟಕದಲ್ಲಿಯಂತೂ ಅತ್ಯಂತ ಯಶಸ್ವಿಯಾಗಿದೆ.

ಇಂತು ನಾಲ್ವತ್ತು ವರ್ಷಗಳ ಹಿಂದೆ ನಮ್ಮ ಕಡೆಯ ಹಳ್ಳಿಗಳ ಸಾಮಾಜಿಕ ಪರಿವರ್ತನೆಗೆ ಕಾರಣವಾದ ಚಳವಳಿಯು ಶಾಶ್ವತ ಸ್ಮೃತಿಯ ರೂಪದಲ್ಲಿ ಉಳಿಯತಕ್ಕುದು. ವಿನೋಬಾಜಿ ಹೆಜ್ಜೆ ಇರಿಸಿದ ಗ್ರಾಮಗಳಲ್ಲೆಲ್ಲ ಅದರ ಗುರುತು ಇರುವಂತೆ ನೋಡಿಕೊಳ್ಳಬೇಕಲ್ಲವೆ. ಆ ನಿಮಿತ್ತದಿಂದ ಈ 'ಯಜ್ಞ'ದಲ್ಲಿ ದುಡಿದಿದ್ದ ಆಗಿನ ಕಾರ್ಯಕರ್ತರನ್ನೂ ನೆನೆದಂತಾಗುವುದು. ಹೇಗೂ ಊರೂರುಗಳಿಗೆ ಪಂಚಾಯತ ಮಂಡಲಗಳಿವೆ. ಇತ್ತ ಕೇಂದ್ರ ಸರಕಾರವೂ ಇಂಥ ಕೆಲಸಕ್ಕೆ ಆರ್ಥಿಕ ನೆರವನ್ನು ನೀಡಬಲ್ಲುದು.

ಆಚಾರ್ಯ ವಿನೋಬಾರ ಸಂದೇಶ - ಕರ್ನಾಟಕದ ಜಮೀನುದಾರರನ್ನು ಕುರಿತು

ಕರ್ನಾಟಕದ ಕಾರ್ಯಕರ್ತರು ನಾನು ಅಲ್ಲಿಯ ಜಮೀನುದಾರರನ್ನುದ್ದೇಶಿಸಿ ಒಂದು ಸಂದೇಶವನ್ನು ಕಳಿಸಿದರೆ ಅದರಿಂದ ಭೂದಾನಯಜ್ಞ ಕಾರ್ಯಕ್ಕೆ ಪ್ರೋತ್ಸಾಹ ಸಿಗುವುದೆಂದು ನನ್ನನ್ನು ಕೇಳಿಕೊಂಡಿದ್ದರು. ನನಗೂ ಸಹ ಈ ಸೂಚನೆಯು ಯೋಗ್ಯವೆನಿಸಿತು. ಆದುದರಿಂದಲೇ ಬರೆಯುತ್ತಿರುವೆನು.

ಚಾಂಡೀಲ (ಬಿಹಾರ) ಸರ್ವೋದಯ ಸಮ್ಮೇಳನದಲ್ಲಿ ಬರುವ ಒಂದು ವರ್ಷದೊಳಗಾಗಿ ಮೊದಲನೇ ಕಂದವೆಂದು ಇಡೀ ಹಿಂದೂಸ್ಥಾನದಿಂದ ೨೫ ಲಕ್ಷ ಎಕರೆ ಭೂಮಿಯನ್ನು ದೊರಕಿಸಬೇಕೆಂದು ನಿರ್ಣಯವಾಯಿತು. ಇದರಿಂದ ಭೂದಾನ ಯಜ್ಞದ ಸಂದೇಶವು ಭಾರತದ ಹಳ್ಳಿ ಹಳ್ಳಿಗೆ ಮುಟ್ಟಲು ಅನುಕೂಲವಾಗುವುದು. ನಮ್ಮ ಪ್ರಯತ್ನವಾದರೋ ಭೂಮಿ ಇಲ್ಲದ ಹಾಗೂ ಬೇರೆ ಯಾವದೂ ಉಪಜೀವನದ ದಾರಿ ಇಲ್ಲದ ಒಕ್ಕಲಿಗರಿಗೆ ಪ್ರತಿಯೊಂದು ಕುಟುಂಬಕ್ಕೆ ಹೆಚ್ಚು ಕಡಿಮೆ ೫ ಎಕರೆ ಲೆಕ್ಕದಿಂದ ಹೊಲ ಸಿಗಬೇಕೆಂದಿರುತ್ತದೆ. ಇದರಿಂದ ಹಿಂದುಸ್ಥಾನದ ಒಂದು ದೊಡ್ಡ ಸಮಸ್ಯೆಯು ಶಾಂತಿ ಮತ್ತು ಪ್ರೇಮದಿಂದ ಬಗೆಹರಿದಂತಾಗುವುದು.

ಮಾಹಿತಿ ಸಂಗ್ರಹ: ಸಂಯುಕ್ತ ಕರ್ನಾಟಕದಲ್ಲಿ ೧೯೫೭-೫೮ರ ಸಂಚಿಕೆಗಳು. ಶಿವಾಜಿ ಭಾವೆಯವರ ವಿನೋಬಾ ಚರಿತ್ರ ಪುಸ್ತಕ.
ವ್ಯಕ್ತಿಗಳು: ಹುಬ್ಬಳ್ಳಿಯಲ್ಲಿ - ಶ್ರೀ ಸುರೇಂದ್ರ ದಾನಿ ಮತ್ತು ಡಾ|| ಕೆ.ಎಂ. ಮ್ಯಾಥ್ಯೂ.
ಹಾವನೂರಲ್ಲಿ: ಸರ್ವಶ್ರೀ ಮನಮೋಹನ ಜೋಗ. ಪುರುಷೋತ್ತಮ ಗಲಗಲಿ. ಸಿಂಗಪ್ಪ ಮೈಲಾರ ಹಾಗೂ ಪ್ರಾಥಮಿಕ ಶಾಲೆಯ ಮಾಸ್ತರರಾದ ಶ್ಯಾಕಾರ ಮತ್ತು ಹಳ್ಳದರು

ಆದರೆ ಎಲ್ಲ ಜನರು ಈ ಕಾರ್ಯದಲ್ಲಿ ಸಹಕರಿಸಿದಾಗಲೇ ಇದು ಶಕ್ಯವಾಗಬಲ್ಲದು. ಇದರಲ್ಲಿ ದೊಡ್ಡ ಸಾಗುವಳಿದಾರರ ಮತ್ತು ಜಮೀನುದಾರರ ಕಾರ್ಯಭಾಗವು ಬಹಳೇ ಮಹತ್ವದ ಮತ್ತು ಹೆಚ್ಚಿನ ಅಂಶವಾಗಿದೆ. ಹಾಗೆ ನೋಡಿದರೆ ನಾವು ಪ್ರತಿಯೊಬ್ಬರಿಂದಲೂ ಭೂಮಿಯನ್ನು ತೆಗೆದುಕೊಳ್ಳುತ್ತೇವೆ. ಆದರೆ ಬಡವರಿಂದ ಪಡಕೊಳ್ಳುವ ಭೂಮಿಯು ಒಂದು ಪ್ರೇಮದ ಕುರುಹು ಆಗಿರುವುದು. ಆದರಿಂದ ಸೌಹಾರ್ದದ ವಾತಾವರಣವು ಸಿದ್ಧವಾಗುವುದು. ಏನಿದ್ದರೂ ಭೂಮಿದಾನದ ಮುಖ್ಯ ಭಾರವು ದೊಡ್ಡ ಸಾಗುವಳಿದಾರರು ಹಾಗೂ ಜಮೀನುದಾರರ ಮೇಲೆಯೇ ಇರುವದು. ಅವರು ಆ ಆಂದೋಲನವನ್ನು ತಮ್ಮದೇ ಆಂದೋಲನವೆಂದು ತಿಳಕೊಳ್ಳಲೆಂದು ನಾನು ಬಯಸುತ್ತೇನೆ. ಯಾಕಂದರೆ ಇದರಿಂದ ಬಡವರೊಂದಿಗೆ ಅವರದೂ ಸಹ ಕಲ್ಯಾಣವಾಗುವದು. ಸ್ವಲ್ಪ ದೂರದೃಷ್ಟಿಯಿಂದ ವಿಚಾರ ಮಾಡಿದರೆ ಇದು ಸ್ಪಷ್ಟವಾಗುವದು. ಇಂಥ ದೂರದೃಷ್ಟಿಯನ್ನು ಕರ್ನಾಟಕದ ಜಮೀನುದಾರರು ವ್ಯಕ್ತ ಮಾಡುವರೆಂದೂ ಮತ್ತು ಈ ಪವಿತ್ರ ಕಾರ್ಯದಲ್ಲಿ ತಮ್ಮ ಕಾರ್ಯಭಾಗವನ್ನು ವಹಿಸುವರೆಂದೂ ನಾನು ಆಶಿಸುತ್ತೇನೆ. ೫ ಕೋಟಿ ಎಕರೆ ಭೂಮಿಯು ಒಟ್ಟುಗೂಡಿದಾಗಲೇ ಭಾರತದ ಭೂಮಿಹೀನರ ಸಮಸ್ಯೆಯು ಬಗೆಹರಿಯುವದು. ಹೀಗೆಂದು ನಾವು ಲೆಕ್ಕ (ಗಣಿತ) ಹಾಕಿದ್ದೇವೆ. ಈ ದೃಷ್ಟಿಯಿಂದ ೨೫ ಲಕ್ಷ ಎಕರೆಯಾದರೂ ಮೊದಲನೇ ಹೆಜ್ಜೆ ಇರುತ್ತದೆ. ಇಲ್ಲಿ ಒಂದು ವಿಷಯವನ್ನು ಸ್ಪಷ್ಟೀಕರಿಸುವುದು ಅವಶ್ಯವಿದೆ.

ಭೂಮಿಯ ದಾನ ದೊರೆತ ನಂತರ ಅವನ್ನು ಹಂಚಿಕೊಡುವವರೆಗಿನ ಮಧ್ಯಂತರದ ಅವಧಿಯಲ್ಲಿ ಭೂಮಿದಾನ ಮಾಡಿದವನ ಕರ್ತವ್ಯವೇನೆಂದು ಕೆಲ ಜನರು ಕೇಳುತ್ತಾರೆ. ಅದಕ್ಕೆ ಉತ್ತರವೆಂದರೆ ಭೂಮಿಯು ನಮ್ಮ ಮುಖಾಂತರ ಯಾರೊಬ್ಬರಿಗೆ ಹಂಚಿಕೊಡಲಾಗುವ ತನಕ ಆ ಭೂಮಿಯು ದಾನ ಕೊಟ್ಟವನ ವಶದಲ್ಲಿಯೇ ಇರುವದು. ತನ್ನ ಇತರ ಭೂಮಿಯ ಮೇಲೆ ಅವನು ಶ್ರಮಿಸುವಂತೆ ಈ ಭೂಮಿಯ ಮೇಲೂ ಅವನು ಶ್ರಮ ಮಾಡುವನು. ಸರಕಾರಕ್ಕೆ ಕೊಡುವ ಕಂದಾಯವನ್ನೂ ಕೊಡುವನು. ಭೂಮಿಯನ್ನೂ ಬೀಳು ಬೀಳಲಿಕ್ಕೆ ಕೊಡಲಾರನು.

ವಿನೋಬಾನ ಪ್ರಣಾಮಗಳು

ಮಾನಭೂಮ ೧೧-೩-೧೯೫೩

ವಿನೋಬಾಜಿ ಕರ್ನಾಟಕದಲ್ಲಿ ಕಾಲಿರಿಸವುದಕ್ಕೆ ನಾಲ್ಕು ವರ್ಷಗಳಿಗೆ ಮುಂಚೆಯೇ ಅದೂ ದೂರದ ಮಾನಭೂಮ ಜಿಲ್ಲೆಯಿಂದ ನಮ್ಮ ಜಮೀನುದಾರರನ್ನು ಕುರಿತು ಮನವಿ ಮಾಡಿಕೊಂಡಿದ್ದರು. ಅದರ ಒಕ್ಕಣಿಕೆಯ ಸಾರವಿದು.

ಅನುಬಂಧ

ರಾಜ್ಯಮಟ್ಟದ ೧೬ನೇ ಕರ್ನಾಟಕ ಇತಿಹಾಸ ಸಮ್ಮೇಳನ, ಮೈಸೂರು

೨೦ ಮೇ, ೨೦೦೫

ಅಧ್ಯಕ್ಷ ಭಾಷಣ

ಮೊದಲಿಗೆ ನಿಮ್ಮೆಲ್ಲರಿಗೂ ಕರ್ನಾಟಕ ಇತಿಹಾಸ ಕಾಂಗ್ರೆಸ್ಸಿನ ಪದಾಧಿಕಾರಿಗಳಿಗೂ ನನ್ನ ನಮಸ್ಕಾರಗಳು. ಈ ಮೂರು ದಿನಗಳಲ್ಲಿ ನಾಡಿನ ಇತಿಹಾಸದ ಬೇರೆ ಬೇರೆ ಕಾಲಮಾನಗಳಿಗೆ ಸಂಬಂಧಿಸಿ ಸಮಾಲೋಚನೆ ನಡೆಯಲಿದೆ. ನಾನು ಇತಿಹಾಸದ ಸಂಶೋಧನೆಯಲ್ಲಿ ಹೊಸ ವಿಧಾನಗಳನ್ನು ಹೇಗೆ ಬಳಸಬೇಕು ಎಂಬುದಕ್ಕೆ ಒತ್ತುಕೊಟ್ಟು ಈ ಅಧ್ಯಕ್ಷ ಭಾಷಣದಲ್ಲಿ ಹೇಳಬೇಕೆಂದಿರುವೆ.

ನಾನು ಮೂಲತಃ ಸಾಹಿತ್ಯದ ಅಭ್ಯಾಸಿ. ಸಾಹಿತ್ಯ ವಿಮರ್ಶೆಯ ಸೂಕ್ಷ್ಮತೆಗಳನ್ನು ವಿವರಿಸುವುದು ನನ್ನ ಮುಖ್ಯ ಕಾಯಕ. ಆದರೆ ಅದಕ್ಕಿಂತ ಸಾಹಿತ್ಯದ ಇತಿಹಾಸವನ್ನು ನಿರೂಪಿಸುವುದು ನನಗೆ ಹೆಚ್ಚು ಖುಷಿ ಕೊಡುವ ವಿಷಯ. ನನ್ನ ಸಂಪ್ರಬಂಧದ ವಿಷಯ ೧೯ನೆಯ ಶತಮಾನದ ಸಾಹಿತ್ಯದ ಚರಿತ್ರೆಯೇ ಆಗಿದೆ. ಜೊತೆಗೆ ಇತಿಹಾಸಕ್ಕೆ ನೇರವಾಗಿ ಸಂಬಂಧಿಸಿದ ವಿಷಯಗಳಲ್ಲಿಯೂ ಆಸಕ್ತಿ ವಹಿಸಿದ್ದೇನೆ. ಇದರಿಂದ ನನ್ನ ಅನುಭವಕ್ಕೆ ಬಂದ ವಿಷಯವೆಂದರೆ ಇತಿಹಾಸ ಕ್ಷೇತ್ರದಲ್ಲಿ ಹೊಸದೊಂದು ಮಾತನ್ನು ಕಂಡುಹಿಡಿಯುವುದು ಸುಲಭ. ಉದಾಹರಣೆಗೆ ಒಂದು ಶಾಸನವನ್ನು ಪತ್ತೆಹಚ್ಚಿ ಅದನ್ನು ತುಸು ಟಿಪ್ಪಣಿ, ಅನುವಾದಗಳೊಡನೆ ಪ್ರಕಟಿಸಿದರೆ ಅದೊಂದು ಶೋಧವಾಗುತ್ತದೆ. ಇನ್ನು, ಆಗಿನ ಕಾಲದ ಇತಿಹಾಸ ರಚನೆಗೋ ಜನಜೀವನದ ಚಿತ್ರಣಕ್ಕೋ ಆ ಶಾಸನ ಯಾವ ರೀತಿ ನೆರವಾಗುತ್ತದೆ – ಎಂದು ವಿವರಿಸಿದರೆ ಅದೊಂದು ಸಂಶೋಧನವೂ ಎನಿಸಬಹುದು.

ಐತಿಹಾಸಿಕ ಸತ್ಯತೆ

ಪ್ರಶ್ನೆ ಅದಲ್ಲ. ಆ ಶಾಸನದಲ್ಲಿ ಅಥವಾ ಬೇರೆ ಐತಿಹಾಸಿಕ ದಾಖಲೆಯಲ್ಲಿ ಬಂದ ಘಟನೆ ಇಲ್ಲವೆ ಮಾಹಿತಿಯ ಸತ್ಯಾಸತ್ಯತೆಯನ್ನು ನಿಖರವಾಗಿ ನಿರ್ಧರಿಸುವುದು ಮಾತ್ರ ಕಠಿಣದ ಕೆಲಸ. ದಾಖಲೆಗೊಂಡ ವಿಷಯ ತನ್ನಷ್ಟಕ್ಕೆ ನಿರ್ಜೀವವಾದದ್ದು. ಅದನ್ನು ಓದಿ ಅರ್ಥವಿಸುವಾಗ ಸತ್ಯತೆ ಎನ್ನುವುದು ಎಲ್ಲಿಯೋ ಮುಗ್ಗರಿಸಬಹುದು. ಅದಕ್ಕೆ ಏನೆಲ್ಲ ವಿಘ್ನಗಳು! ಮೊದಲಲ್ಲಿ ಆ ದಾಖಲೆಯನ್ನು ಬರೆದವರೇ ತಪ್ಪು ಹೇಳಿಕೆ ನೀಡಿರಬಹುದು. ಆ ದಾಖಲೆ ತ್ರುಟಿತವಾಗಿರ ಬಹುದು. ಅಕ್ಷರ ಕಾಣದಂತೆ ಮಸಕಾಗಿರಬಹುದು. ಇನ್ನು ಅದನ್ನು ಓದಿ ಅರ್ಥ ಹಚ್ಚುವವರು ಹೊರಗಿನ ಒತ್ತಡಕ್ಕೆ ಮಣಿದು, ಇಲ್ಲವೆ ಸ್ವಂತದ್ದೇ ದೃಷ್ಟಿಕೋನದಿಂದ, ಬೇಕಿದ್ದರೆ ಅಜ್ಞಾನದಿಂದಲೂ ಆಗಬಹುದು, ದಾಖಲೆಯಲ್ಲಿಯ ವಿಷಯಕ್ಕೆ ಬೇರೊಂದು ಅರ್ಥ ಹಚ್ಚಬಹುದು; ಮರೆ ಮಾಡಬಹುದು, ಅಂದಾಜಿನ ಮೇಲೆ ಇನ್ನೇನನ್ನೋ ಸೇರಿಸಬಹುದು. ಹೀಗಾಗಿ ಇತಿಹಾಸ ಸಂಶೋಧನೆಯಲ್ಲಿ ಶತಶಃ ಸತ್ಯ (Absolute truth) ಅನ್ನೋದು ಕನಸಿನ ಗಂಟೇ ಸರಿ.

ಈ ಮಾತಿಗೆ ಅನೇಕ ಸಂದರ್ಭಗಳನ್ನು ಉದಾಹರಿಸಬಹುದು - ಓರ್ವರು 'ಚಂದ್ರವಳ್ಳಿಯ ಪ್ರಾಚೀನ ಶಾಸನವೊಂದರ ಭಾಷೆ ಪ್ರಾಕೃತ; ಅದರಲ್ಲಿ ಕದಂಬ ಮಯೂರವರ್ಮನು ವಿವಿಧ ರಾಜ್ಯಗಳನ್ನು ಗೆದ್ದ ವಿಷಯ ಇದೆ. ಇಲ್ಲಿ ಒಂದು ಕೆರೆಯನ್ನು ನಿರ್ಮಾಣ ಮಾಡಿದ' ಎಂಬುದಾಗಿ ಅರ್ಥವಿಸಿದರು. ಅವರು ಘನ ವಿದ್ವಾಂಸರಾದ್ದರಿಂದ ನಂಬಿದೆವು. ಹೀಗೆ ೫೦ ವರ್ಷಗಳೇ ಸಂದುವು. ಆಗ ಇನ್ನೊಬ್ಬ ಶಾಸನ ಶಾಸ್ತ್ರತಜ್ಞರು ಅದನ್ನು ಓದಿದರು. ಮೇಲಣ ಮೂರು ಮಾತುಗಳನ್ನೂ ಅಲ್ಲಗಳೆದರು: "ಈ ಶಾಸನ ಪ್ರಾಕೃತದಲ್ಲಿ ಇಲ್ಲ; ಸಂಸ್ಕೃತದಲ್ಲಿ ಇದೆ. ಮಯೂರವರ್ಮನು ಬೇರೆ ರಾಜರನ್ನು ಗೆದ್ದ ವಿಷಯ ಇಲ್ಲಿ ಇಲ್ಲ; ಅವನು ಹೊಸದಾಗಿ ಕೆರೆಯನ್ನು ನಿರ್ಮಿಸಲಿಲ್ಲ; ಅದರ ಜೀರ್ಣೋದ್ಧಾರ ಮಾಡಿದ."

ಸಮಸ್ಯೆ ಎಂದರೆ ಒಂದು ಶಾಸನವನ್ನು ಓದುವಾಗ ಇಷ್ಟರ ಮಟ್ಟಿಗೆ ಹೆಚ್ಚು-ಕಡಿಮೆಗಳಾಗಬೇಕೆ? ಅದನ್ನು ಓದಿದ ಇಬ್ಬರೂ ಬುದ್ಧಿಪೂರ್ವಕವಾಗಿ ಯಾವುದೇ ತಪ್ಪು ಮಾಡುವವರಲ್ಲವಲ್ಲ! ಇನ್ನು ಬುದ್ಧಿಪೂರ್ವಕವಾಗಿ ಸತ್ಯವನ್ನು ಬದಿಗಿರಿಸುವ ಪ್ರಸಂಗಗಳು ಈಗೀಗ ಮೇಲಿಂದ ಮೇಲೆ ನೋಡಸಿಗುತ್ತವೆ. ಉದಾಹರಣೆಗೆ ಅಯೋಧ್ಯೆಯ ರಾಮ ಮಂದಿರದ ವಿಷಯವಾಗಿ ಮೊದಲು ಹೇಳಿದ ಮಾತನ್ನು ಅದರ ಉತ್ಖನನಕಾರರು ಕೆಲ ಕಾಲದ ಅನಂತರ ಬೇರೊಂದು ಹೇಳಿಕೆ ಕೊಟ್ಟಿದ್ದರು. ತಾತ್ಪರ್ಯ, ಇತಿಹಾಸ ಸಂಶೋಧನದಲ್ಲಿ ಅಪ್ಪಟ ಸತ್ಯವನ್ನು ಹುಡುಕುವುದು ಆಗಹೋಗದ ಮಾತೆನಿಸುತ್ತದೆ. ಹಾಗಿದ್ದರೆ ನಾವು ಈ ಸಂದರ್ಭದಲ್ಲಿ ಯಾವ ಮಾನದಂಡಗಳನ್ನು ಇಟ್ಟುಕೊಂಡು ಮುಂದೆ ಸಾಗಬೇಕು? ಅವೆಂದರೆ ದಾಖಲೆಯ ವಿಶ್ವಸನೀಯತೆ ಮತ್ತು ಆ ದಾಖಲೆಯನ್ನು ಸಾದರಪಡಿಸುವವರ ಪ್ರಾಮಾಣಿಕ ನಿಲುವು ಹಾಗೂ ವಸ್ತುನಿಷ್ಠತೆ.

ಈ ಹಿನ್ನೆಲೆ ಇಟ್ಟುಕೊಂಡು ಈಚಿನ ಮೂರು ಇತಿಹಾಸ ಪುಸ್ತಕಗಳ ಪ್ರಸ್ತಾಪ ಮಾಡುವಾ. ಅಪ್ಪಟ ಸತ್ಯ ಕಾಣಸಿಗದು ಎಂದೆನಷ್ಟೆ. ಇದಕ್ಕೆ ಅಪವಾದವೆಂಬಂತೆ ಎಸ್. ಲಕ್ಷ್ಮೀನಾರಾಯಣ ರಾಯರ 'Epigraphical Studies' ಎಂಬ ಶಾಸನ ಸಂಶೋಧನದ ಲೇಖನ ಸಂಗ್ರಹವನ್ನು ಹೆಸರಿಸಬೇಕು. ಬಾ.ರಾ.ಗೋಪಾಲರ ಹಿರಿತನದಲ್ಲಿ ಎಚ್.ಎಸ್. ಗೋಪಾಲರಾಯರು ಅದನ್ನು ಸಂಪಾದಿಸಿದ್ದಾರೆ (ನಾನೂ ಒಬ್ಬ ಸಂಪಾದಕನಾಗಿ ಇದ್ದೆ.). ಎಲ್ಲವೂ ಅಚ್ಚುಕಟ್ಟಾದ ಕಿರಿ ಲೇಖನಗಳು. ಅದರಲ್ಲಿ ಒಂದು ಶಬ್ದ ಸೇರಿಸುವಂತಿಲ್ಲ; ಇದೊಂದು ಹೆಚ್ಚಾಯಿತು ಎನ್ನುವಂತಿಲ್ಲ.

ಇನ್ನೊಂದು ಗ್ರಂಥ, ಬಿಜಾಪುರದ ಆದಿಲಶಾಹಿಗಳನ್ನು ಕುರಿತದ್ದು. ಸಮಗ್ರ, ಆದರೂ ಸಂಕ್ಷೇಪ ಎಂದು ಹೇಳಬಹುದಾದ ಕೃತಿ. ಅದರಲ್ಲಿ ಇದೀಗ ಹೇಳಿದ ಪ್ರಾಮಾಣಿಕತೆ ಹಾಗೂ ವಸ್ತುನಿಷ್ಠತೆ ಒಡೆದು ತೋರುತ್ತದೆ. ಲೇಖಕರಾದ ಕೃಷ್ಣ ಕೊಲ್ಹಾರ ಕುಲಕರ್ಣಿಯವರು, ತಾನು 'ಮುಸ್ಲಿಂ ಇತಿಹಾಸಕಾರರ ಹಾಗೂ ಕನ್ನಡ ಕಾವ್ಯ ರಚಯಿತರ ಏಕಪಕ್ಷೀಯ ನಿಲುವನ್ನು ಬದಿಗಿರಿಸಿ, ಆ ಕಾಲದಲ್ಲಿ ನಿಜವಾದ ಜನಜೀವನ ಹೇಗಿದ್ದಿತೆಂಬುದನ್ನು ಗುರುತಿಸುವ ಕಿಂಚಿತ್ ಪ್ರಯತ್ನ ಮಾಡಿದ್ದೇನೆ' ಎಂದಿದ್ದಾರೆ. ಅದರಂತೆ ಮಾಡಿದ್ದಾರೆ.

ಮೂರನೆಯದು ಸಿ.ಆರ್. ಶ್ಯಾಮಲ ಅವರ ಪೂರ್ವ ಕರ್ನಾಟಕದ ಪಾಳೆಯಗಾರರ ಚರಿತ್ರೆ. ಪ್ರಕಟವಾಗಲಿರುವ ಈ ಬೃಹತ್ ಗ್ರಂಥದಲ್ಲಿ ೩೫ ಜನ ಚಿಕ್ಕ, ದೊಡ್ಡ ಪಾಳೆಯಗಾರರ ವಂಶಾವಳಿ, ಪರಸ್ಪರ ತಿಕ್ಕಾಟಗಳಲ್ಲಿಯ ಸೋಲು-ಗೆಲುವು, ಧರ್ಮನಿಷ್ಠೆ, ತುಂಡರಸರಾದರೂ ಪ್ರಜಾಹಿತದ ಕಡೆಗೆ ಅವರಿಗಿದ್ದ ಕಾಳಜಿ, ಮತ್ತೆ ಅವರ ಕಾಲದ ಧಾರ್ಮಿಕ ವಾತಾವರಣ- ಇಂಥ ಅನೇಕ ಸಣ್ಣ ಸೂಕ್ಷ್ಮ ಅಂಶಗಳನ್ನು ವಿವರಿಸಲಾಗಿದೆ. ಉಪಸಂಸ್ಕೃತಿಯ ಅಧ್ಯಯನಕ್ಕೆ (Subaltern studies) ಮಾದರಿ ಎನಿಸುವ ಗ್ರಂಥವಿದು.

ಸತ್ಯವನ್ನು ಮರೆಮಾಚಬೇಕೆಂದರೆ ಇತಿಹಾಸಕಾರರಿಗೆ ಹತ್ತಾರು ಉಪಾಯಗಳಿರುತ್ತವೆ. ಘಟನೆಯೊಂದನ್ನು ಹೇಳದೇ ಇರುವುದು; ಇನ್ನೊಂದನ್ನು ಅಮಹತ್ವದ್ದು ಎಂಬ ರೀತಿಯಲ್ಲಿ ತೋರಿಸಿ ಹೇಳುವುದು; ಬೇರೊಂದಕ್ಕೆ ಹೆಚ್ಚು ಒತ್ತು ಕೊಡುವುದು; ಅರ್ಧ ಮಾತ್ರ ನಿಜ ಸಂಗತಿ ಹೇಳುವುದು; ಇಲ್ಲವೆ ಇಡಿಯಾಗಿ ತದ್ವಿರುದ್ಧ ಹೇಳುವುದು. ಒಂದೇ ಎರಡೇ! ಇದಕ್ಕೆಲ್ಲ ಮರೆವು, ಪೂರ್ವಾಗ್ರಹ, ಸ್ವನಿಷ್ಠೆ, ಮುಂತಾದ ಕಾರಣಗಳನ್ನು ಕೊಡಬಹುದು.

ಆದರೆ ಓದುಗರಿಗೇನೆ ತಮಗರಿಯದಂತೆ ಪೂರ್ವಭಾವೀ ಅನಿಸಿಕೆಗಳಿರುತ್ತವೆ. ಸುರಪುರ ಸಂಸ್ಥಾನದ ಆಡಳಿತಗಾರನಾಗಿದ್ದ ಫಿಲಿಪ್ ಮೆಡೋಜ್-ಟೇಲರ್ ಬರೆದ 'The Story of My Life' ಎಂಬ ಆತ್ಮಚರಿತ್ರೆಯನ್ನು ಬಲ್ಲೆವು. ಮೆಡೋಜ್-ಟೇಲರ್ ಆ ಸಂಸ್ಥಾನದ ಆರ್ಥಿಕ ಪ್ರಗತಿಯನ್ನು ಸಾಧಿಸಿದವ, ಅಲ್ಲಿಯ ಜನರ ಪ್ರೀತಿಯನ್ನು ಸಂಪಾದಿಸಿದವ, ಮುಖ್ಯವಾಗಿ ಅಲ್ಲಿಯ ಯುವಕ ರಾಜಾ ವೆಂಕಟಪ್ಪನಾಯಕನನ್ನು ೧೮೫೭ರ ದಂಗೆಯ ಶಿಕ್ಷೆಯಿಂದ ಪಾರು ಮಾಡಿದವ - ಎಂಬೀ ಕಾರಣಗಳಿಂದ ಓದುಗರಿಗೆ ಒಂದು ಬಗೆಯ ಪೂರ್ವಭಾವಿಯಾದ ಆತ್ಮೀಯತೆ

ಮೆಡೋಜ್ - ಟೇಲರ್ ಬಗ್ಗೆ ಮೂಡಿರುತ್ತದೆ. ಆದ್ದರಿಂದ ಅವನು ಹೇಳಿದ್ದನ್ನೆಲ್ಲ ನಂಬುವ ಸ್ಥಿತಿಯಲ್ಲಿ ಓದುಗ ಇರ್‍ತಾನೆ.

ಆದರೆ ಮೇಲೆ ಹೇಳಿದ, ಸತ್ಯವನ್ನು ಮರೆ ಮಾಚುವಂತಹ ಸ್ಥಿತಿ ಈ ಆತ್ಮ ಚರಿತ್ರೆಯಲ್ಲಿದೆ. ಅವನಿಗೆ ಸುರಪುರದ ಹಿರಿಯ ರಾಣಿಯನ್ನು ಕಂಡರೆ ಆಗುತ್ತಿದ್ದಿಲ್ಲ. ಅವಳನ್ನು ಗಡೀಪಾರು ಮಾಡಿಸಿದ್ದ. ಅದನ್ನು ಹೇಳಿಲ್ಲ; ಮಾತ್ರವಲ್ಲ ಆಕೆ ತನ್ನ ಸ್ವಂತ ಮಗ ವೆಂಕಟಪ್ಪ ನಾಯಕನನ್ನು ಬಾಲ್ಯದಾರಭ್ಯ ದ್ವೇಷಿಸುತ್ತಿದ್ದಳೆಂದು ಉದ್ದಕ್ಕೂ ಚಿತ್ರಿಸಿದ್ದಾನೆ. ಕಾರಣ ಗೊತ್ತೇ? ಆ ಹುಡುಗ ತನ್ನ ೨೪ನೆಯ ವಯಸ್ಸಿನಲ್ಲಿ ಸಾಯುತ್ತಾನೆ; ಅದರಿಂದ ಸುರಪುರದ ತಮ್ಮ ಆಳ್ವಿಕೆ ತಪ್ಪುವದು ಎಂಬ ಭವಿಷ್ಯ ಕಾರಣವಂತೆ. ತಾಯಿಯಾದವಳು ಸ್ವಂತ ಮಗನನ್ನು ಇಷ್ಟರ ಮಟ್ಟಿಗೆ ತಿರಸ್ಕರಿಸುವುದುಂಟೆ?

೧೮೫೭ರ ದಂಗೆಯಲ್ಲಿ ಭಾಗವಹಿಸಿದ್ದ ಕಾರಣದಿಂದ ಈ ತರುಣ ರಾಜನಿಗೆ ಗಲ್ಲಿನ ಶಿಕ್ಷೆಯೇ ಕಾದಿತ್ತು. ಅದನ್ನು ತಪ್ಪಿಸಿ ಕೇವಲ ನಾಲ್ಕು ವರ್ಷ ಗಡೀಪಾರಿನ. (ಅದೂ ಪತ್ನೀ ಸಹಿತವಾಗಿ) ಶಿಕ್ಷೆ ವಿಧಿಸುವಂತೆ ಮಾಡಿದವ ಮೆಡೋಜ್ - ಟೇಲರ್ ಎಂಬುದು ನಿಜ. ಆದರೆ ಆ ಮುಂದೆ, ರಾಜಾ ವೆಂಕಟಪ್ಪ ನಾಯಕ ದಾರಿಯಲ್ಲಿಯೆ ಗುಂಡಿನೇಟಿನಿಂದ ಸಾಯುತ್ತಾನೆ. ಬ್ರಿಟಿಶ್ ದಾಖಲೆಗಳು ಅದನ್ನು ಆತ್ಮಹತ್ಯೆ ಎಂದು ಹೇಳಿವೆ. ಮೆಡೋಜ್-ಟೇಲರ್, ಪಿಸ್ತೂಲನ್ನು ಕುತೂಹಲದಿಂದ ಪರೀಕ್ಷಿಸಹೋಗಿ, ಗುಂಡು ಹಾರಿ ಸತ್ತಿರಬೇಕು - ಎಂದು ಸಂದೇಹಿಸಿದ್ದಾನೆ. ಇದರಲ್ಲಿ ಯಾವುದು ನಿಜ? ಸುರಪುರದೊಡನೆ ಆತ್ಮೀಯ ಸಂಬಂಧವನ್ನು ಹೊಂದಿದ್ದ ಮೆಡೋಜ್-ಟೇಲರ್‌ನಿಗೆ ನಿಶ್ಚಿತವಾಗಿ ಗೊತ್ತಿತ್ತು. ಆದರೂ ಸಹಾನುಭೂತಿಯನ್ನು ತೋರಿಸುತ್ತಲೇ ನಿಜಸಂಗತಿಗಳನ್ನು ಮರೆಮಾಚಿದ್ದಾನೆ. ಇಲ್ಲಿ ರಾಜನಿಗೆ ಹಿಂಬದಿಯಿಂದ ಯಾರೋ ಗುಂಡು ಹಾರಿಸಿರಬೇಕು - ಎಂಬ ಅನುಮಾನಕ್ಕೆ ಅವಕಾಶವಿದೆ. ಮತ್ತು ಆ ವ್ಯಕ್ತಿ ತಮ್ಮವರೇ ಆಗಿದ್ದ ಕಾರಣದಿಂದ ಬ್ರಿಟಿಶ್ ಅಧಿಕಾರಿಗಳು ನಿಜಸಂಗತಿಯನ್ನು ಅಡಗಿಸಿರಬೇಕು. ಅಂದಹಾಗೆ ಅವನ ಶವವನ್ನು ಸುರಪುರಕ್ಕೆ ಕಳಿಸಲಿಲ್ಲ. ಅದರ ಗತಿ ಏನಾಯಿತು ಎಂಬುದನ್ನು ಮೆಡೋಜ್-ಟೇಲರ್ ಹೇಳಿಯೇ ಇಲ್ಲ. ಸತ್ಯವನ್ನು, ನಡೆದ ಸಂಗತಿಯನ್ನು ಒಳ್ಳೇ ಚಾಣಾಕ್ಷತನದಿಂದ ಅಡಗಿಸಲು ಸಾಧ್ಯ - ಎಂಬುದನ್ನು ಈ ಘಟನಾವಳಿ ತೋರಿಸುತ್ತದಲ್ಲವೆ?

ಸಾಹಿತ್ಯಕಾರ ಮತ್ತು ಇತಿಹಾಸಕಾರ

ಸತ್ಯಾಸತ್ಯತೆಯ ಮಾತು ಬಂದಾಗ ನಾವು ಸಾಮಾನ್ಯವಾಗಿ ಶಾಸನಗಳನ್ನು - ಅವು ತತ್ಕಾಲೀನವಾದ್ದರಿಂದ, ಪ್ರಾಮಾಣ್ಯವೆಂದು ಬಗೆಯುತ್ತೇವೆ. (ಅದರಂತೆ ಸರಕಾರೀ, ಮತ್ತಿತರ ದಾಖಲೆಗಳು.) ಆದರೆ ಶಾಸನಗಳಲ್ಲಿಯೂ ವೈಭವೀಕರಣದ ಕಾರಣದಿಂದಾಗಿ ಸತ್ಯವಿದೂರ ಹೇಳಿಕೆಗಳು ಬಂದೇ ಇವೆ. ಶಾಸನಗಳ ಅನಂತರ ಕಾವ್ಯ ಸಾಹಿತ್ಯದ ಕೃತಿಗಳೇ ನಮ್ಮ ಪ್ರಾಚೀನ ಹಾಗೂ ಮಧ್ಯಯುಗೀನ ಇತಿಹಾಸ ರಚನೆಗೆ ಮಹತ್ವದ ಆಕರಗಳಾಗಿವೆಯಷ್ಟೇ. ಈ ನಿಮಿತ್ತದಿಂದ ಸಾಹಿತ್ಯಕಾರ ಮತ್ತು ಇತಿಹಾಸಕಾರ ಇವರ ನಡುವಿನ ಒಡನಾಟವನ್ನು ಅವಶ್ಯವಾಗಿ ಗಮನಿಸಬೇಕು.

ಇತಿಹಾಸಕಾರರು 'ಕೆಳದಿನೃಪವಿಜಯ'ದಂತಹ ಶುದ್ಧ ಐತಿಹಾಸಿಕ ಕಾವ್ಯಗಳನ್ನಷ್ಟೇ ಗಣನೆಗೆ ತೆಗೆದುಕೊಳ್ಳುತ್ತಾರೆ. ಇತರ ಅನೇಕ ಕಾವ್ಯಗಳ ಆಂತರ್ಯದಲ್ಲಿಯೇ ಇತಿಹಾಸದ ಹಾಗೂ ಆ ಕಾಲದ ಬದುಕಿನ ಅಂಶಗಳು ಅಡಗಿರುವವೆಂಬ ವಿಚಾರವನ್ನು ಇತಿಹಾಸಕಾರರು ಸಾಮಾನ್ಯವಾಗಿ ಲಕ್ಷಿಸುವುದಿಲ್ಲ. ಇಂಥ ಕಾವ್ಯಗಳೆಂದರೆ ಬರಿಯ ಕಲ್ಪನಾಪ್ರಧಾನವಾದ ಪೌರಾಣಿಕ ಕಥಾನಕಗಳು – ಎಂದಷ್ಟೆ ಪರಿಗಣಿತವಾಗಿವೆ. ಆದರೆ ಈ ಕಾವ್ಯಗಳಲ್ಲಿ ಕವಿಯ ಜೀವನಾನುಭವವೂ – ಸಮಕಾಲೀನ ಚಿತ್ರಣವೂ ಪರೋಕ್ಷವಾಗಿ ವ್ಯಕ್ತವಾಗಿರುತ್ತದೆ. ಈ ದೃಷ್ಟಿಯಿಂದ ಕನ್ನಡ ಕಾವ್ಯಗಳನ್ನು ಪರೀಕ್ಷಿಸಿದಲ್ಲಿ ಇದುವರೆಗೆ ಅಜ್ಞಾತವಾಗಿದ್ದ ಅವೆಷ್ಟೋ ಇತಿಹಾಸದ ಎಳೆಗಳು ದೊರೆಯುತ್ತವೆ ಎಂಬುದನ್ನು ಇತಿಹಾಸಕಾರರಿಗೆ ಮತ್ತೆ ಮತ್ತೆ ಜ್ಞಾಪಿಸಬೇಕಾಗುತ್ತದೆ.

ಇದಕ್ಕೊಂದು ಗಣನೀಯ ದೃಷ್ಟಾಂತವೆಂದರೆ, ಎಸ್. ಶೆಟ್ಟರ್ ಅವರು ಕೇವಲ ಕನ್ನಡ ಕಾವ್ಯಗಳಿಂದ 'ತುಳಿಲಾಳ್ಗಳ್' ಎಂಬ ಭಟರ ಪಡೆಯನ್ನು ಶೋಧಿಸಿದುದು. ಜೋಳವಾಳಿ, ವೇಳೆವಾಳಿಗಳಂತೆ ಇವರೂ ಮಧ್ಯಯುಗದಲ್ಲಿ ಕಾಣಿಸಿಕೊಂಡಿದ್ದಾರೆ. ಶಾಸನಗಳಲ್ಲಿಯೆ? ಇಲ್ಲ. ಶ್ರವಣಬೆಳ್ಗೊಳದ ಒಂದೇ ಒಂದು ಶಾಸನವನ್ನು ಬಿಟ್ಟರೆ ಮತ್ತಾವ ಶಾಸನದಲ್ಲಿಯೂ ಇವರುಗಳ ಪ್ರಸ್ತಾಪವಿಲ್ಲವೆಂದು ಶೆಟ್ಟರ್ ಹೇಳುತ್ತಾರೆ. ಈ ಪಡೆಯ ಶೋಧಕ್ಕಾಗಿ ಅವರು ೩೧ ಹಳಗನ್ನಡ ಕಾವ್ಯಗಳನ್ನು ಪರಿಶೀಲಿಸಿದ್ದಾರೆ. ತುಳಿಲಾಳ್ಗಳ ಕಾರ್ಯಭಾರ, ನಡವಳಿಕೆ ಇವುಗಳೂ ಈ ಪರಿಶೀಲನೆಯಿಂದ ಹೊಚ್ಚ ಹೊಸದಾಗಿ ತಿಳಿದುಬಂದಿವೆ.

ನೆನಪಿಗೆ ಬರುವ ಇನ್ನೊಂದು ಉದಾಹರಣೆ, 'ಕನಕದಾಸರು ಕಂಡ ವಿಜಯನಗರ' ಎನ್ನುವ ಬೆಟಗೇರಿ ಕೃಷ್ಣಶರ್ಮರ ಸುದೀರ್ಘ ಪ್ರಬಂಧ. ಕನಕದಾಸರ ' ಮೋಹನತರಂಗಿಣಿ' ಕಾವ್ಯವು ಪೌರಾಣಿಕ ಕಥಾವಸ್ತು ಉಳ್ಳದ್ದು. ಸೊಗಸಾದ ಕಲ್ಪನೆಗಳೂ ಮೂಡಿಬಂದಿವೆ. ಆದಾಗ್ಯೂ ವಿಜಯನಗರದ ಕಾಲದವರಾದ ಕನಕದಾಸರಿಗೆ ಅರಿಯದಂತೆಯೇ ತಾವು ಬಾಳಿ ಬದುಕಿದ ಜೀವನಾನುಭವಗಳು ಅದೆಂತು ಮೂಡಿಬಂದಿವೆಯೆಂಬುದನ್ನು ಲೇಖಕರು ತೋರಿಸಿದ್ದಾರೆ.

ಇದನ್ನುಳಿದು, ಬೇರೊಂದು ಪದ್ಯದಲ್ಲಿ, ಕನಕದಾಸರ ಕಾಲಕ್ಕೆ ಹಸ್ತಪ್ರತಿಕಾರ ವೃತ್ತಿಯ ಬ್ರಾಹ್ಮಣರು ಇದ್ದುದೂ ಮತ್ತು ಅವರು ಕನ್ನಡಕವನ್ನು ಧರಿಸಿದ್ದುದೂ ಉಕ್ತವಾಗಿದೆ. ಇವೆರಡು ಅಂಶಗಳು ಅಂದಿನ ಜನಜೀವನವನ್ನು ತಿಳಿಯಪಡಿಸುತ್ತವಲ್ಲವೆ? ಕನ್ನಡಕದ ಬಳಕೆ ೧೬ನೆಯ ಶತಮಾನದಿಂದಲೇ ಇತ್ತು ಎಂಬ ಅಂಶ ಗಮನಿಸುವಂಥದ್ದಾಗಿದೆ. ವಿಜಯನಗರದ ಕೃಷ್ಣದೇವರಾಯನ ಗುರುಗಳಾದ ಶ್ರೀ ವ್ಯಾಸತೀರ್ಥರೂ ಕನ್ನಡಕವನ್ನು ಧರಿಸುತ್ತಿದ್ದರೆಂದು ಇದೇ ಕಾಲದ 'ವ್ಯಾಸಯೋಗಿ' ಚರಿತದಲ್ಲಿ ಬಂದಿದೆ. ಇದಾದರೂ ಕಾವ್ಯವೇ.

ಕಾವ್ಯಗಳಲ್ಲಿ ಜನಜೀವನದ ಪಡಿನೆಳಲು ಅದೆಂತು ಹಾಸುಹೊಕ್ಕಾಗಿರುತ್ತದೆ ಎಂಬುದಕ್ಕೆ ಈಚಿನ ಒಂದು ಸಂದರ್ಭವನ್ನು ಹೇಳುವೆ. ೧೮ನೆಯ ಶತಮಾನದಲ್ಲಿದ್ದ ವರಾಹತಿಮ್ಮಪ್ಪ ಎಂಬ ಹರಿದಾಸರು ಆಗಿ ಹೋದರು. ಉಡುಪಿಯ ಕಡೆಯವರು. ಅವರು ತಮ್ಮ ತಿರುಪತಿಯಾತ್ರೆಯನ್ನು

ಒಂದು ಕಿರುಕಾವ್ಯದಲ್ಲಿ ವರ್ಣಿಸಿದ್ದಾರೆ. ಯಾತ್ರೆಗೆ ಹೋಗುವ ಮುನ್ನ ಓರ್ವ ದಾಸರನ್ನು ಬರಮಾಡಿಕೊಂಡು, ಆತಿಥ್ಯಗೈದು ಮುಂದೆ ಸಾಗಿದರಂತೆ. ವರಾಹತಿಮ್ಮಪ್ಪ ಅವರ ಕೀರ್ತನೆಗಳನ್ನು ಸಂಪಾದಿಸಿ ಪ್ರಕಟಿಸಿದ ಸಂದರ್ಭದಲ್ಲಿ, 'ಆತಿಥ್ಯ ಪಡೆವ ಈ ದಾಸರು ಯಾರೆಂಬುದು ಗೊತ್ತಾಗದೇ ಹೋಗಿದೆ', ಎಂದು ಬರೆದಿದ್ದೆ. ಈ ಬಗ್ಗೆ ಉಡುಪಿಯ ಕಡೆಯ ಹಲವರನ್ನು ಕೇಳಿದ್ದೂ ಆಯಿತು. ಆ ದಾಸರ ಹೆಸರು ಇತ್ಯಾದಿ ತಿಳಿದುಬರಲಿಲ್ಲ. ಆಮೇಲೆ ಗೊತ್ತಾಯಿತು; ತಿರುಪತಿ ಯಾತ್ರೆಯನ್ನು ಕೈಕೊಳ್ಳುವ ಕಾಲಕ್ಕೆ ಓರ್ವ ದಾಸರನ್ನು – ಅವರು ಇಂಥವರೇ ಆಗಬೇಕೆಂದಿಲ್ಲ – ಮನೆಗೆ ಕರೆದು ಅವರ ಮೂಲಕ ತಿಮ್ಮಪ್ಪನ ಕೃಪೆಯನ್ನು ಕೋರುವ ಪರಿಪಾಠವೇ ಇದ್ದಿತಂತೆ. ಇಪ್ಪತ್ತನೆಯ ಶತಮಾನದವರೆಗೂ ಹಾಗೆ ನಡೆದುಕೊಂಡು ಬಂದ ಕ್ರಮ ಅದು. ಈ ವಿಶಿಷ್ಟ ಸಂಪ್ರದಾಯದ ಪರಿಚಯ ಕಾವ್ಯದ ಮೂಲಕವೇ ತಿಳಿದು ಬರುವಂತಾಯಿತಲ್ಲವೆ?

ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳ ಚರಿತ್ರೆಯನ್ನು ಬರೆಯುವವರ ಒಂದು ಒಳ್ಳೆಯ ಉಪಕ್ರಮವೆಂದರೆ ಆ ಆ ಕಾಲದ ರಾಜಕೀಯ, ಸಾಮಾಜಿಕ ಅಂಶಗಳನ್ನು ತಪ್ಪದೇ ವಿವರಿಸುತ್ತಾರೆ. ನಾಮ ಮಾತ್ರಕ್ಕೆ ಅಲ್ಲ, ಕೂಲಂಕಷವಾಗಿಯೇ ಈ ಅಂಶಗಳು ಬಂದಿರುತ್ತವೆ. ಮೈಸೂರು ಹಾಗೂ ಬೆಂಗಳೂರು ವಿಶ್ವವಿದ್ಯಾ(ನಿ)ಲಯಗಳು ಹೊರತಂದಿರುವ ಸಾಹಿತ್ಯ ಚರಿತ್ರೆಯ ಸಂಪುಟಗಳನ್ನು ಬೇಕಿದ್ದರೆ ನೋಡಬಹುದು.

ಆದರೆ ಇತಿಹಾಸದ ಸಂಪುಟಗಳನ್ನು ನೋಡಿದಾಗ ಸಾಹಿತ್ಯ ವಿಚಾರವು ನೆಪಮಾತ್ರವೆಂಬಂತೆ ಬರುತ್ತದೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದವರು ಸಮಗ್ರ ಕರ್ನಾಟಕದ ಚರಿತ್ರೆಯನ್ನು ಏಳು ಸಂಪುಟಗಳಲ್ಲಿ ಹೊರತಂದಿದ್ದಾರಷ್ಟೆ. ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರಿಗಳು ಮತ್ತು ವರಂಗಲ್ಲಿನ ಕಾಕತೀಯರು – ಇವಿಷ್ಟು ರಾಜಮನೆತನಗಳು ಆಳಿದ ಕಾಲವು ವಿಜಯನಗರದಷ್ಟೇ ವೈಭವಯುತವಾದದ್ದು. ಇವರುಗಳು ಆಳಿದ ೭೦೦ ವರ್ಷಗಳ ಅವಧಿಗೆ ಮೀಸಲಿದ್ದದ್ದು ಕೇವಲ ೩೦೦ ಪುಟಗಳು. ಈ ಲೋಪ ಅಂತಿರಲಿ, ಆಗಿನ ಸಾಹಿತ್ಯ ನಿರ್ಮಿತಿಯ ವಿಷಯ ಇಪ್ಪತ್ತೇ ಪುಟಗಳಲ್ಲಿ ಮುಗಿದಿದೆ. ಅದನ್ನೂ ಬಿಡೋಣ. ಕಲಚೂರಿಗಳ ಕಾಲದಲ್ಲಿಯೇ ಬಸವಣ್ಣನವರ ಕ್ರಾಂತಿಯಾಯಿತಷ್ಟೇ. ಅದರ ಪೂರ್ವಾಪರಗಳನ್ನು ತಿಳಿಯಲು ಶರಣರ ವಚನಗಳೇ ಪ್ರಮುಖ ಆಧಾರ. ಬಸವಣ್ಣನವರ ವಚನಗಳನ್ನು ಬಿಟ್ಟರೆ, ಬೇರೆ ಯಾರದೇ ವಚನಗಳ ಪ್ರಯೋಜನ ಪಡೆದಿಲ್ಲ. ಸೇವುಣರ ಬಗೆಗಿನ ಲೇಖದ ಕೊನೆಯಲ್ಲಿ ಮರಾಠೀ ಸಾಹಿತ್ಯ ಬೆಳೆದು ಬಂದ ಬಗೆ ಇದೆ. ಸರಿಯೇ. ಆದರೆ ಆಗ ಕನ್ನಡ ಸಾಹಿತ್ಯ ಏನೂ ಇರಲಿಲ್ಲವೆ? ಆ ಬಗ್ಗೆ ಏನೂ ವಿವರಣೆ ಇಲ್ಲ. ಇಲ್ಲಿ ನಾನು ಯಾವುದೇ ಇತಿಹಾಸಕಾರರನ್ನು ಆಕ್ಷೇಪಿಸುತ್ತಿಲ್ಲ. ಕನ್ನಡ ಕಾವ್ಯ ವಿಷಯಕವಾದ ಇತಿಹಾಸಕಾರರ ಅವಜ್ಞೆಯ ಮಾದರಿಗಳೆಂದು ಕೊಟ್ಟಿದ್ದೇನೆ. ಮತ್ತು ಈ ಅವಜ್ಞೆಯಿಂದ ಐತಿಹಾಸಿಕ ವಿವೇಚನೆ ಅರೆಕೊರೆಯಾಗುತ್ತದೆನ್ನುವುದನ್ನು ಮತ್ತೊಮ್ಮೆ ಹೇಳಬಯಸುತ್ತೇನೆ.

ಸಂಶೋಧನೆಯಲ್ಲಿ ಹೊಸತನ

ಇತಿಹಾಸ ಸಂಶೋಧನವು ಒಂದು ಪರಂಪರಾಗತ ಕ್ರಮದಲ್ಲಿ ನಡೆದುಕೊಂಡು ಬಂದಿದೆಯಷ್ಟೆ. ಆದರೆ ಅಸಾಂಪ್ರದಾಯಿಕ ವಿಷಯಗಳನ್ನು ಮತ್ತು ನವೀನ ಕ್ರಮವನ್ನು ಎತ್ತಿಕೊಳ್ಳಬಹುದಾಗಿದೆ. ಅಂಥ ಕೆಲವನ್ನು ಪ್ರಸ್ತಾಪಿಸಬಯಸಿದ್ದೇನೆ.

ನನಗೆ ಗುರುಸ್ವರೂಪರಾಗಿದ್ದ ದಿವಂಗತ ಜಿ. ಎಸ್. ದೀಕ್ಷಿತರು ಒಮ್ಮೆ ಹೇಳಿದ್ದರು. ಸಂಶೋಧಕ ಸಂಶಯಕೋರನಿರಬೇಕು; ಪತ್ತೇದಾರನಾಗಬೇಕು. ಕೊನೆಯಲ್ಲಿ ನ್ಯಾಯಾಧೀಶನಂತೆ ನಿರ್ಣಯ ಕೈಕೊಳ್ಳಬೇಕು, ಎಂದು. ಅದಕ್ಕೆ ಇನ್ನೆರಡು ಸೇರಿಸಬೇಕೆನಿಸುವುದು. ಆಯ್ದುಕೊಂಡ ವಿಷಯದ ಬಗ್ಗೆ ಒಂದು ಬಗೆಯ ನಂಟು ಮತ್ತು ಅದನ್ನು ಮುಗಿಸಲೇಬೇಕೆನ್ನುವ ಛಲ. ಇವು ಐದು ಅಂಶಗಳನ್ನು ಸ್ಫುಟಗೊಳಿಸುವ ಒಂದು ಶೋಧ ಕಾರ್ಯವನ್ನು ಹೇಳಬೇಕೆನ್ನುವೆ. ಅದು ನೆಪೋಲಿಯನ್ನನ ಸಾವಿಗೆ ಸಂಬಂಧಿಸಿದ್ದು.

ನೆಪೋಲಿಯನ್ ಜಾಗತಿಕ ಮಟ್ಟದ ವೀರಾಗ್ರಣಿ. ಅಖಂಡ ಯೂರೋಪದ ಕನಸನ್ನು ಕಂಡವ. ಆತ ಎರಡನೇ ಬಾರಿ ಸೆರೆಸಿಕ್ಕು, ಸೇಂಟ್ ಹೆಲೆನಾದಲ್ಲಿ ಉದರ ರೋಗದಿಂದ ಸತ್ತ - ಎಂಬುದು ನೆಲೆಗೊಂಡ ಮಾತಾಗಿದೆ. ೧೮೨೧ರಲ್ಲಿ ನಡೆದ ಆ ಮಾತಿಗೆ ನೂರಿಪ್ಪತ್ತು ವರ್ಷಗಳೇ ಸಂದಿದ್ದವು. ಅಷ್ಟು ತಡವಾಗಿಯಾದರೂ ಸರಿ, ಡಾ. ಫುಟ್ ಎಂಬ ವ್ಯಕ್ತಿಗೆ ಈ ಕುರಿತು ಸಂಶಯ ಮೂಡಿತು. ಅವನೇನೂ ಇತಿಹಾಸದ ಅಭ್ಯಾಸಿಯಲ್ಲ; ದಂತವೈದ್ಯ ಮತ್ತೆ ಫ್ರಾನ್ಸಿನವನೇನಲ್ಲ; ಸ್ವೀಡನ್ ದೇಶದವ. ಆದರೆ ನೆಪೋಲಿಯನ್ನನ ಬಗ್ಗೆ ಅಪಾರ ಅಭಿಮಾನವುಳ್ಳವ. (ಹಾಗೆ ಜಗದಾದ್ಯಂತ ಈಗೂ ಅನೇಕರಿದ್ದಾರೆ. ನಮ್ಮ ಹೊಸಪೇಟೆಯಲ್ಲಿ ಓರ್ವರು ನೆಪೋಲಿಯನ್ ಸ್ಮರಣೆಯ ಸಂಸ್ಥೆಯನ್ನೇ ರಚಿಸಿಕೊಂಡಿದ್ದಾರೆ). ಈ ದಂತವೈದ್ಯನ ಮನೆಯಲ್ಲಿ ನೆಪೋಲಿಯನ್ನನ ಹಲವಾರು ಭಂಗಿಗಳ ಚಿತ್ರಗಳಿವೆ. ಅವನ್ನು ನೋಡಿದಾಗೊಮ್ಮೆ 'ಛೇ, ಹೀಗಾಗಬಾರದಿತ್ತು' ಎಂದುಕೊಳ್ಳುತ್ತಿದ್ದ. ನಿಜವಾಗಿ ಉದರರೋಗದಿಂದ ಸತ್ತನೇ? ಅವನಿಗೆ ಒಳ್ಳೆಯ ಆಹಾರ ಪೂರೈಸಲಾಗುತ್ತಿತ್ತು, ಅಲ್ಲವೇ? ಆತ ನೆಪೋಲಿಯನ್ನನ ಮರಣೋತ್ತರ ಪರೀಕ್ಷೆಯ ವರದಿ ಓದಿದ್ದ. ಕಾಲು ಬಾತದ್ದು; ಹೊಟ್ಟೆ ಊದಿಕೊಂಡದ್ದು ಇತ್ತು. ಆದರೆ ದೇಹ ಸೊರಗುವುದಿಲ್ಲವಲ್ಲ, ಉದರ ರೋಗದಿಂದ? ಸಂಶಯ ಬೆಳೆಯುತ್ತ ಹೋಯಿತು. ಹಾಂ. ವಿಷ ಸೇವನೆಯಿಂದಲೂ ಹೀಗಾಗುತ್ತದಲ್ಲವೆ? ದಂತವೈದ್ಯನಾಗಿ ಆತ ವಿಷಶಾಸ್ತ್ರವನ್ನೂ ಅರಿತಿದ್ದ. ವಿಷಸೇವನೆ ಎಂಬ ಸಂಶಯ ಬಂದೊಡನೆ ಕುಣಿದಾಡಿದ. ಉತ್ಸಾಹದಿಂದ ಹೆಂಡತಿಗೆ ಹೇಳಿದ. ಹೆಚ್ಚಿನ ತನಿಖೆ ಮಾಡಬೇಕೆಂದು ನಿರ್ಧರಿಸಿದ. ನೆಪೋಲಿಯನ್ನನ ಮೇಲಿನ ಅಭಿಮಾನ ಹಾಗೆ ಮಾಡಿಸಿತು, ಎನ್ನುವ.

[ಇಂಥದೇ ಅಭಿಮಾನ ಕೋಪರ್ನಿಕಸ್ ಎಂಬವನ ಮನದಲ್ಲಿದ್ದಿತು. ಆತ ಸೂರ್ಯದೇವನ ಉಪಾಸಕ. ಸೂರ್ಯನಂಥ ಪ್ರಚಂಡ ಶಕ್ತಿಯು ಪೃಥ್ವಿಯಂತಹ ಸಾಮಾನ್ಯ ಗ್ರಹದ ಸುತ್ತಲೂ ತಿರುಗುವುದು ಏಕೆ ಎಂಬ ಅನಿಸಿಕೆ ಅವನದು. ಅನಂತರದ ಸಂಶಯದ ಪರಿಣಾಮವಾಗಿ ಪೃಥ್ವಿಯೇ ಸೂರ್ಯನ ಸುತ್ತ ತಿರುಗುವುದೆಂಬುದನ್ನು ಬೇರೆ ಆಧಾರಗಳಿಂದ ಸಿದ್ಧ ಮಾಡಿ ತೋರಿಸಿದ್ದ.]

ಡಾ. ಫುಟ್ ಅಲ್ಲಿಂದ 'ಪತ್ತೇದಾರಿ' ಕೆಲಸಕ್ಕೆ ತೊಡಗಿದ. ಶವದ ಮರುಪರೀಕ್ಷೆಯಂತೂ ಸಾಧ್ಯವೇ ಇರಲಿಲ್ಲ. ಫ್ರೆಂಚ್ ಸರಕಾರ ಖಂಡಿತ ಒಪ್ಪುತ್ತಿರಲಿಲ್ಲ. ಸತ್ತವರ ಕೂದಲಿನಲ್ಲಿ ವಿಷ ಹಾಗೇ ಉಳಿಯುತ್ತದಂತೆ. ಮೃತನ ಕೂದಲನ್ನು ಸ್ಮರಣಾರ್ಥ ಕಾದಿರಿಸುವ ಸಂಪ್ರದಾಯ ಪಾಶ್ಚಿಮಾತ್ಯರಲ್ಲಿದೆ. ಕೂದಲಿನ ಅನ್ವೇಷಣೆಗೆ ಮೊದಲಾಯಿತು. ಯಾವನೋ ಒಬ್ಬ ಒಂದು ಎಳೆಯನ್ನು ಕೊಡಲೊಪ್ಪಿದ. ಸರಿ, ಅದರ ಪರೀಕ್ಷೆ ಆಯಿತು. ವಿಷದ ಅಂಶ ಅದರಲ್ಲಿತ್ತು. ಆದರೆ ಒಂದೇ ಬಾರಿಗೆ ವಿಷ ಕೊಟ್ಟು ನೆಪೋಲಿಯನ್ನನನ್ನು ಸಾಯಿಸುವುದು ಅಲ್ಲಿಯ ಪರಿಸ್ಥಿತಿಯಲ್ಲಿ ಸಾಧ್ಯವೇ ಇರಲಿಲ್ಲ. ಹಂತಹಂತವಾಗಿ ವಿಷಪ್ರಾಶನ ಹೇಗಾಯಿತೆಂದು ತಿಳಿಯಲು ಹೆಚ್ಚು ಕೂದಲು ಬೇಕು. ಅದನ್ನೂ ದೊರಕಿಸಿಯಾಯಿತು. ಸ್ಮಿಥ್ ಎಂಬ ವಿಜ್ಞಾನಿಯು ಅವನ್ನು ಪ್ರಯೋಗಕ್ಕೆ ಒಳಪಡಿಸಿದಾಗ, ವಿಷಪ್ರಾಶನ ಸುರುವಿಗೆ ಕಡಿಮೆ ಪ್ರಮಾಣದಲ್ಲಿ ಇದ್ದು, ಕೊನೆಯ ಏಳು ತಿಂಗಳಲ್ಲಿ ಆ ಪ್ರಮಾಣ ಹೆಚ್ಚಾಗುತ್ತ ಹೋಯಿತೆಂಬುದು ಸಿದ್ಧವಾಯಿತು. ಕೊಟ್ಟ ವಿಷ? ಇಲಿ ಪಾಷಾಣದಂಥ (rat poison) ಸಾದಾ ವಿಷವಾಗಿತ್ತು. ಯಾರು ಈ ಕೆಲಸ ಮಾಡಿರಬೇಕು ಎಂಬುದನ್ನು ಕಂಡುಹಿಡಿಯುವ ಪತ್ತೇದಾರೀ ಕೆಲಸವನ್ನು ಆ ದಂತವೈದ್ಯ ಮಾಡಿದ.

ಇನ್ನು ಅಂತಿಮ ನಿರ್ಣಯಕ್ಕೆ ಬರುವ ಮುಂಚೆ 'ನ್ಯಾಯಾಧೀಶ'ನಾಗಿ ಫುಟ್ ಕೆಲವು ಅಂಶಗಳಿಗೆ ಸಮಾಧಾನ ಹೇಳಿಕೊಳ್ಳಬೇಕಾಯಿತು. ಕೂದಲಿನ ಸ್ಯಾಂಪಲ್ಲು ನಿಜಕ್ಕೂ ನೆಪೋಲಿಯನ್ನನದೇ? ಪ್ರಯೋಗಕ್ಕೆ ಒಳಪಡಿಸಿದ ಸ್ಮಿಥ್ ಪ್ರಾಮಾಣಿಕನೇ? ಹಾಕಿದ್ದು ಇಲಿ ಪಾಷಾಣವೆ? ವಿಷಪ್ರಾಶನವನ್ನು ದಿನವೂ ಅಷ್ಟಷ್ಟರಂತೆ ಮಾಡಿಸುತ್ತಿದ್ದ ಉದ್ದೇಶ ಏನಿದ್ದಿತು? ಫುಟ್ ಅದನ್ನೂ ಕಂಡುಹಿಡಿದ.

ಅಂತೂ ಒಂದು ಮಹಾನ್ ನಿರ್ಣಯ ಹೊರಬಂದು ಫ್ರಾನ್ಸಿನ ಇತಿಹಾಸದಲ್ಲಿ ಹೊಸ ತಿರುವು ಮೂಡಿತು. ಫುಟ್‌ನ ೧೫ ವರ್ಷದ ಸಮಯ ತೆಗೆದುಕೊಂಡ ಈ ಸಂಶೋಧನದ ಹಿಂದೆ ಇದೀಗ ಹೇಳಿದ ಸಂಶೋಧಕನ ಐದು ಲಕ್ಷಣಗಳನ್ನು ಓತಪ್ರೋತವಾಗಿ ಕಾಣಬಹುದು.

ವಸ್ತು ವಿಶ್ಲೇಷಣೆ

ಸದ್ಯದ ಸಂಶೋಧನ ಕ್ರಮವೆಂದರೆ ಹತ್ತಾರು ಆಕರಗಳಿಂದ ಮಾಹಿತಿಯನ್ನು ಕಲೆಹಾಕುವುದು, ನಮಗೆ ಸರಿಕಂಡಂತೆ ಹೊಂದಿಸಿಕೊಳ್ಳುವುದು. ಆಮೇಲೆ ಅವುಗಳಿಂದ ಹೊಸ ಅಂಶಗಳನ್ನು ಗುರುತಿಸಿ ಸಂಪ್ರಬಂಧವನ್ನು ಬರೆಯುವುದಾಗಿದೆ. ಹೀಗೆ ಮಾಡುವಾಗ ಯಾವುದೊಂದು ಮಾಹಿತಿ ಇನ್ನೆಲ್ಲಿಯೋ ಸೇರ್ಪಡೆಯಾಗಬಹುದು; ಕೆಲವೊಂದು ಮಾಹಿತಿಯನ್ನು ಎಲ್ಲಿ ಸೇರಿಸಬೇಕೆಂಬುದು ತಿಳಿಯದೇ ಉಳಿದುಬಿಡಬಹುದು; ಇನ್ನು ಕೆಲವು ಅಂಶಗಳನ್ನು ಅರ್ಥವಿಸಲಾಗದೇ ಕೈಬಿಡಬಹುದು. ಈ ರೀತಿ ಅಂತಿಮವಾಗಿ ಪ್ರಬಂಧವನ್ನೇನೊ ಬರೆಯುತ್ತೇವೆ. ಆದರೆ ಅದು ಅಸಮರ್ಪಕವಾಗುವ ಸಂಭವವಿರುತ್ತದೆ.

ನಮ್ಮ ಸಂಶೋಧನ ಕಾರ್ಯವು ಅಚ್ಚುಕಟ್ಟಾಗಿ ಸಮರ್ಪಕವಾಗಿ ಸಾಗಬೇಕಾದರೆ, ನಮ್ಮಲ್ಲಿ ಸಂಗ್ರಹವಾದ ಮಾಹಿತಿಯ 'ವಸ್ತು'ವನ್ನು (content matter) ನಿರ್ದಿಷ್ಟವಾಗಿ

ಗುರುತಿಸಿ, ಅದರ ವಿಶ್ಲೇಷಣೆಯನ್ನು ಕೈಕೊಂಡಾಗ ನಿರ್ಣಯಕ್ಕೆ ಬರುವುದು ಸಾಧ್ಯ. ಈ ರೀತಿಯ ಅಭ್ಯಾಸಕ್ಕೆ Content Analysis – 'ವಸ್ತು ವಿಶ್ಲೇಷಣೆ' ಎಂದು ಕರೆಯಲಾಗುತ್ತದೆ.

ವಸ್ತು–ವಿಶ್ಲೇಷಣಾ ಕ್ರಮದ ಮೊದಲ ಹೆಜ್ಜೆ ಎಂದರೆ ನಮ್ಮಲ್ಲಿದ್ದ ಮಾಹಿತಿಯೊಂದರ ನಿರ್ದಿಷ್ಟ ಅಂಶ ಯಾವುದೆಂಬುದನ್ನು ಗುರುತಿಸುವುದು. ಆಮೇಲೆ ನಮಗೆ ಸೂಕ್ತವಾದ ರೀತಿಯಲ್ಲಿ ವಿಭಾಗಗಳು, ಉಪವಿಭಾಗಗಳನ್ನು ಮಾಡಿಕೊಂಡು, ಅದರಲ್ಲಿ ಅಡಕಗೊಳಿಸುತ್ತ ಹೋಗಬೇಕು. ಹಾಗೆ ಮಾಡಿದಾಗ ಮಾಹಿತಿಯ 'ವಸ್ತು' ಖಚಿತವಾಗಿ ರೂಪುಗೊಳ್ಳುತ್ತದೆ. ಹೊಸ ಮಾತನ್ನು ಕಂಡುಕೊಳ್ಳಲು ಅನುಕೂಲವಾಗುತ್ತದೆ. ಆ ಮುಂದೆ ಅದು ಸಂಶೋಧನ ರೂಪವನ್ನು ತಾಳುತ್ತದೆ. ಮತ್ತು ಅದರ ನಿರೂಪಣೆಯು ತರ್ಕಬದ್ಧ ಹಾಗೂ ವಸ್ತುನಿಷ್ಠವಾಗಿ ಹೊರಹೊಮ್ಮುತ್ತದೆ. ಇತಿಹಾಸದಂಥ ಕ್ಷೇತ್ರದಲ್ಲಿ ಮಾಹಿತಿ ಅಪಾರವಾಗಿರುವುದರಿಂದ ಈ ವ್ಯವಸ್ಥಿತ ಕ್ರಮ ಅವಶ್ಯವಾಗುತ್ತದೆ.

ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ಒಂದು ಉದಾಹರಣೆಯನ್ನು ಕೊಡಬಹುದು. ಒಂಬತ್ತು ಸಾವಿರದಷ್ಟು ಶಾಸನಗಳನ್ನು ಸಂಪಾದಿಸಿದ ಬಿ.ಎಲ್.ರೈಸರು ಆ ಶಾಸನಗಳ ಆಧಾರದಿಂದ ಮೈಸೂರು, ಕೊಡಗುಗಳ ಇತಿಹಾಸವನ್ನು ಸಾರರೂಪವಾಗಿ ಕೊಡಬೇಕೆಂದು ಯೋಚಿಸಿದರು. ಅದರ ಪರಿಣಾಮವಾಗಿ 'Mysore and Coorg from Inscriptions' ಎಂಬ ಅವರ ಗ್ರಂಥ ೧೯೦೯ರಲ್ಲಿ ಪ್ರಕಟವಾಯಿತು. ಅವರು ಇದಕ್ಕಾಗಿ ಪರಿಶೀಲಿಸಬೇಕಾದ ಶಾಸನಗಳದ್ದೇ ದೊಡ್ಡ ಮೊತ್ತ. ಇನ್ನೂ ಅದರಲ್ಲಿ ಬಂದ ಸಣ್ಣ ದೊಡ್ಡ ವಿಷಯಗಳೂ ಸಾವಿರಾರು; ಸಲ್ಲೇಖನ, ಅಷ್ಟಾವಧಾನ, ಬ್ಯಾಂಕಿಂಗ್, ವರ್ತಕಶ್ರೇಣಿ – ಏನೆಲ್ಲ, ಎಷ್ಟೆಲ್ಲ ನೆನಪಿಡುವುದು? ರೈಸರಿಗಾದರೆ ತಾವು ಕಂಡುಹಿಡಿದ ಶಾಸನಗಳಾದ್ದರಿಂದ ಟಿಪ್ಪಣಿ ಮಾಡಿಕೊಂಡರೆ ಸಾಕಿತ್ತು. ಬೇರೆಯವರು ಆ ಕೆಲಸ ಮಾಡುವುದಾದರೆ ಎಲ್ಲ ಅಂಶಗಳನ್ನು ಅವುಗಳ 'ವಸ್ತು'ವಿಗನುಗುಣವಾಗಿ (content or theme) ಹೊಂದಿಸಬೇಕಾದದ್ದು ಅನಿವಾರ್ಯವಾಗುತ್ತದೆ. ಮುಂದೆ ಇದೆಲ್ಲ ಮೊತ್ತವನ್ನು ಮೌಲ್ಯಕ್ಕೆ ತಿರುಗಿಸಬೇಕು. ಎಂದರೆ ಒಂದೊಂದು ವಿಭಾಗದಲ್ಲಿ ಜಮೆಯಾದ ಅಂಶಗಳ ಮೌಲ್ಯಮಾಪನ ಮಾಡಬೇಕು.

ಯಾವುದೇ ಇತಿಹಾಸಕಾರನು ಈ ಬಗೆಯ ವಿಂಗಡಣೆ ಮತ್ತು ವಿಶ್ಲೇಷಣೆಯನ್ನು ಮಾಡುವುದಿಲ್ಲ ಎಂದೇನಲ್ಲ. ಆದರೆ ಆ ಕೆಲಸ ವ್ಯವಸ್ಥಿತವಾಗಿ ನಡೆಯಬೇಕು. ಈಚೆಗೆ ದ್ವಿತೀಯ ಪಿ.ಯು.ಸಿ. ಫಲಿತಾಂಶ ಬಂದಿತಲ್ಲವೆ. ಪ್ರತಿಯೊಂದು ಜಿಲ್ಲೆಯ ಹೆಸರು, ಪಾಸಾದ ವಿದ್ಯಾರ್ಥಿಗಳ ಪರ್ಸೆಂಟ್, ಇದರ ಒಂದು ಯಾದಿ ಕೊಟ್ಟರೆ ಸಾಕಾಗಿತ್ತು. ಆದರೆ, ಬೆಂಗಳೂರಿನ ಒಂದು ದೈನಿಕವು ಕರ್ನಾಟಕದ ನಕಾಶವನ್ನು ಕೊಟ್ಟು, ಅಲ್ಲಿಯ ೨೮ ಜಿಲ್ಲೆಗಳನ್ನು ಕಾಣಿಸಿ ಅದರೊಳಗೆ, ಪಾಸಾದವರ ಶತಶಃ ಪ್ರಮಾಣವನ್ನು ಕೊಟ್ಟಿರುವುದರಿಂದ ಕಣ್ಣಿಗೆ ಕಟ್ಟುವಂತೆ ವಿಷಯಗ್ರಹಣ ಮಾಡುವಂತಾಗಿದೆ. ವಸ್ತುವಿಶ್ಲೇಷಣೆಯ ಮೊದಲ ಹೆಜ್ಜೆಯ ಉದ್ದೇಶವೇ ಅದು. ಈ ನಿರ್ದಿಷ್ಟತೆಯಿಂದಾಗಿ ಸಂಶೋಧಿತ ಅಂಶಗಳು ವಸ್ತುನಿಷ್ಠವಾಗಿ ಹೊರಹೊಮ್ಮುವುದಕ್ಕೆ

ಅನುಕೂಲವಾಗುವುದು.

ಈ ವಸ್ತು ವಿಶ್ಲೇಷಣೆಯ ಪ್ರಕ್ರಿಯೆ ಆರಂಭವಾದದ್ದು ಹೀಗೆ: ಸುಮಾರು ನೂರು ವರ್ಷಗಳ ಹಿಂದೆ ಅಮೇರಿಕೆಯಲ್ಲಿ ಚುನಾವಣೆ ನಡೆದ ಕಾಲಕ್ಕೆ ಪತ್ರಿಕೆಗಳಲ್ಲಿ ಅನಾಮಧೇಯ ಲೇಖನಗಳು ಪ್ರಕಟವಾಗುತ್ತಿದ್ದವು. (Federalist Papers) ಅವನ್ನು ಯಾರು ಬರೆದದ್ದು, ಅವುಗಳ ಅಂತರ್ಯವೇನು, ಪರಿಣಾಮ ಎಂಥದು ಎಂಬುದನ್ನು ಅಲ್ಲಿಯ ಶಬ್ದ ಹಾಗೂ ಶಬ್ದಗುಚ್ಛಗಳನ್ನು ಎತ್ತಿಕೊಂಡು ವಿಶ್ಲೇಷಣೆ ಮಾಡಿದರು. ಆಗ ಬರೆದವರು ಯಾರೆಂಬ ನಿಜ ಸಂಗತಿ ಕಂಡುಹಿಡಿಯಲಾಯಿತು. ಆ ಮುಂದೆ ಈ ಕ್ರಮವನ್ನು ಬೇರೆ ರಾಜಕೀಯ ಧುರೀಣರ (ಸ್ಟಾಲಿನ್, ಹಿಟ್ಲರ್, ರೂಸ್‌ವೆಲ್ಟ್) ಹೇಳಿಕೆಗಳನ್ನು ವಿಶ್ಲೇಷಿಸಲು ಬಳಸಲಾಯಿತು. ಇತರ ಕ್ಷೇತ್ರಗಳಿಗೂ ಅನ್ವಯಿಸಿದಂತೆಲ್ಲ ವಸ್ತುವಿಶ್ಲೇಷಣಾ ಪದ್ಧತಿಯಲ್ಲಿ ಸುಧಾರಣೆಯಾಯಿತು.

ವಸ್ತುವಿಶ್ಲೇಷಣಾ ಪದ್ಧತಿಯನ್ನು ಕನ್ನಡ ಸಾಹಿತ್ಯಕ್ಕೆ ಅಳವಡಿಸಿದ್ದರ ಒಂದು ಸಂದರ್ಭವನ್ನು ಹೇಳಬೇಕು. ಮುದ್ದಣನು ರಚಿಸಿದ ಐದು ಕೃತಿಗಳಲ್ಲಿ ಮೂರು ರಾಮಾಯಣಕ್ಕೆ ಸಂಬಂಧಿಸಿದವುಗಳೇ. ಆದ್ದರಿಂದ ತುಲಸೀದಾಸನಂತೆ ಆತ ರಾಮಭಕ್ತನೆಂದು ಯಾರಿಗಾದರೂ ಅನಿಸದಿರದು. ಆದರೆ ಸಂಶಯ ಮೂಡಿ, ಅವನು ಉಲ್ಲೇಖಿಸಿದ ವಿವಿಧ ದೇವತಾವಾಚಿ ಶಬ್ದಗಳನ್ನು (ರಾಮ, ಇಂದ್ರ, ಹನುಮಂತ, ಸೀತೆ, ಶಿವ ಇತ್ಯಾದಿ) ಅದರಂತೆ 'ಸ್ತ್ರೀ' ಎಂಬ ಪರಿಕಲ್ಪನೆಯನ್ನು ಕೊಡುವ ಶಬ್ದಗಳನ್ನು ಬೇರೆ ಬೇರೆಯಾಗಿ ವಿಂಗಡಿಸಿ ಆಯಾ ಸಂದರ್ಭಗಳೊಡನೆ ಬರೆದು ತೆಗೆಯಲಾಯಿತು. ಅಂಕಿತನಾಮವಾಚಿ ಪದಸಮೂಹವನ್ನು ಒಂದೊಂದು ಹೆಸರಿನಡಿಯಲ್ಲಿ ಪರೀಕ್ಷಿಸಿದಾಗ ರಾಮವಾಚಿ ಶಬ್ದಗಳ ಎರಡು ಪಟ್ಟು ಶಿವವಾಚಿ ಶಬ್ದಗಳು ಕಂಡುಬರಬೇಕೆ! ನಿಜವಾಗಿ ಅಚ್ಚರಿಯ ಸಂಗತಿ. ಇದರಿಂದ ಸ್ಪಷ್ಟವಾಗಿ ತಿಳಿದು ಬಂದ ಸಂಗತಿ ಎಂದರೆ ಮುದ್ದಣನು ಪರಮ ಶಿವಭಕ್ತನೆಂಬುದು. ಅಗತ್ಯ ಇರಲಿ ಬಿಡಲಿ, ಅವನು ಶಿವನನ್ನು ಮೇಲಿಂದ ಮೇಲೆ ಪ್ರಸ್ತಾಪಿಸಿದ್ದನು. ಮುಂದುವರಿದು ಆ ಸಂದರ್ಭಗಳನ್ನು ವಿಶ್ಲೇಷಿಸಿದಾಗ ಈ ಶಿವನು ರುದ್ರನೂ ಲಯಕಾರಿಯೂ ಆಗಿರದೇ ಮಂಗಳಕರ ಶಿವನನ್ನಾಗಿ ಮುದ್ದಣನು ಚಿತ್ರಿಸಿದ್ದನು. ತಿಳಿಯಬೇಕಾದ ಮಾತೆಂದರೆ ಕಳೆದ ನೂರು ವರ್ಷಗಳಿಂದ ಮುದ್ದಣನ ವ್ಯಾಸಂಗ ನಡೆದಿದ್ದರೂ ಅವನು ಮಹಾ ಶಿವಭಕ್ತನೆಂಬುದು ಹೊಳೆದಿರಲೇ ಇಲ್ಲ. ದೇವತೆಗಳ ಹೆಸರುಗಳನ್ನು ಈ ರೀತಿ ವ್ಯವಸ್ಥಿತವಾಗಿ ಹೊಂದಿಸಿ ವಿಶ್ಲೇಷಿಸಿದ್ದರಿಂದ ಈ ಅಂಶ ತಿಳಿಯಬಂದಿತು ಮತ್ತು ಖಚಿತ ಆಧಾರಗಳನ್ನು ಕೊಟ್ಟಿದ್ದರಿಂದ ಯಾರೂ ಈ ಶಿವಪಾರಮ್ಯವನ್ನು ಪ್ರಶ್ನಿಸಲಾಗಲಿಲ್ಲ.

ಗಣಕಯಂತ್ರ

ತಿಳಿಯಬೇಕಾದ ಮಾತೆಂದರೆ ವಸ್ತುವಿಶ್ಲೇಷಣೆ ಮತ್ತು ಗಣಕಯಂತ್ರದ ವಿಧಾನ - ಇವು ಒಂದಕ್ಕೊಂದು ಪೂರಕವಾಗಿವೆ. ಮುದ್ದಣನನ್ನು ಕುರಿತ ಮೇಲಿನ ಅಂಶಗಳನ್ನು ಗಣಕಯಂತ್ರಕ್ಕೆ ಪೂರೈಸಲಾಗಿತ್ತು. ಗಣಕಯಂತ್ರವಾದರೂ ನಾವು ಊಡಿಸಿದ (feeding) ಮಾಹಿತಿಯನ್ನು ವ್ಯವಸ್ಥಿತವಾಗಿ ಹಿಡಿದಿಟ್ಟುಕೊಂಡು ನಮಗೆ ಬೇಕಾದ್ದನ್ನು ತಕ್ಷಣ ಹಿಂದಿರುಗಿ

ಸುತ್ತದೆ. ಇತಿಹಾಸದಂಥ ವಿಚಾರದಲ್ಲಿ ಮಾಹಿತಿಯು ಅಪಾರವಾಗಿ ಇರುತ್ತದೆಯಾದ್ದರಿಂದ ಅದರ ಅಭ್ಯಾಸಕ್ಕೆ ಗಣಕಯಂತ್ರದ ಬಳಕೆ ಅನಿವಾರ್ಯವಾಗುತ್ತದೆ. ಇದಕ್ಕೆ ಮಾದರಿಯಾಗ ಬಹುದಾದ ಒಂದು ಯೋಜನೆಯನ್ನು ಸಂಕ್ಷಿಪ್ತವಾಗಿ ವಿವರಿಸುವೆ.

ಈ ಯೋಜನೆಯ ಹೆಸರು **'ಕಾಲಾನುಕ್ರಮವಾದ ಕರ್ನಾಟಕ ಇತಿಹಾಸ'** (Chronological History of Karnataka). ಶಿಲಾಯುಗದಿಂದ ಹಿಡಿದು ೧೯೫೬ರವರೆಗೆ, ಕರ್ನಾಟಕ ರಾಜ್ಯ ನಿರ್ಮಾಣವಾದ ವರ್ಷದ ವರೆಗೆ ನಾಡಿನ ಇತಿಹಾಸದ ನಿರ್ದಿಷ್ಟವಾದ ಮಾಹಿತಿಯನ್ನು ಇದು ಒಳಗೊಳ್ಳುವುದು. ಇದರಲ್ಲಿ ಮೊದಲು, ಘಟನೆಯೊಂದರ ಕಾಲವನ್ನು ಕೊಡಬೇಕು. (ಅದು ತಾರೀಖು, ತಿಂಗಳು, ವರ್ಷ; ಇಲ್ಲವೆ ಬರಿಯೆ ವರ್ಷ ಅಥವಾ ಶತಮಾನವೂ ಆಗಬಹುದು). ಅನಂತರ ಆ ಘಟನೆಯನ್ನು ಸಂಕ್ಷಿಪ್ತವಾಗಿ ಕೊಟ್ಟು, ನಾವು ಅದನ್ನು ತೆಗೆದುಕೊಂಡ ಆಕರವನ್ನೂ ಹೇಳಬಹುದು. ಜೊತೆಗೆ ಆ ಘಟನೆಗೆ ಸಂಬಂಧಿಸಿದಂತೆ ರಾಜಮನೆತನ, ಯುದ್ಧ, ಶಿಲ್ಪ, ಧರ್ಮ, ಸಾಹಿತ್ಯ, ಜನಜೀವನ, ಮುಂತಾದ ಪ್ರಮುಖ ವಿಷಯವನ್ನೂ ಕಾಣಿಸಬೇಕು. ಇದೊಂದು ಮಾದರಿಯ ನಮೂದು:

ಕಾಲ: [೧೭೯೯ ಮೇ ೪] ಮುಖ್ಯ ವಿಷಯ : [ಯುದ್ಧ]

ಘಟನೆ : ಬ್ರಿಟಿಶರು ನಿಜಾಮನೊಂದಿಗೆ ಸೇರಿ ಟೀಪೂ ಸುಲ್ತಾನನನ್ನು ಶ್ರೀರಂಗಪಟ್ಟಣದಲ್ಲಿ ನಡೆದ ಯುದ್ಧದಲ್ಲಿ ಸೋಲಿಸಿದರು. ಯುದ್ಧದಲ್ಲಿ ಟೀಪೂ ಹತನಾದದ್ದು. ಮೈಸೂರು ಪ್ರದೇಶಕ್ಕೆ ಬ್ರಿಟಿಷರು ಮುಮ್ಮಡಿ ಕೃಷ್ಣರಾಜರನ್ನು ಪೂರ್ಣಯ್ಯನ ದಿವಾನಗಿರಿಯಲ್ಲಿ ಪಟ್ಟಕ್ಕೆ ಕೂಡ್ರಿಸಿದರು.

ಆಕರ : B.L. Rice : Mys & Coorg fr. Inspns.

ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದಂತೆ ಇಂಥ ೮-೧೦ ಸಾವಿರ ನಮೂದುಗಳು ಹೊರಡಬಹುದು. ಅಲ್ಲದೆ ಇದರ ಸ್ವರೂಪ ಸಂದರ್ಭಗ್ರಂಥದ್ದು. ಆದ್ದರಿಂದ ನಿಚ್ಚಳವಾಗಿ ಯಾವುದೇ ವಿವರಣೆ ಇಲ್ಲದೆ ಈ ನಮೂದುಗಳು ಮೂಡಿ ಬರಬೇಕು. ಇತ್ತ ಗಣಕಯಂತ್ರವು ಅಂಕಿತನಾಮಗಳೊಂದೊಂದನ್ನೂ ಪ್ರತ್ಯೇಕವಾಗಿ ಹಿಡಿದು ಇಟ್ಟುಕೊಂಡಿರುತ್ತದೆ. ಹೀಗಾಗಿ 'ಟೀಪೂ ಸುಲ್ತಾನ'ನ ಬಗ್ಗೆ ಅಭ್ಯಾಸ ಮಾಡುವವರು ಇಲ್ಲವೇ ಬೇರೆ ಯಾವುದೇ ವಿಚಾರವನ್ನು ತಿಳಿದುಕೊಳ್ಳಬೇಕೆನ್ನುವವರು ಆ ಹೆಸರನ್ನು ಒತ್ತಿದರೆ, ಕರ್ನಾಟಕದಲ್ಲಿ ನಡೆದ ಸಮಸ್ತ ಯುದ್ಧಗಳ ಪಟ್ಟಿಯನ್ನೇ ಕೊಡುತ್ತದೆ. ಇಂಥ ಕಾಲಾನುಕ್ರಮದ ಇತಿಹಾಸವು ಬೇರೆ ಕೆಲವು ಪ್ರದೇಶಗಳಿಗೆ ರಚಿತವಾಗಿದೆ. ಇಡಿಯ ಭಾರತದ್ದು ಕೂಡ. ಕರ್ನಾಟಕದ್ದು ಸಿದ್ಧವಾದರೆ, ನಮ್ಮ ಇತಿಹಾಸಕ್ಕೆ ಸಂಬಂಧಿಸಿದ ಯಾವುದೇ ಸಣ್ಣ, ದೊಡ್ಡ ಪ್ರಮಾಣದ ಮಾಹಿತಿ ಅಧಿಕೃತವಾದ ರೀತಿಯಲ್ಲಿ ದೊರೆಯುವುದು. ಹೈಸ್ಕೂಲ್ ವಿದ್ಯಾರ್ಥಿಗಳಿಂದ ಹಿಡಿದು ಎಲ್ಲ ಸ್ತರದವರಿಗೂ ಸಿದ್ಧ ಸಂದರ್ಭ ಗ್ರಂಥವಾಗಿ (ready reference) ನಿಲ್ಲುವದು.

ಗಣಕಯಂತ್ರಕ್ಕೂ ನಮಗೂ ಏನು ಸಂಬಂಧ ಎಂತಲೊ, ನಮಗೇಕೆ ಅದರ ಉಸಾಬರಿ ಎಂತಲೊ ಭಾವಿಸುವ ದಿನಗಳು ಹೋದುವು. ಅಪಾರವಾದ ಆಕರ ಸಾಮಗ್ರಿ ಇರುವಂಥ ಇತಿಹಾಸದ, ಅದರಂತೆ ಸಾಹಿತ್ಯದ ಹೆಚ್ಚಿನ ವ್ಯಾಸಂಗಕ್ಕೆ ಕಂಪ್ಯೂಟರ್ ಬಳಸುವುದನ್ನು ಕಡ್ಡಾಯವಾಗಿ ಪರಿಗಣಿಸಬೇಕಾದ ದಿನಗಳು ದೂರವಿಲ್ಲ. ಸಣ್ಣ ಮಕ್ಕಳು ಕೂಡಾ ಲೀಲಾಜಾಲವಾಗಿ ಅದನ್ನು ಬಳಸುತ್ತಿದ್ದಾರೆ. ಮತ್ತೊಂದೆಂದರೆ ಇತಿಹಾಸದ ಯಾವುದೇ ಕ್ಷೇತ್ರಕ್ಕೆ ಅದನ್ನು ಬಳಸಬಹುದು. ನಮ್ಮ ಶಾಸನಗಳು, ಅದರಂತೆ ಸ್ಥಳನಾಮಗಳು – ಇವುಗಳ ಅಧ್ಯಯನಕ್ಕೆ ಈ ಉಪಕರಣವನ್ನು ಹೇಗೆ ಬಳಸುವ ಬಗ್ಗೆ ವಿದೇಶಗಳಲ್ಲಿ ಪ್ರಬಂಧಗಳನ್ನು ಸಾದರಪಡಿಸಿದ್ದೇನೆ.

ಭವಿತವ್ಯದ ಅಧ್ಯಯನ

ಇತಿಹಾಸ ಸಂಶೋಧನೆಯು ಈ ಹಿಂದೆ ಆದದ್ದನ್ನು ವಿವರಿಸುತ್ತದೆ. ಅದು ಸರಿ. ಸಂಶೋಧನೆ ಅನ್ನುವ ಪದವೂ ಗತಕಾಲದ ನೆನಪನ್ನೇ ತರುವಂತಹದು. ಆದರೆ ಭವಿತವ್ಯ ಎಂದರೆ ಇನ್ನು ಮುಂದೆ ಆಗುವುದನ್ನೂ ಯೋಚಿಸುವುದು ಈಗಿನ ದಿನಗಳಲ್ಲಿ ಅವಶ್ಯವೆನಿಸುತ್ತದೆ. ಯಾಕೆ? ಆ ರೀತಿ ಆಲೋಚನೆಯು ತರ್ಕಬದ್ಧವಾಗಿ ರೂಪುಗೊಂಡರೆ ಮುಂದೆ ಆಗಬಹುದಾದ ಅನಾಹುತಗಳನ್ನು ತಪ್ಪಿಸಬಹುದಲ್ಲವೆ? ಮತ್ತು ಅದಕ್ಕೆ ಸೂಕ್ತವಾದ ಮುಂಜಾಗ್ರತೆ ಕೈಕೊಳ್ಳಬಹುದು. ಇವತ್ತಿನ ಸಮಸ್ಯೆಗೂ ಪರಿಹಾರ ದೊರೆತೀತು. ಇಷ್ಟೇ, ಈ ಹಿಂದೆ ನಡೆದದ್ದರ ಆಧಾರದಿಂದಲೇ ಭವಿತವ್ಯದ ಬಗ್ಗೆ (Futurology) ಅಧ್ಯಯನ ನಡೆಯಬೇಕು. ಇದಕ್ಕೆ ಎರಡು ಮಿತಿಗಳಿವೆ. ಒಂದು ಕಾಲದ ಮಿತಿ. ಮುಂದಿನ ೫೦೦ ವರ್ಷಗಳ ಅನಂತರದ ಭವಿತವ್ಯಕ್ಕಿಂತ ೫೦ ವರ್ಷಗಳ ಮುಂದೆ ಏನು ಆದೀತೆಂದು ಸ್ಪಷ್ಟವಾಗಿ ಯೋಚಿಸಬಹುದು. ಅದರಂತೆ ಆಯ್ದುಕೊಂಡ ವಿಷಯದ ವ್ಯಾಪ್ತಿಯೂ ಮಿತಿಯಲ್ಲಿರಬೇಕು.

ಹದಿನೇಳನೆಯ ಶತಮಾನದ ಕೊನೆಯಲ್ಲಿ ಹ್ಯಾಲಿ ಎಂಬ ಖಗೋಳಶಾಸ್ತ್ರಜ್ಞನು ಒಂದು ವಿಶಿಷ್ಟ ಧೂಮಕೇತುವನ್ನು ೧೬೮೨ರಲ್ಲಿ ಕಂಡಿದ್ದನು. ಅಂಥದೇ ಲಕ್ಷಣವುಳ್ಳ ಧೂಮಕೇತು ಅದಕ್ಕೂ ಮುಂಚೆ ಎರಡು ಬಾರಿ ಕಾಣಿಸಿಕೊಂಡದ್ದನ್ನು ಓದಿ ತಿಳಿದುಕೊಂಡನು. ಅದರ ಮೇಲಿಂದ ಈ ವಿಶಿಷ್ಟ ಧೂಮಕೇತು ಪ್ರತೀ ೭೫ ವರ್ಷಕ್ಕೊಮ್ಮೆ ಕಾಣಿಸುತ್ತದೆ ಎಂದು ಭವಿಷ್ಯವನ್ನು ಹೇಳಿದ್ದನು. ಹಾಗೇ ಆಯಿತು. ೧೭೫೮ರಲ್ಲಿ ಅದು ಮತ್ತೆ ಕಾಣಿಸಿಕೊಂಡಿತು. ಅದೇ ಕಾಲಾವಧಿಯ ಅಂತರದಲ್ಲಿ ಈಗೂ ಕಾಣಿಸಿಕೊಳ್ಳುತ್ತಾ ಇದೆ. ಅದರಿಂದಾಗಿ ವಿಜ್ಞಾನಿಗಳು ಆ ಸಮಯಕ್ಕೆ ಸರಿಯಾಗಿ ಯಂತ್ರೋಪಕರಣಗಳನ್ನಿಟ್ಟುಕೊಂಡು ವೀಕ್ಷಿಸುತ್ತಾರೆ. ಬಾಹ್ಯಾಕಾಶದಲ್ಲಿ ಆಗಿರುವ ಸ್ಥಿತ್ಯಂತರಗಳನ್ನು ಗಮನಿಸುತ್ತಾರೆ. ಭವಿತವ್ಯದ ಬಗ್ಗೆ ಸಂಶೋಧನೆ ನಡೆಸಬಹುದೆನ್ನುವುದಕ್ಕೆ ಇದೊಂದು ಉತ್ತಮ ಉದಾಹರಣೆ.

ಪ್ರಕೃತ ನಮ್ಮ ದೇಶದ ಅಥವಾ ಯಾವುದೊಂದು ಪ್ರದೇಶದ ವಿಭಜನೆ, ಹಾಗೂ ಮುಂದೆ ಆಗಬಹುದಾದ ಸ್ಥಿತ್ಯಂತರಗಳ ಬಗ್ಗೆ ಭವಿತವ್ಯದ ಸಂಶೋಧನೆ ಕೈಗೊಳ್ಳಬಹುದು. 'ಭರತಖಂಡ' ಎಂದು ಹೇಳುತ್ತಿದ್ದ ಕಾಲದಲ್ಲಿಂದ ದೇಶ, ಪ್ರದೇಶಗಳು ಒಡೆದು, ಸಿಡಿದುಹೋಗುವ ಪ್ರಕ್ರಿಯೆ

ನಡೆದೇ ಇದೆ. ತಿಬೇಟ, ನೇಪಾಳ, ಬರ್ಮಾ, ಶ್ರೀಲಂಕಾ, ಪೂರ್ವ ಅಫ್ಘಾನಿಸ್ತಾನ, ಪಾಕಿಸ್ತಾನಗಳು ಬೇರೆಯೇ ಆಗಿವೆ. ಬ್ರಿಟಿಶರ ಕಾಲದಲ್ಲಿ ಹೊಸ ರಾಜ್ಯಗಳು ಮತ್ತು ಗಡಿಗಳು ದೊಡ್ಡ ಪ್ರಮಾಣದಲ್ಲಿ ನಿರ್ಮಾಣವಾದುವಲ್ಲವೆ. ಸ್ವಾತಂತ್ರ್ಯ ಬಂದ ಮೇಲೆ ಭಾಷಾವಾರು ರಾಜ್ಯಗಳಾಗಿ ಇನ್ನೇನು ಮುಗಿಯಿತು ಅನ್ನುವಷ್ಟರಲ್ಲಿ ಈಚೆಗೆ ಜಾರಖಂಡ್ ಪ್ರತ್ಯೇಕಗೊಂಡಿತು. ಕಾಶ್ಮೀರದ ಸ್ಥಿತಿಯಾದರೂ ಮುಂದೇನಾಗುವುದೋ ಹೇಳುವಂತಿಲ್ಲ.

ಕರ್ನಾಟಕದ ದೃಷ್ಟಿಯಿಂದ ಇಂಥ ವಿಭಜನೆ, ವಿಘಟನೆ ಭವಿತವ್ಯದಲ್ಲಿ ಯಾವ ಸ್ವರೂಪವನ್ನು ತಾಳಬಹುದೆಂಬ ಬಗ್ಗೆ ನಾವು ಯೋಚಿಸಬೇಡವೆ? ಗೋದಾವರಿಯು ನಮ್ಮ ಮೇರೆಯಾಗಿದ್ದದ್ದು ಕೆಳಕೆಳಗೆ ಸರಿಯತೊಡಗಿತು. ಮಾತ್ರವಲ್ಲದೆ ನಮ್ಮ ಪೂರ್ವ ಮತ್ತು ಪಶ್ಚಿಮ ಗಡಿಗಳೂ ಹಿನ್ ಸರಿಯುತ್ತಲಿವೆ. ಬೆಳಗಾವಿ ಜಿಲ್ಲೆಯಲ್ಲಿಯ ಮರಾಠೀ ಭಾಷಿಕ ಪ್ರದೇಶಗಳು – ೫೦ ವರ್ಷಗಳಿಂದ ನಮ್ಮಲ್ಲಿ ಉಳಿದವುಗಳು – ಮುಂದಿನ ವರ್ಷಗಳಲ್ಲಿ ಉಳಿದಾವೆಯೆ? ಅದೇ ರೀತಿ ಕಾಸರಗೋಡು ತಾಲೂಕು ನಮಗೆ ಆ ಅವಧಿಯಲ್ಲಿ ಬಂದೀತೆ? ಇತ್ತ ತಮಿಳರು ಹೊಸೂರು ಮಾರ್ಗವಾಗಿ ಬೆಂಗಳೂರಲ್ಲಿ ನುಗ್ಗುತ್ತಾ ಇದ್ದಾರೆ. ಅಂದಾಗ ಮುಂದಿನ ೫೦ ವರ್ಷಗಳಲ್ಲಿ ಬೆಂಗಳೂರು ಇನ್ನೊಂದು ಚಂದೀಗಡ ಆಗಲಾರದೇನು?

ಭವಿತವ್ಯದ ಅಧ್ಯಯನಕ್ಕೆ ಈ ಹಿಂದಿನ ಪರಿಸ್ಥಿತಿಯನ್ನೂ, ಈಗ ಇದ್ದುದರ ಕಾರಣಗಳನ್ನೂ ತರ್ಕಬದ್ಧವಾಗಿ ಗಣನೆಗೆ ತೆಗೆದುಕೊಳ್ಳಬೇಕಾಗುವುದು. ಇದೀಗ ಹೇಳಿದ ಬೆಳಗಾವಿಯ ಮರಾಠೀ ಪ್ರಶ್ನೆ, ಕಾಸರಗೋಡಿನ ಕನ್ನಡ ಸ್ಥಿತಿ ಇವು ವಸ್ತುತಃ ನಿಜವಾಗಿದ್ದರೂ, ಆ ಕುರಿತ ಚಳುವಳಿ ಜೋರಿನಲ್ಲಿ ನಡೆದೇ ಇದ್ದರೂ ಬದಲಾವಣೆ ಆಗಿಲ್ಲ. ಯಾಕೆ? ಆ ಕಾರಣವನ್ನು ತಿಳಿದಿರಬೇಕು. ಆ ಕಾರಣವೆಂದರೆ, ಒಮ್ಮೆ ಕರ್ನಾಟಕದಲ್ಲಿ ಇಂಥ ಗಡಿ ಹೊಂದಾಣಿಕೆಗೆ ಅವಕಾಶ ಕೊಟ್ಟರೆ ದೇಶದಾದ್ಯಂತ ಇರುವ ಇಂಥ ತಿಕ್ಕಾಟಗಳಿಗೆ ಪುಟಕೊಟ್ಟಂತಾಗುವುದು. ಅವುಗಳು ಮೇಲೆದ್ದು ದೇಶವಿಡೀ ಘರ್ಷಣೆಗಳುಂಟಾಗುವುದು ಎಂಬ ಅಂಜಿಕೆ ಕೇಂದ್ರ ಸರಕಾರಕ್ಕಿದೆ. ಇದನ್ನು ಗಮನಿಸಿದರೂ ಮುಂಜಾಗ್ರತೆಯನ್ನು ನಾವು ವಹಿಸಬೇಕಾದೀತು.

ಬೇರೆ ಕೆಲವು ಭವಿತವ್ಯ ಶೋಧದ ವಿಷಯಗಳಿವು: ಮುಂದಿನ ವರ್ಷಗಳಲ್ಲಿ ಇಂಗ್ಲಿಷಿನ ಸ್ಥಾನ, ಹಿಂದೂ ಜನಸಂಖ್ಯೆಯ ಇಳಿಮುಖ ಮುಂತಾದ ಇಂದಿನ ಹಲವಾರು ಸಮಸ್ಯೆಗಳನ್ನು ಭವಿತವ್ಯದ ಅಧ್ಯಯನಕ್ಕೆ ಒಳಪಡಿಸಬಹುದು. ಅಂದ ಹಾಗೆ ಜರ್ಮನಿಯಲ್ಲಿ ಭವಿತವ್ಯ ಶಾಸ್ತ್ರವನ್ನು ಕೈಕೊಂಡವರಿಗೆ ಪುರಸ್ಕಾರವೂ ಇದೆ.

ಕೊನೆಯದಾಗಿ ಒಂದು ಮಹತ್ವದ, ಅಗತ್ಯವಾಗಿ ಆಗಲೇಬೇಕಾದ ಒಂದು ವಿಷಯವನ್ನು ಪ್ರಸ್ತಾಪಿಸಬೇಕು. ಅದೆಂದರೆ ಕರ್ನಾಟಕದ ಸರ್ವಾಂಗೀಣ ಇತಿಹಾಸದ ಒಂದು ವೆಬ್‌ಸೈಟ್ (ಅಂತರ್ಜಾಲ ತಾಣ) ರೂಪಿಸುವುದು. ಜಗದಾದ್ಯಂತ ನಾನಾ ವಿಧವಾದ ವಿಷಯಗಳ ಕುರಿತ ವೆಬ್‌ಸೈಟ್‌ಗಳು ಹುಟ್ಟಿಕೊಂಡಿವೆ. ಕರ್ನಾಟಕದಲ್ಲಿಯೇ ವಚನ ಸಾಹಿತ್ಯ, ದಾಸ ಸಾಹಿತ್ಯಗಳ

ವೆಬ್‌ಸೈಟ್ ಸಿದ್ಧವಾಗಿವೆ. ಅದರಂತೆ ಕನ್ನಡ ಪತ್ರಿಕಾ ಪ್ರಪಂಚ, ಕನ್ನಡ ಗ್ರಂಥಸಂಪದ ಇವುಗಳ ಅಂತರ್ಜಾಲದ ತಾಣಗಳೂ ಸಿದ್ಧವಾಗುತ್ತಲಿವೆ. ಕರ್ನಾಟಕ ಇತಿಹಾಸಕ್ಕೂ ಈ ಕೆಲಸ ಆಗಲೇಬೇಕು.

ಕರ್ನಾಟಕದ ಇತಿಹಾಸವೆಂದರೆ ಕೇವಲ ಒಳನಾಡಿನದಲ್ಲ; ಭಾರತದ ಇತರ ಕಡೆಗಳಲ್ಲಿಯೂ ಕನ್ನಡಿಗರ ರಾಜಕೀಯ ಪ್ರಭಾವ ಹಬ್ಬಿದ್ದಿತು. ಅಲ್ಲದೆ ಧರ್ಮ, ಕಲೆ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿಯೂ ಕನ್ನಡಿಗರು ವಿಜ್ಯಂಭಿಸಿದ್ದಾರೆ. ಆದ್ದರಿಂದ karnataka@history.com ಎಂಬ ವೆಬ್‌ಸೈಟನ್ನು ಹುಟ್ಟುಹಾಕಿ ಶಿಲಾಯುಗದಿಂದ ಹಿಡಿದು ಈಚಿನವರೆಗೂ ನಮ್ಮ ಇತಿಹಾಸದ ವಿವರಗಳನ್ನು ಕೊಡಬೇಕು. ಸಾಮಾನ್ಯವಾಗಿ ಇಂಥ ಸಮಗ್ರ ಇತಿಹಾಸವನ್ನು ಬರೆಯುವುದಿದ್ದಲ್ಲಿ ನಾವು ಇತಿಹಾಸಪೂರ್ವಯುಗ, ಕದಂಬರು, ಚಾಲುಕ್ಯರು...... ಬ್ರಿಟಿಷರ ಕಾಲ ಮುಂತಾಗಿ ವಿಭಾಗಿಸುತ್ತೇವೆ. ಇದು ಹಾಗಲ್ಲ. ಒಂದೊಂದು ನಿರ್ದಿಷ್ಟ ವಿಷಯವನ್ನು ಎತ್ತಿಕೊಂಡು ಸಾರರೂಪದಲ್ಲಿ ಮಾಹಿತಿಯನ್ನು ಒದಗಿಸುವುದಾಗಿದೆ. ಮತ್ತೆ ಒಂದು ವಿಷಯಕ್ಕೆ ಇನ್ನೊಂದು ವಿಷಯ ಸಂಬಂಧಿಸಿದ್ದರೆ ಅಡ್ಡ ಸಂದರ್ಭವನ್ನು (Cross reference) ಕೊಡುವುದಿರುತ್ತದೆ.

ಇದನ್ನು ಆರಂಭಿಸುವುದಕ್ಕೆ ಮೊದಲು, ಇತಿಹಾಸದ ಮಾಹಿತಿ ಘಟಕಗಳನ್ನು ಗಮನಿಸಬೇಕು. ಅವು ಲಿಖಿತರೂಪದವು ಮತ್ತು ವಸ್ತುರೂಪದವಾಗಿವೆ. ಶಾಸನಗಳು, ಸಾಹಿತ್ಯ ಕೃತಿಗಳು, ಕಾಗದಪತ್ರಗಳು, ಪ್ರವಾಸೀ ವರ್ಣನೆಗಳು, ಬಖೈರು-ಕೈಫಿಯತ್ತುಗಳು, ಸ್ಥಳನಾಮಗಳು ಇವು ಲಿಖಿತ ರೂಪದವಾಗಿರುತ್ತವೆ. ಮೌಖಿಕ ಇತಿಹಾಸದ ವಿವರಗಳೂ ಜಾನಪದ ಅಂಶಗಳೂ ದಾಖಲಾಗುತ್ತವಾದ್ದರಿಂದ ಅವನ್ನೂ ಇಲ್ಲಿಯೇ ಗಣನೆಗೆ ತೆಗೆದುಕೊಳ್ಳಬೇಕು. ಇನ್ನು ವಾಸ್ತುಶಿಲ್ಪ, ಪ್ರಾಚೀನ ಅವಶೇಷ, ಮುಂತಾಗಿ ವಸ್ತು ರೂಪದವೂ ಕೂಡ ಇತಿಹಾಸ ರಚನೆಗೆ ನೆರವಾಗುತ್ತವೆ. ಅವನ್ನೂ ದಾಖಲೆಗೆ ಒಳಪಡಿಸಬೇಕು.

ಇದಾದ ಮೇಲೆ ಆಕರಗಳನ್ನು ಎಂದರೆ ಮೇಲಿನ ಘಟಕಗಳಿರುವ ಗ್ರಂಥ ಮತ್ತು ಲೇಖನಗಳನ್ನು ಗುರುತಿಸಿಕೊಳ್ಳಬೇಕು. ಅವುಗಳಲ್ಲಿ ಯಾವುವು ವಿಶ್ವಸನೀಯ, ಯಾವುವು ಅಲ್ಲ – ಎಂಬುದನ್ನು ಗಮನಿಸುವುದು ಅವಶ್ಯವಾಗುತ್ತದೆ.

ಮೂರನೆಯದಾಗಿ ಇತಿಹಾಸದ ಪ್ರಮುಖ ಅಂಗಗಳಾದ ರಾಜಮನೆತನಗಳು, ಆಡಳಿತ, ಧರ್ಮ, ಕಲೆಗಳು, ಸಮಾಜ ಮೊದಲಾದವುಗಳ ಅಡಿಯಲ್ಲಿ ಉಪವಿಷಯಗಳನ್ನು ಮತ್ತು ಇವುಗಳ ಸದರಿನಲ್ಲಿ ಬರುವ ನಿರ್ದಿಷ್ಟ ವಿಷಯಗಳನ್ನು ಗುರುತು ಹಾಕಿಕೊಳ್ಳಬೇಕು. ಉದಾ.ಗೆ ಧರ್ಮ. ಈ ಮುಖ್ಯ ವಿಷಯದ ಕೆಳಗೆ 'ಜೈನಧರ್ಮ'ವು ಉಪವಿಷಯ. ಅದರಲ್ಲಿ ಬರುವ ಸಮಂತಭದ್ರ, ಶ್ರವಣಬೆಳ್ಗೊಳ, ಸಲ್ಲೇಖನವ್ರತ ಮುಂತಾದವು ನಿರ್ದಿಷ್ಟ ವಿಷಯಗಳೆನಿಸಿಕೊಳ್ಳುತ್ತವೆ. ಅವುಗಳ ಬಗ್ಗೆ ಯಾವೊಂದು ಮಹತ್ವದ ಅಂಶವನ್ನೂ ಬಿಡದೆ, ವಿಶ್ವಸನೀಯವಾದ ಆಕರದಿಂದ ಮಾಹಿತಿಯನ್ನು ಸಂಗ್ರಹಿಸಬಹುದು. ಮಹತ್ವದ್ದೆಂದರೆ, ಆಕರಗಳಿಂದ ತೆಗೆದುಕೊಂಡ ವಿಷಯಗಳನ್ನು ಬರೆದು ತೆಗೆಯುವಾಗ ಅನವಶ್ಯಕ ವಿವರಣೆಯಾಗಲೀ, ಸ್ವಂತದ ಅಭಿಪ್ರಾಯವಾಗಲೀ

ಇರದೇ ಬರವಣಿಗೆ ವಸ್ತುನಿಷ್ಠವಾಗಿರುವುದು ಅವಶ್ಯವಿರುತ್ತದೆ. ಅಂದಾಗಲೇ ಅದು ಅಧಿಕೃತ ಹಾಗೂ ಪ್ರಾಮಾಣ್ಯವೆನಿಸುತ್ತದೆ. ಹೀಗೆ ಅದೊಂದು ಕರ್ನಾಟಕ ಇತಿಹಾಸದ ವಸ್ತುಕೋಶವಾಗಿ (Cyclopaedia) ಪರಿಣಮಿಸುತ್ತದೆ.

ಇಂಥದೊಂದು ವೆಬ್‌ಸೈಟಿನ ಪ್ರಯೋಜನ ಇಷ್ಟೇ ಎಂದು ಹೇಳುವಂತಿಲ್ಲ. ಶಾಲಾ ವಿದ್ಯಾರ್ಥಿಗಳಿಂದ ಹಿಡಿದು, ಇತಿಹಾಸತಜ್ಞರಿಗೂ, ಯಾವದೊಂದು ಸಣ್ಣ ವಿಷಯದ ಬಗ್ಗೆ ನಿಖರ ವಾದ ಮಾಹಿತಿ ಬೇಕೆನ್ನುವವರಿಗೂ ಉಪಯೋಗಕ್ಕೆ ಬರುತ್ತದೆ. ಗಣಕಯಂತ್ರವನ್ನು ಇಟ್ಟುಕೊಂಡವರು, ದೇಶ ವಿದೇಶಗಳಲ್ಲಿ ಎಲ್ಲಿಯೇ ಇದ್ದವರು ಅದರ ಪ್ರಯೋಜನ ಪಡೆಯಬಹುದು. ಈ ವೆಬ್‌ಸೈಟಿಗೂ, ಮುದ್ರಿತ ವಿಶ್ವಕೋಶಕ್ಕೂ ಇರುವ ಅಂತರವೆಂದರೆ ವೆಬ್‌ಸೈಟಿನಲ್ಲಿ ಯಾವದೊಂದು ವಿಶಿಷ್ಟ ಪದವು ಎಲ್ಲೆಲ್ಲಿ ಬರುವುದೋ ಅದೆಲ್ಲವನ್ನೂ ಒಂದೆಡೆ ತೋರಿಸುತ್ತದೆ. ಕರ್ನಾಟಕಕ್ಕೆ ಸಂಬಂಧಿಸಿದ ವೆಬ್‌ಸೈಟಿನಲ್ಲಿ, 'ಮೈಸೂರು' ಎಂಬುದನ್ನು ಕ್ಲಿಕ್ ಮಾಡಿದ್ದಾದರೆ ನಗರದ ಭೌಗೋಲಿಕ ಪರಿಚಯವಲ್ಲದೆ ಇಲ್ಲಿ ಆಳಿದ ರಾಜಮನೆತನಗಳು, ಕಲಾವಿತಾನಗಳು, ಮೈಸೂರು ವಿಶ್ವವಿದ್ಯಾನಿಲಯ – ಇವೆಲ್ಲ ಮಾಹಿತಿಯನ್ನು ಏಕತ್ರ ಪಡೆಯಬಹುದು.

ಕೊನೆಯದಾಗಿ ಒಂದು ಮಾತು. **ಕರ್ನಾಟಕ ಇತಿಹಾಸ ಕಾಂಗ್ರೆಸ್ಸಿನವರು** ಸಾಹಿತ್ಯದ ಅಭ್ಯಾಸಿಯಾದ ನನ್ನನ್ನು ಒಬ್ಬ ಇತಿಹಾಸದ ತಜ್ಞನೆಂದು ಪರಿಗಣಿಸಿದ್ದಾರೆ. ಸಂತೋಷವಾಯಿತು. ಇದರಿಂದ, ವಿಶಾಲವ್ಯಾಪ್ತಿಯ ಕರ್ನಾಟಕ ಇತಿಹಾಸವು ಕೇವಲ ಇತಿಹಾಸದ ಅಭ್ಯಾಸಿಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ ಎಂಬುದನ್ನು ಸೂಚಿಸಿದ್ದಂತಿದೆ. ಡಾ. ಫ್ಲೀಟ್‌ನಂತಹ ವಿಜ್ಞಾನಿಗಳು, ಮೆಟ್ರಿಕ್ ವರೆಗೆ ಮಾತ್ರ ಕಲಿತಿದ್ದ ಬೆಟಗೇರಿ ಕೃಷ್ಣಶರ್ಮರಂತಹವರು, ಶ್ರೀಸಾಮಾನ್ಯರು ಸಹ ಇತಿಹಾಸ ರಚನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬಲ್ಲರು, ಎಂಬುದನ್ನು ನಿವೇದಿಸಿ ನನ್ನ ಮಾತು ಮುಗಿಸುವೆ.

●

ಆಕರ ಸಾಮಗ್ರಿ

1. ಕನ್ನಡ ಜ್ಞಾನಬೋಧಕವು (ಪತ್ರಿಕೆ) ಧಾರವಾಡ, ೧೮೬೨
2. ಗ್ಯಾಜೆಟಿಯರು - ಮುಂಬಯಿ ಇಲಾಖೆಗೆ ಶೇರಿದ ಕರ್ನಾಟಕ ಭಾಗದ್ದು. ಅನು: ವೆಂಕಟ ರಂಗೋ ಕಟ್ಟಿ, ೧೮೯೩
3. Bombay and Western India. Vols 1 & 2 - A. C. Douglas
4. Bombay Native Education Society, Annual Reports
5. Descriptive Catalogue of the Secret and Political Dept. Maharashtra Archives, Ed. V.G. Dighe
6. District Gazetteers of Dharwar, Belgaum and Bijapur (1st Edition)
7. Historical Account of the Belgaum District - H.J. Stokes
8. History of Freedom Movement in Karnataka, Vols. 1-2
9. Karnatak College, Dharawad, Silver and Diamond Jubilee Souvenirs, Also the College Miscellany, 1820.
10. Life of Sir Thomas Munro - Cleig
11. Memoir of the Southern Maratha Country - E.W. West
12. Moor's Narrative of Captain Little's Detachment
13. Reminiscences of Sir Walter Elliot, Ed. R. Sewell
14. Supplement to the Reminiscences of Dharwar - By an Old Resident (i.e. Jukes)
15. Tom Munro Saheb - Krishnaswamy
16. Wellesley's Dispatches, 1797-1805
17. Western India, Vols. 142, Le Grand Jacob

ವ್ಯಕ್ತಿ-ವಿಷಯಗಳ ಅಕಾರಾದಿ

ಡಾ. ಶ್ರೀನಿವಾಸ ಹಾವನೂರ : ಆಯ್ದ ವಿಶಿಷ್ಟ ಗ್ರಂಥಗಳು

ಅವಿವಾಹಿತೆ
ಸಾಮಾಜಿಕ ಸಮಸ್ಯೆಯ ವಿಶ್ಲೇಷಣೆ ೧೯೫೬

ಗೋವಿಂದ ಪೈ ವಾಙ್ಮಯ ದರ್ಶನ
ಪೂರ್ಣ ಸ್ವರೂಪದ ವಾಙ್ಮಯ ಸಮೀಕ್ಷೆ ೧೯೬೬

ಕುಮುದಿನಿ ಹಾಗೂ ಇತರ ಕಾದಂ ಕಥನಗಳು
ವಿಶಿಷ್ಟ ರೀತಿಯ ಕಾದಂಬರೀ ಸಂಗ್ರಹಗಳು ೧೯೭೮

ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ, ಕಂಪ್ಯೂಟರ್ ಇತ್ಯಾದಿ ೧೯೮೨

ಹರಿದಾಸರು ಸ್ತುತಿಸಿದ ಶ್ರೀ ವಾದಿರಾಜರು ೧೯೯೬

Epigraphical Studies by V. L. N. Rao
edited with H.S. Gopal Rao ೧೯೯೭

ಹೊಸಗನ್ನಡ ಅರುಣೋದಯ
ತಿದ್ದಿ ಬೆಳೆಸಿದ ೨ನೇ ಆವೃತ್ತಿ ೨೦೦೦

ಪಾ. ವೆಂ. ಆಚಾರ್ಯರ ಸಮಸ್ತ ಕೃತಿಗಳು
ಸು. ೧ ರಿಂದ ೧೫ (ಸಂಪಾದಿತ) ೨೦೦೧-೦೪

Rev. Dr. F. Kittel
ಕನ್ನಡ; ಮತ್ತು ಜರ್ಮನ್ ಭಾಷೆಯಲ್ಲಿ ೨೦೦೪

ದಕ್ಷಿಣ ಕನ್ನಡದ ಸಾರಸ್ವತ ಪರಂಪರೆ
ದ.ಕ. ಪರಿಸರದ ಐವರು ಹಿರಿಯ ಲೇಖಕರು ೨೦೦೪

ಡಾ. ರಂ. ಶ್ರೀ ಮುಗಳಿಯವರ
ಲೇಖನ ಸಂಪಾದನೆ ೨೦೦೬

ಕನ್ನಡ ಪತ್ರಿಕಾ ಸೂಚಿ
ಪತ್ರಿಕೋದ್ಯಮದ ಕುರಿತ ವಿವಿಧ ಲೇಖನ ಸಹಿತ ಅಚ್ಚಿನಲ್ಲಿ



'ಹೊಸಗನ್ನಡದ ಅರುಣೋದಯ'ದಿಂದ ಖ್ಯಾತ ನಾಮರಾದ ಡಾ. ಶ್ರೀನಿವಾಸ ಹಾವನೂರರು ಮಂಗಳೂರು ಹಾಗೂ ಮುಂಬಯಿ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಮುಖ್ಯಸ್ಥರಾಗಿದ್ದರು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಮಗ್ರ ದಾಸ ಸಾಹಿತ್ಯದಲ್ಲಿ ಹಿರಿಯ ಸಂಪಾದಕರು. ಸಾಹಿತ್ಯ, ಇತಿಹಾಸ, ಜೀವನ ಚರಿತ್ರೆ, ಕನ್ನಡ ಪತ್ರಿಕಾಲೋಕ, ಕಾದಂಕಥನ ಮುಂತಾದ ಪ್ರಕಾರಗಳಲ್ಲಿ ೬೦ಕ್ಕೂ ಮೇಲ್ಪಟ್ಟು ಗ್ರಂಥಗಳ ರಚಯಿತರು/ಸಂಪಾದಕರು. ಕನ್ನಡದ ಕೆಲಸಕ್ಕೆಂದೇ ಹಲವು ಬಾರಿ ವಿದೇಶ ಯಾತ್ರೆ ಮಾಡಿದ್ದಾರೆ. ಕನ್ನಡ ಸಂಶೋಧನ ಕಾರ್ಯಕ್ಕಾಗಿ ಕಂಪ್ಯೂಟರನ್ನು ಬಳಸುವಲ್ಲಿ ಮೊತ್ತಮೊದಲಿಗರು.

ಕರ್ನಾಟಕ ಇತಿಹಾಸ ಅಕಾಡೆಮಿಯ ಹದಿಮೂರನೆಯ ಸಮ್ಮೇಳನ, ೧೯೯೯ ಮತ್ತು ಕರ್ನಾಟಕ ಹಿಸ್ಟರಿ ಕಾಂಗ್ರೆಸ್ಸಿನ ೧೬ನೆಯ ಸಮ್ಮೇಳನ, ೨೦೦೫ ರ ಅಧ್ಯಕ್ಷತೆ ವಹಿಸಿದ್ದರು.

ಡಾ. ಹಾವನೂರರ ಐತಿಹಾಸಿಕ ಒಳನೋಟಗಳ ಇನ್ನೊಂದು ಸಂಗ್ರಹ 'ತುಂಗಭದ್ರೆ ನಾಡಿಗೆ ವರವೋ ಶಾಪವೋ' ಶೀಘ್ರದಲ್ಲಿಯೆ ಪ್ರಕಟವಾಗಲಿದೆ.

ತನ್ನೀ ೮೫ರ ಪ್ರಾಯದಲ್ಲಿ ಲೇಖನ-ಸಂಶೋಧನ ಕಾರ್ಯದಲ್ಲಿ ಸದಾ ನಿರತರು. ಪ್ರಕೃತ ಮಂಗಳೂರಿನ ಕರ್ನಾಟಕ ಥಿಯೊಲಾಜಿಕಲ್ ಕಾಲೇಜಿನಲ್ಲಿ ಗೌರವ ಸಂಶೋಧಕರು.

ಎರಡು ಇತಿಹಾಸ ಸಮ್ಮೇಳನಗಳ ಅಧ್ಯಕ್ಷತೆ ವಹಿಸಿದವರು ಡಾ. ಹಾವನೂರರು. ಖ್ಯಾತ ಸಂಶೋಧಕರು. ಆದರೆ ಅವರ ಬರವಣಿಗೆ ಮಾತ್ರ ಎಂದೂ ಜಡವಾದುದಲ್ಲ. ಕತೆಯನ್ನೋ ಲಲಿತಪ್ರಬಂಧವನ್ನೋ ಓದಿದ ಹಾಗೆ ಅನುಭವ.

ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ)